ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಐದರಲ್ಲಿ ನಾಲ್ಕು ಪಂದ್ಯ ಗೆದ್ದ ಭಾರತ

ಭಾರತ ಮತ್ತು ಜಿಂಬಾಬ್ವೆ ನಡುವಿನ ಕೊನೆಯ ಟಿ20 ಪಂದ್ಯದಲ್ಲಿ ಭಾರತ 42 ರನ್‌ಗಳ ಜಯ ಸಾಧಿಸಿದೆ. ಐದು ಪಂದ್ಯಗಳ ಸರಣಿಯಲ್ಲಿ ಭಾರತ ನಾಲ್ಕರಲ್ಲಿ ಜಯ ಸಾಧಿಸಿದರೆ, ಜಿಂಬಾಬ್ವೆ ಕೇವಲ ಒಂದು ಪಂದ್ಯವನ್ನು ಮಾತ್ರ ಜಯ ಸಾಧಿಸಿತ್ತು.

### ಪುಟ ತೆರೆದಂತೆ...

ಇಬ್ರಾಹಿಂಗೆ ಪವಾರ್ ಫೋನು ಮಾಡಿದ್ದೇಕೆ?
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
ಸಂ.ಪುಟ | 6

ಇದೂ ಶೆಡ್‌ನಲ್ಲೇ ಆರಂಭವಾದದ್ದು...!
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
ಸಂ.ಗಮ | 7

### ಮಾತಂದ್ರೆ ಮಾತು

ರಾಷ್ಟ್ರೀಯ ನೇಮಕಾತಿ ಏಜೆನ್ಸಿ ಕಳೆದ 4 ವರ್ಷಗಳಲ್ಲಿ ಏಕೆ ಒಂದೂ ಪರೀಕ್ಷೆ ನಡೆಸಿಲ್ಲ? ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯನ್ನು ವಂಚನೆ, ಪ್ರಶ್ನೆಪತ್ರಿಕೆ ಸೋರಿಕೆ, ಹಗರಣಕ್ಕೆ ಬಳಸಲಾಯಿತು. ಇದೇ ವೇಳೆ ಪರೀಕ್ಷೆ ನಡೆಸಲು ಎನ್ಆರ್‌ಎಗೆ ಅವಕಾಶ ನೀಡಲಿಲ್ಲ. ಆರ್‌ಎಸ್‌ಎಸ್-ಬಿಜೆಪಿ ವ್ಯವಸ್ಥೆಯನ್ನೇ ಹಾಳುಗೆಡವಿ, ಯುವಜನರ ಭವಿಷ್ಯ ಹೊಸಕಿಹಾಕಿತು.

**ಮಲ್ಲಿಕಾರ್ಜುನ ಖರ್ಗೆ**
ಎಐಸಿಸಿ ಅಧ್ಯಕ್ಷ

### ದಾರಿದೀಪೋಕ್ತಿ

ನಡೆಯುತ್ತಿರುವ ಘಟನೆಯನ್ನು ನೀವು ನಿಯಂತ್ರಿಸದಿದ್ದರೆ, ಅದಕ್ಕೆ ಯಾವ ರೀತಿ ಪ್ರತಿಕ್ರಿಯಿಸಬೇಕು ಎಂಬುದನ್ನಾದರೂ ನಿಯಂತ್ರಿಸಬೇಕು. ಹೆಚ್ಚಿನ ಸಂದರ್ಭದಲ್ಲಿ ಮೊದಲನೆಯದು ಸಾಧ್ಯವಾಗುವುದಿಲ್ಲ. ಹೀಗಾಗಿ ಎರಡನೆಯದನ್ನು ನಿಯಂತ್ರಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು.

### ವಕ್ರತುಂಡೋಕ್ತಿ

ಫೇಸ್‌ಬುಕ್ ಮತ್ತು ಇಂಟರ್‌ನೆಟ್ ಬಿಟ್ಟು ಜೀವನವಿದೆ ಎಂದು ಯಾರಾದರೂ ಹೇಳಿದರೆ, ಅದರ ಲಿಂಕ್ ಕಳಿಸಿ ಎಂದು ಹೇಳಬಹುದು.

## ಲೋಕಸಭೆ ಕೈ ಉಪ ನಾಯಕ ಗೊಗೊಯ್

**ದೆಹಲಿ:** ಲೋಕಸಭೆಯಲ್ಲಿ ಕಾಂಗ್ರೆಸ್ ಉಪ ನಾಯಕರಾಗಿ ಗೌರವ್ ಗೊಗೊಯ್ ಅವರನ್ನು ಭಾನುವಾರ ನೇಮಿಸಲಾಗಿದೆ. ಲೋಕ ಸಭೆಯಲ್ಲಿನ ಕಾಂಗ್ರೆಸ್ ಮುಖ್ಯ ಸಚೇತಕರಾಗಿ ಕೊಡಿಕುನ್ನಿಲ್ ಸುರೇಶ್ ಹಾಗೂ ವಿರುದುನಗರ ಸಂಸದ ಮಾಣಿಕ್ಕಂ ಟ್ಯಾಗೋರ್ ಮತ್ತು ಕಿಶನ್‌ಗಂಜ್ ಸಂಸದ ಮೊಹಮ್ಮದ್ ಜಾವೇದ್ (ವಿಪ್) ಸಚೇತಕರಾಗಿ ನೇಮಕವಾಗಿದ್ದಾರೆ.

## ಮುಡಾ ಪ್ರಕರಣ; ತನಿಖೆಗೆ ಆದೇಶ

**ಬೆಂಗಳೂರು:** ಮುಡಾದಲ್ಲಿ ನಡೆದಿರುವ ಅಕ್ರಮ ಪ್ರಕರಣವನ್ನು ನಿವೃತ್ತ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಅವರ ನೇತೃತ್ವದ ಏಕಸದಸ್ಯ ಪೀಠದಿಂದ ತನಿಖೆ ನಡೆಸಲು ನಗರಾಭಿವೃದ್ಧಿ ಇಲಾಖೆ ಆದೇಶಿಸಿದೆ. ಆ ಮೂಲಕ ಸೋಮವಾರದಿಂದ ಆರಂಭವಾಗಲಿರುವ ಅಧಿವೇಶನದಲ್ಲಿ ಸರಕಾರದ ವಿರುದ್ಧ ಮುಗಿಬೀಳಲು ಸಜ್ಜಾಗಿದ್ದ ಬಿಜೆಪಿಯ ಒಂದು ಅಸ್ತ್ರವನ್ನು ಸರಕಾರ ಕಸಿದುಕೊಂಡಿದೆ.

### ಫನ್‌ತರಂಗ
- ರಘುಪತಿ ಶೃಂಗೇರಿ -

ಸಿಎಂಗೆ ಸಾರ್ವಜನಿಕರು ನೀಡಿದ್ದ ಮನವಿ ಪತ್ರಗಳು ಕಸದ ರಾಶಿಯಲ್ಲಿ




ಮೊದಲ ದಿನ ಸಂತಾಪ ಸೂಚನೆ, ಕಾರ್ಯದರ್ಶಿಗಳ ವರದಿ ಮಂಡನೆ
ಮಂಗಳವಾರದಿಂದ ಸರಕಾರದ ವಿರುದ್ಧ ಪ್ರತಿಪಕ್ಷಗಳ ಹೋರಾಟ ಸಾಧ್ಯತೆ

# ಇಂದಿನಿಂದ ಸದನ ನಾಳೆಯಿಂದ ಕದನ

**ಬೆಂಗಳೂರು:** ಮಳೆಗಾಲದ ಅಧಿವೇಶನ ಆರಂಭವಾಗಲಿದ್ದು, ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಲು ಬಿಜೆಪಿ ಸಜ್ಜಾಗಿದ್ದರೆ, ಪ್ರತಿಪಕ್ಷಗಳ ವಾಗ್ಬಾಣಗಳಿಗೆ ಪ್ರತಿಕ್ರಿಯೆ ನೀಡಲು ಕಾಂಗ್ರೆಸ್ ಸಜ್ಜಾಗಿದೆ.

ಸೋಮವಾರದಿಂದ ಸದನ ಆರಂಭವಾದರೂ ಮೊದಲ ದಿನ ಸಂತಾಪ ಸೂಚನೆ, ಕಾರ್ಯದರ್ಶಿಗಳ ವರದಿ ಮಂಡನೆಗೆ ಸೀಮಿತವಾಗಲಿದೆ. ಆಡಳಿತ-ಪ್ರತಿಪಕ್ಷಗಳ ಹಗ್ಗಜಗ್ಗಾಟ ಮಂಗಳವಾರದಿಂದ ಆರಂಭಗೊಳ್ಳಲಿದೆ. ಈ ನಡುವೆ ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ಎದುರಾಳಿಗಳನ್ನು ಇಕ್ಕಟ್ಟಿಗೆ ಸಿಲುಕಿಸಲು ಹೋಮ್ ವರ್ಕ್ ಆರಂಭಿಸಿದ್ದಾರೆ.

ಪ್ರಮುಖವಾಗಿ ಮಂಗಳವಾರದಿಂದ ರಾಜ್ಯದಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ, ಮುಡಾ ಹಗರಣ ಸದ್ದು ಮಾಡಲಿದ್ದು, ಬಿಜೆಪಿ ಮತ್ತು ಜೆಡಿಎಸ್ ಶಾಸಕರು ಸರಕಾರದ ಮೇಲೆ ಮುಗಿ ಬೀಳಲು ಸಜ್ಜಾಗಿದ್ದಾರೆ. ಕಲಾಪ ಸುಗಮವಾಗಿ ನಡೆಯುತ್ತದೆಯೇ ಎಂಬ ಅನುಮಾನಗಳು ದಟ್ಟವಾಗಿವೆ. ಲೋಕಸಭಾ ಚುನಾವಣೆಯ ನಂತರ ನಡೆಯುತ್ತಿರುವ ವಿಧಾನ ಮಂಡಲದ ಮೊದಲ ಅಧಿವೇಶನ ಇದಾಗಿರುವುದರಿಂದ ಲೋಕಸಭಾ ಚುನಾವಣೆಯ ಫಲಿತಾಂಶಗಳು ಬಿಜೆಪಿ-ಜೆಡಿಎಸ್ ಮೈತ್ರಿಕೂಟಕ್ಕೆ ಹೊಸ ಹುರುಪು ತಂದಿದೆ.

→ 4

### ಮಂಡನೆಯಾಗಲಿರುವ ಪ್ರಮುಖ ವಿಧೇಯಕ

- ಹೊರಗುತ್ತಿಗೆ ಮೀಸಲು ವಿಧೇಯಕ
- ಗ್ರೇಟರ್ ಬೆಂಗಳೂರು ವಿಧೇಯಕ
- ಕನ್ನಡ ಭಾಷಾ ವಿಧೇಯಕ
- ವೈದ್ಯರು, ವೈದ್ಯಕೀಯ ಸಿಬ್ಬಂದಿಗೆ ರಕ್ಷಣೆ ನೀಡುವ ಕರ್ನಾಟಕ ವೈದ್ಯಕೀಯ ನೋಂದಣಿ ಸೇರಿದಂತೆ ಎಂಟು ವಿಧೇಯಕ

### ಅಧಿಕಾರಿಗಳಿಗೆ ಪಾಠ ಸಿಎಂ

ಈ ನಡುವೆ ಭಾನುವಾರ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಿಎಂ ಸಿದ್ದರಾಮಯ್ಯ, ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಸಂಗ್ರಹಿಸಿ ಸಚಿವರಿಗೆ ನೀಡಿದೆ. ಅಸಮರ್ಪಕ ಉತ್ತರಗಳ ಮೂಲಕ, ಸಚಿವರಿಗೆ ಹಾಗೂ ಸರಕಾರಕ್ಕೆ ಮುಜುಗರ ತರುವ ಕೆಲಸ ಮಾಡಬೇಡಿ. ಇಲಾಖೆಗೆ ಸಂಬಂಧಿಸಿದಂತೆ ವಿಷಯಗಳಿದ್ದಾಗ ಕಾರ್ಯದರ್ಶಿಗಳು ಬಂದು ಸದನದಲ್ಲಿ ಕೂರಬೇಕು ಎಂದು ಸೂಚನೆ ನೀಡಿದ್ದಾರೆ.

### ಪ್ರತಿಪಕ್ಷಗಳ ಅಸ್ತ್ರಗಳು?

- ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಸಿಎಂ ರಾಜೀನಾಮೆಗೆ ಪ್ರತಿಪಕ್ಷಗಳ ಆಗ್ರಹ
- ಮುಡಾ ಹಗರಣದಲ್ಲಿ ಸಚಿವ ಬೈರತಿ ಬಸವರಾಜ್ ರಾಜೀನಾಮೆಗೆ ಆಗ್ರಹ
- ಮುಡಾ ಪ್ರಕರಣವನ್ನು ಸಿಬಿಐಗೆ ವಹಿಸಲು ಒತ್ತಡ ಹೇರಲು ಸಿದ್ಧತೆ
- ಪೆಟ್ರೋಲ್, ಡೀಸೆಲ್, ಹಾಲು ದರ ಏರಿಕೆ ವಿರೋಧಿಸಿ ಸರಕಾರದ ವಿರುದ್ಧ ವಾಗ್ದಾಳಿ

### ಸರಕಾರದ ಪ್ರತ್ಯಾಸ್ತ್ರಗಳು?

- ಬಿಜೆಪಿ ಅವಧಿಯ ಅರಸು ಟರ್ಮಿನಲ್ ಟ್ರಕ್ ಹಗರಣದ ಪ್ರಸ್ತಾಪ
- ಮುಡಾದಲ್ಲಿ ಕುಮಾರಸ್ವಾಮಿ ಸೇರಿ ಬಿಜೆಪಿ ಶಾಸಕರಿಗೆ ಹಂಚಿಕೆಯಾಗಿರುವ ನಿವೇಶನದ ಬಗ್ಗೆ ಮಾಹಿತಿ
- ದರ ಏರಿಕೆಗೆ ಪ್ರತಿಯಾಗಿ, ಬಿಜೆಪಿ ಅವಧಿಯಲ್ಲಿ ದೇಶದಲ್ಲಿ ಆಗಿರುವ ದರ ಏರಿಕೆ ಬಗ್ಗೆ ಪ್ರಸ್ತಾಪ

ಕಾನೂನು ಹೋರಾಟದ ಜತೆಗೆ ನೀರು ಬಿಡುಗಡೆ
ಸರಕಾರದ ತೀರ್ಮಾನಕ್ಕೆ ಸರ್ವಪಕ್ಷಗಳ ಒಮ್ಮತ

# 11000 ಬದಲಿಗೆ 8000 ಕ್ಯು ನೀರು ಬಿಡಲು ತೀರ್ಮಾನ

**ಬೆಂಗಳೂರು:** ರಾಜ್ಯದ ಜಲಾಶಯಗಳು ಭರ್ತಿಯಾಗುವ ಮೊದಲೇ ತಮಿಳುನಾಡಿಗೆ ನೀರು ಹರಿಸುವ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವ ಸರಕಾರದ ತೀರ್ಮಾನವನ್ನು ಸರ್ವಪಕ್ಷಗಳು ಸ್ವಾಗತಿಸಿದೆ. ಇದರೊಂದಿಗೆ 11 ಸಾವಿರ ಕ್ಯುಸೆಕ್ ಬದಲಿಗೆ ಎಂಟು ಸಾವಿರ ಕ್ಯುಸೆಕ್ ನೀರು ಬಿಡಲು ತೀರ್ಮಾನಿಸಲಾಗಿದೆ.

ಕಾವೇರಿ ನದಿ ನೀರು ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಭಾನುವಾರ ವಿಧಾನಸೌಧದಲ್ಲಿ ನಡೆದ ಸರ್ವಪಕ್ಷ ಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ. ಆರಂಭದಲ್ಲಿ ತಮಿಳುನಾಡಿಗೆ ನೀರು ಬಿಡಬಾರದು ಎನ್ನುವ ಸಲಹೆಯನ್ನು ಪ್ರತಿಪಕ್ಷ ನಾಯಕರು ನೀಡಿದರು. ಆದರೆ ಈ ರೀತಿ ಮಾಡುವುದರಿಂದ ಭವಿಷ್ಯದಲ್ಲಿ ಸಮಸ್ಯೆಯಾಗಲಿದೆ ಎಂಬುದನ್ನು ತಿಳಿದು, ಕಾವೇರಿ ನದಿ ನೀರು ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಲಾಗಿದೆ.

ಆರಂಭದಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ ಸೇರಿದಂತೆ ಬಹುತೇಕರು, ಸದ್ಯ ಕರ್ನಾಟಕದ ಜಲಾಶಯಗಳಲ್ಲಿ ನಿರೀಕ್ಷಿತ ಪ್ರಮಾಣದ ನೀರಿಲ್ಲ. ಮುಂದೆ ಮಳೆಯಾಗುವ ಬಗ್ಗೆಯೂ ಸ್ಪಷ್ಟತೆಯಿಲ್ಲ. ಹೀಗಿರುವಾಗ, ಈಗಲೇ ನೀರು ಬಿಟ್ಟರೆ ಮುಂದೆ ಸಮಸ್ಯೆಯಾಗುತ್ತದೆ. ಆದ್ದರಿಂದ ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸನ್ನು ಪಾಲಿಸುವುದು ಬೇಡ ಎಂದು ಆಗ್ರಹಿಸಿದರು.

→ 8

ಕಾವೇರಿ ನದಿ ನೀರು ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಭಾನುವಾರ ವಿಧಾನಸೌಧದಲ್ಲಿ ಸರ್ವಪಕ್ಷ ಸಭೆ ನಡೆಯಿತು.

ತಮಿಳುನಾಡಿಗೆ ನೀರು ಬಿಡುವುದಿಲ್ಲ ಎಂದು ಹೇಳಲಾಗುವುದಿಲ್ಲ. ಆ ರೀತಿ ಮಾಡಿದರೆ ಪ್ರಾಧಿಕಾರ ಹಾಗೂ ನ್ಯಾಯಲಯದ ಪ್ರಶ್ನಿಸಬಹುದು. ಆದ್ದರಿಂದ ನಿತ್ಯ 8000 ಕ್ಯುಸೆಕ್ ನೀರು ಬಿಡುಗಡೆ ಮಾಡಲು ಮೋಹನ್ ಕಾತರಕಿ ಸಲಹೆ ನೀಡಿದ್ದಾರೆ. ಸರ್ವಪಕ್ಷದ ನಾಯಕರೂ ಈ ಬಗ್ಗೆ ಸಹಮತ ವ್ಯಕ್ತಪಡಿಸಿದ್ದಾರೆ. ಅದರಂತೆ 11,500 ಕ್ಯುಸೆಕ್ ಬದಲು ನಿತ್ಯ 8,000 ಕ್ಯುಸೆಕ್ ನೀರು ಬಿಡಲು ತೀರ್ಮಾನಿಸಲಾಗಿದೆ.
- **ಸಿದ್ದರಾಮಯ್ಯ** ಮುಖ್ಯಮಂತ್ರಿ

**ಸಭೆಗೆ ಎಚ್‌ಡಿಕೆ ಗೈರು:** ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆಗೆ ಸಂಬಂಧಿಸಿದ ಸರ್ವಪಕ್ಷ ಸಭೆಗೆ ಕೇಂದ್ರ ಸಚಿವ ಹಾಗೂ ಮಂಡ್ಯ ಸಂಸದ ಎಚ್.ಡಿ.ಕುಮಾರಸ್ವಾಮಿ ಗೈರಾಗಿದ್ದರು. ಪೂರ್ವ ನಿಯೋಜಿತ ಕಾರ್ಯಕ್ರಮ ಪ್ರಯುಕ್ತ ಕುಮಾರಸ್ವಾಮಿ ಮಂಡ್ಯಗೆ ತೆರಳಿದ್ದು, ಸರ್ವಪಕ್ಷ ಸಭೆಗೆ ಆಗಮಿಸಿಲ್ಲ ಎಂದು ಹೇಳಲಾಗಿದೆ.

ವಿವಿಧ ನಿಗಮಗಳಲ್ಲಿನ ವ್ಯವಹಾರದ ಬಗ್ಗೆ ವಿವರ ಪಡೆಯಲು ಮುಂದಾದ ಸರಕಾರ

# ವಾಲ್ಮೀಕಿ ನಿಗಮ ಹಗರಣ ಇತರೆ ನಿಗಮಗಳಿಗೆ ಸಂಕಷ್ಟ

**ಬೆಂಗಳೂರು:** ರಾಷ್ಟ್ರ ಮಟ್ಟದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಿಂದಾಗಿ, ಇದೀಗ ಇತರೆ ನಿಗಮ ಮಂಡಳಿಗಳಿಗೆ ಸಮಸ್ಯೆಯಾಗಿದೆ.

ಹೌದು, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ರು. ಅವ್ಯವಹಾರ ಬೆನ್ನಲ್ಲೇ ಇತರೆ ನಿಗಮ ಮಂಡಳಿಗಳ ಆರ್ಥಿಕ ಪರಿಸ್ಥಿತಿ, ವಹಿವಾಟುಗಳ ಬಗ್ಗೆ ನಿಗಾವಹಿಸಲು ಹಾಗೂ ಪರಿಶೀಲಿಸಲು ಆರ್ಥಿಕ ಇಲಾಖೆ ಮುಂದಾಗಿದೆ. ಆದ್ದರಿಂದ ಸದ್ಯಕ್ಕೆ ಯಾವುದೇ ನಿಗಮದಿಂದ ಅನುದಾನ ಬಿಡುಗಡೆ ಮಾಡದಂತೆ ಸೂಚನೆ ನೀಡಿದೆ ಎನ್ನಲಾಗಿದೆ.

ಪ್ರಮುಖವಾಗಿ ಹಿಂದುಳಿದ ವರ್ಗ ಹಾಗೂ ಪರಿಶಿಷ್ಟರ ಅಭಿವೃದ್ಧಿಗೆಂದು ಆರಂಭವಾಗಿರುವ ಜಾತಿ ಆಧಾರಿತ ನಿಗಮ ಮಂಡಳಿಗಳಿಂದ ಸ್ವಾವಲಂಬನೆ, ಸ್ವಯಂ ಉದ್ಯೋಗ, ಶೈಕ್ಷಣಿಕ ಚಟುವಟಿಕೆಯ ಬೆಂಬಲ ಸೇರಿದಂತೆ ಹಲವಾರು ಸೌಲಭ್ಯಗಳಿವೆ. ಇದೀಗ ಈ ಎಲ್ಲ ನಿಗಮಗಳಲ್ಲೂ ಸೌಲಭ್ಯಗಳ ಹಂಚಿಕೆ, ಫಲಾನುಭವಿಗಳ ಆಯ್ಕೆ, ಹಣ ಬಿಡುಗಡೆಗೆ ತಡೆ ನೀಡಲಾಗಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ವರ್ಷ ಕಳೆದಿದೆ. ಆದರೆ ನಿಗಮ ಮಂಡಳಿಗಳಿಗೆ ಅಧ್ಯಕ್ಷ, ಉಪಾಧ್ಯಕ್ಷರನ್ನು ಲೋಕಸಭಾ ಚುನಾವಣೆ ಘೋಷಣೆಗೆ ಮೊದಲು ನೇಮಿಸಿದ್ದರಿಂದ, ಯಾವುದೇ ಯೋಜನೆ ಕೈಗೆತ್ತಿಕೊಳ್ಳಲು ಸಾಧ್ಯವಾಗಲಿಲ್ಲ. ಬಳಿಕ ಚುನಾವಣೆ ನೀತಿ ಸಂಹಿತೆಯ ಕಾರಣಕ್ಕೆ ಮೂರು ತಿಂಗಳು ಯಾವುದೇ ಸಹಾಯಧನ ಬಿಡುಗಡೆಗೊಳಿಸಿರಲಿಲ್ಲ. ಆದರೀಗ ಈ ಎಲ್ಲವೂ ಮುಗಿದಿದ್ದರೂ, ಹಗರಣ ಕಾರಣಕ್ಕೆ ಅನುದಾನ ಬಿಡುಗಡೆ ಮಾಡದಂತೆ ಸೂಚನೆ ನೀಡಿರುವುದರಿಂದ ಫಲಾನುಭವಿಗಳು ಇನ್ನಷ್ಟು ದಿನ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

- ಕೆಲ ನಿಗಮಗಳಲ್ಲಿ 3 ವರ್ಷಗಳಿಂದಲೂ ಫಲಾನುಭವಿಗಳಿಗೆ ಸೌಲಭ್ಯ ಸಿಕ್ಕಿಲ್ಲ
- ಸುಮಾರು 500ರಿಂದ 600 ಕೋಟಿ ರುಪಾಯಿಗಳಷ್ಟು ಹಣ ಬಾಕಿ ಇದೆ

### ಕಡತ ವಿಲೇವಾರಿ ಬೇಡ

ವಾಲ್ಮೀಕಿ ನಿಗಮದ ಹಗರಣದ ಬೆನ್ನಲ್ಲೇ, ಈ ಬಗ್ಗೆ ಎಲ್ಲ ನಿಗಮಗಳ ಅಧ್ಯಕ್ಷರಿಗೆ ಸೂಚನೆ ನೀಡಿರುವ ಸಿಎಂ ಸಿದ್ದರಾಮಯ್ಯ ಅವರು, ಯಾವುದೇ ಕಡತಗಳನ್ನು ವಿಲೇ ವಾರಿ ಮಾಡಬಾರದು. ಫಲಾನುಭವಿ ಗಳ ಆಯ್ಕೆ ಪಟ್ಟಿ ಸೇರಿದಂತೆ ಬೇರೆಲ್ಲ ಚಟುವಟಿಕೆ ಮುಗಿಸಿಕೊಂಡರೂ, ಹಣ ಬಿಡುಗಡೆ ಯಾಗಬಾರದು ಎಂಬ ಸೂಚನೆ ನೀಡಿದ್ದಾರೆ.

### ದದ್ದಲ್‌ಗಾಗಿ ಹುಡುಕಾಟ

ನಿಗಮದ ಅಧ್ಯಕ್ಷ, ಶಾಸಕ ಬಸನಗೌಡ ದದ್ದಲ್ ಅವರನ್ನು ವಿಚಾರಣೆಗೆ ಒಳಪಡಿಸಲು ಇಡಿ ಅಧಿಕಾರಿಗಳು ಶನಿವಾರದಿಂದ ಹುಡುಕಾಟ ನಡೆಸಿದ್ದಾರೆ. ಭಾನುವಾರ ರಾಯಚೂರಿನಲ್ಲಿ ದದ್ದಲ್ ಕಾಣಿಸಿಕೊಂಡಿದ್ದರು, ಅಲ್ಲಿಂದ ಮಂತ್ರಾಲಯದತ್ತ ತೆರಳಿದ್ದಾರೆ ಎನ್ನಲಾಗಿದೆ. ಇದೀಗ ಇಡಿ ಅಧಿಕಾರಿಗಳು ಈ ನಿಟ್ಟಿನಲ್ಲಿ ತನಿಖೆ ಆರಂಭಿಸಿದ್ದಾರೆ.

## ಮೋದಿಗೆ 10 ಕೋಟಿ ಫಾಲೋವರ್ಸ್

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಫಾಲೋವರ್‌ಗಳ ಸಂಖ್ಯೆ 100 ಮಿಲಿಯನ್ (10 ಕೋಟಿ) ಗಡಿ ದಾಟಿದೆ. ಈ ಮೂಲಕ ಮೋದಿ ಅವರು ಎಕ್ಸ್‌ನಲ್ಲಿ ಅತಿ ಹೆಚ್ಚು ಫಾಲೋವರ್‌ಗಳನ್ನು ಹೊಂದಿದವರಲ್ಲಿ ಜಾಗತಿಕವಾಗಿ ಏಳನೇ ಸ್ಥಾನ ಪಡೆದಿದ್ದಾರೆ. ಭಾರತದಲ್ಲಿ ಅವರೇ ನಂಬರ್ 1.

ಅಮೆರಿಕ ಮಾಜಿ ಅಧ್ಯಕ್ಷ ಮೇಲೆ ಬಂದೂಕುಧಾರಿ ದಾಳಿ
ಚುನಾವಣಾ ಪ್ರಚಾರ ಸಭೆಯಲ್ಲಿದ್ದಾಗಲೇ ಗುಂಡೇಟು

# ಟ್ರಂಪ್‌ಗೆ ಗುಂಡಿಕ್ಕಿ ಹತ್ಯೆ ಯತ್ನ

**ಪೆನ್ಸಿಲ್ವೇನಿಯ:** ವರ್ಷಾಂತ್ಯದಲ್ಲಿ ನಡೆಯಲಿರುವ ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ಪೆನ್ಸಿಲ್ವೇನಿಯಾದಲ್ಲಿ ಪ್ರಚಾರ ನಡೆಸಿದ್ದಾಗಲೇ ಅಭ್ಯರ್ಥಿ, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇಲೆ ಶನಿವಾರ ಸಂಜೆ ಗುಂಡಿನ ದಾಳಿಯಾಗಿದೆ. ಟ್ರಂಪ್ ಅವರ ಬಲಗಿವಿಗೆ ಗುಂಡು ಸವರಿಕೊಂಡು ಹೋಗಿ ಸಣ್ಣ ರಕ್ತಗಾಯವಾಗಿದೆ. ಅದೃಷ್ಟವಶಾತ್ ಟ್ರಂಪ್ ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ತಕ್ಷಣವೇ ಎಚ್ಚೆತ್ತ ಟ್ರಂಪ್ ಅವರು ವೇದಿಕೆ ಮೇಲಿದ್ದ ಪೋಡಿಯಂ ಹಿಂದೆ ಕುಳಿತು ಗುಂಡಿನ ದಾಳಿಯಿಂದ ತಪ್ಪಿಸಿಕೊಂಡಿದ್ದಾರೆ. ಕೂಡಲೇ ಭದ್ರತಾ ಸಿಬ್ಬಂದಿ ವೇದಿಕೆಯನ್ನು ಆವರಿಸಿಕೊಂಡು ಟ್ರಂಪ್ ಅವರನ್ನು ಬಿಗಿ ಭದ್ರತೆಯಲ್ಲಿ ಸುರಕ್ಷಿತವಾಗಿ ಕರೆದುಕೊಂಡು ಹೋಗಿದ್ದಾರೆ.



7-8 ಬಾರಿ ಗುಂಡು ಹಾರಿಸಿದ ಬಂದೂಕುದಾರಿಯನ್ನು ಪೆನ್ಸಿಲ್ವೇನಿಯ ನಿವಾಸಿ 20 ವರ್ಷದ ಥಾಮಸ್ ಕ್ರೂಕ್ ಎಂದು ಫೆಡರಲ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್(ಎಫ್‌ಬಿಐ) ಗುರುತಿಸಿದೆ. ಪೆನ್ಸಿಲ್ವೇನಿಯಾದ ಬಟ್ಲರ್ ಫಾರ್ಮ್ ಶೋ ಮೈದಾನದಲ್ಲಿ ಟ್ರಂಪ್ ಪ್ರಚಾರ ಕಾರ್ಯ ನಡೆಸಿದ್ದಾಗ ಬಂದೂಕುಧಾರಿ ವೇದಿಕೆಯಿಂದ ಕೇವಲ 130 ಗಜಗಳಷ್ಟು ದೂರದಲ್ಲಿದ್ದ. ಬಂದೂಕಿನಿಂದ 7-8 ಗುಂಡು ಹಾರಿಸಿದ. ಸಮೀಪದ ಕಟ್ಟಡದ ತಾರಸಿಯಲ್ಲಿ ಕುಳಿತು ಸಭೆಯತ್ತ ಕಣ್ಣಾವಲಾಗಿದ್ದ ಭದ್ರತಾ ಪಡೆಯ ಸ್ನೈಪರ್ ಶೂಟರ್ ತಕ್ಷಣವೇ ದಾಳಿಕೋರನತ್ತ ಗುರಿಯಿಟ್ಟು ಗುಂಡು ಹಾರಿಸಿ ಕೊಂದು ಹಾಕಿದ್ದಾರೆ.

→ 4

- ಹತ್ಯೆಗೆ ಯತ್ನಿಸಿದವ 20 ವರ್ಷ, ಈತನ ಹೆಸರು ಥಾಮಸ್ ಮ್ಯಾಥ್ಯೂ ಕ್ರೂಕ್ಸ್
- ಡೊನಾಲ್ಡ್ ಟ್ರಂಪ್ ಹತ್ಯೆ ಯತ್ನಕ್ಕೆ ಕಾರಣ ಏನು ಎಂಬುದು ಪತ್ತೆಯಾಗಿಲ್ಲ
- ಸಾರ್ವಜನಿಕರಿಗೆ ಯಾವುದೇ ಮಾಹಿತಿ ಇದ್ದರೂ ಕರೆ ಮಾಡುವಂತೆ ಎಫ್‌ಬಿಐ ಕರೆಯ ನಂಬರ್ ಪ್ರಕಟಿಸಿದೆ

30 ವರ್ಷ ಮೇಲ್ಪಟ್ಟ ಅಂಗನವಾಡಿಗಳು ಮೇಲ್ದರ್ಜೆಗೆ

## 22ರಿಂದ ಅಂಗನವಾಡಿಯಲ್ಲಿ ಪ್ರಿಕೆಜಿ

**ಬೆಂಗಳೂರು:** ರಾಜ್ಯ ಸರಕಾರದ ಭರವಸೆಯಂತೆ ಅಂಗನವಾಡಿಗಳಲ್ಲಿಯೇ ಎಲ್‌ಕೆಜಿ-ಯುಕೆಜಿ ಆರಂಭಿಸುವ ಪ್ರಕ್ರಿಯೆಗೆ ಚಾಲನೆ ನೀಡಿರುವ ಸರಕಾರ, ಜುಲೈ 22ರಂದು ರಾಜ್ಯದ 250 ಅಂಗನವಾಡಿಗಳಲ್ಲಿ ಪ್ರಿಕೆಜಿ ಆರಂಭಿಸಲು ಮುಂದಾಗಿದೆ.

ಪ್ರಾಥಮಿಕ ಶಾಲೆಗಳಲ್ಲಿ ಪ್ರಿಕೆಜಿ ಆರಂಭಿಸುವ ಚಿಂತನೆಯನ್ನು ಈ ಹಿಂದೆ ಸರಕಾರ ನಡೆಸಿತ್ತು. ಇದರಿಂದ ಅಂಗನವಾಡಿಗಳ ಅಸ್ತಿತ್ವಕ್ಕೆ ಧಕ್ಕೆ ಬರಲಿದೆ ಎಂದು ಅಂಗನವಾಡಿ ಕಾರ್ಯಕರ್ತರು ಆರೋಪಿಸಿ, ಪ್ರತಿಭಟನೆ ನಡೆಸಿದ್ದರು. ಆದ್ದರಿಂದ ಸರಕಾರ ಅಂಗನವಾಡಿಗಳನ್ನೇ ಮೇಲ್ದರ್ಜೆಗೇರಿಸಲು ಮುಂದಾಗಿತ್ತು. ಇದೀಗ ಸಾಂಕೇತಿಕವಾಗಿ 250 ಅಂಗನವಾಡಿಯನ್ನು ಮೇಲ್ದರ್ಜೆಗೇರಿಸಲು ತೀರ್ಮಾನಿಸಿರುವ ಸರಕಾರ, ಮೊದಲ ಹಂತದಲ್ಲಿ 15ರಿಂದ 20 ಸಾವಿರ ಸರಕಾರಿ ಮಾಂಟೆಸರಿಗಳ ಜತೆಗೆ ಅಂಗನವಾಡಿಗಳನ್ನು ಮೇಲ್ದರ್ಜೆಗೇರಿಸಲು ಮುಂದಾಗಿದೆ.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಬಯಸುವುದು ಪ್ರತಿಯೊಬ್ಬ ಪಾಲಕರ ಕನಸಾಗಿರುತ್ತದೆ. ಗುಣಮಟ್ಟದ ಶಿಕ್ಷಣದ ಬಗ್ಗೆ ಶಿಕ್ಷಣ ಇಲಾಖೆ ಯೋಚಿಸುವುದು ತಪ್ಪಲ್ಲ. ಆದರೆ, ಅಂಗನವಾಡಿಗೆ ಪೆಟ್ಟು ಬೀಳಬಾರದು. ನಾವೇ ಅಂಗನವಾಡಿ ಕೇಂದ್ರಗಳ ಉನ್ನತೀಕರಿಸಿ, ಗುಣಮಟ್ಟಕ್ಕೆ ಆದ್ಯತೆ ನೀಡೋಣ,
- **ಲಕ್ಷ್ಮೀ ಹೆಬ್ಬಾಳ್ಕರ್**
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ

ತೈಲ, ಹಾಲಿನ ಬೆಲೆ ಏರಿಕೆ ಬೆನ್ನಲ್ಲೇ ಮತ್ತೊಂದು ಶಾಕ್

# ಸಾರಿಗೆ ಬಸ್ ಟಿಕೆಟ್ ದರಗಳಲ್ಲೂ ಏರಿಕೆ?

**ಬೆಂಗಳೂರು:** ನಿರೀಕ್ಷೆಯಂತೆ ಸಾರಿಗೆ ನಿಗಮಗಳು ಬಸ್ ಟಿಕೆಟ್ ದರ ಏರಿಕೆ ಮಾಡಲು ಸಿದ್ಧತೆ ನಡೆಸಿಕೊಂಡಿದೆ. ಈ ಸಂಬಂಧ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಮುಂದಾಗಿದೆ. ಈ ಮೂಲಕ ಈಗಾಗಲೇ ತೈಲ, ಹಾಲಿನ ಬೆಲೆ ಏರಿಕೆಯ ಬಿಸಿಯ ಬೆನ್ನಲ್ಲೇ ಇದೀಗ ಬಸ್ ಟಿಕೆಟ್ ದರ ಏರಿಕೆಯ ಬಿಸಿ ಎದುರಾಗುವ ಸಾಧ್ಯತೆ ದಟ್ಟವಾಗಿದೆ.

ಡಿಸೇಲ್ ದರ ಏರಿಕೆಯಿಂದ ಕೆಎಸ್‌ಆರ್‌ಟಿಸಿ ನಿಗಮಕ್ಕೆ ವಾರ್ಷಿಕ 60 ಕೋಟಿ ರು. ಹೆಚ್ಚುವರಿ ಹೊರೆಯಾಗುತ್ತಿದೆ. ಇದರಿಂದ ಈಗಾಗಲೇ ನಷ್ಟದಲ್ಲಿರುವ ಕೆಎಸ್‌ಆರ್‌ಟಿಸಿಗೆ ಇನ್ನಷ್ಟು ಹೊರೆಯಾಗುವ ಸಾಧ್ಯತೆಯಿದೆ. ಆದ್ದರಿಂದ ದರ ಏರಿಕೆ ಪ್ರಸ್ತಾಪವನ್ನು ಸಲ್ಲಿಸಲು ತೀರ್ಮಾನಿಸಿದೆ ಎಂದು ಮೂಲಗಳು ತಿಳಿಸಿವೆ. ಕೆಎಸ್‌ಆರ್‌ಟಿಸಿಗೆ ದರ ಏರಿಸಲು ಸರಕಾರ ಅನುಮತಿ ನೀಡಿದರೆ, ಇನ್ನುಳಿದ ಸಾರಿಗೆ ನಿಗಮಗಳು ದರ ಏರಿಸಲಿದೆ ಎಂದು ಹೇಳಲಾಗುತ್ತಿದೆ.

ಈ ಬಗ್ಗೆ ಮಾತನಾಡಿರುವ ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್ ಶ್ರೀನಿವಾಸ್, ಇಂಧನ ದರ, ವಾಹನ ಬಿಡಿ ಭಾಗಗಳ ಬೆಲೆ ಏರಿಕೆ ಹಾಗೂ ಸಿಬ್ಬಂದಿ ವೇತನ ವೆಚ್ಚದಿಂದ ಕೆಎಸ್‌ಆರ್‌ಟಿಸಿ ಆದಾಯದಲ್ಲಿ ಕುಸಿತವಾಗುತ್ತಿದ್ದು, ಹೀಗಾಗಿ ನಷ್ಟ ಸರಿದೂಗಿಸಲು ಟಿಕೆಟ್ ದರ ಏರಿಕೆ ಅನಿವಾರ್ಯ ಎಂದಿದ್ದಾರೆ.

ಇನ್ನು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ರಾಜು ಕಾಗೆ ಇದೇ ವಿಚಾರವಾಗಿ ಪ್ರತಿಕ್ರಿಯಿಸಿದ್ದು, ರಾಜ್ಯ ಸರಕಾರ ಶಕ್ತಿ ಯೋಜನೆ ಆರಂಭಿಸಿ ಒಂದು ವರ್ಷವಾಗಿದ್ದು, ಮಹಿಳೆಯರು ಉಚಿತವಾಗಿ ಪ್ರಯಾಣಿಸುತ್ತಾರೆ. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಷ್ಟದಲ್ಲಿದೆ. ಹೀಗಾಗಿ ಬಸ್ ಟಿಕೆಟ್ ದರವನ್ನು ಹೆಚ್ಚಿಸಲು ಚಿಂತನೆ ನಡೆಸಿದ್ದೇವೆ. ಶಕ್ತಿ ಯೋಜನೆಯಿಂದ ಸಂಸ್ಥೆಯ ಆದಾಯದಲ್ಲಿ ಕುಸಿತವಾಗಿದೆ. ಡಿಸೇಲ್ ಮತ್ತು ಬಸ್ ಬಿಡಿ ಭಾಗಗಳ ಬೆಲೆಯೂ ಹೆಚ್ಚಾಗಿದೆ. ಕಳೆದ 10 ವರ್ಷಗಳಿಂದ ಬಸ್ ದರ ಏರಿಕೆ ಮಾಡಿಲ್ಲ. ಈಗಾಗಲೇ ಹಳೆಯ ಕ್ಲಬ್ ಕಟ್ಟಡವನ್ನು ನವೀಕರಿಸಿ ಬಾಡಿಗೆಗೆ ನೀಡಲಾಗುತ್ತಿದೆ. ಹೀಗಾಗಿ ಬಸ್ ಟಿಕೆಟ್ ದರ ಹೆಚ್ಚಿಸುವ ಚಿಂತನೆಯಲ್ಲಿದ್ದೇವೆ ಎಂದರು.

- ಡಿಸೇಲ್ ದರ ಏರಿಕೆಯಿಂದ ಸಾರಿಗೆ ನಿಗಮಗಳಿಗೆ ನಷ್ಟ
- ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ಹೇಳಿದ ಅಧ್ಯಕ್ಷ
- 10 ವರ್ಷಗಳಿಂದ ಬಸ್ ದರ ಏರಿಕೆ ಮಾಡಿಲ್ಲವೆಂದ ಕಾಗೆ

### ನಿಗಮದ ಅಧ್ಯಕ್ಷ ಹೇಳಿಕೆಗೆ ಅಸಮಾಧಾನ

ಇನ್ನು ಕೆಎಸ್‌ಆರ್‌ಟಿಸಿ ಹಾಗೂ ವಾಯವ್ಯ ಕರ್ನಾಟಕ ಸಾರಿಗೆ ನಿಗಮದ ಅಧ್ಯಕ್ಷರು ದರ ಏರಿಕೆ ಸಂಬಂಧ ಮಾತನಾಡುತ್ತಿದ್ದಂತೆ, ವಿವಾದ ಸೃಷ್ಟಿಯಾಗಿದೆ. ಇದರ ಬೆನ್ನಲ್ಲೇ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು, ಸದ್ಯಕ್ಕೆ ಟಿಕೆಟ್ ದರ ಏರಿಕೆ ಮಾಡುವ ಆಲೋಚನೆ ಸರಕಾರದ ಮುಂದಿಲ್ಲ. ಶ್ರೀನಿವಾಸ್ ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ದರ ಹೆಚ್ಚಳ ಸಂಬಂಧ ಪ್ರಸ್ತಾವನೆ ಸಲ್ಲಿಸಲಾಗುವುದು ಅಂತ ಹೇಳಿದ್ದಾರೆ. ಆದರೆ ರಾಜ್ಯ ಸರಕಾರಕ್ಕೆ ಸಾರಿಗೆ ಬಸ್ ಟಿಕೆಟ್ ದರ ಹೆಚ್ಚಳದ ಬಗ್ಗೆ ಯಾವುದೇ ಪ್ರಸ್ತಾವನೆ ಸಲ್ಲಿಕೆ ಮಾಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

12ನೇ ಶತಮಾನದ ದೇಗುಲದ ಬೀಗ 46 ವರ್ಷಗಳ ಬಳಿಕ ತೆರೆದು ಪರಿಶೀಲನೆ

# ಪುರಿ ಜಗನ್ನಾಥನ ಭಂಡಾರ ಬಹಿರಂಗ

**ಪುರಿ:** ನಾಲ್ಕೂವರೆ ದಶಕಗಳ ಬಳಿಕ ಪುರಿಯ ಶ್ರೀ ಜಗನ್ನಾಥ ದೇವಾಲಯದ ಖಜಾನೆಯ ರತ್ನ ಭಂಡಾರವನ್ನು ಪ್ರಮಾಣಿತ ಕಾರ್ಯಾಚರಣೆ ವಿಧಾನ ಮೂಲಕ ತೆರೆಯಲಾಗಿದೆ. ಭಾನುವಾರ ಮಧ್ಯಾಹ್ನ 1.28ರ ಶುಭ ಮುಹೂರ್ತದಲ್ಲಿ ಬೀಗ ತೆರೆದು ಕೊಠಡಿಗಳಲ್ಲಿನ ಖಜಾನೆಯನ್ನು ಪರಿಶೀಲನೆ ನಡೆಸಲಾಗಿದೆ.

46 ವರ್ಷಗಳ ನಂತರ ನಕಲಿ ಕೀ ಬಳಸಿ ರತ್ನ ಭಂಡಾರ ತೆರೆಯಲಾಗಿದ್ದು, ಅದರಲ್ಲಿನ ಚಿನ್ನ-ವಜ್ರ, ಆಭರಣಗಳ ಮೌಲ್ಯ ಲೆಕ್ಕ ಹಾಕುವ ಕಾರ್ಯ ಆರಂಭವಾಗಿದೆ. ಭಂಡಾರದಲ್ಲಿನ ವಸ್ತುಗಳನ್ನು ಸಂಗ್ರಹಿಸಲು ವಿಶೇಷ ಬಾಕ್ಸ್‌ಗಳ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ಒಡಿಶಾ ಸರಕಾರ ಜಗನ್ನಾಥ ದೇಗುಲದ ರತ್ನ ಭಂಡಾರವನ್ನು ಪ್ರಮಾಣಿತ ಕಾರ್ಯಾಚರಣೆ ವಿಧಾನ ಮೂಲಕವೇ ತೆರೆಯಬೇಕೆಂದು ಷರತ್ತು ವಿಧಿಸಿ ಶನಿವಾರವಷ್ಟೇ ಅನುಮತಿ ನೀಡಿತ್ತು. ಒಡಿಶಾ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿಸ್ವನಾಥ್ ರಥ್, ದೇಗುಲ ಆಡಳಿತದ ಮುಖ್ಯಸ್ಥ ಅರಬಿಂದ ಪಧೀ, ಭಾರತೀಯ ಪುರಾತತ್ವ ಇಲಾಖೆ(ಎಎಸ್‌ಐ) ಸೂಪರಿಂಟೆಂಡೆಂಟ್ ಡಿ.ಬಿ.ಗಡಾನಾಯಕ್, ಪುರಿಯ ಮಹಾರಾಜ ಗಜಪತಿ ಮಹಾರಾಜ ದಿಬ್ಯಸಿಂಗ್ ದೇಬಾ ಅವರ ಪ್ರತಿನಿಧಿ , ಆರ್‌ಬಿಐನ ಹಿರಿಯ ಅಧಿಕಾರಿ, ಪುರಿ ಸೇವಾ ಸಮೂಹದ ಪ್ರನಿನಿಧಿ, ಹಿರಿಯ ಅಧಿಕಾರಿಗಳು ಸೇರಿ 11 ಮಂದಿ ಈ ಪ್ರಕ್ರಿಯೆಗೆ ಸಾಕ್ಷಿಯಾದರು.

46 ವರ್ಷಗಳ ಬಳಿಕ ಭಂಡಾರ ತೆರೆಯಲು 3 ಹಂತಗಳ ಕಾರ್ಯವಿಧಾನ ಅನುಸರಿಸಲಾಗಿದೆ. ದೇಗುಲದ ಪ್ರಧಾನ ಅರ್ಚಕರ ಜತೆ ಚರ್ಚಿಸಿಯೇ ಭಂಡಾರ ತೆರೆಯುವ ಘಳಿಗೆ ನಿರ್ಧರಿಸಲಾಗಿದೆ. ಜಗನ್ನಾಥನ ಭಂಡಾರ ತೆರೆದು ನೋಡುವ ಪ್ರಕ್ರಿಯೆ ಸವಾಲಿನ ಕಾರ್ಯವಾಗಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಭಂಡಾರ ತೆರೆವ ಪ್ರಕ್ರಿಯೆಯಿಂದ ಜಗನ್ನಾಥನ ದರ್ಶನಕ್ಕೆ ಭಕ್ತರಿಗೆ ಅಡಚಣೆ ಉಂಟಾಗದು ಎಂದು ದೇವಸ್ಥಾನ ಆಡಳಿತ ತಿಳಿಸಿದೆ.

### ತಾತ್ಕಾಲಿಕ ಸ್ಟ್ರಾಂಗ್ ರೂಂ

ತಾತ್ಕಾಲಿಕ ಸ್ಟ್ರಾಂಗ್ ರೂಂ ವ್ಯವಸ್ಥೆ ಮಾಡಿಕೊಂಡಿದ್ದು, ರತ್ನ ಭಂಡಾರ ಮೊದಲ ಪದರ ತೆರೆದ ಬಳಿಕ ಅಲ್ಲಿ ದೊರೆತ ಎಲ್ಲಾ ವಸ್ತುಗಳನ್ನು ಸ್ಟ್ರಾಂಗ್ ರೂಂನಲ್ಲಿರಿಸಿ ಮೌಲ್ಯಮಾಪನ ಮಾಡಲಾಗುವುದು. ಬಳಿಕ ಎಲ್ಲಾ ಸಾಮಗ್ರಿಗಳನ್ನು ದೇವರ ಎದುರು ಇಟ್ಟು ಆಶೀರ್ವಾದ ಪಡೆಯಲಾಗುವುದು. ರತ್ನ ಭಂಡಾರದ ಒಳಗಿನ ಪದರ ತೆರೆಯಲು ಬೇರೆ ಕಾರ್ಯವಿಧಾನಗಳಿವೆ ಎಂದು ಜಗನ್ನಾಥ ದೇಗುಲ ಆಡಳಿತ ಮುಖ್ಯಸ್ಥ ಅರಬಿಂದ ಪಧೀ ತಿಳಿಸಿದ್ದಾರೆ.

### ವಿಡಿಯೊ ರೆಕಾರ್ಡಿಂಗ್

ಭಂಡಾರ ತೆರೆಯುವ ಇಡೀ ಪ್ರಕ್ರಿಯೆ ವಿಡಿಯೋ ರೆಕಾರ್ಡ್ ಆಗಿದೆ. ಭಂಡಾರ ಕೋಣೆಯಲ್ಲಿರುವ ಎಲ್ಲಾ ಆಭರಣಗಳ ಸುರಕ್ಷತೆ ಬಗ್ಗೆ ತೀವ್ರ ನಿಗಾ ಇರಿಸಲಾಗುವುದು. ಭಂಡಾರ ತೆರೆದ ಬಳಿಕ ದೇಗುಲ ಆಡಳಿತ ಡಿಜಿಟಲ್ ಕ್ಯಾಟಲಾಗ್ ಸಿದ್ಧಪಡಿಸಿ ಆಭರಣಗಳ ಫೋಟೊ, ತೂಕ, ವಿನ್ಯಾಸ ಮತ್ತಿತರ ಮಾಹಿತಿಗಳನ್ನು ದಾಖಲಿಸಿಕೊಳ್ಳಲಿದೆ.

### ಉರಗ ತಜ್ಞರು

ಜಗನ್ನಾಥನ ರತ್ನ ಭಂಡಾರ ತೆರೆಯುವ ವೇಳೆ ಸರ್ಪಗಳು ಕಾವಲು ಇರಬಹುದು ಎಂಬ ಶಂಕೆಯಿಂದ ಉರುಗ ತಜ್ಞರು, ನುರಿತ ವೈದ್ಯರನ್ನು ನಿಯೋಜಿಸಲಾಗಿದೆ. ದೇವಸ್ಥಾನದ ಸುತ್ತ ಹಾವು ಹಿಡಿಯುವವರನ್ನೂ ನಿಯೋಜಿಸಲಾಗಿದೆ.

## ಸಮಾಚಾರ ಸಣ್ಣದಲ್ಲ

### ನಾಳೆ ನೆನಪಿನ-ಮಾಸದ ಮಾತು ಕಾರ್ಯಕ್ರಮ

**ಬೆಂಗಳೂರು:** ಕನ್ನಡ ಗೆಳೆಯರ ಬಳಗದ ವತಿಯಿಂದ ನಾಳೆ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರೊ.ಎಲ್.ಎಸ್. ಶೇಷಗಿರಿರಾವ್ ಶತಮಾನದ ನೆನಪಿನ - ಮಾಸದ ಮಾತು' ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಕಸಾಪ ಮಾಜಿ ಅಧ್ಯಕ್ಷ ಡಾ. ಮನು ಬಳಿಗಾರ್ ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ವಿದ್ವಾಂಸ ಡಾ. ಆರ್. ಲಕ್ಷ್ಮಿನಾರಾಯಣ ಅವರು ಎಲ್.ಎಸ್.ಎಸ್ ರಚಿಸಿದ ವ್ಯಕ್ತಿ ಚಿತ್ರ-ಜೀವನ ಚರಿತ್ರೆ' ಎಂಬ ಉಪನ್ಯಾಸ ನೀಡಲಿದ್ದಾರೆ. ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಆಶಯ ನುಡಿಗಳನ್ನಾಡಲಿದ್ದಾರೆ. ಭಾರತಿ ಶೇಷಗಿರಿರಾವ್, ಡಾ.ಆರ್. ಶೇಷಶಾಸ್ತ್ರಿ, ವ.ಚ. ಚನ್ನೇಗೌಡ ಅವರು ಭಾಗವಹಿಸಲಿದ್ದರೆ ಎಂದು ಪ್ರಕಟಣೆ ತಿಳಿಸಿದೆ.

### 30 ಕೋಟಿ ಮೌಲ್ಯದ ಕೊಕೇನ್ ಪತ್ತೆ

**ಬೆಂಗಳೂರು:** ವಿದೇಶದಿಂದ ಅಕ್ರಮವಾಗಿ ಕೋಟಿ ಕೋಟಿ ರುಪಾಯಿ ಮೌಲ್ಯದ ಕೊಕೇನ್ ಸಾಗಿಸುತ್ತಿದ್ದ ಸ್ಮಗ್ಲರ್‌ನನ್ನು ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿದೆ. ಕೀನ್ಯಾ ಮೂಲದ ಒದಿಹಾಂಬೋ ಮಾರ್ಗನ್ ಬೈರನ್ ಎನ್ನುವ ವ್ಯಕ್ತಿಯನ್ನು ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ತಡೆದು ಲಗೇಜ್ ಬ್ಯಾಗ್ ಪರಿಶೀಲನೆ ವೇಳೆ ಅಕ್ರಮವಾಗಿ ತಂದಿದ್ದ ಮೂರು ಕೆ.ಜಿ. ಕೊಕೇನ್ ಪತ್ತೆಯಾಗಿದೆ. ಬರೋಬ್ಬರಿ 30 ಕೋಟಿ ರೂಪಾಯಿ ಮೌಲ್ಯದ ಮಾದಕದ್ರವ್ಯ ಇದಾಗಿದೆ. ಸ್ಮಗ್ಲರ್ ದೋಹಾದಿಂದ ಬೆಂಗಳೂರಿಗೆ ಇಂಡಿಗೋ ವಿಮಾನದಲ್ಲಿ ಬಂದಿದ್ದ. ಲಗೇಜ್ ಬ್ಯಾಗ್ ಚೆಕಿಂಗ್ ವೇಳೆ ಡಿ.ಆರ್.ಐ ತಂಡಕ್ಕೆ ಈ ಭಾರಿ ಮೌಲ್ಯದ ಕೊಕೇನ್ ಪತ್ತೆಯಾಗಿದೆ.

### ವೈಟ್ ಟಾಪಿಂಗ್ ಇಂದು ಚಾಲನೆ

**ಬೆಂಗಳೂರು:** ಬಿಬಿಎಂಪಿಯ 1700 ಕೋಟಿ ವೆಚ್ಚದ ವೈಟ್ ಟಾಪ್ ಯೋಜನೆಗೆ ಭೂಮಿಪೂಜೆ ನಡೆಯಲಿದ್ದು, ಸೋಮವಾರ ಜು.15ರಂದು ಈ ಯೋಜನೆಗೆ ಚಾಲನೆ ನೀಡಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಬಿಬಿಎಂಪಿಯ ಮಹತ್ವಾಕಾಂಕ್ಷಿ 150 ಕಿ.ಮೀ ಉದ್ದದ ಯೋಜನೆ ಇದಾಗಿದ್ದು, ಮಲ್ಲೇಶ್ವರ, ಮಹಾಲಕ್ಷ್ಮಿ ಲೇಔಟ್, ಚಾಮರಾಜಪೇಟೆ ಮತ್ತು ಗಾಂಧಿನಗರ ವಿಧಾನಸಭಾ ಕ್ಷೇತ್ರಗಳಲ್ಲಿ ಏಕಕಾಲಕ್ಕೆ ಭೂಮಿಪೂಜೆ ನಡೆಸಿ ಚಾಲನೆ ನೀಡಲಾಗುತ್ತಿದೆ. ನಗರದಲ್ಲಿ ಸಂಚಾರ ದಟ್ಟಣೆ ಹೆಚ್ಚಾದ ಹಿನ್ನೆಲೆ ಎಲ್ಲಾ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳನ್ನು ಗುಂಡಿಮುಕ್ತವನ್ನಾಗಿಸಲು ವೈಟ್ ಟಾಪಿಂಗ್ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದರು. ಸಂಚಾರ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಿರುವ ಪಾಲಿಕೆಯು ಪರ್ಯಾಯ ಮಾರ್ಗಗಳಲ್ಲಿ ಕೆಲಸ ಮಾಡುವ ಮೂಲಕ ಸಮಯಕ್ಕೆ ಸರಿಯಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆದಾರರ ಮೇಲೆ ಒತ್ತಡ ಹೇರಲಿದೆ. ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ,ಬೆಂಗಳೂರು ಜಲಮಂಡಳಿ, ಬೆಸ್ಕಾಂ ಹಾಗೂ ಇತರೆ ಏಜನ್ಸಿಗಳು ತಮ್ಮ ಕೇಬಲ್‌ಗಳು ಮತ್ತು ಪೈಪ್‌ಗಳು ಚಾಲನೆಯಲ್ಲಿರುವ ಬಗ್ಗೆ ಸಮೀಕ್ಷೆ ನಡೆಸಬೇಕು ಎಂದು ಹೇಳಿದರು.

### ಕ್ಲಬ್ ಪರವಾನಗಿ ನಿಯಮ ಸಡಿಲ

**ಬೆಂಗಳೂರು:** ಅಬಕಾರಿ ನಿಯಮಗಳಡಿ ಕ್ಲಬ್‌ಗಳಿಗೆ ಸಿಎಲ್-4 ಪರವಾನಗಿ ನೀಡಲು ಷರತ್ತುಗಳನ್ನು ಅಬಕಾರಿ ಇಲಾಖೆಯು ಸಡಿಲಗೊಳಿಸಿದೆ. 20 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಾತ್ರ ಈ ನೂತನ ನಿಯಮ ಅನ್ವಯವಾಗಿಲಿದೆ. ಈ ಮೊದಲು ಸಿಎಲ್-4 ಪರವಾನಗಿ ಪಡೆಯಲು ಕ್ಲಬ್‌ಗಳು ಕನಿಷ್ಠ ಮೂರು ಒಳಾಂಗಣ ಮತ್ತು ಕನಿಷ್ಠ ಎರಡು ಹೊರಾಂಗಣ ಆಟ ಸೇರಿ, ಕನಿಷ್ಟ ಐದು ಆಟಗಳಿಗೆ ಸೌಲಭ್ಯ ಹೊಂದಿರಬೇಕಿತ್ತು. ನಗರಗಳಲ್ಲಿ ಒಳಾಂಗಣ, ಹೊರಾಂಗಣದಲ್ಲಿ ಐದು ಆಟಗಳಿಗೆ ಸ್ಥಳ ಹೊಂದಿಸುವುದು ಕಷ್ಟ. ಹೀಗಾಗಿಯೇ ನಿಯಮಗಳನ್ನು ಸಡಿಲಗೊಳಿಸಲಾಗಿದೆ ಎಂದು ಇಲಾಖೆಯ ಜಂಟಿ ಆಯುಕ್ತ (ಐಎಂಎಲ್) ಟಿ.ನಾಗರಾಜಪ್ಪ ಅವರು ಮಾಹಿತಿ ನೀಡಿದ್ದಾರೆ. ಬದಲಾದ ನಿಯಮಗಳ ಪ್ರಕಾರ ಕ್ಲಬ್‌ಗಳು ಹೊಂದಿರಬೇಕಾದ ಹೊರಾಂಗಣ ಮತ್ತು ಒಳಾಂಗಣ ಆಟಗಳ ಕನಿಷ್ಠ ಮಿತಿಯನ್ನು ಸಡಿಲಿಸಲಾಗಿದೆ. ಕ್ಲಬ್‌ಗಳು ಒಟ್ಟು ಐದು ಆಟಗಳಿಗೆ ವ್ಯವಸ್ಥೆ ಹೊಂದಿರಬೇಕು. ಆ ಆಟಗಳು ಒಳಾಂಗಣ ಅಥವಾ ಹೊರಾಂಗಣ ಆಗಿರಬಹುದು. ಆದರೆ, ಕ್ಲಬ್‌ಗಳು ಕನಿಷ್ಠ 10 ಸಾವಿರ ಚದರ ಅಡಿಗಳಷ್ಟು ಬಿಲ್ಟ್ ಅಪ್ ಏರಿಯಾ ಹೊಂದಿರಬೇಕು. ಪರವಾನಗಿ ಹೊಂದಿರುವ ಕ್ಲಬ್‌ಗಳಿಗೂ ಈ ನಿಯಮ ಅನ್ವಯವಾಗುತ್ತದೆ.

ವಿರಾಮ
ಪ್ರತಿ ಭಾನುವಾರ

{ಸದಾನಂದಗೌಡ} ಮಾಜಿ ಸಿಎಂ

ರಾಜಕಾರಣಿಗಳು ಚುನಾವಣೆಯ ವೇಳೆ ಮಾತ್ರ ಸಮರ್ಪಣೆಯ ಮನೋಭಾವ ವ್ಯಕ್ತಪಡಿಸುತ್ತಾರೆ. ಇದರಿಂದ ಪ್ರಯೋಜನವಿಲ್ಲ.ಸಮಾಜದಿಂದ ಪಡೆದಿರುವುದನ್ನು ಸಮಾಜಕ್ಕೆ ಅರ್ಪಣೆ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು.

---

ಮಾಜಿ ಸಚಿವ ನಾಗೇಂದ್ರ ವಿರುದ್ಧ ಕೋರ್ಟ್‌ಗೆ ಜಾರಿ ನಿರ್ದೇಶನಾಲಯ ಮಾಹಿತಿ

# ಲೋಕ ಚುನಾವಣೆಗೆ ವಾಲ್ಮೀಕಿ ನಿಗಮದ 20 ಕೋಟಿ ಬಳಕೆ?

**ಬೆಂಗಳೂರು:** ಕರ್ನಾಟಕ ರಾಜ್ಯ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಅಕ್ರಮ ಹಣ ವರ್ಗಾವಣೆ ಮಾಡಿಕೊಂಡಿರುವ ಆರೋಪದ ಮೇಲೆಗೆ ಇಡಿ ಅಧಿಕಾರಿಗಳು ಮಾಜಿ ಸಚಿವ ನಾಗೇಂದ್ರ ಅವರನ್ನು ಬಂಧಿಸಿದೆ. ಇನ್ನು ಇಡಿ, ನ್ಯಾಯಾಲಯದ ಮಹತ್ವದ ಅಂಶವೊಂದನ್ನು ಬಿಚ್ಚಿಟ್ಟಿದೆ.

20.19 ಕೋಟಿ ರು. ಹಣವನ್ನು ತಾವು ಉಸ್ತುವಾರಿ ಹೊತ್ತಿದ್ದ ಬಳ್ಳಾರಿ ಲೋಕಸಭಾ ಕ್ಷೇತ್ರದ ಚುನಾವಣೆಗೆ ನಾಗೇಂದ್ರ ಬಳಕೆ ಮಾಡಿಕೊಂಡಿದ್ದಾರೆ ಎಂದು ನ್ಯಾಯಾಲಯಕ್ಕೆ ನಿರ್ದೇಶ ನಾಲಯ (ಇ.ಡಿ.) ಮಾಹಿತಿ ನೀಡಿದೆ. ನಾಗೇಂದ್ರ ಅವರನ್ನು ಬಂಧಿಸಿದ ಬಳಿಕ ಹೆಚ್ಚಿನ ತನಿಖೆ ಸಲುವಾಗಿ ವಶಕ್ಕೆ ಪಡೆಯಲು ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲ ಯಕ್ಕೆ ಮನವಿ ಸಲ್ಲಿಸಿದ್ದು, ಅದ ರಲ್ಲಿ ಲೋಕಸಭಾ ಚುನಾವಣೆಗೆ ವಾಲ್ಮೀಕಿ ನಿಗಮದ ಹಗರಣದ ಹಣ ವೆಚ್ಚವಾಗಿರುವ ಬಗ್ಗೆ ಉಲ್ಲೇಖಿಸಿದೆ ಎಂದು ತಿಳಿದು ಬಂದಿದೆ.

ಇದೇ ವರ್ಷದ ಮಾರ್ಚ್ 4ರಂದು 21ರಂದು 44 ಕೋಟಿ ರು, ಮಾ. 22ರಂದು 33 ಕೋಟಿ ರು. ಹಾಗೂ ಮೇ 21ರಂದು 50 ಕೋಟಿ ರು. ಸೇರಿ ದಂತ ಒಟ್ಟು 187.33 ಕೋಟಿ ರು. ಹಣವು ವಾಲ್ಮೀಕಿ ನಿಗಮದ ಬ್ಯಾಂಕ್ ಖಾತೆಗಳಿಗೆ ರಾಜ್ಯ ಖಜಾನೆ-2ರಿಂದ ಜಮೆಯಾಗಿತ್ತು. ಈ ಹಣದ ಪೈಕಿ 94.73 ಕೋಟಿ ರು. ಹಣವು ಎಂ.ಜಿ.ರಸ್ತೆಯ ಯೂನಿಯನ್ ಬ್ಯಾಂಕ್ ಖಾತೆಯಿಂದ ಹೈದರಾಬಾದ್ ನ ಫಸ್ಟ್ ಫೈನಾನ್ಸ್ ಕೋ ಆಪರೇಟಿವ್ ಬ್ಯಾಂಕ್‌ನ 18 ನಕಲಿ ಖಾತೆಗಳಿಗೆ ರವಾನೆಯಾಗಿತ್ತು. ಆದರೆ ಅಕ್ರಮ ಸದ್ದು ಮಾಡಿದ ಕೂಡಲೇ 5 ಕೋಟಿ ರು. ಮರಳಿ ನಿಗಮದ ಖಾತೆಗೆ ಬಂದಿತ್ತು. ಇನ್ನುಳಿದ 89.73 ಕೋಟಿ ರು. ಹಣವನ್ನು ಹೈದರಾಬಾದ್ ಗ್ಯಾಂಗ್ ದೋಚಿತ್ತು ಎಂಬ ಆರೋಪ ಬಂದಿದೆ.

### ಪುಷ್ಟಿ ನೀಡುತ್ತಿವೆ ಹಣದ ಹೊಳೆ

**ವಾಲ್ಮೀಕಿ ನಿಗಮದ ಹಣವನ್ನು ಲೋಕಸಭಾ ಚುನಾವಣೆಗೆ ಬಳಸಿಕೊಂಡಿದ್ದಾರೆ ಎನ್ನುವ ಇಡಿ ಆರೋಪಕ್ಕೆ ಹಗರಣದ ಟೈಮ್‌ಲೈನ್ ಪುಷ್ಟಿ ನೀಡುತ್ತಿವೆ. ಯೂನಿಯನ್ ಬ್ಯಾಂಕ್‌ನ ಹೊಸ ಖಾತೆಗೆ 187 ಕೋಟಿ ರು. ವರ್ಗಾವಣೆ ಮಾಡಲಾಗಿದೆ. ಬಳಿಕ ಹೈದರಾಬಾದ್ ಫಸ್ಟ್ ಬ್ಯಾಂಕ್‌ನಲ್ಲಿ ಜನವರಿ ಮತ್ತು ಫೆಬ್ರವರಿಯಲ್ಲಿ 18 ನಕಲಿ ಖಾತೆಗಳನ್ನು ಓಪನ್ ಮಾಡಲಾಗಿದ್ದು, ಈ ಖಾತೆಗಳಿಗೆ ಮಾರ್ಚ್, ಏಪ್ರಿಲ್, ಮೇ ತಿಂಗಳಲ್ಲಿ ಹಂತ ಹಂತವಾಗಿ ಬರೋಬ್ಬರಿ 89 ಕೋಟಿ ರು. ಹಣ ವರ್ಗಾವಣೆ ಮಾಡಲಾಗಿದೆ. ಮೇ 7ರಂದು ಬಳ್ಳಾರಿ ಲೋಕಸಭಾ ಕ್ಷೇತ್ರಕ್ಕೆ ಚುನಾವಣೆ ನಡೆದಿತ್ತು. ಆದರೆ, ಚುನಾವಣೆಗೂ ಮುನ್ನ ನಿಗಮದ ಹಣ ಆರೋಪಿಗಳ ಕೈಸೇರಿತ್ತು. ಮಾರ್ಚ್, ಏಪ್ರಿಲ್, ಮೇ ತಿಂಗಳಲ್ಲಿ ತಿಂಗಳಲ್ಲಿ ಒಟ್ಟು18 ನಕಲಿ ಖಾತೆಗಳಿಗೆ ಬರೋಬ್ಬರಿ 89 ಕೋಟಿ ರು. ಹಣ ವರ್ಗಾವಣೆಯಾಗಿರುವುದು ಬೆಳಕಿಗೆ ಬಂದಿದೆ. ಚುನಾವಣೆಗೂ ಒಂದು ದಿನ ಮುಂಚೆ ಅಂದರೆ ಮೇ 6ರಂದು ಒಂದು ನಕಲಿ ಖಾತೆಗೆ 5 ಕೋಟಿ ರು. ವರ್ಗಾವಣೆ ಆಗಿದೆ. ಒಟ್ಟಾರೆ ಮೇ 7ಕ್ಕಿಂತ ಮುನ್ನ ನಿಗಮದ ಹಣ ಅಕ್ರಮವಾಗಿ ಆರೋಪಿಗಳ ಕೈ ಸೇರಿತ್ತು. ಈ ಹಣದಲ್ಲೇ ನಾಗೇಂದ್ರ 20.19 ಕೋಟಿ ರೂ. ಹಣ ಚುನಾವಣೆಗೆ ಬಳಕೆ ಮಾಡಿದ್ದಾರೆ ಎಂದು ಇಡಿ ಆರೋಪಿಸಿದೆ.**

### ಸಂಸದ ತುಕಾರಾಂರನ್ನು ಅನರ್ಹಗೊಳಿಸಿ : ರಾಜೀವ್

**ಇನ್ನು ನಾಗೇಂದ್ರ ಅವರು ಅಕ್ರಮವಾಗಿ 20 ಕೋಟಿ ರುಗಳನ್ನು ಲೋಕಸಭಾ ಚುನಾವಣೆ ಬಳಸಿಕೊಂಡಿದ್ದಾರೆ ಎನ್ನುವ ಆರೋಪದ ಬೆನ್ನಲ್ಲೇ, ಈ. ತುಕಾರಾಂ ಅವರನ್ನು ಸಂಸದರ ಸ್ಥಾನದಿಂದ ಅನರ್ಹಗೊಳಿಸಬೇಕೆಂದು ಬಿಜೆಪಿ ಒತ್ತಾಯಿಸುತ್ತದೆ.**

**ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ಚುನಾವಣಾ ಆಯೋಗದ ಮುಂದೆ ಮನವಿ ಸಲ್ಲಿಸಲಿದ್ದೇವೆ. ಅಕ್ರಮ ಹಣದಿಂದ ಆಯ್ಕೆಯಾದ ಈ ಸಂಸದರಿಗೆ ಸಂಸತ್ತಿನ ಒಳಗೆ ಸಂವಿಧಾನದ ಪ್ರತಿಯನ್ನು ಹಿಡಿದು ಪ್ರಮಾಣವಚನ ಸ್ವೀಕರಿಸಲು ಯಾವುದೇ ನೈತಿಕತೆ ಇಲ್ಲ ಎಂದು ಟೀಕಿಸಿದರು. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಭಾಗಿಯಾದ ನಾಗೇಂದ್ರರನ್ನು ಬಂಧಿಸಿದ ಇ.ಡಿ.ಯು ನ್ಯಾಯಾಂಗದ ಮುಂದೆ ಹಾಜರುಪಡಿಸುವ ರಿಮಾಂಡ್ ಅರ್ಜಿಯಲ್ಲಿ ಇವರು ಅಕ್ರಮದಲ್ಲಿ ಭಾಗಿಯಾಗಿದ್ದಾರೆ; ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಮೀಸಲಿದ್ದ ಹಣ ದುರ್ಬಳಕೆ ಆಗಿದೆ. ಚುನಾವಣೆಗೆ ಕೂಡ 20 ಕೋಟಿ 19 ಲಕ್ಷ ರೂಪಾಯಿ ದುರ್ಬಳಕೆ ಆಗಿದೆ ಎಂದು ರಿಮಾಂಡ್ ಅರ್ಜಿಯಲ್ಲಿ ತಿಳಿಸಿದ್ದಾರೆ ಎಂದು ವಿವರಿಸಿದರು.**

---

ಇಡಿ ವಿಚಾರಣೆಗೆ ಸಹಕರಿಸದ ನಾಗೇಂದ್ರ | ಏನೇ ಕೇಳಿದರೂ ನನಗೆ ಗೊತ್ತಿಲ್ಲ ಎನ್ನುತ್ತಿರುವ ಮಾಜಿ ಸಚಿವ

# ನನಗೇನೂ ಗೊತ್ತಿಲ್ಲ ನಾನೇನೂ ಮಾಡಿಲ್ಲ

- **ಅಕ್ರಮ ಹಣ ವರ್ಗಾವಣೆ ಬಗ್ಗೆ ದಾಖಲೆಗಳನ್ನು ಮುಂದಿಟ್ಟುಕೊಂಡು ಇ.ಡಿ ಅಧಿಕಾರಿಗಳು ಪ್ರಶ್ನೆ**
- **ಯಾವುದೇ ವಿಚಾರ ತಿಳಿಸದ ಕಾರಣ ಇಡಿ ಅಧಿಕಾರಿಗಳು ಹೈರಾಣು**
- **ಎಸ್‌ಐಟಿ, ಸಿಬಿಐ ವಿಚಾರಣೆ ವೇಳೆ ಮಾಜಿ ಸಚಿವ ನಾಗೇಂದ್ರ ಸೂಚನೆಯಂತೆ ಹೊಸ ಖಾತೆ ತೆರೆದಿದ್ದಾಗಿ ಬಾಯ್ಬಿಟ್ಟಿದ್ದ ಎಂ.ಡಿ ಪದ್ಮನಾಭ್.**

**ಬೆಂಗಳೂರು :** ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣಕ್ಕೆ ಸಂಬಂಧ ಮಾಜಿ ಸಚಿವ ಬಿ.ನಾಗೇಂದ್ರ ಇಡಿ ಅಧಿಕಾರಿಗಳ ವಶದಲ್ಲಿದ್ದು, ಯಾವುದೇ ವಿಚಾರವನ್ನು ಬಾಯಿಬಿಡುತ್ತಿಲ್ಲ ಎಂದು ಮೂಲಗಳು ತಿಳಿಸಿವೆ.

ವಾಲ್ಮೀಕಿ ನಿಗಮದಲ್ಲಿ ಅಕ್ರಮ ಹಣ ವರ್ಗಾವಣೆ ಬಗ್ಗೆ ದಾಖಲೆಗಳನ್ನು ಮುಂದಿಟ್ಟುಕೊಂಡು ಇ.ಡಿ ಅಧಿಕಾರಿಗಳು ಪ್ರಶ್ನೆಸುತ್ತಿದ್ದರೂ ನಾಗೇಂದ್ರ ಯಾವುದೇ ರೀತಿಯಲ್ಲಿಯೂ ತನಿಖೆಗೆ ಸಹಕರಿಸುತ್ತಿಲ್ಲ. ಏನು ಕೇಳಿದರೂ ನನಗೇನೂ ಗೊತ್ತಿಲ್ಲ, ನಾನೇನೂ ಮಾಡಿಲ್ಲ ಎಂದೇ ಹೇಳುತ್ತಿದ್ದಾರೆ. ಪ್ರಕರಣ ಸಂಬಂಧ ಬಂಧಿತ ಆರೋಪಿಗಳ ಹೇಳಿಕೆ ಆಧರಿಸಿ ಪ್ರಶ್ನೆಮಾಡಿದರೂ ಯಾವುದೇ ವಿಚಾರ ತಿಳಿಸದ ಕಾರಣ ಅಧಿಕಾರಿಗಳು ಹೈರಾಣಾಗಿದ್ದಾರೆ.

**ನಾಗೇಂದ್ರ ಹೇಳಿದ್ದೇನು?:** ಆಪ್ತ ನೆಕ್ಕುಂಟಿ ನಾಗರಾಜ್, ನಾಗೇಶ್ವರರಾವ್, ನಿಗಮದ ಎಂ.ಡಿ ಪದ್ಮನಾಭ್ ಜತೆ ಸೇರಿ ಹೋಟೆಲ್‌ನಲ್ಲಿ ಸಭೆ ಮಾಡಿದ್ದು ಯಾಕೆ ಎಂಬ ಪ್ರಶ್ನೆಗೆ ಉತ್ತರಿಸಿದ ನಾಗೇಂದ್ರ ಯಾವುದೇ ಸಭೆ ಮಾಡಿಲ್ಲ. ಊಟಕ್ಕೆ ಸೇರಿದ್ವಿ ಅಷ್ಟೇ ಎಂದಿದ್ದಾರೆ. ನಿಮ್ಮ ಸೂಚನೆಯಂತೆ ನಿಗಮದಲ್ಲಿ ಹೊಸ ಅಕೌಂಟ್ ತೆರೆಯಲಾಗಿದೆ ಎಂದು ನಿಗಮದ ಎಂ.ಡಿ. ಪದ್ಮನಾಭ್ ಹೇಳಿಕೆ ನೀಡಿದ್ದಾರೆ ಎಂದು ಅಧಿಕಾರಿಗಳು ಹೇಳಿದಾಗ ಅವರನ್ನೇ ಕೇಳಿಕೊಳ್ಳಿ , ನನಗೆ ಗೊತ್ತಿಲ್ಲ ಎಂದು ಮಾಜಿ ಸಚಿವರು ಪ್ರತಿಕ್ರಿಯಿಸಿದ್ದಾರೆ. ನಿಗಮಕ್ಕೆ ಸಂಬಂಧವಿಲ್ಲದ ಆಂಧ್ರದ ಐಟಿ ಕಂಪನಿಗಳಿಗೆ ಹಣ ವರ್ಗಾವಣೆ ಆಗಿದ್ದೇಕೆ ಎಂಬ ಪ್ರಶ್ನೆಗೆ ಗೊತ್ತಿಲ್ಲ ಎಂದೇ ಉತ್ತರ ಲಭಿಸಿದೆ. ನಿಗಮಕ್ಕೂ ನೆಕ್ಕುಂಟಿ ನಾಗರಾಜ್, ಸತ್ಯನಾರಾಯಣ, ನಾಗೇಶ್ವರರಾವ್‌ಗೂ ಏನು ಸಂಬಂಧ ಎಂದು ಇಡಿ ಅಧಿಕಾರಿಗಳು ಕೇಳಿದಾಗ ನನಗೇನು ಗೊತ್ತು ಸರ್ ಎಂದು ಮರುಪ್ರಶ್ನೆ ಹಾಕಿದ್ದಾರೆ.

**ಸುಸ್ತಾದ ಅಧಿಕಾರಿಗಳು:** ವಿಚಾರಣೆ ವೇಳೆ ಏನೇ ಕೇಳಿದರೂ, ನನಗೇನೂ ಗೊತ್ತಿಲ್ಲ, ನಾನೇನೂ ಮಾಡಿಲ್ಲ ಎಂಬ ಎರಡು ಮಾತನ್ನು ಬಿಟ್ಟು ಬೇರೆ ಮಾತಾಡದ ಮಾಜಿ ಸಚಿವ ನಾಗೇಂದ್ರ ಅವರಿಂದಾಗಿ ಅಧಿಕಾರಿಗಳು ಸುಸ್ತಾಗಿದ್ದಾರೆ. ಎಸ್‌ಐಟಿ ಹಾಗೂ ಸಿಬಿಐ ವಿಚಾರಣೆ ವೇಳೆ ಮಾಜಿ ಸಚಿವ ನಾಗೇಂದ್ರ ಸೂಚನೆಯಂತೆ ಹೊಸ ಖಾತೆ ತೆರೆದಿದ್ದಾಗಿ ಎಂ.ಡಿ ಪದ್ಮನಾಭ್ ಬಾಯ್ಬಿಟ್ಟಿದ್ದರು. ಆದರೆ ಇಡಿ ವಿಚಾರಣೆ ವೇಳೆ ಯಾವುದಕ್ಕೂ ಸರಿಯಾಗಿ ಉತ್ತರಿಸದೇ ತನಗೇನೂ ಗೊತ್ತಿಲ್ಲ ಎಂದು ನಾಗೇಂದ್ರ ಹೇಳುತ್ತಿದ್ದಾರೆ.

---

# ವಕ್ಫ್ ಬೋರ್ಡ್‌ನಲ್ಲಿ ಅವ್ಯವಹಾರ: ಎಫ್‌ಐಆರ್ ದಾಖಲು

**ಬೆಂಗಳೂರು:** ವಾಲ್ಮೀಕಿ ಹಗರಣ, ಅಪೆಕ್ಸ್ ಬ್ಯಾಂಕ್ ಹಗರಣದ ಬಳಿಕ ಇದೀಗ ರಾಜ್ಯ ವಕ್ಫ್ ಬೋರ್ಡ್‌ನಲ್ಲಿ ನಡೆದ ಕೋಟ್ಯಂತರ ರು. ಹಗರಣ ಬೆಳಕಿಗೆ ಬಂದಿದೆ.

ಅಪರಾಧ ಸುದ್ದಿಗಳು

ವಕ್ಫ್ ಬೋರ್ಡ್‌ನ ಮಾಜಿ ಸಿಇಓ ಝುಲ್ಫಿಕರ್‌ಉಲ್ಲ ವಿರುದ್ಧ ಕೋಟಿ ಕೋಟಿ ವ್ಯವಹಾರದ ಆರೋಪ ಕೇಳಿಬಂದಿದೆ. ವಕ್ಫ್ ಬೋರ್ಡ್ ಖಾತೆಯಿಂದ ಹಂತಹಂತವಾಗಿ 8 ಕೋಟಿ ರು.ಗಳನ್ನು ಅಕ್ರಮವಾಗಿ ವರ್ಗಾಯಿಸಿದ ಆರೋಪದಲ್ಲಿ ಮಾಜಿ ಸಿಇಓ ಝುಲ್ಫಿಕರ್ ಉಲ್ಲ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಅಕ್ರಮ ಕುರಿತು ವಕ್ಫ್ ಬೋರ್ಡ್ ಮುಖ್ಯ ಲೆಕ್ಕಾಧಿಕಾರಿ ಮೀರ್ ಅಹಮ್ಮದ್ ನೀಡಿದ ದೂರಿನ ಮೇರೆಗೆ ಹೈಗ್ರೌಂಡ್ಸ್ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬೆಂಗಳೂನಿಂದ ಚಿಂತಾಮಣಿ ಖಾತೆಗೆ ಹಣ ವರ್ಗಾಯಿಸಲಾಗಿದೆ ಎನ್ನಲಾಗಿದ್ದು, ಈ ಬಗ್ಗೆ ಹೈಗ್ರೌಂಡ್ಸ್ ಪೊಲೀಸರು ತನಿಖೆ ಆರಂಭಿಸಿದ್ದಾರೆ.

**ಎಫ್‌ಐಆರ್‌ನಲ್ಲಿ ಏನಿದೆ..?**

ಕರ್ನಾಟಕ ವಕ್ಫ್ ಮಂಡಳಿಯ ಕಲಬುರಗಿ ದರ್ಗಾಕ್ಕೆ ಸೇರಿದ ಆಸ್ತಿಯನ್ನು ಸರಕಾರ ಒತ್ತುವರಿ ಮಾಡಿಕೊಂಡು ಮಂಡಳಿಗೆ 2.29 ಕೋಟಿ ರು.ಗಳನ್ನು ನೀಡಿತ್ತು. ಜತೆಗೆ ವಕ್ಫ್ ಮಂಡಳಿಯಲ್ಲಿ ಮುಜರಾಯಿ ಕಡೆಯಿಂದ 1.79 ಕೋಟಿ ಹಣವು ಬಂದಿತ್ತು. ಈ ಒಟ್ಟು 4,00,45,465 ರು. ಹಣವು ಬೆನ್ಸನ್‌ಟೌನ್‌ನ ಇಂಡಿಯನ್ ಬ್ಯಾಂಕ್‌ನ ಎಸ್.ಬಿ ಖಾತೆ ಸಂಖ್ಯೆ 412204112 ರಲ್ಲಿ ಜಮೆ ಮಾಡಲಾಗಿತ್ತು. ಆದರೆ, 2016ರ ನವೆಂಬರ್ 26ರಂದು ವಕ್ಫ್ ಮಂಡಳಿಯ ಬ್ಯಾಂಕ್ ಖಾತೆಯಲ್ಲಿ ಜಮೆಯಾಗಿರುವ 4,00,45,465 ರು. ಹಣವನ್ನು ಅಂದಿನ ಸಿಇಓ ಝುಲ್ಫಿಕರ್‌ಉಲ್ಲ ವಕ್ಫ್ ಸಂಸ್ಥೆಯ ಗಮನಕ್ಕೆ ತಾರದೇ ಚಿಂತಾಮಣಿಯ ವಿಜಯಾ ಬ್ಯಾಂಕ್‌ಗೆ ವಕ್ಫ್ ಮಂಡಳಿ ಹೆಸರಿನ ಖಾತೆಗೆ ಎರಡು ಚೆಕ್‌ಗಳ ಮುಖಾಂತರ ಎಫ್‌ಡಿ ಮಾಡಲು ವರ್ಗಾವಣೆ ಮಾಡಿದ್ದರು. ಇದರಿಂದ ಸಂಸ್ಥೆಗೆ 8,03,56,713.64 ರು. ನಷ್ಟವಾಗಿದೆ. ಈ ರೀತಿ ಸಂಸ್ಥೆಗೆ ನಂಬಿಕೆ ದ್ರೋಹ ಮಾಡಿ ಆರ್ಥಿಕ ನಷ್ಟವನ್ನುಂಟು ಮಾಡಿರುವ ಮಾಜಿ ಸಿಇಓ ಝುಲ್ಫಿಕರ್‌ಉಲ್ಲ ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ದೂರುದಾರ ಮೀರ್ ಅಹಮ್ಮದ್ ತಿಳಿಸಿರುವುದಾಗಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

### ಇಬ್ಬರು ಯುವತಿಯರಿಗೆ ಮೋಸ ಮತ್ತೊಬ್ಬಳೊಂದಿಗೆ ಯುವಕ ಪರಾರಿ

**ಬೆಂಗಳೂರು:** ಓರ್ವ ಆಸಾಮಿ ಬಾಳು ಕೊಡುವುದಾಗಿ ವಂಚಿಸಿ ಇಬ್ಬರು ಯುವತಿಯರಿಗೆ ವಂಚಿಸಿ ಮೂರನೇ ಯುವತಿಯೊಂದಿಗೆ ಪರಾರಿಯಾಗಿರುವ ಘಟನೆ ನಡೆದಿದೆ.

ಬಿಹಾರ ಮೂಲದ ಸೋನು ಕುಮಾರ್ ತನ್ನ ಮನೆ ಮುಂದೆ ಹೋಗುವ ಚಂದದ ಯುವತಿ ಹಾಗೂ ಮಹಿಳೆಯರನ್ನು ಗುರಿಮಾಡುತ್ತಿದ್ದ. ಬೇರೆ ಬೇರೆ ಊರುಗಳಿಂದ ಬಂದವರನ್ನು ಪರಿಚಯ ಮಾಡಿಕೊಂಡು ಬಳಿಕ ಪ್ರೀತಿಸುವುದಾಗಿ ನಂಬಿಸಿ ಲಿವಿಂಗ್ ಟುಗೆದರ್ ಇರಿಸಿಕೊಳ್ಳುತ್ತಿದ್ದ. ತನ್ನ ಆಸೆ ಈಡೇರಿದ ಬಳಿಕ ಮತ್ತೊಬ್ಬ ಯುವತಿಯೊಂದಿಗೆ ಪರಾರಿಯಾಗುವ ಖಯಾಲಿ ಹೊಂದಿದ್ದ. ಸೋನುಕುಮಾರ್ ಬೆಂಗಳೂರಿನ ನೆಲಗದರನಹಳ್ಳಿಯಲ್ಲಿ ವಾಸವಿದ್ದ. ವಿಚ್ಛೇದನ ಪಡೆದ ಮಹಿಳೆ ಸೇರಿದಂತೆ ಇಬ್ಬರಿಗೆ ಲವ್, ಸೆಕ್ಸ್, ದೋಖಾ ಮಾಡಿ ಇದೀಗ ಇಬ್ಬರನ್ನೂ ಬಿಟ್ಟು ಪೀಣ್ಯದ ಕುಸುಮ ಎಂಬ ಯುವತಿಯೊಂದಿಗೆ ಪರಾರಿಯಾಗಿದ್ದಾನೆ. ಸದ್ಯ ಪೀಣ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೋನುಕುಮಾರ್ ಹಾಗೂ ಕುಸುಮ ಮದುವೆಯಾಗಿದೆ ಎನ್ನುವ ಫೋಟೋ ಕೂಡ ವೈರಲ್ ಆಗಿವೆ. ಕುಸುಮ ಮನೆಯವರು ಕೂಡ ಪೀಣ್ಯಾ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲು ಮಾಡಿದ್ದಾರೆ. ಪರ್ವೀನ್ ತಾಜ್ ಎಂಬ ಮಹಿಳೆಯ ಜತೆ ಲಿವಿಂಗ್ ಟುಗೆದರ್‌ನಲ್ಲಿ ಇದ್ದಾಗಲೇ ಮನೆಯಲ್ಲಿ 3 ಲಕ್ಷದ 60 ಸಾವಿರ ರು. ಕಳ್ಳತನ ಮಾಡಿ ಪರಾರಿಯಾಗಿದ್ದಾನೆ. ಹೀಗಾಗಿ ಆರೋಪಿ ಸೋನುಕುಮಾರ್‌ಗಾಗಿ ಪೀಣ್ಯ ಪೊಲೀಸರು ಶೋಧ ನಡೆಸಿದ್ದಾರೆ.

### ಮೆಜೆಸ್ಟಿಕ್ ರೈಲು ನಿಲ್ದಾಣದಲ್ಲಿ ಬಾಲಕಿ ಶವ ಪತ್ತೆ: ಕೊಲೆ ಶಂಕೆ

**ಬೆಂಗಳೂರು:** ಮೆಜೆಸ್ಟಿಕ್ ರೈಲು ನಿಲ್ದಾಣದಲ್ಲಿ ಬಾಲಕಿ ಮೃತದೇಹ ಪತ್ತೆ ಪ್ರಕರಣದಲ್ಲಿ ಬಾಲಕಿಯ ಗುರುತನ್ನು ರೈಲ್ವೆ ಪೊಲೀಸರು ಪತ್ತೆ ಹಚ್ಚಿದ್ದಾರೆ.

ಜುಲೈ 3ರಂದು ರೈಲು ನಿಲ್ದಾಣದ ಟ್ರ್ಯಾಕ್ಸಿ ಪಾರ್ಕಿಂಗ್ ಸ್ಥಳದಲ್ಲಿ ಶವವಾಗಿ ಪತ್ತೆಯಾಗಿದ್ದ ಬಾಲಕಿಯ ಹೆಸರು ಮರಿಯಮ್ (5) ಕೊಲೆಯಾದವಳು ಎಂದು ತಿಳಿದುಬಂದಿದೆ. ಮತ್ತೊಂದೆಡೆ ಬಾಲಕಿಯ ಕೊಲೆಯ ಸುತ್ತ ಸಾಕಷ್ಟು ಅನುಮಾನಗಳು ವ್ಯಕ್ತವಾಗಿದ್ದು, ಸದ್ಯ ಬಾಲಕಿಯ ಪೋಷಕರು ಯಾರು ಎಂಬುದನ್ನು ಪೊಲೀಸರು ಪತ್ತೆಹಚ್ಚಿದ್ದಾರೆ.

ಕೊಲೆಯಾದ ಮರಿಯಮ್ ತಾಯಿ ಹೀನಾ, ರಾಜು ಎಂಬಾತನ ಜತೆ ಅನೈತಿಕ ಸಂಬಂಧ ಹೊಂದಿದ್ದಳು ಎನ್ನಲಾಗಿದೆ. ಗಂಡ ಶಿವು ಎಂಬಾತನನ್ನು ಬಿಟ್ಟು ರಾಜು ಜತೆ ಹೀನಾ ಭಿಕ್ಷಾಟನೆ ಮಾಡುತ್ತಿದ್ದಳು. ಇವರಿಬ್ಬರ ಜತೆಯೇ ಕೊಲೆಯಾದ ಮರಿಯಮ್ ಇರುತ್ತಿದ್ದಳು. ಮಗಳು ತನ್ನ ಅನೈತಿಕ ಸಂಬಂಧಕ್ಕೆ ಅಡ್ಡಿಯಾಗಿದ್ದಾಳೆ ಎಂದು ಹೀನಾ, ಪ್ರೇಮಿಯ ಜತೆ ಸೇರಿ ಕೊಲೆಗೈದಿರುವ ಶಂಕೆ ವ್ಯಕ್ತವಾಗಿದೆ. ಮರಿಯಮ್ ಮೃತದೇಹ ದೊರೆತ ದಿನದಿಂದಲೂ ಹೀನಾ, ರಾಜು ನಾಪತ್ತೆಯಾಗಿದ್ದಾರೆ. ಹೀಗಾಗಿ ಪೊಲೀಸರಿಗೆ ಅವರ ಮೇಲೆ ಸಾಕಷ್ಟು ಅನುಮಾನ ಮೂಡಿದೆ. ಸದ್ಯ ಕೊಲೆಯಾದ ಮರಿಯಮ್ ತಾಯಿ ಹೀನಾ, ಪ್ರಿಯತಮ ರಾಜುಗಾಗಿ ರೈಲ್ವೆ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಹೀನಾ ಹಾಗೂ ರಾಜು ಬಗ್ಗೆ ಸುಳಿವು ಸಿಕ್ಕರೆ ಮಾಹಿತಿ ನೀಡುವಂತೆ ರೈಲ್ವೆ ಪೊಲೀಸರು ಪ್ರಕಟಣೆ ನೀಡಿದ್ದಾರೆ.

---

# ದಾಸನಿಗೆ ಮಾನಸಿಕ ಖಿನ್ನತೆ

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಸಿಲುಕಿಕೊಂಡು ವಿಚಾರಣಾಧೀನ ಕೈದಿಯಾಗಿ ಜೈಲು ಸೇರಿರುವ ನಟ ದರ್ಶನ್, ನಾಲ್ಕು ಗೋಡೆಗಳ ನಡುವೆ ನೊಂದಿದ್ದಾರೆ.

ಜೈಲಿನ ವಾತಾವರಣಕ್ಕೆ ಹೊಂದಿಕೊಳ್ಳಲು ಹರಸಾಹಸಪಡುತ್ತಾ ದಿನ ದೂಡುತ್ತಿದ್ದಾರೆ.

ಪರಪ್ಪನ ಅಗ್ರಹಾರದಲ್ಲಿರುವ ಕೇಂದ್ರ ಜೈಲು ಸೇರಿದ ಬಳಿಕ ನಟ ದರ್ಶನ ಸಹ ಕೈದಿಗಳ ಜತೆ ಕೂಡ ಮಾತಾಡುತ್ತಿಲ್ಲ. ಜೈಲಲ್ಲಿ ಒಬ್ಬಂಟಿಯಾಗಿರುವ ನಟ ದರ್ಶನ್ ಅವರನ್ನು ಒಂಟಿತನ ಕಾಡುತ್ತಿದೆ. ಮಾನಸಿಕ ಖಿನ್ನತೆ ಯಿಂದ ಹೊರಬರಲು ನಟ ದರ್ಶನ್ ಯೋ ಗದ ಮೊರೆ ಹೋಗಿದ್ದಾರೆ. ಜೈಲೂಟ ತಿನ್ನಲು ಆಗುತ್ತಿಲ್ಲ ಮನೆಯೂಟ ಬೇಕು ಎನ್ನುತ್ತಿರುವ ದರ್ಶನ್, ಯಾರ ಬಳಿಯೂ ಮಾತನಾಡು ತ್ತಿಲ್ಲ. ಚಿಂತೆಯಲ್ಲೇ ಮುಳುಗಿದ್ದಾರೆ.

**ಪುಸ್ತಕಗಳ ಮೊರೆಹೋದ ದರ್ಶನ್:** ತನ್ನ ಜತೆಯಲ್ಲಿದ್ದ ಸಹಚರರು ಹಾಗೂ ಸಹಕೈದಿಗಳ ಸಹವಾಸ ಬೇಡವೆಂಬ ನಿರ್ಧಾರಕ್ಕೆ ಬಂದಿರುವ ದರ್ಶನ್ ಅವರ ಬಳಿ ಕೂಡ ಮಾತಾಡುತ್ತಿಲ್ಲ. ಬೇಸರದಲ್ಲಿ ಕುಗ್ಗಿರುವ ದರ್ಶನ್ ಸದಾ ಒಬ್ಬರೇ ಕುಳಿತಿರುತ್ತಾರೆ. ಅಷ್ಟೇ ಅಲ್ಲದೇ ಅವರು ಪುಸ್ತಕಗಳ ಕೇಳಿ ಪಡೆದು ಓದುತ್ತಿದ್ದಾರೆ. ಒಂಟಿತನದಿಂದ ಹೊರಬರಲು ಪುಸ್ತಕಗಳ ಮೊರೆಹೋಗಿದ್ದಾರೆ. ಜೈಲಿನಲ್ಲಿರುವ ನಟ ದರ್ಶನ್ ಅವರನ್ನು ರೇಣಕಾಸ್ವಾಮಿ ಕೊಲೆ ಪ್ರಕರಣದ ಭಯ ಕಾಡುತ್ತಿದೆ. ಇದು ಮುಂದೆ ಯಾವ ತಿರುವು ಪಡೆದುಕೊಳ್ಳಲಿದೆ ಎಂಬ ಚಿಂತೆಯಲ್ಲೇ ನಟ ದರ್ಶನ್ ದಿನದೂಡುತ್ತಿದ್ದಾರೆ. ಪೊಲೀಸರರು ತನಿಖೆ ಚುರುಕುಗೊಳಿಸಿ ಸಾಕ್ಷಿ ಕಲೆ ಹಾಕುತ್ತಿರುವುದು ಜೈಲಿನಲ್ಲಿರುವ ದರ್ಶನ್ ನಿದ್ದೆಗೆಡಿಸಿದೆ. ನಟ ದರ್ಶನ್ ವಿಗ್ ತೆಗೆದು, ಹೆಡ್ ಶೇವ್ ಮಾಡಿಸಲಾಗಿದೆ. ಕೃತಕ ಕೂದಲು ಹಾಗೂ ಮೂಲ ಕೂದಲನ್ನು 20 ದಿನಕ್ಕೊಮ್ಮೆ ಚೆಕ್ ಮಾಡಿ, ಎರಡನ್ನೂ ಬ್ಯಾಲೆನ್ಸ್ ಮಾಡಬೇಕು. ಇದು ಜೈಲಿನಲ್ಲಿರುವ ಕಾರಣ ಸಾಧ್ಯವಾಗುವುದಿಲ್ಲ.

---

ಟ್ರಕ್ ಟರ್ಮಿನಲ್ ನವೀಕರಣ, ನಿರ್ವಹಣೆ ಕಾಮಗಾರಿಯಲ್ಲಿ ಅಕ್ರಮ ಆರೋಪ

# ವೀರಯ್ಯ ಖಾತೆಗೆ ಕೋಟ್ಯಂತರ ರು. ವರ್ಗಾವಣೆ

**ಬೆಂಗಳೂರು:** ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಗಮದ 47.10 ಕೋಟಿ ರು. ಅವ್ಯವಹಾರ ಪ್ರಕರಣದ ಬೆನ್ನುಹತ್ತಿರುವ ಸಿಐಡಿ, ಈಗ ಬಂಧಿತರಾಗಿರುವ ನಿಗಮದ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಮಾಜಿ ಶಾಸಕ ಡಿ.ಎಸ್.ವೀರಯ್ಯ ಅವರ ಬ್ಯಾಂಕ್ ಖಾತೆಗೆ 3 ಕೋಟಿ ರು. ಹಣ ವರ್ಗಾವಣೆಯಾಗಿರುವುದನ್ನು ಪತ್ತೆಹಚ್ಚಿದೆ.

ಅಕ್ರಮ ನಡೆದ ಅವಧಿಯಲ್ಲಿನ ವೀರಯ್ಯ ಅವರಿಗೆ ಸೇರಿದ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಿದಾಗ ಹಣ ವರ್ಗಾವಣೆ ಸಂಗತಿ ಗೊತ್ತಾಯಿತು. ಟ್ರಕ್ ಟರ್ಮಿನಲ್‌ಗಳ ನವೀಕರಣ ಹಾಗೂ ನಿರ್ವಹಣೆ ಸಂಬಂಧ ಗುತ್ತಿಗೆ ನೀಡಿಕೆಯಲ್ಲಿ ತಮ್ಮ ಹಿತಾಸಕ್ತಿ ಕಾಪಾಡಿದ್ದಕ್ಕೆ ಪ್ರತಿಯಾಗಿ ವೀರಯ್ಯ ಅವರಿಗೆ ಗುತ್ತಿಗೆದಾರರು 3 ಕೋಟಿ ರು. ಹಣ ಕೊಟ್ಟಿದ್ದರು. ಈ ಹಣ ಗುತ್ತಿಗೆದಾರರ ಬ್ಯಾಂಕ್ ಖಾತೆಯಿಂದ ವೀರಯ್ಯ ಖಾತೆಗೆ ವರ್ಗಾವಣೆಯಾಗಿದೆ ಎಂದು ಸಿಐಡಿ ಮೂಲಗಳು ಮಾಹಿತಿ ನೀಡಿವೆ.

ಟ್ರಕ್ ಟರ್ಮಿನಲ್‌ಗಳ ನವೀಕರಣ ಹಾಗೂ ನಿರ್ವಹಣೆ ಕಾಮಗಾರಿಯಲ್ಲಿ ಶೇ.40ರಷ್ಟು ಅಲ್ಲ ಶೇ.100ರಷ್ಟು ಅಕ್ರಮ ನಡೆದಿದೆ ಎಂದು ಆರೋಪಿಸಿ ರಾಜ್ಯ ಸರಕಾರಕ್ಕೆ ಮೂರು ಬಾರಿ ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ (ಡಿಡಿಯುಟಿಟಿಎಲ್) ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಿವಪ್ರಕಾಶ್ ಪತ್ರ ಬರೆದಿದ್ದರು ಎಂಬ ಸಂಗತಿ ಬೆಳಕಿಗೆ ಬಂದಿದೆ.

**ಲಾರಿ ಮಾಲೀಕರ ಸಂಘದ ದೂರು :** ಈ ನಿಗಮದ ಎಂ.ಡಿ ಶಿವಪ್ರಕಾಶ್ ಟರ್ಮಿನಲ್‌ಗಳ ನವೀಕರಣದ ಮಾಹಿತಿ ಪರಿಶೀಲಿಸಿದಾಗ ಕಾಮ ಗಾರಿ ನಡೆಸದೆ ನಕಲಿ ದಾಖಲೆ ಸೃಷ್ಟಿಸಿ ನಿಗಮದಿಂದ ಹಣ ಡ್ರಾ ಮಾಡಿದ್ದ ವಿಷಯ ಗೊತ್ತಾಗಿದೆ. ಕೂಡಲೇ ಟರ್ಮಿ ನಲ್‌ಗಳಿಗೆ ಭೇಟಿನೀಡಿ ವಿಡಿಯೊ ಚಿತ್ರೀಕ ರಣ ಮಾಡಿದ ಅವರು, 2022ರಲ್ಲೇ ರಾಜ್ಯ ಸಾರಿಗೆ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದರು.

ಆದರೆ ಈ ಪತ್ರಕ್ಕೆ ಸ್ಪಂದನೆ ದೊರೆಯದಿದ್ದಾಗ ಅವರು, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಹಾಗೂ ನಿಗಮದ ಆಡಳಿತ ಮಂಡಳಿ ಸದಸ್ಯ ಚೆನ್ನಾರೆಡ್ಡಿಗೆ ಮಾಹಿತಿ ನೀಡಿದ್ದರು.

### ನಕಲಿ ಬಿಲ್ ಸೃಷ್ಟಿ; ಅನುದಾನ ಮಂಜೂರು

**2021ರ ನವೆಂಬರ್ 15ರಿಂದ 2022ರ ವಧಿಯಲ್ಲಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಟರ್ಮಿನಲ್ ಅಭಿವೃದ್ಧಿ ಕಾಮಗಾರಿ ಟೆಂಡರ್‌ಗಳನ್ನು ಕರೆದಿತ್ತು. ಮಂಡ್ಯದಲ್ಲಿ ಕಚೇರಿ ಇರುವ ಮೂರು ಕಂಪನಿಗಳು ಅರ್ಹತೆಯಿಲ್ಲದಿದ್ದರೂ ಕಾಮಗಾರಿ ಗುತ್ತಿಗೆ ಪಡೆದಿದ್ದವು. ತುಂಡು ಗುತ್ತಿಗೆ ಪಡೆದ ಇತರ ಗುತ್ತಿಗೆ ಸಂಸ್ಥೆಗಳು ಕಾಮಗಾರಿಯನ್ನೇ ನಡೆಸಿರಲಿಲ್ಲ. ಆದರೆ, ಕಾಮಗಾರಿ ನಡೆಸಲಾಗಿದೆ ಎಂದು ನಕಲಿ ಬಿಲ್‌ಗಳನ್ನು ಸೃಷ್ಟಿಸಿಕೊಂಡು ಬಂದು ಅನುದಾನ ಮಂಜೂರಾತಿಗೆ ಕೋರಿದ್ದವು. ಈ ಅಕ್ರಮವನ್ನು ಪರಿಗಣಿಸದೆ ಶಂಕರಪ್ಪ ನಕಲಿ ಬಿಲ್‌ಗಳಿಗೆ ಸಹಿಹಾಕಿ ಅನುದಾನ ಮಂಜೂರು ಮಾಡಿದ್ದರು. ಈ ಮೂಲಕ 47.10 ಕೋಟಿ ರು. ಅವ್ಯವಹಾರಕ್ಕೆ ನೇರ ಕಾರಣವಾಗಿದ್ದರು ಎಂದು ತನಿಖಾ ಮೂಲಗಳು ತಿಳಿಸಿವೆ. ಅಕ್ರಮಕ್ಕೆ ಸಂಬಂಧಿಸಿ ಶಂಕರಪ್ಪ ನಿವಾಸ, ಕಚೇರಿ ಹಾಗೂ ಡಿಡಿಯುಟಿಟಿಎಲ್‌ನ ಹಲವು ಸ್ಥಳಗಳಲ್ಲಿ ಶೋಧ ನಡೆಸಲಾಗಿತ್ತು. ಈ ವೇಳೆ ನಿಗಮದ ಕಾಮಗಾರಿಗಳಿಗೆ ಸಂಬಂಧಿಸಿ 782 ಕಡತಗಳು ಪತ್ತೆಯಾಗಿವೆ. ಈ ಕಡತಗಳಲ್ಲಿಯೇ ಅಕ್ರಮಕ್ಕೆ ಹಲವು ಮಹತ್ವದ ಸಾಕ್ಷ್ಯ ದೊರೆತಿದೆ.**

---

# 2 ಗಂಟೆವರೆಗೆ ಬಾರ್ ತೆರೆಯಲು ಮನವಿ

**ಬೆಂಗಳೂರು:** ನಗರದಲ್ಲಿ ಪಬ್, ಬಾರ್ , ರೆಸ್ಟೋರೆಂಟ್‌ಗಳ ಪರವಾನಗಿಯ ಸಬಲೀಕರಣಕ್ಕೆ ಹೊಟೇಲ್ ಅಸೋಸಿಯೇಷನ್ ಮನವಿ ಮಾಡಿದ್ದು, ಮಧ್ಯರಾತ್ರಿ ಎರಡು ಗಂಟೆಯವರೆಗೆ ಪಬ್, ಬಾರ್ , ರೆಸ್ಟೋರೆಂಟ್ ತೆರೆಯಲು ಅವಕಾಶ ನೀಡಬೇಕು ಎಂದು ಅಬಕಾರಿ ಸಚಿವರಿಗೆ ಮನವಿ ಮಾಡಿದೆ.

ಈ ಉದ್ಯಮಕ್ಕೆ ಪರವಾನಗಿಯನ್ನು ಪಡೆಯುವ ಪ್ರಕ್ರಿಯೆ ಸರಿಯಾಗಿ ನಡೆಯುತ್ತಿಲ್ಲ. ಜತೆಗೆ ಬಾಡಿಗೆ, ಗ್ಯಾಸ್, ಸಿಬ್ಬಂದಿ ನಿರ್ವಹಣೆಗೆ ಹೆಚ್ಚು ವೆಚ್ಚವಾಗುತ್ತಿದೆ. ಶೇ.18ರಷ್ಟು ಜಿಎಸ್‌ಟಿ ಕಟ್ಟುತ್ತಿದ್ದೇವೆ. ಹೀಗಾಗಿ ಮಧ್ಯರಾತ್ರಿ 2.00 ಗಂಟೆಯವರೆಗೆ ತೆರೆಯಲು ಅವಕಾಶ ನೀಡಬೇಕು ಎಂದು ಹೇಳಿದೆ. ಈ ಹಿಂದೆ ಕೂಡ ಬಿಬಿಎಂಪಿ ವ್ಯಾಪ್ತಿಯ ಪಬ್‌ಗಳು, ಬಾರ್ ಮತ್ತು ರೆಸ್ಟೋರೆಂಟ್‌ಗಳನ್ನು ಮುಚ್ಚುವ ಸಮಯವನ್ನು ವಿಸ್ತರಿಸುವಂತೆ ಹೋಟೇಲ್ ಅಸೋಸಿಯೇಷನ್ ಡಿಸಿಎಂ ಡಿ. ಕೆ ಶಿವಕುಮಾರ್‌ಗೆ ಪತ್ರ ಬರೆದು ಮನವಿ ಮಾಡಿತ್ತು. ಎಲ್ಲ ಹೊಟೇಲ್‌ಗಳ ಪ್ರಸ್ತುತ ಮುಚ್ಚುವ ಸಮಯವನ್ನು ಮಧ್ಯರಾತ್ರಿ 1 ಗಂಟೆಗೆ ಮಿತಿಗೊಳಿಸಲಾಗಿದೆ. ತಡರಾತ್ರಿಯವರೆಗೆ ಪ್ರಯಾಣಿಸುವ ಗ್ರಾಹಕರಿಗೆ ಸೇವೆ ನೀಡಲು ಪ್ರಸ್ತುತ ಸಮಯವನ್ನು 2 ಗಂಟೆಗೆ ಹೆಚ್ಚಿಸುವಂತೆ ನಾವು ಕೇಳಿಕೊಳ್ಳುತ್ತಿದ್ದೇವೆ ಎಂದು ಬೃಹತ್ ಬೆಂಗಳೂರು ಹೊಟೇಲ್ ಅಸೋಸಿಯೇಷನ್ ಅಧ್ಯಕ್ಷ ಪಿ. ಸಿ ರಾವ್ ತಿಳಿಸಿದರು.

# ಸಹಾಯಕ ಪ್ರಾಧ್ಯಾಪಕರ ನೇಮಕ ವಿಳಂಬ ದಯಾಮರಣ ಕೋರಿ ರಾಜ್ಯಪಾಲರಿಗೆ ಪತ್ರ

**ಬೆಂಗಳೂರು:** ಮೂರು ವರ್ಷ ಕಳೆದರೂ ರಾಜ್ಯ ಸರಕಾರ ನೇಮಕ ಆದೇಶ ಪತ್ರ ಕೊಡದ ಹಿನ್ನೆಲೆಯಲ್ಲಿ ಬೇಸತ್ತ ಸಹಾಯಕ ಪ್ರಾಧ್ಯಾಪಕ ಅಭ್ಯರ್ಥಿಗಳು, ದಯಾಮರಣಕ್ಕೆ ಅನುಮತಿ ನೀಡುವಂತೆ

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಮನವಿ ಮಾಡಿದ್ದಾರೆ. ಅಲ್ಲದೇ ಸಾಮಾಜಿಕ ಜಾಲತಾಣದಲ್ಲಿ ಸಿಎಂ, ಡಿಸಿಎಂ, ಉನ್ನತ ಶಿಕ್ಷಣ ಸಚಿವರ ಹೆಸರನ್ನು ಟ್ಯಾಗ್ ಮಾಡಿ ನೇಮಕಾತಿ ಆದೇಶ ಪತ್ರ ಶೀಘ್ರ ನೀಡಲು ಕ್ರಮ ಕೈಗೊಳ್ಳುವಂತೆ ಆಗ್ರಹಿಸುತ್ತಿದ್ದಾರೆ. ದಯಾಮರಣ ಕೋರಿ ಅಭ್ಯರ್ಥಿಯೊಬ್ಬರು ರಾಜ್ಯಪಾಲರಿಗೆ ಬರೆದಿರುವ ಪತ್ರ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 2021ರಲ್ಲಿ ಆಯ್ಕೆಯಾದ 1208 ಸಹಾಯಕ ಪಾಧ್ಯಾಪಕ ಅಭ್ಯರ್ಥಿಗಳಿಗೆ ಮೂರು ವರ್ಷ ಕಳೆದರೂ ನೇಮಕಾತಿ ಆದೇಶ ಪತ್ರ ಸಿಕ್ಕಿಲ್ಲ. ಹೀಗಾಗಿ ಮಾನಸಿಕವಾಗಿ ಕುಗ್ಗಿ ಹೋಗಿರುವ ಅಭ್ಯರ್ಥಿಯೊಬ್ಬರು, ರಾಜ್ಯಪಾಲರಿಗೆ ಪತ್ರ ಬರೆದು ದಯಾಮರಣ ಕೋರಿದ್ದಾರೆ.

### ಪತ್ರದಲ್ಲಿ ಏನಿದೆ?

**2021ರ ಸೆ.30ರಂದು ಆರಂಭವಾದ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ಅಂತಿಮ ಆಯ್ಕೆಪಟ್ಟಿಯು 2023ರ ನ.4ರಂದು ವಿಶೇಷ ರಾಜ್ಯಪತ್ರದಲ್ಲಿ ಅಧಿಕೃತವಾಗಿ ಪ್ರಕಟವಾಗಿತ್ತು. ನೇಮಕಾತಿ ಪ್ರಕ್ರಿಯೆ ಆರಂಭವಾಗಿ ಈಗಾಗಲೇ ಮೂರು ವರ್ಷಗಳಾಗಿದ್ದು, ನೇಮಕಾತಿ ಆದೇಶದ ವಿಳಂಬದಿಂದಾಗಿ ಮತ್ತು ಸ್ಥಳನಿಯುಕ್ತಿ ಸಿಗದ ಕಾರಣವಾಗಿ ಮಾನಸಿಕವಾಗಿ ಕುಗ್ಗಿಹೋಗಿದ್ದು, ಪ್ರತಿಕ್ಷಣವೂ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿದ್ದೇನೆ. ಜತೆಗೆ ಯಾವುದೇ ಉದ್ಯೋಗವಿಲ್ಲದೆ, ನಾನು ಮತ್ತು ನನ್ನ ಕುಟುಂಬವು ಜೀವನ ಸಾಗಿಸುವುದು ದುಸ್ತರವಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಆಯ್ಕೆಯಾಗಿ, ಅರ್ಹನಾದರೂ ಸರಕಾರದ ವಿಳಂಬ ಧೋರಣೆಯಿಂದ ಬೇಸತ್ತು ಹೋಗಿದ್ದೇನೆ. ಆತ್ಮಹತ್ಯೆ ಮಾಡಿಕೊಂಡು ಮನೆಯವರಿಗೆ, ಸಂಬಂಧಿಕರಿಗೆ, ನಂಬಿಕೊಂಡವರಿಗೆ ಅವಮಾನ ಮಾಡುವ ಬದಲು ಮತ್ತು ಸರ್ಕಾರದ ವತಿಯಿಂದ ದಿನಂಪ್ರತಿ ಒಂದೊಂದು ಕಾರಣವನ್ನು ಕೇಳುತ್ತಾ ಕೊರಗಿ ಉಸಿರುಬಿಡುವುದಕ್ಕಿಂತ ಮೊದಲು ದಾಯಾಳುಗಳಾದ ತಾವುಗಳು ದಯಾಮರಣ ಕರುಣಿಸಬೇಕೆಂದು ಕೋರುತ್ತೇನೆ ಎಂದು ಅಭ್ಯರ್ಥಿ ಮನವಿ ಮಾಡಿದ್ದಾರೆ.**

# ಕರ್ತವ್ಯಲೋಪ: ಕ್ರಮಕ್ಕೆ ಆಗ್ರಹ

**ಬೆಂಗಳೂರು:** ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ನೇಮಕಾತಿ ಪರೀಕ್ಷೆಯಲ್ಲಿ ಇಬ್ಬರು ಮೇಲ್ವಿಚಾರಕರಿಂದ ಕರ್ತವ್ಯ ಲೋಪವಾಗಿರುವುದು ವೆಬ್ ಕಾಸ್ಟಿಂಗ್‌ನಿಂದ ಪತ್ತೆಯಾಗಿದೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್ .ಪ್ರಸನ್ನ ಭಾನುವಾರ ಪತ್ರ ಬರೆದಿದ್ದಾರೆ.

ಬಿಎಂಟಿಸಿ, ಕೆಕೆಆರ್‌ಟಿಸಿಯ ಖಾಲಿ ಹುದ್ದೆಗಳನ್ನು ತುಂಬಲು ಭಾನುವಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಪರೀಕ್ಷೆ ಮಾಡಲಾಗಿದೆ. ಈ ವೇಳೆ ಇಬ್ಬರು ಮೇಲ್ವಿಚಾರಕರು ಪರೀಕ್ಷಾ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದನ್ನು ವೆಬ್ ಕಾಸ್ಟಿಂಗ್‌ನಿಂದ ಪತ್ತೆ ಹಚ್ಚಲಾಗಿದೆ.ಬೆಂಗಳೂರಿನ ಕೆ.ಆರ್.ವೃತ್ತದಲ್ಲಿರುವ ಎಸ್‌ಜೆ ಪಾಲಿಟೆಕ್ನಿಕ್‌ನ ಕೊಠಡಿ ಸಂಖ್ಯೆ 102 ರಲ್ಲಿ (ಕೇಂದ್ರ ಸಂಕೇತ 112) ಕೊಠಡಿ ಮೇಲ್ವಿಚಾರಕರಾದ ಉಪನ್ಯಾಸಕ ಸಾಜಿದ್ ಪರೀಕ್ಷೆ ನಡೆಯುವಾಗ ಮೊಬೈಲ್‌ನಲ್ಲಿ ಮಾತನಾಡಿದ್ದು, ಕೆಇಎ ಕಚೇರಿಯಲ್ಲಿರುವ ಕಮಾಂಡ್ ಸೆಂಟರ್‌ನಿಂದ ಗಮನಿಸಲಾಗಿದೆ. ಇದು ಪರೀಕ್ಷಾ ಕರ್ತವ್ಯ ಲೋಪವಾದ್ದರಿಂದ ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಕಲಬುರಗಿಯ ನೆಹರು ಗಂಜ್‌ನಲ್ಲಿರುವ ಶಬರಯ್ಯ ಬಾಲಕಿಯರ ಕಾಲೇಜಿನ ಪರೀಕ್ಷಾ ಕೇಂದ್ರದ ಕೊಠಡಿಯೊಂದರಲ್ಲಿ ಇಬ್ಬರು ವಿದ್ಯಾರ್ಥಿಗಳು ಪರಸ್ಪರ ಮಾತಾಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಒಬ್ಬ ಅಭ್ಯರ್ಥಿ ಮತ್ತೊಬ್ಬ ಅಭ್ಯರ್ಥಿಗೆ ಉತ್ತರ ಬರೆಯಲು ನೆರವು ನೀಡಿರುವುದು ಕಂಡುಬಂದಿದೆ. ಈ ವೇಳೆ ಕೊಠಡಿ ಮೇಲ್ವಿಚಾರಕರು ಅಲ್ಲೇ ಇದ್ದರೂ ಅದನ್ನು ತಡೆಯದೆ ನಿರ್ಲಕ್ಷ್ಯ ಮಾಡಿರುವುದು ಕಂಡುಬಂದಿದೆ. ಹಾಗಾಗಿ ಕೊಠಡಿ ಮೇಲ್ವಿಚಾರಕರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕಲಬುರಗಿ ಜಿಲ್ಲಾಧಿಕಾರಿಗೆ ಪತ್ರ ಬರೆಯಲಾಗಿದೆ.

## ಸಮಾಚಾರ ಸಣ್ಣದಲ್ಲ

### ಅರ್ಜಿ ಆಹ್ವಾನ

**ಬೆಂಗಳೂರು:** ಬೆಂಗಳೂರು ನಗರದ ರಾಜಾಜಿನಗರದ ಇಂಡಸ್ಟ್ರಿಯಲ್ ಎಸ್ಟೇಟ್ ನಲ್ಲಿರುವ ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿ.ಟಿ.ಡಿ.ಸಿ)ಯು 2024-25ನೇ ಸಾಲಿಗೆ ಡಿಪ್ಲೊಮಾ ಕೋರ್ಸ್‌ಗಳಾದ ಟೂಲ್ ಅಂಡ್ ಡೈ ಮೇಕಿಂಗ್, ಮೆಕಾಟ್ರಾನಿಕ್ಸ್, ಪ್ರಿಸಿಷನ್ ಮ್ಯಾನುಫ್ಯಾಕ್ಚರಿಂಗ್ ಮತ್ತು ಎಲೆಕ್ಟ್ರಾನಿಕ್ಸ್ ಕಮ್ಯೂನಿಕೇಷನ್ ಪ್ರವೇಶಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಅಸಕ್ತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು 10ನೇ ತರಗತಿ ಪಾಸಾಗಿರಬೇಕು. ಸೀಮಿತ ಸೀಟುಗಳು ಮಾತ್ರ ಲಭ್ಯವಿದ್ದು, ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ದೂರವಾಣಿ ಸಂಖ್ಯೆ 9880889998, 7406279629,9141629575, 9141629580 ಗೆ ಸಂಪರ್ಕಿಸಲು ಜಿ.ಟಿ.ಟಿ.ಸಿ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 445 ಮಂದಿಗೆ ಡೆಂಘೀ ಪಾಸಿಟಿವ್

**ಬೆಂಗಳೂರು:** ರಾಜ್ಯದಲ್ಲಿ ಕಳೆದ 24 ಗಂಟೆಗಳಲ್ಲಿ 445 ಮಂದಿಗೆ ಡೆಂಘೀ ಪಾಸಿಟಿವ್ ದೃಢಪಟ್ಟಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 9,527ಕ್ಕೆ ಏರಿಕೆಯಾಗಿದೆ. ಒಂದೇ ದಿನ 2630 ಮಂದಿಯನ್ನು ಡೆಂಘೀ ಸೋಂಕು ಪರೀಕ್ಷೆಗೆ ಒಳಪಡಿಸಲಾಗಿದೆ. ಇದರಲ್ಲಿ 445 ಮಂದಿಯಲ್ಲಿ ಡೆಂಘೀ ಕಾಣಿಸಿಕೊಂಡಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 294, ತುಮಕೂರು 19, ಧಾರವಾಡ 12, ಬೀದರ 72, ಬಳ್ಳಾರಿ 3, ಮಂಡ್ಯ 33, ದಕ್ಷಿಣ ಕನ್ನಡ 62, ಉಡುಪಿ 5, ಚಿಕ್ಕಮಗಳೂರಿನಲ್ಲಿ 13 ಪ್ರಕರಣಗಳು ದಾಖಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

### ಐಐಐಟಿ 24ನೇ ಘಟಿಕೋತ್ಸವ

**ಬೆಂಗಳೂರು:** ಇಂಟರ್‌ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಇನ್ಫಾರ್ಮೇಷನ್ ಟೆಕ್ನಾಲಜಿ ಬೆಂಗಳೂರು (ಐಐಐಟಿ-ಬಿ) ತನ್ನ 24 ನೇ ವಾರ್ಷಿಕ ಘಟಿಕೋತ್ಸವವನ್ನು ಆಯೋಜಿಸಿತ್ತು. ಸಮಾರಂಭದಲ್ಲಿ ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಪ್ರೊ.ಅಭಯ್ ಕರಂಡೀಕರ್ ಮತ್ತು ಐಐಟಿ ಕಾನ್ಪುರದ ಮಾಜಿ ನಿರ್ದೇಶಕರಾದ ದೇಬ್ಯಾನಿ ಘೋಷ್, ಐಐಐಟಿ-ಬೆಂಗಳೂರು ಆಡಳಿತ ಮಂಡಳಿ ಅಧ್ಯಕ್ಷ, ಪದ್ಮಭೂಷಣ ಕ್ರಿಸ್ ಗೋಪಾಲ ಕೃಷ್ಣನ್ ಮತ್ತು ಐಐಐಟಿ-ಬೆಂಗಳೂರಿನ ನಿರ್ದೇಶಕ ಪ್ರೊ.ದೇಬಬ್ರತ ದಾಸ್ ವಹಿಸಿದ್ದರು. ಒಟ್ಟು 343 ವಿದ್ಯಾರ್ಥಿಗಳು ಸಂಸ್ಥೆಯಿಂದ ಪದವಿ ಪಡೆದರು. ವಿದ್ಯಾರ್ಥಿಗಳು ವಿವಿಧ ಶೈಕ್ಷಣಿಕ ಕೋರ್ಸ್‌ಗಳಿಂದ ಅಂದರೆ ಇಂಟಿಗ್ರೇಟೆಡ್ ಮಾಸ್ಟರ್ ಆಫ್ ಟೆಕ್ನಾಲಜಿ ಪ್ರೋಗ್ರಾಂನಿಂದ 121 ಪದವೀಧರರು, ಮಾಸ್ಟರ್ ಆಫ್ ಟೆಕ್ನಾಲಜಿ ಪ್ರೋಗ್ರಾಂನಿಂದ 174 ಮಂದಿ, ಮಾಸ್ಟರ್ ಆಫ್ ಸೈನ್ಸ್ ಇನ್ ಡಿಜಿಟಲ್ ಸೊಸೈಟಿ ಪ್ರೋಗ್ರಾಂನಿಂದ 14 ಮಂದಿ, ಮಾಸ್ಟರ್ ಆಫ್ ಸೈನ್ಸ್ ಬೈ ರಿಸರ್ಚ್ ಪ್ರೋಗ್ರಾಂನಿಂದ 23 ಮತ್ತು 11 ಜನ ಪಿಎಚ್.ಡಿ ಪದವಿ ಪಡೆದರು.

### ಇಂದು ಐಐಟಿ ಘಟಿಕೋತ್ಸವ

**ಬೆಂಗಳೂರು:** ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್ ವರ್ಷದ ಘಟಿಕೋತ್ಸವ ಸೋಮವಾರ ಬೆಳಗ್ಗೆ 11 ಗಂಟೆಗೆ ಟಾಟಾ ಸಭಾಂಗಣದಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ಈ ವರ್ಷ ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತದೆ. ಘಟಿಕೋತ್ಸವದಲ್ಲಿ ಚೆಸ್‌ನಲ್ಲಿ ಐದು ಬಾರಿ ವಿಶ್ವಚಾಂಪಿಯನ್ ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ವಿಶ್ವನಾಥನ್ ಆನಂದ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಭಾರತೀಯ ವಿಜ್ಞಾನ ಸಂಸ್ಥೆಯ ಕೌನ್ಸಿಲ್ ಅಧ್ಯಕ್ಷ ಸೇನಾಪತಿ ಕ್ರಿಸ್ ಗೋಪಾಲಕೃಷ್ಣನ್ ಗೌರವ ಅತಿಥಿಯಾಗಿ ಆಗಮಿಸಲಿದ್ದಾರೆ. ಸಮಾರಂಭದಲ್ಲಿ ಒಟ್ಟು 1,136 ಪದವಿಗಳನ್ನು ಪ್ರದಾನ ಮಾಡಲಾಗುತ್ತಿದೆ. ಅದರಲ್ಲಿ 465 ಸಂಶೋಧನಾ, 571 ಸ್ನಾತಕೋತ್ತರ ಕೋರ್ಸ್ ಪದವಿಗಳು ಮತ್ತು 100 ಪದವಿಪೂರ್ವ ವಿದ್ಯಾರ್ಥಿಗಳಿಗೆ ಪದವಿಯನ್ನು ನೀಡಲಾಗುತ್ತದೆ. ಶೈಕ್ಷಣಿಕ ಉತ್ಕೃಷ್ಟತೆಗಾಗಿ 57 ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ಸಹ ನೀಡಲಾಗುತ್ತಿದೆ. ಭಾರತೀಯ ವಿಜ್ಞಾನ ಸಂಸ್ಥೆ ಪಿಎಚ್ಡಿ ಮತ್ತು ಇಂಟಿಗ್ರೇಟೆಡ್ ಪ್ರದವಿಯನ್ನು, ಹಲವು ಸ್ನಾತಕೋತ್ತರ ಪಡವಿಗಳಾದ ಎಂ.ಟೆಕ್, ಮಾಸ್ಟರ್ ಆಫ್ ಡಿಸೈನ್, ಮಾಸ್ಟರ್ ಆಫ್ ಮ್ಯಾನೇಜ್ಮೆಂಟ್. ನಾಲ್ಕು ವರ್ಷಗಳ ಬ್ಯಾಚುಲರ್ ಆಫ್ ಸೈನ್ಸ್ ಪದವಿ ಹಾಗೂ ಗಣಿತ ಮತ್ತು ಕಂಪ್ಯೂಟರ್‌ನಲ್ಲಿ ಬಿಟೆಕ್ ಪದವಿಯನ್ನು ನೀಡುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿಶ್ವವಾಣಿ ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಪ್ರತಿದಿನ ಆರಾಮದಿಂದ ಓದಿ

{ಡಾ. ಸಿ.ಎನ್ ಮಂಜುನಾಥ್ } ಸಂಸದರು

ಸೇವೆ ನಮ್ಮ ಬದುಕಿನ ಅವಿಭಾಜ್ಯ ಅಂಗ. ಸಮಾಜದ ಉನ್ನತಿಯೇ ಬದುಕಿನ ಗುರಿಯಾಗಬೇಕು. ಸಮಾಜದಲ್ಲಿ ವೈದ್ಯರಿಗಿರು ಉನ್ನತ ಸ್ಥಾನಕ್ಕೆ ಕುಂದುಂಟಾಗದಂತೆ ನಾವು ಸೇವೆ ಸಲ್ಲಿಸಬೇಕು. ಬಡವರ, ಮಧ್ಯಮ ವರ್ಗದವರ ಕಣ್ಣೀರು ಒರೆಸುವ ಕೆಲಸ ಮಾಡಬೇಕು.

ರಾಜ್ಯ ಸರಕಾರ ಶೀಘ್ರ ತೀರ್ಮಾನ | ಅಂಗನವಾಡಿಗಳಲ್ಲಿ ಇನ್ನಷ್ಟು ಸೌಲಭ್ಯಕ್ಕೆ ಚಿಂತನೆ | ಸಿಎಂ ಜತೆ ಚರ್ಚೆ: ಲಕ್ಷ್ಮೀ ಹೆಬ್ಬಾಳ್ಕರ್

# ಅಂಗನವಾಡಿ ಕಾರ್ಯಕರ್ತೆಯರಿಗೆ ಜೀವವಿಮೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಂಗನವಾಡಿ ಶಿಕ್ಷಕಿ ಹಾಗೂ ಕಾರ್ಯಕರ್ತೆಯರ ದಶಕದ ಬೇಡಿಕೆಯಾಗಿರುವ ಜೀವವಿಮೆ ಸಂಬಂಧ ರಾಜ್ಯ ಸರಕಾರ ಶೀಘ್ರವೇ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರಕಟಿಸಿದ್ದಾರೆ.

ಬೆಂಗಳೂರಿನ ಮಡಿವಾಳದ ಸ್ತ್ರೀ ಶಕ್ತಿ ಭವನದಲ್ಲಿ ನಡೆದ 'ಅಂಗನವಾಡಿ ಕೇಂದ್ರಗಳಲ್ಲೇ ಪೂರ್ವ ಪ್ರಾಥಮಿಕ ಶಿಕ್ಷಣ ಜಾರಿಯಾಗಲಿ, ಐಸಿಡಿಎಸ್ ಉಳಿಸಿ ಮಕ್ಕಳನ್ನು ರಕ್ಷಿಸಿ, ಸಂಘಟನೆ- ಸಂಘರ್ಷ -ಶಿಕ್ಷಣ' ಅಧ್ಯಯನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಸಚಿವರು, ಅಂಗನವಾಡಿ ಕಾರ್ಯಕರ್ತರಿಗೆ ಜೀವವಿಮೆ ನೀಡುವ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ, ಶೀಘ್ರವೇ ತೀರ್ಮಾನ ಕೈಗೊಳ್ಳಲಾಗುವುದು. ಕಾರ್ಯಕತೆಯರ ಗೌರವ ಧನ ಹೆಚ್ಚಳದ ಬಗ್ಗೆಯೂ ಸಿದ್ದರಾಮಯ್ಯ ಅವರೊಂದಿಗೆ ಈಗಾಗಲೇ ಚರ್ಚೆ ನಡೆಸಿದ್ದು, ಶೀಘ್ರವೇ ಕಾರ್ಯರೂಪಕ್ಕೆ ತರುವ ಕೆಲಸವಾಗಲಿದೆ ಎಂದು ಭರವಸೆ ನೀಡಿದರು.

ಪೂರ್ವ ಪ್ರಾಥಮಿಕ ಶಾಲಾ ಮಕ್ಕಳಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದಲೇ ಬ್ಯಾಗ್, ಪುಸ್ತಕ ಹಾಗೂ ಸಮವಸ್ತ್ರಗಳನ್ನು ವಿತರಿಸಲಾಗುವುದು. ಈಗಾಗಲೇ ಇಲಾಖೆ ವತಿಯಿಂದ ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ಗುಣಮಟ್ಟದ ಆಹಾರ, ಶಿಕ್ಷಕಿಯರಿಗೆ ಸೀರೆ ನೀಡಲಾಗಿದೆ. ಯಾವುದೇ ಕಾರಣಕ್ಕೂ ಅಂಗನವಾಡಿ ಶಿಕ್ಷಕಿಯರನ್ನು ತೆಗೆಯುವ ಪ್ರಶ್ನೆಯೇ ಇಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು. 30 ವರ್ಷಕ್ಕಿಂತ ಮೇಲ್ಪಟ್ಟ ಅಂಗನವಾಡಿ ಕೇಂದ್ರಗಳನ್ನು ಉನ್ನತ ದರ್ಜೆಗೆ ಏರಿಸಲಾಗುವುದು. ನನ್ನ ಅಧಿಕಾರ ಅವಧಿಯಲ್ಲಿ ಇಲಾಖೆಗೆ ಕೈಲಾದಷ್ಟು ಉತ್ತಮ ಕೆಲಸ ಮಾಡುವೆ. ಕಾರ್ಯಕರ್ತೆಯರ ಹೋರಾಟದ ಶಕ್ತಿಯೇ ಅಂಗನವಾಡಿ ಉನ್ನತೀಕರಣಕ್ಕೆ ಕಾರಣ ಎಂದರು.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಬಯಸುವುದು ಪ್ರತಿಯೊಬ್ಬ ಪಾಲಕರ ಕನಸಾಗಿರುತ್ತದೆ. ಗುಣಮಟ್ಟದ ಶಿಕ್ಷಣದ ಬಗ್ಗೆ ಶಿಕ್ಷಣ ಇಲಾಖೆ ಯೋಚಿಸುವುದು ತಪ್ಪಲ್ಲ. ಆದರೆ, ಅಂಗನವಾಡಿಗೆ ಪೆಟ್ಟು ಬೀಳಬಾರದು. ನಾವೇ ಅಂಗನವಾಡಿ ಕೇಂದ್ರಗಳ ಉನ್ನತೀಕರಣಕ್ಕೆ ಮುಂದಾಗೋಣ. ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಇಂಥ ಶಿಬಿರಗಳನ್ನು ಆಯೋಜಿಸಿ, ಗುಣಮಟ್ಟಕ್ಕೆ ಆದ್ಯತೆ ನೀಡಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಹಂಪಿ ಕನ್ನಡ ವಿ.ವಿಯ ನಿವೃತ್ತ ಪ್ರಾಧ್ಯಾಪಕ ಟಿ.ಆರ್.ಚಂದ್ರಶೇಖರ್, ಸಿಐಟಿಯು ಕರ್ನಾಟಕ ಹಾಗೂ ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷ ಎಸ್. ವರಲಕ್ಷ್ಮೀ, ಕಾರ್ಯದರ್ಶಿ ಯಮುನಾ ಗಾಂವ್ಕರ್, ಕಾರ್ಯಾಧ್ಯಕ್ಷ ಶಾಂತ ಎನ್.ಘಂಟೆ, ಖಜಾಂಚಿ ಜಿ.ಕಮಲಾ, ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಸುನಂದಾ ಸೇರಿದಂತೆ ರಾಜ್ಯಮಟ್ಟದ ಹಾಗೂ ಜಿಲ್ಲಾ ಮಟ್ಟದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಡಿವಾಳದಲ್ಲಿರುವ ಸ್ತ್ರೀ ಶಕ್ತಿ ಭವನದ ಆವರಣದಲ್ಲಿರುವ ಮಹಿಳಾ ಮತ್ತು ಮಕ್ಕಳ ಸಹಾಯವಾಣಿ ಕೇಂದ್ರಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಭೇಟಿ ನೀಡಿ ಪರಿಶೀಲಿಸಿದರು.

### ಒಳ್ಳೆ ಬುದ್ಧಿ ಕಲಿತು, ಪೋಷಕರಿಗೆ ಒಳ್ಳೇ ಮಕ್ಕಳಾಗಿ

ಕಾರ್ಯಕ್ರಮದ ಬಳಿಕ ಮಡಿವಾಳದಲ್ಲಿರುವ ಸರಕಾರಿ ವೀಕ್ಷಣಾಲಯಕ್ಕೆ ಭೇಟಿ ನೀಡಿದ ಸಚಿವರು, ಅಲ್ಲಿರುವ ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳನ್ನು ಭೇಟಿಯಾದರು. ಸನ್ನಡತೆ ಬೆಳೆಸಿಕೊಂಡು, ಉತ್ತಮ ಪ್ರಜೆಯಾಗಿ ಬಾಳಿ. ಒಳ್ಳೆ ಬುದ್ದಿ ಕಲಿತು, ಚೆನ್ನಾಗಿ ಓದಿ ಅಪ್ಪ ಅಮ್ಮನಿಗೆ ಒಳ್ಳೆ ಹೆಸರು ತನ್ನಿ. ನ್ಮಲೆ ಯಾವುದೇ ಕೆಟ್ಟ ಕೆಲಸ ಮಾಡದೇ, ಒಳ್ಳೆ ಪ್ರಜೆಯಾಗಿ ಬಾಳಿ ಎಂದು ಮಕ್ಕಳಿಗೆ ಬುದ್ದಿ ಮಾತು ಹೇಳಿದರು. ಇದಕ್ಕೂ ಮುನ್ನ ಸ್ತ್ರೀ ಶಕ್ತಿ ಭವನದ ಆವರಣದಲ್ಲಿರುವ ಮಹಿಳಾ ಮತ್ತು ಮಕ್ಕಳ ಸಹಾಯವಾಣಿ ಕೇಂದ್ರಕ್ಕೆ ಭೇಟಿ ನೀಡಿದರು. ಈ ವೇಳೆ ಕೇಂದ್ರದ ಸಿಬ್ಬಂದಿಯೊಂದಿಗೆ ಸಹಾಯವಾಣಿಯ ಕಾರ್ಯನಿರ್ವಹಣೆ ಕುರಿತಂತೆ ಮಾಹಿತಿ ಸಂಗ್ರಹಿಸಿದರು. ಕರೆಯೊಂದನ್ನು ಸ್ವೀಕರಿಸಿ, ಸಮಸ್ಯೆಯನ್ನು ಆಲಿಸಿದರು. ರಾತ್ರಿ ವೇಳೆ ಕೇಂದ್ರಕ್ಕೆ ಮತ್ತೊಮ್ಮೆ ಭೇಟಿ ನೀಡುವುದಾಗಿ ಹೇಳಿದರು.

ಸಮಾಜಕ್ಕೆ ಅಂಗನವಾಡಿ ಕೊಡುಗೆ ಅಪಾರ. ಕಳೆದ 50 ವರ್ಷಗಳಿಂದ ಅಂಗನವಾಡಿ ಕೇಂದ್ರಗಳು ಉತ್ತಮವಾಗಿ ಕಾರ್ಯನಿರ್ವಹಿಸಿಕೊಂಡು ಬರುತ್ತಿವೆ. ಇನ್ನುಮುಂದೆ ಸರಕಾರಿ ಮಾಂಟೆಸ್ಸರಿಗಳಾಗಿ ಬದಲಾಗಲಿದ್ದು, ಇತರ ಶಾಲೆಗಳಿಗಿಂತ ನಮ್ಮ ಅಂಗನವಾಡಿ ಕೇಂದ್ರದ ಮಕ್ಕಳು ಹೆಚ್ಚು ಸುರಕ್ಷಿತವಾಗಿರುತ್ತವೆ.

- ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

### ಹೆಣ್ಣಿಗೆ ಹೋರಾಟವೇ ಮನೋಬಲ

ಯಾವುದೇ ರಾಜಕೀಯ ಹಿನ್ನೆಲೆಯಿಲ್ಲದೇ ಹೋರಾಟ ಮನೋಭಾವದಿಂದ ನಾನು ರಾಜಕೀಯದಲ್ಲಿ ಉನ್ನತ ಸ್ಥಾನಕ್ಕೇರಿರುವೆ. ಸಮಾಜದಲ್ಲಿ ಮಹಿಳೆಯರಿಗಿಂತ ಪುರುಷರಿಗೆ ಹೆಚ್ಚು ಆದ್ಯತೆ ನೀಡಲಾಗುತ್ತದೆ. ಗಂಡು ಮಕ್ಕಳಿಗೆ ಸಿಗುವ ಮರ್ಯಾದೆ ಹೆಣ್ಣುಮಕ್ಕಳಿಗೆ ಇರುವುದಿಲ್ಲ. ಇದು ಸಮಾಜದಲ್ಲಿ ಅಲ್ಲ, ಇದು ನಮ್ಮ ಮನೆಗಳಲ್ಲೇ ಅಧಿಕವಾಗಿದೆ. ಹೆಣ್ಣು ಮಕ್ಕಳು ಜೋರಾಗಿ ಮಾತಾಡಿದರೂ ಕಷ್ಟ. ಎಷ್ಟೋ ಕಷ್ಟಗಳನ್ನು ಮೆಟ್ಟನಿಂತು ಹೆಣ್ಣು ಸಮಾಜಕ್ಕೆ ಮಾದರಿಯಾಗಿ ಬದುಕುತ್ತಿದ್ದಾಳೆ ಎಂದರು.

## ಡೆಂಘೀ ಬಗ್ಗೆ ಎಚ್ಚರಿಕೆ ಇರಲಿ

ಮಹಾತ್ಮಾ ಗಾಂಧಿ ಸೇವಾ ಟ್ರಸ್ಟ್ ಉತ್ತರಹಳ್ಳಿಯಲ್ಲಿ ಆಯೋಜಿಸಿದ್ದ ಸ್ವಚ್ಛತಾ ಅಭಿಯಾನ ಹಾಗೂ ಸೊಳ್ಳೆಗಳ ಔಷಧ ಸಿಂಪಡಿಸುವ ಕಾರ್ಯಕ್ರಮವನ್ನು ವಿನಯ್ ಗುರೂಜಿ ಉದ್ಘಾಟಿಸಿದರು.

**ಬೆಂಗಳೂರು:** ರಾಜ್ಯಾದ್ಯಂತ ವ್ಯಾಪಕವಾಗಿ ಹೆಚ್ಚುತ್ತಿರುವ ಡೆಂಘೀ ಜ್ವರದ ಸಾರ್ವಜನಿಕರು ಎಚ್ಚರ ವಹಿಸಬೇಕು. ಆದರೆ, ಇದರ ಬಗ್ಗೆ ಭಯ ಪಡುವ ಅಗತ್ಯವಿಲ್ಲ ಎಂದು ಅವಧೂತ ವಿನಯ್ ಗುರೂಜಿ ಸಲಹೆ ನೀಡಿದರು.

ಮಹಾತ್ಮಾ ಗಾಂಧಿ ಸೇವಾ ಟ್ರಸ್ಟ್ ಉತ್ತರಹಳ್ಳಿಯಲ್ಲಿ ಆಯೋಜಿಸಿದ್ದ ಸ್ವಚ್ಛತಾ ಅಭಿಯಾನ ಹಾಗೂ ಸೊಳ್ಳೆಗಳ ಔಷಧ ಸಿಂಪಡಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಾಜ್ಯದಲ್ಲಿ ಮಳೆ ಪ್ರಮಾಣ ಹೆಚ್ಚುತ್ತಿರುವ ಹಿನ್ನೆಯಲ್ಲಿ ಡೆಂಘೀ ಜ್ವರವೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು ಮುನ್ನೆಚ್ಚರಿಕಾ ಕ್ರಮ ವಹಿಸಬೇಕು. ನಗರಗಳಲ್ಲಿ ಜನರು ಸ್ವಚ್ಛತೆ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ತಮ್ಮ ಸುತ್ತಮುತ್ತ, ನಗರವನ್ನು ಸ್ವಚ್ಛವಾಗಿಡುವ ಮೂಲಕ ರೋಗಗಳಿಂದ ದೂರ ಇರಬೇಕು. ಡೆಂಘೀ ಜ್ವರದ ಬಗ್ಗೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಲ್ಲಿ ಬಿಬಿಎಂಪಿ ಕಾರ್ಯವನ್ನು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಉತ್ತರಹಳ್ಳಿ ಸುತ್ತಮುತ್ತ ಸ್ವಚ್ಛತೆ ನಡೆಸಲಾಯಿತು. ಡೆಂಘೀ ಬಗ್ಗೆ ಜನಜಾಗೃತಿ ಮೂಡಿಸಲಾಯಿತು. ಸೊಳ್ಳೆಗಳ ನಿಯಂತ್ರಣಕ್ಕೆ ಔಷಧ ಸಿಂಪಡಿಸಲಾಯಿತು. ಪೌರಕಾರ್ಮಿಕರನ್ನು ಅವಧೂತ ವಿನಯ್ ಗುರೂಜಿ ಸನ್ಮಾನಿಸಿದರು. ಶಾಸಕ ಎಂ. ಕೃಷ್ಣಪ್ಪ, ಟ್ರಸ್ಟ್‌ನ ಮಣಿ ಹೆಗ್ಡೆ ಸೇರಿದಂತೆ ನೂರಾರು ಅವಧೂತರ ಅನುಯಾಯಿಗಳು ಮತ್ತಿತರರಿದ್ದರು.

11ನೇ ಪದವಿ ಪ್ರದಾನ ಸಮಾರಂಭದಲ್ಲಿ ಪ್ರೊ.ಟಿ.ಜಿ.ಸೀತಾರಾಮ್ ಅಭಿಮತ

## ಜಗತ್ತಿನ ಶ್ರೇಷ್ಠತೆ ಹೆಚ್ಚಿಸಲು ವಿದ್ಯಾರ್ಥಿಗಳಿಗೆ ಪ್ರೇರಣೆ ಮುಖ್ಯ

**ಬೆಂಗಳೂರು:** ಶಿಕ್ಷಣವು ವಿದ್ಯಾರ್ಥಿಗಳಿಗೆ ಜೀವನದಲ್ಲಿ ಯಶಸ್ವಿಯಾಗಲು ಅಗತ್ಯವಾದ ಕೌಶಲ್ಯಗಳನ್ನು ಒದಗಿಸುವುದು ಮಾತ್ರವಲ್ಲ, ಶ್ರೇಷ್ಠತೆಗಾಗಿ ಶ್ರಮಿಸಲು ಮತ್ತು ಜಗತ್ತಿನಲ್ಲಿ ಸಕಾರಾತ್ಮಕ ಬದಲಾವಣೆಯನ್ನು ಮಾಡಲು ಪ್ರೇರೇಪಿಸುವುದು ಮುಖ್ಯವಾಗಿದೆ ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಅಧ್ಯಕ್ಷ ಪ್ರೊ.ಟಿ.ಜಿ.ಸೀತಾರಾಮ್ ತಿಳಿಸಿದರು.

ಪಾಂಚಜನ್ಯ ವಿದ್ಯಾಪೀಠ ಕಲ್ಯಾಣ ದತ್ತಿ ಟ್ರಸ್ಟ್ ಹಾಗೂ ಡಾ.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ ಆಯೋಜಿಸಿದ್ದ 11ನೇ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಣ ಎಂಬುದು ಕೇವಲ ಮಾಹಿತಿ ಅಥವಾ ಪದವಿ ಪಡೆಯುವುದಲ್ಲ, ಅದೊಂದು ನಿರಂತರ ಪ್ರಕ್ರಿಯೆಯಾಗಿದೆ. ವಿದ್ಯಾರ್ಥಿಗಳು ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಂಡು ಕೌಶಲಗಳನ್ನು ಕರಗತ ಮಾಡಿಕೊಳ್ಳಬೇಕು. ಹೊಸ ಹೊಸ ಆವಿಷ್ಕಾರಗಳನ್ನು ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು ಎಂದು ಹೇಳಿದರು.

ಶಿಕ್ಷಣವು ಕೇವಲ ಜ್ಞಾನವನ್ನು ಸಂಪಾದಿಸುವುದಲ್ಲ, ವಿಮರ್ಶಾತ್ಮಕ ಚಿಂತನೆ, ಸಮಸ್ಯೆ-ಪರಿಹರಣೆ, ಸಂವಹನ ಮತ್ತು ನಾಯಕತ್ವದಂತಹ ಪ್ರಮುಖ ಜೀವನ ಕೌಶಲಗಳನ್ನು ಅಭಿವೃದ್ಧಿಪಡಿಸುವುದು. ಈ ಕೌಶಲ್ಯಗಳು ನೀವು ಆಯ್ಕೆ ಮಾಡುವ ಯಾವುದೇ ವೃತ್ತಿ ಅಥವಾ ಮಾರ್ಗದಲ್ಲಿ ವಿದ್ಯಾರ್ಥಿಗಳಿ ಉತ್ತಮವಾಗಿ ಸೇವೆ ಸಲ್ಲಿಸುತ್ತವೆ. ಸಂಶೋಧನೆ ಮತ್ತು ನಾವೀನ್ಯತೆ 2 ನಿಕಟ ಸಂಬಂಧಿತ ಪರಿಕಲ್ಪನೆಗಳಾಗಿದ್ದು, ವಿವಿಧ ಕ್ಷೇತ್ರಗ ಳಲ್ಲಿ ಪ್ರಗತಿ ಮತ್ತು ಪ್ರಗತಿಯನ್ನು ಚಾಲನೆ ಮಾಡುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಆವಿಷ್ಕಾರವು ಹೆಚ್ಚಾ ದಂತೆ ಅಸ್ತಿತ್ವದಲ್ಲಿರುವ ಉತ್ಪನ್ನಗಳು ಅಥವಾ ಪ್ರಕ್ರಿಯೆಗಳಿಗೆ ಸಣ್ಣ ಸುಧಾರಣೆಗಳನ್ನು ಪಡೆದುಕೊಂಡು ಹೊಸ ಮಾರುಕಟ್ಟೆ ಮತ್ತು ಕೈಗಾರಿಕೆಗಳ ಸೃಷ್ಟಿಗೆ ಕಾರಣವಾಗುತ್ತದೆ ಎಂದು ತಿಳಿಸಿದರು.

ಡಾ.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಅಧ್ಯಕ್ಷ ಪ್ರೊ.ಟಿ.ಜಿ.ಸೀತಾರಾಮ್ ಅವರು ಪದವಿ ಪ್ರದಾನ ಮಾಡಿದರು. ಪಾಂಚಜನ್ಯ ವಿದ್ಯಾಪೀಠ ಕಲ್ಯಾಣದತ್ತಿ ಅಧ್ಯಕ್ಷ ಎಸ್.ಮರಿಸ್ವಾಮಿ, ಕಲ್ಯಾಣದತ್ತಿ ಕಾರ್ಯದರ್ಶಿ ಎಸ್.ಶಿವಮಲ್ಲು, ಖಜಾಂಜಿ ಎಂ.ಮಹದೇವ, ಶಾಸಕ ಎ.ಆರ್.ಕೃಷ್ಣಮೂರ್ತಿ, ಪ್ರಾಂಶುಪಾಲ ಡಾ.ಸಿ.ನಂಜುಂಡಸ್ವಾಮಿ, ಉಪಪ್ರಾಂಶುಪಾಲ ಸಿದ್ದರಾಜು, ಪಟ್ನಾಯಕ್ ಸೇರಿದಂತೆ ಮತ್ತಿತರರಿದ್ದರು.

### ಸುಸ್ಥಿರ ಸಮಾಜಕ್ಕಾಗಿ ಹೊಸ ಜ್ಞಾನ ಸೃಷ್ಟಿ

ಭಾರತದ ವೆಚ್ಚ ನಿಯಂತ್ರಣದ ಸ್ಪರ್ಧಾತ್ಮಕತೆಯು ಹೊಸ ಜ್ಞಾನದ ಆರ್ಥಿಕತೆಯನ್ನು ಸೃಷ್ಟಿಸುವ ಅನೇಕ ಅವಕಾಶಗಳನ್ನು ಸೆಳೆಯುವ, ಸಂಶೋಧನೆ ನಡೆಸುವ ಪರಿಕ್ರಮಗಳು ಎಐಸಿಟಿಇಗೆ ಪ್ರಯೋಜನವಾಗಿವೆ. ಭಾರತೀಯ ವಿದ್ಯಾರ್ಥಿಗಳಲ್ಲಿ ನಾಯಕತ್ವ ರೂಪಿಸುವಲ್ಲಿ, ನವೋದ್ಯಮ ಸ್ಥಾಪಿಸು ಉದ್ದೇಶದಿಂದ ಎಐಸಿಟಿಯು ಹಲವಾರು ನಿಯಂತ್ರಣ ನಿಬಂಧನೆಗಳಲ್ಲಿ ಬದಲಾವಣೆ ತಂದಿದೆ. ಹಲವಾರು ಪರಿವರ್ತಕ ಶಿಕ್ಷಣವನ್ನು ಅಳವಡಿಸಿ, ಸುಸ್ಥಿರ ಸಮಾಜಕ್ಕಾಗಿ ಹೊಸ ಜ್ಞಾನವನ್ನು ಸೃಷ್ಟಿಸುತ್ತಿದೆ. ವೈವಿಧ್ಯಮಯ ದೃಷ್ಟಿಕೋನಗಳು, ಸಂಸ್ಕೃತಿಗಳು ಮತ್ತು ಜನರಿಂದ ತುಂಬಿರುವ ಪ್ರಪಂಚವು ಬಹುದೊಡ್ಡದಾಗಿದೆ. ಹೊಸ ಕಲಿಕೆ, ಆಲೋಚನೆ, ಆಲೋಚನಾ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಅಧ್ಯಕ್ಷ ಪ್ರೊ.ಟಿ.ಜಿ.ಸೀತಾರಾಮ್ ಅವರು ತಿಳಿಸಿದರು.

ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ತಮ್ಮೇಶ ಗೌಡರ ಜನ್ಮದಿನದ ಪ್ರಯುಕ್ತ ಒಬಿಸಿ ಮೋರ್ಚಾ ಉಪಾಧ್ಯಕ್ಷ ಆನಂದ ಆರ್.ರವರು ತಮ್ಮೇಶ್ ಗೌಡ ಅವರನ್ನು ಭೇಟಿಯಾಗಿ ಶುಭಾಶಯ ತಿಳಿಸಿದರು. ಈ ವೇಳೆ ಸಂದರ್ಭದಲ್ಲಿ ಮುನಿಸ್ವಾಮಿ, ಬಿ ಚಂದ್ರಶೇಖರ್ ,ಮುರುಗೇಶ್ ಜಿ .ಉಪಸ್ಥಿತರಿದ್ದರು

ವಿವಿಧ ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಜೋಗಿ ಅಭಿಮತ

## ಲಾಭದ ಉದ್ದೇಶ ಇಲ್ಲದವರಿಂದ ಒಳ್ಳೆಯ ಕೆಲಸ

**ಬೆಂಗಳೂರು:** ಸಾಹಿತ್ಯಾಸಕ್ತರ ಗುಂಪುಗಳು ಕಲಿಕೆಗೆ ಅವಶ್ಯ ಅನಂತ ಕುಣಿಗಲ್ ಅವರು ಇಷ್ಟೊಂದು ಬರಹಗಾರರನ್ನು ಕಲೆ ಹಾಕಿರುವುದು ನಿಜಕ್ಕೂ ಸಂತೋಷ ಎಂದು ಕನ್ನಡಪ್ರಭ ಪುರವಣಿ ಸಂಪಾದಕ ಜೋಗಿ ಹೇಳಿದರು.

ವಿಜಯನಗರದ ಎಂ ಚಿದಾನಂದಮೂರ್ತಿ ಸಭಾಂಗಣದಲ್ಲಿ ಅವ್ವ ಪುಸ್ತಕಾಲಯ ಹಾಗೂ (ಅ)ಪರಿಚಿತ ಓದುಗರ ಮೊದಲ ವಾರ್ಷಿಕೋತ್ಸವ ಹಾಗೂ ಅನಂತ ಕುಣಿಗಲ್‌ರ ಅಪ್ಪನ ಆಟೋಗ್ರಾಫ್ ಮತ್ತು ಋಣಭಾರ, ಶಿವಾಗ್ ಅವರ ಕಾದಂಬರಿ ಫೈಂಡಿಂಗ್ ಸೀತಾ ಮತ್ತು ಕಥಾ ಸಂಕಲನ ಪೆನ್ನು ಪೇಪರ್, ರವೀಂದ್ರ ಮುದ್ದಿ ಅವರ ಕಥಾ ಸಂಕಲನ ಸಿಗ್ನಲ್ ಜಂಪ್' ಕೃತಿಗಳನ್ನು ಬಿಡುಗಡೆ ಮಾಡಿ ಮಾತನಾಡಿ, ಸ್ವತಃ ಆಸಕ್ತಿಯಿಂದ ಓದುವ ಓದುಗರ ತಂಡವು ಈ ಕಾರ್ಯಕ್ರಮವನ್ನು ಅವಿಸ್ಮರಣೀಯವಾಗಿಸಿದೆ. ಯಾರು ಜಗತ್ತಿನಲ್ಲಿ ಲಾಭದ ಉದ್ದೇಶವಿಲ್ಲದೇ ಕೆಲಸವನ್ನು ಮಾಡುತ್ತಾರೋ, ಅವರು ಎಂದಿಗೂ ಒಳ್ಳೆಯ ಕೆಲಸವನ್ನೇ ಮಾಡುತ್ತಾರೆ. ಅನಂತ್ ಕುಣಿಗಲ್ ಕೂಡ ಇಂತಹ ಸಾಲಿಗೆ ಸೇರಿದ್ದಾರೆ. ಎಂದರು. ಸಮಾಜದಲ್ಲಿ ಸಾಹಿತ್ಯಾಸಕ್ತರು ಹಲವು ಗುಂಪುಗಳಿವೆ. ಅಂತಹ ಗುಂಪುಗಳು ಇಂದು ಅವಶ್ಯಕ ಎಂದರು.

**ಸಾಹಿತ್ಯಾಸಕ್ತರಿಂದ ಲೇಖಕನ ಬೆಳವಣಿಗೆ :** ನಮ್ಮ ಕಥೆಕೂಟ ತಂಡದಲ್ಲಿ ಒಬ್ಬ ಯಾರದರೂ ಕತೆಯನ್ನು ಬರೆದು ಗುಂಪಿನಲ್ಲಿ ಹಾಕಿದರೆ. ಆ ಕತೆಗೆ 40 ರೀತಿಯ ಅಭಿಪ್ರಾಯಗಳು ಬರುತ್ತವೆ. ಆ ನಲವತ್ತು ಅಭಿಪ್ರಾಯಗಳು ಕೂಡ ಲೇಖಕನನ್ನು ಬೆಳೆಸುವಂತೆ ಇರುತ್ತದೆ. ಅದರಲ್ಲಿನ ತಪ್ಪು, ಕತೆಯನ್ನು ವಿಸ್ತರಿಸಬಹುದಾದ ರೀತಿ, ಕತೆಯ ಒಳಭಾಗ, ರಚನೆ ಹಾಗೂ ವೇದಿಕೆ ಹೇಗಿದೆ ಅನ್ನುವುದನ್ನು ಬೇರೆ ಬೇರೆಯವರು ಹೇಳುತ್ತಾರೆ. ಸಾಹಿತ್ಯಾಸಕ್ತರ ಗುಂಪುಗಳಿಂದ ಆಗುವ ಇನ್ನೊಂದು ಲಾಭವೆಂದರೆ ಒಬ್ಬ ಒಂದು ಒಳ್ಳೆಯ ಕೃತಿಯನ್ನು ಓದುವುದನ್ನು ಮರೆತು ಬಿಟ್ಟರೆ, ಮತ್ತೊಬ್ಬ ಅದನ್ನು ಓದುವಂತೆ ನೆನಪಿಸುತ್ತಾನೆ. ಹೀಗಾಗಿ ಗುಂಪುಗಳಿಂದ ನಮ್ಮ ಕಲಿಕೆ ಜಾಸ್ತಿಯಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವೀರಕಪುತ್ರ ಶ್ರೀನಿವಾಸ, ಯತಿರಾಜ್ ವೀರಾಂಬುಧಿ, ಪೂರ್ಣಿಮಾ ಮಾಳಗಿಮನಿ, ಮಹೇಶ ಅರಬಳ್ಳಿ, ಶಿವಾಗ್, ರವೀಂದ್ರ ಮುದ್ದಿ,ಇದ್ದರು. ಸಂಜಯ್ ಶೆಟ್ಟಿ, ಅನಂತ ಕುಣಿಗಲ್,ಇನ್ನಾಫ್ ಪಿಂಜಾರ್, ನಂದಕುಮಾರ ಜಿ.ಕೆ ಇದ್ದರು.

ಪಾಲಿಕೆಯಿಂದ 100 ಕೋಟಿ ರು.ವೆಚ್ಚ | 25 ಜಂಕ್ಷನ್‌ಗಳ ಅಭಿವೃದ್ಧಿ ಕಾಮಗಾರಿ ಪ್ರಗತಿ

## ನಗರದ ಜಂಕ್ಷನ್‌ಗಳ ಅಭಿವೃದ್ಧಿಗೆ ಮುಂದಾದ ಬಿಬಿಎಂಪಿ

**ಬೆಂಗಳೂರು:** ನಗರದ ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರ ಕಲ್ಪಿಸಲು ಪಾಲಿಕೆ ಮುಂದಾಗಿದ್ದು, ಈ ನಿಟ್ಟಿನಲ್ಲಿ ಪ್ರಮುಖ ಜಂಕ್ಷ ನ್‌ಗಳ ಅಭಿವೃದ್ಧಿಗೆ ಮುಂದಾಗಿದೆ ಎಂದು ಮೂಲಗಳು ತಿಳಿಸಿದೆ.

ಪಾಲಿಕೆಯು ಇದಕ್ಕಾಗಿ 100 ಕೋಟಿ ರು.ವೆಚ್ಚಕ್ಕೆ ಮುಂದಾಗಿದ್ದು, 25 ಜಂಕ್ಷನ್‌ಗಳ ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿದೆ. ಸುರಕ್ಷಾ -75ಯೋಜನೆಯಡಿ ಸಂಚಾರ ದಟ್ಟಣೆಯ ನಿಯಂತ್ರಣಕ್ಕೆ ಮುಂದಾಗಿದ್ದು, ಪುರಭವನ, ಹಡ್ಸನ್ ವೃತ್ತ ಸೇರಿದಂತೆ ಕೆಲ ಜಂಕ್ಷನ್‌ಗಳ ಅಭಿವೃದ್ಧಿ ಕಾಮಗಾರಿಯು ಈಗಾಗಲೇ ಬಹುತೇಕ ಪೂರ್ಣಗೊಂಡಿದೆ. ನಗರದ ಜಂಕ್ಷನ್‌ಗಳನ್ನು ಪಾದಚಾರಿಗಳಿ ಗೆ ಸುರಕ್ಷಿತವಾಗಿಸುವ ನಿಟ್ಟಿನಲ್ಲಿ ಪಾಲಿಕೆಯು ನಗರದ 75 ಜಂಕ್ಷನ್‌ಗಳನ್ನು ಅಭಿವೃದ್ಧಿ ಪಡಿಸುತ್ತಿದ್ದು, ಈ ನಿಟ್ಟಿನಲ್ಲಿ 100 ಕೋಟಿ ರು ವೆಚ್ಚ ಮಾಡುತ್ತಿದೆ. ಈ ನಿಟ್ಟಿನಲ್ಲಿ ಪೂರ್ವ, ಪಶ್ಚಿಮ,ದಕ್ಷಿಣ, ಬೊಮ್ಮನ ಹಳ್ಳಿ, ಆರ್‌ಆರ್ ನಗರ ವಲಯದ ಕೆಲ ಜಂಕ್ಷನ್‌ಗಳ ಅಭಿವೃದ್ಧಿಗೆ ಟೆಂಡರ್ ಕರೆಯಲಾಗಿದ್ದು, ಉಳಿದ ಜಂಕ್ಷನ್‌ಗಳ ಅಭಿವೃದ್ಧಿಗೆ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ. ಜಂಕ್ಷನ್‌ಗಳ ಸುತ್ತಮುತ್ತ ಇರುವ ಚರಂಡಿಗಳಲ್ಲಿರುವ ಹೂಳನ್ನು, ಕಸ ಕಡ್ಡಿಗ ಳನ್ನು ತೆರವುಗೊಳಿಸಿ,ಚರಂಡಿಗಳ ಮರು ಅಭಿವೃದ್ಧಿ , ರ‍್ಯಾಂಪ್ ನಿರ್ಮಾಣ, ಆಸನಗಳ ವ್ಯವಸ್ಥೆಯನ್ನು, ದೀಪಾಲಂಕಾರಗಳು, ಸಂಚಾರ ಸೂಚನಾ ಫಲಕಗಳನ್ನು ಅಳವಡಿಸುವ ಕಾರ್ಯಗಳು ನಡೆಯುತ್ತಿದೆ. ಪಾದಚಾರಿ ಮಾರ್ಗಗಳಲ್ಲಿ ಹೆಚ್ಚಿನ ಸ್ಥಳಾವಕಾಶವಿರುವೆಡೆಗಳಲ್ಲಿ ಕಾರಂಜಿಗಳ ನಿರ್ಮಾಣ, ಬಗೆ ಬಗೆಯ ಹೂ, ಇನ್ನಿತರೆ ಅಲಂಕಾರಿಕ ಗಿಡಗಳನ್ನು ನೆಟ್ಟು ಹಸಿರೀಕರಣಗೊಳಿಸಿ ಜಂಕ್ಷನ್‌ಗಳನ್ನು ಅಂದಗಾಣಿಸಲು ಉದ್ದೇಶಿಸಲಾಗಿದೆ. ಸಾರ್ವಜನಿಕರ ಸುರಕ್ಷತೆಗಾಗಿ ಕ್ರಾಸಿಂಗ್, ರ‍್ಯಾಂಪ್‌ಗಳು, ಲೇನ್ ಮಾರ್ಕಿಂಗ್, ಸ್ಟಾಪ್ ಲೇನ್, ಕ್ಯಾಟ್ ಐ ಮಾರ್ಕರ್ಸ್, ಸಂಚಾರ ಸೂಚನಾ ಫಲಕಗಳನ್ನು ಹಾಕಲಾಗುತ್ತದೆ. ಅಲ್ಲದೆ, ಎಚ್‌ಆರ್‌ಪಿಸಿ ವ್ಯವಸ್ಥೆ, ಎಸ್‌ಎಸ್ ರೈಲಿಂಗ್ಸ್‌ಗಳನ್ನು ಅಳವಡಿಸಿ, ದ್ವಿಚಕ್ರ ವಾಹನ ನಿಲುಗಡೆಗೂ ಅವಕಾಶ ನೀಡಲು ನಿರ್ಧರಿಸಲಾಗಿದೆ.

### ಎಲ್ಲೆಲ್ಲಿ ಜಂಕ್ಷನ್‌ಗಳ ಅಭಿವೃದ್ಧಿ

**ಪೂರ್ವ ವಲಯ:** ಮಿನ್ಸ್ ಸ್ಕ್ವೇರ್ ಜಂಕ್ಷನ್, ಬಸವೇಶ್ವರ ಸರ್ಕಲ್, ಹೆಣ್ಣೂರು ಕ್ರಾಸ್, ಟ್ರಿನಿಟಿ ವೃತ್ತ, ಎಲ್‌ಎಚ್ ಸರ್ಕಲ್, ವಿಂಡ್ಸರ್ ಮ್ಯಾನರ್ ಜಂಕ್ಷನ್, ಎಸ್‌ಜೆಪಿ ರಸ್ತೆ ಜಂಕ್ಷನ್, ದೊಮ್ಮಲೂರು-ಹಳೆ ವಿಮಾನ ನಿಲ್ದಾಣ ರಸ್ತೆ ಜಂಕ್ಷನ್, ಅನಿಲ್ ಕುಂಬ್ಳೆ ವೃತ್ತ, ಹೊಸೂರು ರಸ್ತೆ ಜಂಕ್ಷನ್, ಡಾ,ರಾಜ್‌ಕುಮಾರ್ ರಸ್ತೆ , ಸ್ವಾಮಿ ವಿವೇಕಾನಂದ ಮೆಟ್ರೊ ನಿಲ್ದಾಣ ಜಂಕ್ಷನ, ಸುರಂಜನ್‌ದಾಸ್ ರಸ್ತೆ ಜಂಕ್ಷನ್-ಎನ್‌ಜಿಇಎಫ್ ಸಿಗ್ನಲ್, ನಾಗವಾರ ಜಂಕ್ಷನ್.

**ಪಶ್ಚಿಮ ವಲಯ:** ನಾಯಂಡಹಳ್ಳಿ ಜಂಕ್ಷನ್, ಮೈಸೂರು ಸ್ಯಾಂಡಲ್ ಸೋಪ್ ಫ್ಯಾಕ್ಟರಿ ಜಂಕ್ಷನ್, ಯಶವಂತಪುರ ಜಂಕ್ಷನ್, ಕೆ.ಜಿ.ವೃತ್ತ, ವಾಟಾಳ್ ನಾಗರಾಜ್ ರಸ್ತೆ, ರಾಜಾಜಿನಗರ ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್, ಬಸವೇಶ್ವರನಗರ ಜಂಕ್ಷನ್, ಬಳ್ಳಾರಿ ರಸ್ತೆ, ಚೌಡಯ್ಯ ರಸ್ತೆ, ವಿಜಯನಗರ ಬಸ್ ನಿಲ್ದಾಣ ಸರ್ಕಲ್, ನಾಗರಬಾವಿ ಸರ್ಕಲ್.

**ಯಲಹಂಕ ವಲಯ:** ಬಳ್ಳಾರಿ-ಪಾಲನಹಳ್ಳಿ ರಸ್ತೆ, ಬಳ್ಳಾರಿ-ಕೋಗಿಲು ಮುಖ್ಯರಸ್ತೆ, ಎನ್‌ಇಎಸ್ ಬಸ್ ನಿಲ್ದಾಣ ಜಂಕ್ಷನ್, ಯಲಹಂಕ ನ್ಯೂ ಟೌನ್, ಯಲಹಂಕ ರಸ್ತೆ-ವಿದ್ಯಾರಣ್ಯಪುರ ಮುಖ್ಯರಸ್ತೆ, ಹಾಸ್ಟೆಲ್ ಬಸ್ ನಿಲ್ದಾಣ ಜಂಕ್ಷನ್, ಬ್ಯಾಟರಾಯನಪುರ ಜಂಕ್ಷನ್, ವಿರಣ್ಣಪಾಳ್ಯ ಬಸ್ ನಿಲ್ದಾಣ.

**ದಾಸರಹಳ್ಳಿ ವಲಯ:** 8ನೇ ಮೈಲಿ ಸರ್ಕಲ್, ನಾಗಸಂದ್ರ ಎಂಎಸ್ ಜಂಕ್ಷನ್, ಜಾಲಹಳ್ಳಿ ಕ್ರಾಸ್ ರಸ್ತೆ, ತುಮಕೂರು ಮತ್ತು ದಾಸರಹಳ್ಳಿ ಎಂಎಸ್ ಜಂಕ್ಷನ್.

**ದಕ್ಷಿಣ ವಲಯ:** ಕೆ.ಆರ್.ಮಾರುಕಟ್ಟೆ, ಫೋರಂ ಮಾಲ್, ಮಕ್ಕಳಕೂಟ ಸರ್ಕಲ್, ದೇವೇಗೌಡ ಪೆಟ್ರೋಲ್ ಬಂಕ್, ಮಾಗಡಿ ರಸ್ತೆಯ ಟೋಲ್‌ಗೇಟ್ ಜಂಕ್ಷನ್, ಬಿಎಚ್ಇಎಲ್ ಜಂಕ್ಷನ್, ಮೈಸೂರು ರಸ್ತೆ, ನಂದಿ ಲಿಂಕ್ ಮೈದಾನ, ಲಾಲ್‌ಬಾಗ್ -ಹೊಸೂರು ರಸ್ತೆ ಜಂಕ್ಷನ್, ಸುಭಾಷ್‌ಚಂದ್ರ ಬೋಸ್ ಜಂಕ್ಷನ್.

**ಬೊಮ್ಮನಹಳ್ಳಿ ವಲಯ:** ಹೊಂಗಸಂದ್ರ ಎಂಎಸ್ ಜಂಕ್ಷನ್, ಮಣಿಪಾಲ್ ಕಂಟ್ರಿ-ಹೊಸೂರು ರಸ್ತೆ ಜಂಕ್ಷನ್, ಗಾರೆಬಾವಿಪಾಳ್ಯ ದೇವಸ್ಥಾನ, ಎಚ್‌ಎಸ್‌ಆರ್ ಲೇಔಟ್ 27ನೇ ಮುಖ್ಯರಸ್ತೆ ಜಂಕ್ಷನ್, ಬನ್ನೇರುಘಟ್ಟ ರಸ್ತೆ-ಬಿಡಿಎ 80 ಅಡಿ ರಸ್ತೆ, ಬನ್ನೇರುಘಟ್ಟ ರಸ್ತೆ, ಅರಕೆರೆ ರಸ್ತೆ, ಕೂಡ್ಲುಗೇಟ್ ಬಸ್ ನಿಲ್ದಾಣ ಜಂಕ್ಷನ್, ಸಾರಕ್ಕಿ ಜಂಕ್ಷನ್.

**ಮಹದೇವಪುರ ವಲಯ:** ಟಿನ್ ಫ್ಯಾಕ್ಟರಿ, ಮಾರತಹಳ್ಳಿ, ಕೆ.ಆರ್.ಪುರ, ಬಿ.ಚನ್ನಸಂದ್ರ ಮೇಲ್ಸೇತುವೆ, ಬೆನ್ನಿಗಾನಹಳ್ಳಿ, ಕೆ.ಆರ್.ಪುರ ಜಂಕ್ಷನ್, ದೊಡ್ಡನೆಕ್ಕುಂದಿ ಜಂಕ್ಷನ್, ವರ್ತೂರು ಕೋಡಿ, ಕುಂದಲಹಳ್ಳಿ ಜಂಕ್ಷನ್, ಮಹದೇವಪುರ, ಸುಬ್ರಮಣ್ಯಸ್ವಾಮಿ ದೇವಸ್ಥಾನ, ಸರ್ಜಾಪುರ ಸಿಗ್ನಲ್, ಇಬ್ಬಲೂರು ಕೆರೆ, ಬಾಗ್ಮನೆ ಟೆಕ್‌ಪಾರ್ಕ್ ಜಂಕ್ಷನ್.

**ಆರ್‌ಆರ್ ನಗರ ವಲಯ:** ಸುಮನಹಳ್ಳಿ ಜಂಕ್ಷನ್, ಕೆಂಗೇರಿ ಬಸ್ ನಿಲ್ದಾಣ ಜಂಕ್ಷನ್, ನೈಸ್ ರಸ್ತೆ, ಜಯಣ್ಣ ಸರ್ಕಲ್, ಕೆಂಚನಹಳ್ಳಿ ರಸ್ತೆ, ಶ್ರೀಗಂಧಕಾವಲ್ ಜಂಕ್ಷನ್, ಗೊರಗುಂಟೆಪಾಳ್ಯ ಜಂಕ್ಷನ್, ಬಿಇಎಲ್ ಸರ್ಕಲ್, ನಾಗರಬಾವಿ ಜಂಕ್ಷನ್

## ಕ್ಲಬ್‌ಗಳಿಗೆ ಪರವಾನಗಿ ಷರತ್ತುಗಳ ಸಡಿಲಿಕೆ

**ಬೆಂಗಳೂರು:** ಅಬಕಾರಿ ನಿಯಮಗಳಡಿ ಕ್ಲಬ್‌ಗಳಿಗೆ ಸಿಎಲ್-4 ಪರವಾನಗಿ ನೀಡಲು ಷರತ್ತುಗಳನ್ನು ಅಬಕಾರಿ ಇಲಾಖೆಯು ಸಡಿಲಗೊಳಿಸಿದೆ. 20 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಾತ್ರ ಈ ನೂತನ ನಿಯಮ ಅನ್ವಯವಾಗಿಲಿದೆ. ಈ ಮೊದಲು ಸಿಎಲ್-4 ಪರವಾನಗಿ ಪಡೆಯಲು ಕ್ಲಬ್‌ಗಳು ಕನಿಷ್ಠ ಮೂರು ಒಳಾಂಗಣ ಮತ್ತು ಕನಿಷ್ಠ ಎರಡು ಹೊರಾಂಗಣ ಆಟ ಸೇರಿ, ಕನಿಷ್ಟ ಐದು ಆಟಗಳಿಗೆ ಸೌಲಭ್ಯ ಹೊಂದಿರಬೇಕಿತ್ತು. ನಗರಗಳಲ್ಲಿ ಒಳಾಂಗಣ, ಹೊರಾಂಗಣದಲ್ಲಿ ಐದು ಆಟಗಳಿಗೆ ಸ್ಥಳ ಹೊಂದಿಸುವುದು ಕಷ್ಟ. ಹೀಗಾಗಿಯೇ ನಿಯಮಗಳನ್ನು ಸಡಿಲಗೊಳಿಸಲಾಗಿದೆ ಎಂದು ಇಲಾಖೆಯ ಜಂಟಿ ಆಯುಕ್ತ (ಐಎಂಎಲ್) ಟಿ.ನಾಗರಾಜಪ್ಪ ಅವರು ಮಾಹಿತಿ ನೀಡಿದ್ದಾರೆ.



ಬದಲಾದ ನಿಯಮಗಳ ಪ್ರಕಾರ ಕ್ಲಬ್‌ಗಳು ಹೊಂದಿರಬೇಕಾದ ಹೊರಾಂಗಣ ಮತ್ತು ಒಳಾಂಗಣ ಆಟಗಳ ಕನಿಷ್ಠ ಮಿತಿಯನ್ನು ಸಡಿಲಿಸಲಾಗಿದೆ. ಕ್ಲಬ್‌ಗಳು ಒಟ್ಟು ಐದು ಆಟಗಳಿಗೆ ವ್ಯವಸ್ಥೆ ಹೊಂದಿರಬೇಕು. ಆ ಆಟಗಳು ಒಳಾಂಗಣ ಅಥವಾ ಹೊರಾಂಗಣ ಆಗಿರಬಹುದು. ಆದರೆ, ಕ್ಲಬ್‌ಗಳು ಕನಿಷ್ಠ 10 ಸಾವಿರ ಚದರ ಅಡಿಗಳಷ್ಟು ಬಿಲ್ಟ್‌ಅಪ್ ಏರಿಯಾ ಹೊಂದಿರಬೇಕು. ಪರವಾನಗಿ ಹೊಂದಿರುವ ಕ್ಲಬ್‌ಗಳಿಗೂ ಈ ನಿಯಮ ಅನ್ವಯವಾಗುತ್ತದೆ. ಈ ನಿಮಯಗಳ ಅಡಿಯಲ್ಲಿಯೇ ಪರವಾನಗಿ ನವೀಕರಿಸಲಾಗುತ್ತದೆ. ಈ ಸಂಬಂಧ ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ಸಂಬಂಧಿತ ತಿದ್ದುಪಡಿ ನಿಯಮಗಳು ಇದೇ 9ರ ರಾಜ್ಯಪತ್ರದಲ್ಲಿ ಪ್ರಕಟಣವಾಗಿದೆ.

## ಸಮಾಚಾರ ಸಣ್ಣದಲ್ಲ

### ಸುಟ್ಟ ಸ್ಥಿತಿಯಲ್ಲಿ ಶವ ಪತ್ತೆ: ಕೊಲೆ ಶಂಕೆ

**ಕಲಬುರಗಿ:** ಕಮಲಾಪುರ ತಾಲ್ಲೂಕಿನ ನಾಗೂರ ಸಮೀಪದ ಕನ್ನಡಗಿ ಮಲ್ಲಿಕಾರ್ಜುನ ದೇವಸ್ಥಾನದ ರಸ್ತೆ ಬದಿಯಲ್ಲಿ ಅರೆಬರೆ ಸುಟ್ಟ ಸ್ಥಿತಿಯಲ್ಲಿ ಭಾನುವಾರ ಮಹಿಳೆಯ ಶವ ಪತ್ತೆಯಾಗಿದ್ದು, ಪೊಲೀಸರು ಕೊಲೆ ಶಂಕೆ ವ್ಯಕ್ತಪಡಿಸಿದ್ದಾರೆ.

ಕಲಬುರಗಿ ನಗರದ ಜಗತ್ ಬಡಾವಣೆ ನಿವಾಸಿ ಬಸಮ್ಮ (40) ಶವವಾಗಿ ಪತ್ತೆಯಾದವರು. ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಲಾಗಿದೆ. ಆರೋಪಿಗಳು ಸಾಕ್ಷಿ ನಾಶಕ್ಕಾಗಿ ಶವವನ್ನು ಸುಟ್ಟುಹಾಕಲು ಯತ್ನಿಸಿದ್ದು , ಅರ್ಧ ದೇಹ ಸುಟ್ಟಿದೆ. ಆರೋಪಿಗಳ ಪತ್ತೆಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಈ ಕುರಿತು ಮಹಾಗಾಂವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಅನುಮಾನಾಸ್ಪದ ಸಾವು: ಕೊಲೆ ಆರೋಪ

**ಬಳ್ಳಾರಿ:** ಬಹಿರ್ದೆಸೆಗೆ ತೆರಳಿದ್ದ 10 ವರ್ಷದ ಬಾಲಕಿ ಅನುಮಾನಾಸ್ಪದವಾಗಿ ಸಾವನ್ನಪಿದ ಘಟನೆ ವಿಜಯನಗರ ಜಿಲ್ಲೆ ಹಡಗಲಿ ತಾಲೂಕಿನ

ದುಂಗಾವತಿ ತಾಂಡಾದಲ್ಲಿ ಬೆಳಕಿಗೆ ಬಂದಿದೆ.ಅನಸೂಯಾ (10) ಮೃತ ಬಾಲಕಿ. ತಂದೆ ರವಿ ಹಾಗೂ ತಾಯಿ ಲಕ್ಷ್ಮಿ ದಂಪತಿಗೆ ಅನಸೂಯಾ ಒಬ್ಬಳೇ ಮಗಳು. ಬಾಲಕಿಯ ಮೃತ ದೇಹ ಕಂಡು ಪೋಷಕರು ಅನುಮಾನ ವ್ಯಕ್ತಪಡಿಸಿದ್ದಾರೆ. ಹೊಂಡದ ಪಕ್ಕದಲ್ಲಿ ಮೃತದೇಹ, ಮತ್ತೊಂದು ಕಡೆ ನೀರಿನ ತಂಬಿಗೆ ಪತ್ತೆಯಾಗಿದೆ. ಇದರಿಂದ ಸಂಶಯಗೊಂಡ ಪೋಷಕರು, ತಮ್ಮ ಮಗಳ ಕೊಲೆಯಾಗಿದ್ದು, ತಮಗೆ ನ್ಯಾಯ ದೊರಕಿ ಸಿಕೊಡಬೇಕೆಂದು ಒತ್ತಾಯಿಸಿದ್ದಾರೆ. ಸ್ಥಳಕ್ಕೆ ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠ ಶ್ರೀಹರಿಬಾಬು ಹಾಗೂ ಶಾಸಕ ಕೃಷ್ಣಾ ನಾಯ್ಕ್ ಭೇಟಿ ನೀಡಿದ್ದರು.

### ನಕಲಿ ಸಿಬಿಐ ಅಧಿಕಾರಿ ಬಂಧನ

**ಬಾಗಲಕೋಟೆ:** ಸಣ್ಣಪುಟ್ಟ ವ್ಯಾಪಾರಿಗಳಿಗೆ ಫೋನ್ ಮಾಡಿ ವಂಚಿಸುತ್ತಿದ್ದ, ಪೊಲೀಸರಿಗೇ ಬೆದರಿಕೆ ಹಾಕುತ್ತಿದ್ದ ನಕಲಿ ಸಿಬಿಐ, ಡಿಸಿಪಿಯನ್ನು

ಪೊಲೀಸರು ಬಂಧಿಸಿರುವ ಘಟನೆ ಜಿಲ್ಲೆಯಲ್ಲಿ ನಡೆದಿದೆ. ಪೊಲೀಸರಿಗೆ ಆರೋಪಿ ಆವಾಜ್ ಹಾಕಿದ ಆಡಿಯೊ ಸಾಮಾ ಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಬಾಗಲಕೋಟೆ ಜಿಲ್ಲೆಯ ರಬಕವಿ -ಬನಹಟ್ಟಿ ತಾಲೂಕಿನ ನಾವಲಗಿಯ ಅಪ್ಪು ಬಸಯ್ಯ ಹಿರೇಮಠ ಆರೋಪಿ. ಪೊಲೀಸ್ ಇಲಾಖೆಗೆ ಸರಕಾರ ಪೂರೈಸಿದ 948080 ಸರಣಿಯ ನಂಬರ್ ಮಾದರಿಯಲ್ಲೇ 948080 2997 ಮೊಬೈಲ್ ಸಿಮ್ ಖರೀದಿಸಿದ್ದ ಆರೋಪಿ, ಹಲವು ಜಿಲ್ಲೆಗಳಲ್ಲಿ ಅನೇಕ ಮಂದಿಗೆ ಕರೆಮಾಡಿ ವಂಚಿಸಿದ್ದಾನೆ. ಈ ಬಗ್ಗೆ ಶಿವಮೊಗ್ಗ, ಬೆಳಗಾವಿ, ಜಮಖಂಡಿಯಲ್ಲಿ ಪ್ರಕರಣ ದಾಖಲಾಗಿವೆ. ಬಂಧನಕ್ಕೊಳಗಾಗಿ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದ ಅಪ್ಪು ಹಿರೇಮಠ., ಇದೀಗ ಹಳೇ ಚಾಳಿ ಮುಂದುವರಿಸಿ ಪೊಲೀಸರ ಅತಿಥಿಯಾಗಿದ್ದಾನೆ. ತಾನು ಸಿಬಿಐ ಅಧಿಕಾರಿ, ಡಿಸಿಪಿ ಎಂದು ಸಣ್ಣಪುಟ್ಟ ವ್ಯಾಪಾರಿಗಳಿಗೆ ಫೋನ್ ಮಾಡಿ, ಬೆದರಿಸಿ ವಂಚಿಸುತ್ತಿದ್ದುದು ಬೆಳಕಿಗೆ ಬಂದಿದೆ.ಆರೋಪಿ ವಿರುದ್ಧ ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಪ್ರವಾಸಿಗರ ಪುಂಡಾಟ; ನಾಲ್ವರ ಬಂಧನ

**ಮೂಡಿಗೆರೆ**: ಚಾರ್ಮಾಡಿ ಘಾಟ್ ರಸ್ತೆಯಲ್ಲಿ ಅಪಘಾತವೆಸಗಿ, ಸ್ಥಳೀಯರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ನಾಲ್ವರನ್ನು ಬಣಕಲ್ ಪೊಲೀಸರು ಬಂಧಿಸಿದ್ದಾರೆ. ಬೆಂಗಳೂರು ಮೂಲದ ವಿಜಯ್, ಸತ್ಯ, ಶಿವು, ಪುನೀತ್‌ಕುಮಾರ್ ಪುಂಡಾಟ ನಡೆಸಿ ಬಂಧನಕ್ಕೊಳಗಾದವರು. ಪಾನಮತ್ತರಾಗಿದ್ದ ಪ್ರವಾಸಿಗರು ಚಾಲನೆ ಮಾಡುತ್ತಿದ್ದ ಕಾರು ನಿಂತಿದ್ದ ಮತ್ತೊಂದು ಕಾರಿಗೆ ಡಿಕ್ಕಿ ಹೊಡೆದಿದ್ದು, ಆಸ್ಪತ್ರೆಗೆ ಕರೆದೊಯ್ಯಲು ಬಂದ ಆಂಬ್ಯುಲೆನ್ಸ್ ಚಾಲಕ ಸೇರಿ ಸ್ಥಳೀಯರ ಮೇಲೆ ಹಲ್ಲೆ ನಡೆಸಿ ರಂಪಾಟ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

**ಪ್ರಕರಣದ ವಿವರ:** ಮೂಡಿಗೆರೆ ತಾಲ್ಲೂಕಿನ ಕೊಟ್ಟಿಗೆಹಾರದ ಚಾರ್ಮಾಡಿ ಘಾಟಿ ಆರಂಭದಲ್ಲಿ ನಿಂತಿದ್ದ ಕಾರಿಗೆ ಚಾರ್ಮಾಡಿ ಘಾಟಿ ಕಡೆಯಿಂದ ಬಂದ ಬೆಂಗಳೂರು ಮೂಲದ ಪ್ರವಾಸಿ ಗರಿದ್ದ ಕಾರು ಡಿಕ್ಕಿ ಹೊಡೆಯಿತು. ಕಾರಿನಲ್ಲಿದ್ದ ಇಬ್ಬರಿಗೆ ಗಾಯಗಳಾಗಿವೆ. ಸ್ಥಳೀಯರು ಆಂಬುಲೆನ್ಸ್ ಕರೆಸಿ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲು ಮುಂದಾದರು. ಈ ಸಂದರ್ಭದಲ್ಲಿ ಪಾನಮತ್ತರನ್ನು ಸ್ಥಳೀಯರು ಪ್ರಶ್ನೆ ಮಾಡಿದರು. ಇದರಿಂದ ಕುಪಿತಗೊಂಡ ಪ್ರವಾಸಿಗರ ಗುಂಪು ಪೊಲೀಸರ ಎದುರೇ ಸ್ಥಳೀಯರು ಮತ್ತು ಆಂಬುಲೆನ್ಸ್ ಚಾಲಕನ ಮೇಲೆ ಹಲ್ಲೆ ನಡೆಸಿದರು.

{ಬಸವರಾಜ ಬೊಮ್ಮಾಯಿ } ಸಂಸದ

ಮುಡಾ ಸೈಟು ಹಂಚಿಕೆ ಹಗರಣವನ್ನು ಸಿಬಿಐ ಮೂಲಕ ತನಿಖೆ ನಡೆಸಲಿ, ಯಾವುದೇ ತಪ್ಪು ಮಾಡಿಲ್ಲ ಎಂದರೆ ಭಯ ಪಡುವ ಅಗತ್ಯವಿಲ್ಲ . ಮುಡಾ ಸೈಟ್ ಹಂಚಿಕೆಯಲ್ಲಿ ಯಾವ ಹಗರಣ ಆಗಿಲ್ಲ ಮುಡಾ ಹಗರಣದಲ್ಲಿ ಯಾವುದೇ ಸತ್ಯಾಂಶ ಇಲ್ಲಾ ಅಂದರೆ ಇಷ್ಟು ದೊಡ್ಡ ಚರ್ಚೆ ಆಗುತ್ತಿರಲಿಲ್ಲ. ಏನೂ ಇಲ್ಲ ಅಂದರೆ ಸ್ವತಂತ್ರ ಸಂಸ್ಥೆಯ ಮೂಲಕ ತನಿಖೆಗೆ ಯಾಕೆ ಹಿಂಜರಿಕೆ.



ಕೊಡಗಿನಲ್ಲಿ ಧಾರಾಕಾರ ಮಳೆ | ವಿದ್ಯುತ್ ಕಂಬ, ಮನೆಗಳಿಗೆ ಹಾನಿ, ಹಸು ಸಾವು , ಆಗುಂಬೆ ರಸ್ತೆಯಲ್ಲಿ ಭೂಕುಸಿತ

# ಮಲೆನಾಡಿನಲ್ಲಿ ನಿಲ್ಲದ ವರುಣನ ಆರ್ಭಟ

**ಬೆಂಗಳೂರು:** ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಸುರಿಯುತ್ತಿರುವ ಮಳೆಗೆ ಜನರು ತತ್ತರಿಸಿಹೋಗಿದ್ದಾರೆ. ಭಾನುವಾರ ಹಲವೆಡೆ ಬಿರುಗಾಳಿ ಸಹಿತ ಭಾರಿ ಮಳೆಗೆ ಮರಗಳು ಧರೆಗುರುಳಿದ್ದು, ಅವಾಂತರ ಸೃಷ್ಟಿಯಾಗಿದೆ. ಕೊಡಗು, ಕಾರವಾರ, ಬೀದರ್, ಯಾದಗಿರಿ ಭಾಗಗಳಲ್ಲಿ ಭಾನುವಾರವೂ ಮಳೆಯ ಆರ್ಭಟ ಮುಂದುವರಿದಿದೆ.

ಕೊಡಗು ಜಿಲ್ಲೆಯಲ್ಲಿ ಗಾಳಿ ಸಹಿತ ಧಾರಾಕಾರ ಮಳೆಯಾಗುತ್ತಿದೆ. ಭಾರಿ ಗಾಳಿಗೆ ಸೋಮವಾರಪೇಟೆಯ ರೆಸಾರ್ಟ್‌ವೊಂದರ ಬಳಿ ಮರದ ಕೊಂಬೆ ಬಿದ್ದು ಆರು ಕಾರುಗಳು ಜಖಂಗೊಂಡಿವೆ.ಪ್ರವಾಸಿಗರು ಹಾಗೂ ಟ್ಯಾಕ್ಸಿ ಚಾಲಕರು ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲುಗಡೆಗೊಳಿಸಿದ್ದಾಗ ಈ ಅವಘಡ ಸಂಭವಿಸಿದೆ. ಅದೃಷ್ಟವಶಾತ್ ಸ್ಥಳದಲ್ಲಿದ್ದವರು ಅಪಾ ಯದಿಂದ ಪಾರಾಗಿದ್ದಾರೆ. ಹಲವೆಡೆ ಮನೆಗಳಿಗೆ ಹಾನಿಯಾಗಿದೆ. ಮಡಿಕೇರಿ – ಗಾಳಿಬೀಡು ಮಾರ್ಗದ ರಸ್ತೆಯಲ್ಲಿ ಮರಗಳು ಮತ್ತು ವಿದ್ಯುತ್ ಕಂಬಗಳು ಬಿದ್ದಿವೆ. ಚೆಸ್ಕಾಂ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ತೆರವು ಕಾರ್ಯಾಚರಣೆ ನಡೆಸಿದರು.

**ವಿದ್ಯುತ್ ತಂತಿ ತುಂಡಾಗಿ ಹಸು ಸಾವು:** ಸೋಮವಾರಪೇಟೆಯ ಚೌಡ್ಲು ಗ್ರಾಮದಲ್ಲಿ ಗಾಳಿಯ ರಭಸಕ್ಕೆ ವಿದ್ಯುತ್ ತಂತಿ ತುಂಡಾಗಿ ಬಿದ್ದು, ಹಸುವೊಂದು ಮೃತಪಟ್ಟಿದೆ. ಸುರೇಶ್ ಎಂಬುವವರಿಗೆ ಸೇರಿದ ಹಸು ಇದಾಗಿದೆ. ಗೌಡಳ್ಳಿ ಗ್ರಾಪಂನ ಚನ್ನಾಪುರ ಗ್ರಾಮದ ಲಕ್ಷ್ಮೀಗೆ ಸೇರಿದ ಮನೆಗೆ ಭಾಗಶಃ ಹಾನಿಯಾಗಿದೆ.

**ಮನೆಯ ಗೋಡೆ ಕುಸಿತ:** ಕುಶಾಲನಗರದ ಗುಡ್ಡೆಹೊಸೂರು ಗ್ರಾಪಂನ ಅತ್ತೂರು ಗ್ರಾಮದಲ್ಲಿ ಜನಾರ್ದನ್ ಎಂಬವರ ಮನೆಯ ಗೋಡೆ ಕುಸಿದುಬಿದ್ದಿದೆ. ಕುಶಾಲನಗರ ತಹಸೀಲ್ದಾರ್ ಕಿರಣ್ ಗೌರಯ್ಯ, ಗುಡ್ಡೆಹೊಸೂರು ಅಧಿಕಾರಿ ಸುಮೇಶ್, ಕಂದಾಯ ನಿರೀಕ್ಷಕ ಸಂತೋಷ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

**ಜನರ ಸ್ಥಳಾಂತರ** : ಸಂಪಾಜೆ ಹೋಬಳಿಯ ಮೇಕೇರಿ ಗ್ರಾಮದ ಆಯಿಷಾ ಎಂಬವರ ಮನೆಯ ಗೋಡೆ ಕುಸಿದುಬಿದ್ದು, ಉಳಿದ ಭಾಗ ಬಿರುಕು ಬಿಟ್ಟಿದೆ. ಇಲ್ಲಿ ವಾಸ ಇದ್ದವರನ್ನು ಬೇರೆ ಕಡೆಗೆ ಸ್ಥಳಾಂತರಿಸಲಾಗಿದೆ.

**ಯಾದಗಿರಿಯಲ್ಲೂ ಅಬ್ಬರದ ಮಳೆ:** ಯಾದಗಿರಿಯಲ್ಲಿ ವರುಣನ ಅಬ್ಬರ ಜೋರಾಗಿದೆ. ಭಾನುವಾರ ಒಂದು ಗಂಟೆಗೂ ಹೆಚ್ಚು ಸಮಯ ಮಳೆಯಾಗಿದೆ. ಒಂದು ಕಡೆ ಮಳೆ ಆರ್ಭಟವಾದರೆ ಮತ್ತೊಂದೆಡೆ ಯುವಕರು ಮಳೆಯಲ್ಲಿಯೇ ಕ್ರಿಕೆಟ್ ಆಡಿ ಖುಷಿ ಪಟ್ಟರು.

### ಅಲ್ಲಲ್ಲಿ ಗುಡ್ಡ ಕುಸಿಯುವ ಸಾಧ್ಯತೆ ಇದೆ

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಆಗುಂಬೆಯಲ್ಲಿ ಭಾನುವಾರ ಬೆಳಗ್ಗೆ ನಾಲ್ಕನೇ ತಿರುವಿನಲ್ಲಿ ಗುಡ್ಡ ಕುಸಿದಿದೆ. ರಸ್ತೆ ಮೇಲೆಯೇ ಗುಡ್ಡ ಕುಸಿದಿದ್ದರಿಂದ ವಾಹನಗಳ ಸಂಚಾರಕ್ಕೆ ಕೆಲಕಾಲ ಅಡಚಣೆ ಉಂಟಾಗಿತ್ತು. ಮಳೆ ಮುಂದುವರಿದಿರುವ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಅಲ್ಲಲ್ಲಿ ಗುಡ್ಡ ಕುಸಿಯುವ ಸಾಧ್ಯತೆ ಇದೆ. ಆಗುಂಬೆ ಪಿಎಸ್ಐ ರಂಗನಾಥ್ ಅಂತರಗಟ್ಟೆ ನೇತೃತ್ವದಲ್ಲಿ ಕುಸಿದ ಮಣ್ಣನ್ನು ತೆರವುಗೊಳಿಸಿ ವಾಹನಗಳ ಸಂಚಾರಕ್ಕೆ ಮಾರ್ಗ ಸುಗಮಗೊಳಿಸಲಾಗಿದೆ.

### ನೆರೆಯಲ್ಲಿ ಸಿಲುಕಿಕೊಂಡವರ ರಕ್ಷಣೆ

ಉತ್ತರ ಕನ್ನಡದ ಕಾರವಾರ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಿಂದಾಗಿ ನೆರೆ ಪರಿಸ್ಥಿತಿ ಉಂಟಾಗಿದೆ. ನೆರೆಯಲ್ಲಿ ಸಿಲುಕಿಕೊಂಡವರನ್ನು ಬೋಟ್ ಮೂಲಕ ರಕ್ಷಣೆ ಮಾಡಲಾಗಿದೆ. ಚೆಂಡಿಯಾ ಗ್ರಾಮ ವ್ಯಾಪ್ತಿಯ ಇಡೂರುಸಕ ಲಭಾಗದಲ್ಲಿ ನೆರೆ ಸೃಷ್ಟಿಯಾಗಿದೆ. ಚೆಂಡಿಯಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಜಮೀನುಗಳಿಗೆ ಹೋಗುವ ರಸ್ತೆ ಜಲಾವೃತಗೊಂಡಿದ್ದು, ಸಂಕಷ್ಟದಲ್ಲಿದ್ದ 5 ಕುಟುಂಬಗಳನ್ನು ಬೋಟ್ ಮೂಲಕ ರಕ್ಷಿಸಿದ್ದಾರೆ.

### ರಕ್ಷಣಾ ತಂಡಗಳು ಸನ್ನದ್ಧಿಗೆ ಸೂಚನೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ಸತತ ಧಾರಾಕಾರ ಮಳೆಯಾಗುತ್ತಿದ್ದು ಬೆಟ್ಟಗುಡ್ಡ, ತಗ್ಗುಪ್ರದೇಶ ಮತ್ತು ನದಿಯ ಆಸುಪಾಸಿನ ನಿವಾಸಿಗಳು ಆತಂಕಗೊಂಡಿದ್ದಾರೆ. ಸ್ಥಳೀಯ ಜನರಿಗೆ ಎಚ್ಚರಿಕೆಯಿಂದ ಇರುವಂತೆ ಈಗಾಗಲೇ ಜಿಲ್ಲಾಡಳಿತ ಸೂಚನೆ ನೀಡಿದೆ. ಎನ್‌ಡಿಆರ್‌ಎಫ್, ಅಗ್ನಿಶಾಮಕದಳ, ಪೊಲೀಸ್ ಇಲಾಖೆ, ಕಂದಾಯ ಇಲಾಖೆ ಅಧಿಕಾರಿಗಳು ಸನ್ನದ್ಧವಾಗಿರಬೇಕೆಂದು ಶಾಸಕರು ಹಾಗೂ ಜಿಲ್ಲಾಧಿಕಾರಿ ನಿರ್ದೇಶನ ನೀಡಿದ್ದಾರೆ.

### ಕಂದವಳ್ಳಿ ಗ್ರಾಮದಲ್ಲಿ ಮನೆ ಕುಸಿತ

ಕುಮಟಾ ತಾಲೂಕಿನ ಕಂದವಳ್ಳಿ ಗ್ರಾಮದಲ್ಲಿ ನಾಗಿ ಶಿವು ಮುಕ್ರಿ ಎನ್ನುವವರ ವಾಸ್ತವ್ಯದ ಮನೆಯು ಸಂಪೂರ್ಣ ಕುಸಿದು ಬಿದ್ದು ಹಾನಿಯಾಗಿದೆ. ಮನೆ ಕಳೆದುಕೊಂಡ ಕುಟುಂಬಕ್ಕೆ ಈಗ ದಿಕ್ಕೇ ತೋಚದ ಪರಿಸ್ಥಿತಿ ಎದುರಾಗಿದ್ದು ಸಂಬಂಧಪಟ್ಟ ಇಲಾಖೆ ಸೂರು ಕಲ್ಪಿಸಿಕೊಡಬೇಕೆಂದು ಮನವಿ ಮಾಡಿದ್ದಾರೆ. ಮಳೆ-ಗಾಳಿಯಿಂದಾಗಿ ಕಲಭಾಗ ಗ್ರಾಮದಲ್ಲಿ ವಿನಾಯಕ ದತ್ತ ಕಲಭಾಗ ಎನ್ನುವವರ ವಾಸ್ತವ್ಯದ ಮನೆ ಮೇಲೆ ಅಡಿಕೆ ಮರ ಮುರಿದುಬಿದ್ದು ಭಾಗಶಃ ಹಾನಿಯಾಗಿದ್ದು ಅಂದಾಜು 20 ಸಾವಿರ ರು.ಗಳ ಹಾನಿ ಆಗಬಹುದಾಗಿದೆ ಎಂದು ಅಂದಾಜಿಸಲಾಗಿದೆ. ಸ್ಥಳಕ್ಕೆ ಕಂದಾಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಇಂದಿನಿಂದ ಸದನ ನಾಳೆಯಿಂದ ಕದನ

← ಮೊದಲಪುಟದಿಂದ

ಎರಡೂ ಪಕ್ಷಗಳು ಒಗ್ಗೂಡಿ ಸರಕಾರದ ವಿರುದ್ಧ ವಾಗ್ಬಾಣಗಳನ್ನು ಬಿಡಲಿದ್ದು, ಇದಕ್ಕೆ ಪ್ರತಿಯಾಗಿ ಆಡಳಿತಾರೂಢ ಕಾಂಗ್ರೆಸ್ ಸಹ ಪ್ರತಿಪಕ್ಷಗಳ ವಿರುದ್ಧ ತನ್ನದೇ ಆದ ಪ್ರತ್ಯಾಸ್ತ್ರಗಳನ್ನು ಸಿದ್ಧ ಮಾಡಿಕೊಂಡಿದೆ. ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಾಗಿರುವ ಲೋಪ, ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವುದು, ಬರ ನಿರ್ವಹಣೆಯಲ್ಲಿನ ವೈಫಲ್ಯ, ರೈತರ ಆತ್ಮಹತ್ಯೆ, ವರ್ಗಾವಣೆ ದಂಧೆ, ಕಾವೇರಿ ನದಿ ನೀರು ಹಂಚಿಕೆ ಬಿಕ್ಕಟ್ಟು ಸೇರಿದಂತೆ ಹತ್ತು ಹಲವು ಜ್ವಲಂತ ಸಮಸ್ಯೆಗಳನ್ನು ಸದನದಲ್ಲಿ ಪ್ರಸ್ತಾಪಿಸಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಪ್ರತಿಪಕ್ಷಗಳು ಕಾರ್ಯತಂತ್ರ ರೂಪಿಸಿದೆ. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಸಹ ಪ್ರತಿಪಕ್ಷಗಳನ್ನು ಕಟ್ಟಿಹಾಕಲು ತನ್ನದೇ ಆದ ತಂತ್ರಗಳನ್ನು ರೂಪಿಸಿದೆ.

### ಹಾಜರಿ ಪರಿಶೀಲನೆಗೆ ತಂತ್ರಜ್ಞಾನ

ಅಧಿವೇಶನಕ್ಕೆ ಹಾಜರಾಗುವ ಸಚಿವರು ಮತ್ತು ಶಾಸಕರ ಹಾಜರು ಪರಿಶೀಲನೆಗಾಗಿ ಈ ಬಾರಿ ವಿಶಿಷ್ಟ ರೀತಿಯ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಈ ತಂತ್ರಜ್ಞಾನದಿಂದಾಗಿ ಯಾರು ಎಷ್ಟು ಸಮಯ ಅಧಿವೇಶನದಲ್ಲಿ ಹಾಜರಿದ್ದರು. ದಿನಕ್ಕೆ ಎಷ್ಟು ಬಾರಿ ಅಧಿವೇ ಶನದ ಸಭಾಂಗಣಕ್ಕೆ ಬಂದು ಹೋದರು ಎಂಬ ಬಗ್ಗೆ ನಿಖರವಾದ ಮಾಹಿತಿ ದೊರೆಯಲಿದೆ.

## ಟ್ರಂಪ್‌ಗೆ ಗುಂಡಿಕ್ಕಿ ಹತ್ಯೆ ಯತ್ನ

← ಮೊದಲಪುಟದಿಂದ

ದಾಳಿ ಕೋರನ ದೇಹದ ಬಳಿ ಆಟೊಮ್ಯಾಟಿಕ್ ರೈಫಲ್ ವಶಪಡಿಸಿ ಕೊಳ್ಳಲಾಗಿದೆ. ಟ್ರಂಪ್ ಭಾಷಣ ಮಾಡುತ್ತಿ ದ್ದಾಗ ವೇದಿಕೆಯಲ್ಲಿ ಹಿಂದೆ ಸಾಲಾಗಿ ಕುಳಿತಿದ್ದ ಸಹಾಯಕರಲ್ಲಿ ಒಬ್ಬ ಮೃತಪಟ್ಟಿದ್ದು, ಇಬ್ಬರು ಗುಂಡೇಟಿನಿಂದ ಗಾಯಗೊಂಡಿದ್ದಾರೆ. ಅವರನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ.

48 ಗಂಟೆಗಳ ಕಾಲ ಕರಾವಳಿ, ಮಲೆನಾಡಿಗೆ ರೆಡ್ ಅಲರ್ಟ್

## ರಾಜ್ಯದಲ್ಲಿ ಮುಂಗಾರು ಮಳೆ ಮತ್ತಷ್ಟು ಚುರುಕು

**ಬೆಂಗಳೂರು:** ಮುಂಗಾರು ಮಳೆ ರಾಜ್ಯದಲ್ಲಿ ಮತ್ತಷ್ಟು ಚುರುಕುಗೊಂಡಿದ್ದು, ಈ ಹಿನ್ನಲೆಯಲ್ಲಿ ಕರಾವಳಿ ಮತ್ತು ಮಲೆನಾಡಿನ ಐದು ಜಿಲ್ಲೆಗಳಿಗೆ ಮುಂದಿನ 48 ಗಂಟೆಗಳ ಕಾಲಕ್ಕೆ ರೆಡ್ ಅಲರ್ಟ್ ಘೋಷಿಸಲಾಗಿದೆ.

ಕರಾವಳಿ ಜಿಲ್ಲೆಗಳಾದ ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲೆನಾಡು ಜಿಲ್ಲೆಗಳಾದ ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಿಗೆ ಜುಲೈ 15ರಂದು ರೆಡ್ ಅಲರ್ಟ್ ಘೋಷಿಸಲಾಗಿದೆ. ಇನ್ನು ಉತ್ತರ ಒಳನಾಡಿನ ಬೆಳಗಾವಿ ಜಿಲ್ಲೆಗೆ ಆರೆಂಜ್ ಅಲರ್ಟ್ ಕೊಡಲಾಗಿದೆ. ಕೊಡಗು ಜಿಲ್ಲೆಗೆ ಜುಲೈ.15ರಂದು ಯೆಲ್ಲೋ ಅಲರ್ಟ್, ಗದಗ, ಕೊಪ್ಪಳ, ಬಳ್ಳಾರಿ, ಹಾಸನ ಜಿಲ್ಲೆಗಳಿಗೆ ಎರಡೂ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಉಳಿದಂತೆ ರಾಯಚೂರು, ಬೀದರ್, ಬಾಗಲಕೋಟೆ, ಧಾರವಾಡ, ಮೈಸೂರು ಜಿಲ್ಲೆಗೆ ಯೆಲ್ಲೋ ಅಲರ್ಟ್ ಕೊಡಲಾಗಿದೆ.

ಮುಂದಿನ 48 ಗಂಟೆಗಳ ಕಾಲ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಅತಿ ಭಾರೀ ಮಳೆಯಾಗಲಿದ್ದು, ನಿರಂತರ ಗಾಳಿ ಪ್ರತಿ ಗಂಟೆಗೆ 40 ರಿಂದ 50 ಕಿ.ಮೀ ಪ್ರತಿ ಘಂಟೆಗೆ ಇರಲಿದೆ. ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಭಾರಿ ಗಾಳಿ ಮಳೆ ಆಗಲಿದೆ. ಉತ್ತರ ಒಳನಾಡಿನ ಬೆಳಗಾವಿ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಭಾರೀ ಮಳೆ ಬೀಳಲಿದೆ. ದಕ್ಷಿಣ ಒಳನಾಡಿನ ಗದಗ, ಕೊಪ್ಪಳ, ರಾಯಚೂರು, ಧಾರವಾಡ, ಹಾಸನ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಮಳೆಯಾಗಲಿದೆ. ಒಳನಾಡಿನ ಉಳಿದ ಜಿಲ್ಲೆಗಳ ಬಹುತೇಕ ಸ್ಥಳಗಳಲ್ಲಿ ಗಾಳಿಯೊಂದಿಗೆ ಹಗುರ ಮಳೆಯಾಗಲಿದೆ ಎಂದು ಹೇಳಿದೆ.

ನಗರದಲ್ಲಿ ಮೋಡ ಮುಸುಕಿದ ವಾತಾವರಣ

ಬೆಂಗಳೂರು ನಗರ ಮತ್ತು ಸುತ್ತಮುತ್ತಲೀನ ಸ್ಥಳಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಸಾಮಾನ್ಯವಾಗಿ ಮೋಡ ಕವಿದ ಆಕಾಶ ಇರಲಿದೆ. ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ನಿರಂತರ ಗಾಳಿ ಇರಲಿದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನವು ಕ್ರಮವಾಗಿ 29 ಡಿಗ್ರಿ ಮತ್ತು 21 ಡಿಗ್ರಿ ದಾಖಲಾಗಲಿದೆ.

> ನೈರುತ್ಯ ಮುಂಗಾರು ಮಾರುತಗಳು ಉತ್ತರ ಗುಜರಾತ್- ಉತ್ತರ ಕೇರಳದ ಉದ್ದಕ್ಕೂ ಇದ್ದು, ಸಮುದ್ರ ಮಟ್ಟದಲ್ಲಿ ತೀರದ ಟರ್ಫ್ ಮಹಾರಾಷ್ಟ್ರ- ಉತ್ತರ ಕೇರಳ ಕರಾವಳಿಯಲ್ಲಿ ಸಾಗುತ್ತಿದೆ. ಆದ್ದರಿಂದ ಕರಾವಳಿ ಕರ್ನಾಟಕ ಮತ್ತು ಪಕ್ಕದ ಪಶ್ಚಿಮ ಘಟ್ಟಗಳ ಜಿಲ್ಲೆಗಳಲ್ಲಿ ಬಲವಾದ ಗಾಳಿಯೊಂದಿಗೆ ಭಾರಿ ಮಳೆಯಾಗುತ್ತಿದೆ. ಸದ್ಯ ನೈರುತ್ಯ ಮಾನ್ಸೂನ್ ಕರಾವಳಿಯಲ್ಲಿ ಸಕ್ರಿಯವಾಗಿತ್ತು. ಒಳನಾಡಿನಲ್ಲಿ ಸಾಮಾನ್ಯವಾಗಿದೆ. ನಿನ್ನೆಯಿಂದ ಕರಾವಳಿಯ ಬಹುತೇಕ ಸ್ಥಳಗಳಲ್ಲಿ ಒಳನಾಡಿನ ಕೆಲವು ಸ್ಥಳಗಳಲ್ಲಿ ಮಳೆಯಾಗಿದೆ. ಅತಿ ಹೆಚ್ಚು ಮಳೆ ಉತ್ತರ ಕನ್ನಡ ಜಿಲ್ಲೆಯ ಕ್ಯಾಸಲ್ ರಾಕ್ ನಲ್ಲಿ 22 ಸೆಮೀ ಬಿದ್ದಿದೆ
>
> -ಸಿ.ಎಸ್ ಪಾಟೀಲ್,ನಿರ್ದೇಶಕ ಹವಾಮಾನ ಕೇಂದ್ರ

ಮಲೆನಾಡಿನಿಂದ ತಮಿಳುನಾಡಿಗೆ ಸೂಪರ್ ಫಾಸ್ಟ್ ರೈಲು: ರಾಘವೇಂದ್ರ ಚಾಲನೆ

## ಶಿವಮೊಗ್ಗದಿಂದ ಚೆನ್ನೈಗೆ ಹಾರಲಿದೆ ವಿಮಾನ

**ಶಿವಮೊಗ್ಗ :** ಸ್ಟೈಸ್ ಜೆಟ್ ಸಂಸ್ಥೆ ಆ.15 ರಿಂದ ಚೆನ್ನೈಗೆ ವಿಮಾನ ಸಂಚಾರ ಆರಂಭಿಸಲಿದೆ ಎಂದು ಸಂಸದ ಬಿ.ವೈ.ರಾಘವೇಂದ್ರ ತಿಳಿಸಿದರು. ನಗರದ ರೈಲ್ವೆ ನಿಲ್ದಾಣದಲ್ಲಿ ಶಿವಮೊಗ್ಗ-ಚೆನ್ನೈ ಎಕ್ಸ್ ಪ್ರೆಸ್ ರೈಲು ಸಂಚಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಚೆನ್ನೈ ವಿಮಾನ ಹಾರಾಟದ ಜತೆಗೆ ವಾರದಲ್ಲಿ ಒಂದು ದಿನ ಹೈದ್ರಾಬಾದ್ ಸೇರಿದಂತೆ ಪ್ರಮುಖ ನಗರಗಳಿಗೂ ಸ್ಟೈಸ್ ಜೆಟ್ ಹಾರಾಟ ನಡೆಸಲಿದೆ. ಶಿವಮೊಗ್ಗ ವಿಮಾನ ನಿಲ್ದಾಣ ಮಧ್ಯ ಕರ್ನಾಟಕದ ಪ್ರಮುಖ ನಿಲ್ದಾಣ ಆಗಿದೆ. ಇಲ್ಲಿ ರಾತ್ರಿ ವೇಳೆ ಇಳಿಯಲು ದೀಪ ಅಳವಡಿಸಲಾಗಿದೆ. ಅದಕ್ಕೆ ಡಿಜಿಸಿಎ ಅನುಮತಿ ಸಿಗಬೇಕು. ಕೆಲ ದಿನಗಳಲ್ಲಿ ಅನುಮತಿ ಸಿಗಲಿದೆ. ಮಂಗಳೂರು ಬಳಿಕ ರಾತ್ರಿ ವಿಮಾನ ಇಳಿಯುವ ವ್ಯವಸ್ಥೆ ಹೊಂದಿರುವ ವಿಮಾನ ನಿಲ್ದಾಣ ಮತ್ತು ಅತ್ಯಂತ ಸುರಕ್ಷಿತ ನಿಲ್ದಾಣ ಆಗಿ ಹೊರಹೊಮ್ಮಲಿದೆ ಎಂದರು.

**ಡಬ್ಲಿಂಗ್** : 1200 **ಕೋಟಿ ರು. ಪ್ರಸ್ತಾವನೆ**

ಬೀರೂರು ಮಾರ್ಗ ಡಬ್ಲಿಂಗ್ ಆಗಬೇಕು. ಆಗ ರೈಲುಗಳು ಬೇಗ ಹೋಗಬಹುದು. ಇದಕ್ಕಾಗಿ 1200 ಕೋಟಿ ಪ್ರಸ್ತಾವನೆ ಹೋಗಿದೆ. ಅನುಮತಿ ಶೀಘ್ರವೇ ಸಿಗುವ ನಿರೀಕ್ಷೆ ಇದೆ ಎಂದರು. ತಾಳಗುಪ್ಪದಿಂದ ಕೊಂಕಣ ರೈಲ್ವೆ ಸಂಪರ್ಕ ಕಲ್ಪಿಸಲು ಅರಣ್ಯ ಸಮಸ್ಯೆ ಇದೆ. ಹಾಗಾಗಿ ಬೀರೂರು, ಹಾಸನ, ಮಂಗಳೂರು ಸಂಪರ್ಕ ಪ್ರಸ್ತಾವನೆ ಹೋಗಿದೆ. ಶಾಸಕರಾದ ಶಾರದಾ ಪೂರ್ಯನಾಯ್ಕ, ಡಿ.ಎಸ್.ಅರುಣ್, ಡಾ.ಧನಂಜಯ ಸರ್ಜಿ, ಪಿಸಿಸಿಎಂ ಫಣೀಶ್ ಶಾಸ್ತ್ರಿ ಇತರರು ಇದ್ದರು.

ಶಿವಮೊಗ್ಗದಿಂದ ಚೆನ್ನೈಗೆ ಸೂಪರ್ ಫಾಸ್ಟ್ ರೈಲಿಗೆ ಸಂಸದ ಬಿ.ವೈ ರಾಘವೇಂದ್ರ ಹಸಿರು ನಿಶಾನೆ ತೋರಿದರು.

### ರೈಲಿನ ವೇಳಾಪಟ್ಟಿ

ಚೆನ್ನೈನಿಂದ ಪ್ರತಿ ಶುಕ್ರವಾರ ರಾತ್ರಿ 11:30 ಕ್ಕೆ (12691/12692) ಸಂಖ್ಯೆಯ ರೈಲು ಹೊರಡುತ್ತದೆ. ಮರುದಿನ ಮಧ್ಯಾಹ್ನ 11:35 ಕ್ಕೆ ಶಿವಮೊಗ್ಗಕ್ಕೆ ಆಗಮಿಸಲಿದೆ. ಸಂಜೆ 5:30ಕ್ಕೆ ಹೊರಡುವ ರೈಲು ಮರುದಿನ ಬೆಳಗಿನಜಾವ 4:55ಕ್ಕೆ ಚೆನ್ನೈನ ಎಂಜಿಆರ್ ನಿಲ್ದಾಣ ತಲುಪಲಿದೆ. ಈ ರೈಲು ಬಂಗಾರಪೇಟೆ, ಜೋಲಾರ್ ಪೇಟೆ ಮತ್ತು ಕಾಟ್ಪಾಡಿ ಜಂಕ್ಷನ್ ಮೂಲಕ ಚಲಿಸುತ್ತದೆ. ಸದ್ಯಕ್ಕೆ ಇದು ಪ್ರಾಯೋಗಿಕವಾಗಿ ಪ್ರಾರಂಭವಾಗಿದೆ.

ಮೃತರ ಕುಟುಂಬದವರಿಗೆ ಬೊಮ್ಮಾಯಿ ಸಾಂತ್ವನ

## ಅಪಘಾತ: ಮೃತರ ಸಂಖ್ಯೆ 5ಕ್ಕೆ ಏರಿಕೆ

**ಹಾವೇರಿ:** ಜಿಲ್ಲೆಯ ಶಿಗ್ಗಾವಿ ಹತ್ತಿರ ಶನಿವಾರ ಸಂಭವಿಸಿದ ಕಾರು ಡಿಕ್ಕಿ ಪ್ರಕರಣದಲ್ಲಿ ಸಾವನ್ನಪ್ಪಿದವರ ಸಂಖ್ಯೆ ಐದಕ್ಕೇರಿದೆ. ಮೃತರ ಗ್ರಾಮಕ್ಕೆ ತೆರಳಿದ ಸಂಸದ ಬಸವರಾಜ ಬೊಮ್ಮಾಯಿ ಅವರು ಕುಟುಂಬದವರಿಗೆ ಸಾಂತ್ವನ ಹೇಳಿದ್ದಾರೆ.

ಶನಿವಾರ ಬೆಳಗ್ಗೆ ಚಾಲಕನ ನಿಯಂತ್ರಣ ತಪ್ಪಿ ರಸ್ತೆಪಕ್ಕದ ಮರಕ್ಕೆ ಕಾರು ಡಿಕ್ಕಿ ಹೊಡೆದಿತ್ತು. ಸ್ಥಳದಲ್ಲಿ ಓರ್ವ ಸಾವನ್ನಪ್ಪಿದರೆ, ಶಿಗ್ಗಾವಿ ಆಸ್ಪತ್ರೆಯಲ್ಲಿ ಮತ್ತೊಬ್ಬ ಅಸುನೀಗಿದ್ದ. ತೀವ್ರವಾಗಿ ಗಾಯಗೊಂಡಿದ್ದ ಐವರನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಅಲ್ಲಿಯೂ ಸಹ ಚಿಕಿತ್ಸೆ ಫಲಕಾರಿಯಾಗದೆ ಮತ್ತಿಬ್ಬರು ಸಾವನ್ನಪ್ಪಿದ್ದರು. ಭಾನುವಾರ ಬೆಳಗ್ಗೆ ಮತ್ತೊಬ್ಬ ಗಾಯಾಳು ಮೃತಪಟ್ಟಿದ್ದರಿಂದ ಸಾವಿನ ಸಂಖ್ಯೆ ಐದಕ್ಕೇರಿದಂತಾಗಿದೆ. ಸವಣೂರು ತಾಲೂಕಿನ ಏಳು ಸ್ನೇಹಿತರು ಬೆಳಗಾವಿ ಜಿಲ್ಲೆ ಖಾನಾಪುರ ತಾಲೂಕಿನ ನಂದಗಡಕ್ಕೆ ತೆರಳುತ್ತಿದ್ದರು. ಮತ್ತೊಂದು ವಾಹನವನ್ನು ಓವರ್‌ಟೇಕ್ ಮಾಡಲು ಹೋದ ಚಾಲಕನ ನಿಯಂತ್ರಣ ತಪ್ಪಿ ಕಾರು ಬೇವಿನಮರಕ್ಕೆ ಡಿಕ್ಕಿಯಾಗಿ ದುರಂತ ಸಂಭವಿಸಿತ್ತು.

### ಸಂಸದರಿಂದ ವೈಯಕ್ತಿಕ ನೆರವು

ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಭಾನುವಾರ ಅಪಘಾತ ನಡೆದ ಸ್ಥಳಕ್ಕೆ ಭೇಟಿನೀಡಿ, ಅಧಿಕಾರಿಗಳ ಜೊತೆ ಚರ್ಚಿಸಿದರು. ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದಾರೆ. ನಂತರ ಮೃತರ ಗ್ರಾಮಕ್ಕೆ ತೆರಳಿದ ಬೊಮ್ಮಾಯಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದ್ದಾರೆ. ಮೃತ ಕುಟುಂಬಸ್ಥರಿಗೆ ವೈಯಕ್ತಿಕವಾಗಿ ನೆರವು ನೀಡಿದ್ದಾರೆ.

## 11000 ಬದಲಿಗೆ 8000 ಕ್ಯು ನೀರು ಬಿಡಲು ತೀರ್ಮಾನ

← ಮೊದಲಪುಟದಿಂದ

ಆದರೆ ಈ ಹಂತದಲ್ಲಿ ಮಧ್ಯಪ್ರವೇಶಿಸಿದ ಕಾವೇರಿ ನದಿ ವಿವಾದದಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಮೋಹನ್ ಕಾತರಕಿ, ಸಮಿತಿ ಒಂದು ಟಿಎಂಸಿ ನೀರನ್ನು ಬಿಡುಗಡೆ ಮಾಡಲು ಹೇಳಿದೆ. ಆದರೆ ಅದರ ಬದಲಿಗೆ ಎಂಟು ಸಾವಿರ ಕ್ಯುಸೆಕ್ ನೀರನ್ನು ಬಿಡುವುದು ಸೂಕ್ತ. ಇದರಿಂದ ಮುಂದೆ ನ್ಯಾಯಾಲಯದಲ್ಲಿ ಆದೇಶದಷ್ಟು ನೀರು ಬಂದಿಲ್ಲ ಎನ್ನುವ ವಾದವನ್ನು ತಮಿಳುನಾಡು ಮಂಡಿಸಿದರೂ, ವಾದಿಸಲು ನಮಗೆ ಅವಕಾಶವಿರುತ್ತದೆ ಎಂದು ಸಲಹೆ ನೀಡಿದರು. ಆದ್ದರಿಂದ ಈ ಸಲಹೆಯನ್ನು ನಾಯಕರು ಒಪ್ಪಿಕೊಂಡಿದ್ದಾರೆ.

**ಎಂಟು ಸಾವಿರ ಕ್ಯುಸೆಕ್ ಬಿಡುಗಡೆ: ಸಿಎಂ**

ಸರ್ವಪಕ್ಷ ಸಭೆಯ ಬಳಿಕ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕಬಿನಿಯಿಂದ ತಮಿಳುನಾಡಿಗೆ ನಿತ್ಯ 8,000 ಕ್ಯುಸೆಕ್ ನೀರು ಬಿಡುಗಡೆ ಮಾಡಲು ಸರ್ವಪಕ್ಷ ಸಭೆಯಲ್ಲಿ ಒಮ್ಮತದ ತೀರ್ಮಾನವಾಗಿದೆ. ಸಭೆಯಲ್ಲಿ ವಸ್ತುಸ್ಥಿತಿಯ ವಿವರಣೆ ಕೊಟ್ಟಿದ್ದೇವೆ. ರಾಜ್ಯ ಜಲ ವಿವಾದ ಕಾನೂನು ತಂಡದ ಮುಖ್ಯಸ್ಥ ಮೋಹನ್ ಕಾತರಕಿ, ಎಜಿ ಶಶಿಕಿರಣ್ ಶೆಟ್ಟಿಯವರು ಭಾಗವಹಿಸಿದ್ದರು. ಈಗ ಕಬಿನಿಯಿಂದ ನಿತ್ಯ 13,000 ಕ್ಯುಸೆಕ್ ನೀರು ಹೋಗುತ್ತಿದೆ. ಅದರ ಬದಲು ನಿತ್ಯ 8000 ಕ್ಯುಸೆಕ್ಸ್ ನೀರು ಬಿಡೋಣ. ಮಳೆ ಬಾರದಿದ್ದರೆ ನೀರು ಬಿಡುವ ಪ್ರಮಾಣ ಕಡಿಮೆ ಮಾಡೋಣ. ಇದರೊಂದಿಗೆ ಸಮಿತಿ ನೀಡಿರುವ ಶಿಫಾರಸ್ಸನ್ನು ಕಾವೇರಿ ನೀರು ಪ್ರಾಧಿಕಾರದಲ್ಲಿ ಪ್ರಶ್ನಿಸಲು ತೀರ್ಮಾನಿಸಲಾಗಿದೆ ಎಂದರು.

ಸದ್ಯದ ಪರಿಸ್ಥಿತಿಯಲ್ಲಿ ನಿತ್ಯ ಒಂದು ಟಿಎಂಸಿ ನೀರು ಬಿಡಲಾಗುವುದಿಲ್ಲ. 24 ತಾಸು 11,500 ಕ್ಯುಸೆಕ್ ನೀರು ಬಿಟ್ಟರೆ ಒಂದು ಟಿಎಂಸಿ ನೀರಾಗುತ್ತೆ. ಹೀಗಾಗಿ ನಿತ್ಯ 8,000 ಕ್ಯುಸೆಕ್ ನೀರು ಬಿಡಲು ತೀರ್ಮಾನ ಮಾಡಲಾಗಿದೆ. ಜೂನ್ ತಿಂಗಳು ತಮಿಳುನಾಡಿಗೆ 9.14 ಟಿಎಂಸಿ ನೀರು ಬಿಡುಗಡೆ ಮಾಡಬೇಕಾಗಿತ್ತು. ಜುಲೈನಲ್ಲಿ 31.24 ಟಿಎಂಸಿ ನೀರು ಬಿಡುಗಡೆ ಮಾಡಬೇಕಾಗಿದೆ. ಒಟ್ಟು 40.43 ಟಿಎಂಸಿ ನೀರು ಬಿಡುಗಡೆ ಮಾಡಬೇಕು. ಈವರೆಗೆ ನಾವು 5 ಟಿಎಂಸಿಗೂ ಅಧಿಕ ನೀರು ಬಿಡುಗಡೆ ಮಾಡಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಕಬಿನಿ ಶೇ.96ರಷ್ಟು ಭರ್ತಿಯಾಗಿದೆ. ಹಾರಂಗಿ ಶೇ.76, ಹೇಮಾವತಿ ಶೇ.56, ಕೆಆರ್‌ಎಸ್‌ನಲ್ಲಿ ಶೇ.54ರಷ್ಟು ನೀರು ಭರ್ತಿಯಾಗಿದೆ. ಒಟ್ಟು ನಾಲ್ಕು ಅಣೆಕಟ್ಟಿನಲ್ಲಿ ಶೇ.63ರಷ್ಟು ಮಾತ್ರ ನೀರು ಭರ್ತಿಯಾಗಿದೆ. ಐದು ಸಾವಿರ ಕ್ಯುಸೆಕ್ ನೀರು ಕಬಿನಿಗೆ ಒಳಹರಿವು ಬರುತ್ತಿತ್ತು. ಅಷ್ಟು ನೀರನ್ನು ತಮಿಳುನಾಡಿಗೆ ಬಿಡುತ್ತಿದ್ದೆವು. ಈಗ ಕಬಿನಿಗೆ ಜು.12ರಂದು 20,000 ಕ್ಯುಸೆಕ್ ಒಳಹರಿವು ಇತ್ತು. ಜುಲೈ 13ರಂದು 19,000 ಕ್ಯುಸೆಕ್ ನೀರು ಒಳಹರಿವು ಹೆಚ್ಚಾಗಿದೆ. ಭಾನುವಾರವೂ 13,000 ಕ್ಯುಸೆಕ್ ನೀರು ಹರಿದು ಹೋಗಿದೆ. ಜಲಾಶಯದ ಸುರಕ್ಷತೆ ಹಿನ್ನಲೆ ಶೇಖರಣೆ ಮಾಡಲು ಸಾಧ್ಯವಾಗದ ನೀರನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದರು.

ಸರ್ವಪಕ್ಷ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ಚಲವಾದಿ ನಾರಾಯಣಸ್ವಾಮಿ, ಸಂಸದ ಯದುವೀರ್, ಸಿ.ಟಿ.ರವಿ, ಜಿ.ಟಿ.ದೇವೇಗೌಡ, ವಿಧಾನ ಪರಿಷತ್ ಸದಸ್ಯ ಬೋಜೇಗೌಡ, ಶರವಣ, ಸಚಿವ ಜಿ.ಪರಮೇಶ್ವರ್, ಕೆ.ಎಚ್.ಮುನಿಯಪ್ಪ, ಚಲುವರಾಯಸ್ವಾಮಿ ಸೇರಿದಂತೆ ಹಲವರಿದ್ದರು.

ಇದರೊಂದಿಗೆ ಕಾವೇರಿ ಜಲಾನಯನ ಪ್ರದೇಶದ ಶಾಸಕರು, ಸರಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯೆಲ್, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ಜಲ ಸಂಪನ್ಮೂಲ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಸುಪ್ರೀಂ ಕೋರ್ಟ್ ಹಿರಿಯ ವಕೀಲ ಮೋಹನ್ ಕಾತರಕಿ, ಅಡ್ವೋಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, ನೀರಾವರಿ ಹಾಗೂ ಕಾನೂನು ತಜ್ಞರು ಮತ್ತು ಹಿರಿಯ ಅಧಿಕಾರಿಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಪದವಿ ಪರೀಕ್ಷೆಯಲ್ಲಿ ಅನುತ್ತೀರ್ಣ: ಆತ್ಮಹತ್ಯೆ

**ಶಿವಮೊಗ್ಗ:** ಪದವಿ ಸೆಮಿಸ್ಟರ್ ಪರೀಕ್ಷೆಯ ಇಂಗ್ಲಿಷ್ ವಿಷಯದಲ್ಲಿ ಅನುತ್ತೀರ್ಣನಾಗಿದ್ದಕ್ಕೆ ಬೇಸತ್ತ

ವಿದ್ಯಾರ್ಥಿ ಯೊಬ್ಬ ಕಳೆನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಾಗರ ತಾಲೂಕಿನ ಆಡೂರಿನಲ್ಲಿ ನಡೆದಿದೆ. ಆನಂದಪುರ ಸಮೀಪದ ಆಡೂರು ಗ್ರಾಮದ ಮನುಷ್. ಡಿ(19) ಮೃತ ವಿದ್ಯಾರ್ಥಿ. ರಿಪ್ಪನ್ ಪೇಟೆ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಮನುಷ್, ಇತ್ತೀಚೆಗೆ ನಡೆದ ಡಿಗ್ರಿ ಸೆಮಿಸ್ಟರ್ ಪರೀಕ್ಷೆ ಯಲ್ಲಿ ಇಂಗ್ಲಿಷ್ ವಿಷಯದಲ್ಲಿ ಅನುತ್ತೀರ್ಣನಾಗಿದ್ದ. ಇದರಿಂದ ಮನನೊಂದ ಯುವಕ ಶುಕ್ರವಾರ ವಿಷ ಸೇವಿಸಿದ್ದ. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾನೆ.

## ಟ್ವೀಟೂ-ಖಾರಾ

**ಕಾಂಗ್ರೆಸ್ ಪಕ್ಷ, ದೆಹಲಿ**

**ಉತ್ತರಪ್ರದೇಶದಲ್ಲಿ ಜಂಗಲ್ ರಾಜ್.. ಜಾಲೌನ್‌ನಲ್ಲಿ ಪೊಲೀಸ್ ವಶದಲ್ಲಿದ್ದ ವ್ಯಕ್ತಿಯೊಬ್ಬ ತೀವ್ರ ಹಲ್ಲೆಯ ಕಾರಣ ಮೃತಪಟ್ಟಿದ್ದಾನೆ. ಆತನ ದೇಹದ ಮೇಲಿನ ಹೊಡೆತದಿಂದಾದ ಗಂಭೀರ ಗಾಯಗಳ ಗುರುತುಗಳು ಪೊಲೀಸ್ ಕ್ರೂರತೆಯ ಕಥೆಯನ್ನು ಹೇಳುತ್ತಿವೆ. ಇದು ಬಿಜೆಪಿಯ ಜಂಗಲ್‌ರಾಜ್‌ಗೆ ಸಾಕ್ಷಿಯಾಗಿದೆ.**

**ರೇಖಾ ಚೌಬೆ**
**ದೆಹಲಿ**

**ಕಾಂಗ್ರೆಸ್ ಪಕ್ಷದ ಮನಃಸ್ಥಿತಿ ದೇಶವಷ್ಟೇ ಅಲ್ಲ, ಇಡೀ ವಿಶ್ವಕ್ಕೆ ಗೊತ್ತು. ಅದರ ಮನಃಸ್ಥಿತಿ ಜನಸಾಮಾನ್ಯರ ವಿರುದ್ಧವಿದೆ. 1947ರ ಹತ್ಯಾಕಾಂಡ, 1984ರ ಸಿಖ್ ವಿರೋಧಿ ಹಿಂಸಾಚಾರ, 1990ರಲ್ಲಿ ಕಾಶ್ಮೀರಿ ಪಂಡಿತರ ಮೇಲಿನ ದಾಳಿ, ದೌರ್ಜನ್ಯ ಮತ್ತು ಕಾಶ್ಮೀರದಿಂದ ಅವರು ಪಲಾಯನ ಮಾಡಬೇಕಾದ ಪರಿಸ್ಥಿತಿ- ಇವೆಲ್ಲವೂ ಕಾಂಗ್ರೆಸ್ ಆಡಳಿತದ ಅವಧಿಯಲ್ಲೇ ನಡೆದಿವೆ.**

## ಸಮಾಚಾರ ಸಣ್ಣದಲ್ಲ

### ತೊಣಸಿಗೆರೆ ಗ್ರಾಮಕ್ಕೆ ನುಗ್ಗಿದ ಕರಡಿ ಸೆರೆ

**ಬಳ್ಳಾರಿ:** ತಾಲೂಕಿನ ಗೊಲ್ಲಲಿಂಗಮ್ಮನಹಳ್ಳಿ ಗ್ರಾ.ಪಂ. ವ್ಯಾಪ್ತಿಯ ತೊಣಸಿಗೆರೆ ಗ್ರಾಮದೊಳಗೆ ನುಗ್ಗಿ ಆತಂಕ ಸೃಷ್ಟಿಸಿದ್ದ ಕರಡಿಯನ್ನು ಅರಣ್ಯ ಇಲಾಖೆಯವರು ಸೆರೆಹಿಡಿದಿದ್ದಾರೆ. ಈಗ್ಗೆ ಮೂರ್ನಾಲ್ಕು ದಿನಗಳಿಂದ ಕರಡಿ ಗ್ರಾಮಸ್ಥರಿಗೆ ಕಾಟ ಕೊಡುತ್ತಿತ್ತು. ಊರ ಮಧ್ಯೆ ಬಂದು ಮನೆಗಳಲ್ಲಿ ಇಟ್ಟಿದ್ದ ಅಡುಗೆಎಣ್ಣೆ ಕುಡಿದು ಸಾಮಾನುಗಳನ್ನು ಚೆಲ್ಲಾಪಿಲ್ಲಿ ಮಾಡುತ್ತಿದೆ ಎಂದು ದೂರುಗಳು ಬಂದಿದ್ದವು. ಅರಣ್ಯ ಸಿಬ್ಬಂದಿ ಹುಡುಕಾಟ ನಡೆಸಿದ್ದರೂ ಕರಡಿ ಪತ್ತೆಯಾಗಿರಲಿಲ್ಲ. ಭಾನುವಾರ ಬೆಳಗಿನಜಾವ ಗಂಗಮ್ಮ ಎಂಬುವವರ ಹೋಟೆಲ್‌ಗೆ ನುಗ್ಗಿದೆ. ಜನರು ಕೂಗಾಡಿದಾಗ ಇಲ್ಲಿನ ಶಾಲೆಯ ಆವರಣದಲ್ಲಿ ಸೇರಿಕೊಂಡಿದೆ. ನಂತರ ಅರಣ್ಯ ಇಲಾಖೆಯವರು ಗ್ರಾಮಸ್ಥರ ಸಹಾಯದಿಂದ ಕರಡಿಯನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

### ಬೈಕ್‌ಗೆ ಕಾರು ಡಿಕ್ಕಿ: ಇಬ್ಬರ ಸಾವು

**ಚಿತ್ರದುರ್ಗ:** ಬೈಕ್‌ಗೆ ಕಾರು ಡಿಕ್ಕಿಹೊಡೆದ ಪರಿಣಾಮ ಸ್ಥಳದಲ್ಲೇ ಇಬ್ಬರು ಬೈಕ್ ಸವಾರರು ಸಾವನ್ನಪ್ಪಿದ ಘಟನೆ ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕಿನ ಬೋಕಿಕೆರೆ ಗ್ರಾಮದಲ್ಲಿ ನಡೆದಿದೆ. ಚಿಕ್ಕಮಗಳೂರು ಜಿಲ್ಲೆ ಸಿದ್ದಾಪುರದ ಪ್ರವೀಣ್ (26) ಹಾಗೂ ಹೊಸದುರ್ಗ ತಾಲೂಕಿನ ಕಡಿವಾಣಕಟ್ಟೆಯ ಯೋಗೀಶ್ (27) ಮೃತ ದುರ್ದೈವಿಗಳು. ಹೊಸದುರ್ಗದಿಂದ ಸಿದ್ದಾಪುರಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ.

### ಜಿಂಕೆ ಬೇಟೆ: ಮೂವರ ಬಂಧನ

**ಧಾರವಾಡ:** ಕಲಘಟಗಿ ವ್ಯಾಪ್ತಿಯಲ್ಲಿ ಜಿಂಕೆ ಬೇಟೆಯಾಡಿದ ಮೂವರು ಆರೋಪಿಗಳನ್ನು ಅರಣ್ಯಾಧಿಕಾರಿಗಳು ಬಂಧಿಸಿದ್ದಾರೆ. ಬಂಧಿತ ಆರೋಪಿಗಳು ರೈತರಾಗಿದ್ದು, ನಾಯಿಗಳ ಸಹಾಯದಿಂದ ಜಿಂಕೆಯನ್ನು ಬೇಟೆಯಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅರಣ್ಯಾಧಿಕಾರಿಗಳು ವಾಹನಗಳನ್ನು ಪರಿಶೀಲಿಸಿದಾಗ ಜಿಂಕೆಮಾಂಸ ಪತ್ತೆಯಾಗಿದೆ. ಅರಣ್ಯಾಧಿಕಾರಿ ಅರುಣ್‌ಕುಮಾರ್ ಮಾತನಾಡಿ, ಶುಕ್ರವಾರ ಕಂಡ್ಲಿ ಗ್ರಾಮ ಅರಣ್ಯ ಪ್ರದೇಶದಲ್ಲಿ ದಾಳಿ ನಡೆಸಲಾಗಿತ್ತು. ಈ ವೇಳೆ ವಾಹನದಲ್ಲಿದ್ದ ಜಿಂಕೆ ಮಾಂಸ- ಕಾಲುಗಳನ್ನು ವಶಪಡಿಸಿಕೊಳ್ಳಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ ಇನ್ನೂ ಮೂವರು ಆರೋಪಿಗಳಿಗಾಗಿ ಹುಡುಕಾಟ ಮುಂದುವರೆದಿದೆ.

ವಿರಾಮ
ಪ್ರತಿ ಭಾನುವಾರ

{ಜಗದೀಶ್ ಶೆಟ್ಟರ್} ಸಂಸದ

ಭ್ರಷ್ಟಾಚಾರದ ವಿಚಾರದಲ್ಲಿ ಜಾತಿ ತರಲೇಬಾರದು. ಭ್ರಷ್ಟಾಚಾರ, ಹಗರಣಕ್ಕೆ ಜಾತಿ ಸಂಬಂಧ ಇರಲ್ಲ. ಪ್ರಧಾನಿ ನರೇಂದ್ರ ಮೋದಿ ಹಿಂದುಳಿದ ವರ್ಗದಿಂದ ಬಂದವರು. ಅವರ ವಿರುದ್ಧ ಕಾಂಗ್ರೆಸ್ ಹೋರಾಟ ಮಾಡಲಿಲ್ಲವೇ? ಅವರ ವಿರುದ್ಧ ಎಷ್ಟು ಆರೋಪ ಮಾಡಿದರು. ಈಗ ಭ್ರಷ್ಟಾಚಾರ ಆರೋಪ ಬಂದೊಡನೆ ಹಿಂದುಳಿದ ವರ್ಗದ ಲೇಬಲ್ ಹಚ್ಚಿಕೊಳ್ಳುತ್ತಿದ್ದಾರೆ.

ಪ್ರತಿಪಕ್ಷಗಳ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಸಿದ್ಧಪಡಿಸಿ: ಸಿಎಂ ಸಿದ್ದರಾಮಯ್ಯ ಸೂಚನೆ

# ಸದನದಲ್ಲಿ ಶಾಸಕರ ಹಾಜರಿ ಕಡ್ಡಾಯ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಸೋಮವಾರದಿಂದ ಆರಂಭವಾಗಲಿರುವ ವಿಧಾನಮಂಡಲ ಅಧಿವೇಶನದ ಪೂರ್ವಭಾವಿಯಾಗಿ ಹಿರಿಯ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ನಡೆಸಿ, ಸದನದಲ್ಲಿ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು ಹಾಗೂ ಪ್ರತಿಪಕ್ಷಗಳ ಪ್ರಶ್ನೆಗೆ ಸಮರ್ಪಕ ಉತ್ತರ ಸಿದ್ಧಪಡಿಸ ಬೇಕು ಎಂದು ಸೂಚನೆ ನೀಡಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಎಲ್ಲ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳ ಸಭೆ ನಡೆಸಿದರು. ಈ ವೇಳೆ ಸದನದಲ್ಲಿ ಎದುರಾಗುಬಹುದಾದ ಪ್ರಶ್ನೆಗಳು, ಇಲಾಖೆವಾರು ದತ್ತಾಂಶ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದರು.

ಸೋಮವಾರ ಪ್ರಾರಂಭವಾಗುವ ವಿಧಾನ ಮಂಡಲ ಅಧಿವೇಶನದಲ್ಲಿ ಚರ್ಚೆಯಾಗುವ ವಿಷಯಗಳಿಗೆ ಸಮರ್ಪಕ ಉತ್ತರ ನೀಡಲು ಸಿದ್ಧರಾಗಿರಬೇಕು. ಅಧಿವೇಶನದಲ್ಲಿ ಕಾರ್ಯದರ್ಶಿಗಳು ಖುದ್ದು ಹಾಜರಿದ್ದು, ಸಚಿವರಿಗೆ ತಮ್ಮ ಇಲಾಖೆಗಳ ವಿಷಯಗಳ ಕುರಿತ ಮಾಹಿತಿ ಒದಗಿಸಬೇಕು ಎಂದು ಸೂಚನೆ ನೀಡಿದ್ದಾರೆ.

ಈ ಬಾರಿ ಸಂಪೂರ್ಣ ಬಜೆಟ್‌ಗೆ ಮಾರ್ಚ್‌ನಲ್ಲಿಯೇ ಅನುಮೋದನೆ ದೊರೆತಿರುವ ಕಾರಣ ಇದು ಬಜೆಟ್ ಬಗ್ಗೆ ಚರ್ಚಿಸುವ ಅಧಿವೇಶನವಲ್ಲ. ಸಾಮಾನ್ಯವಾಗಿ ಮಾರ್ಚ್‌ನಲ್ಲಿ ಲೇಖಾನುದಾನ ಪಡೆದು, ಮಳೆಗಾಲದ ಅಧಿವೇಶನದಲ್ಲಿ ಪೂರ್ಣ ಬಜೆಟ್‌ಗೆ ಅನುಮೋದನೆ ಪಡೆಯಲಾಗುತ್ತಿತ್ತು. ಈ ಬಾರಿ ಪೂರ್ಣ ಬಜೆಟ್ ಅನುಮೋದನೆಯಾಗಿರುವ ಹಿನ್ನೆಲೆಯಲ್ಲಿ ಪ್ರತಿಪಕ್ಷದವರು ಈ ಬಾರಿಯ ಸಂಪೂರ್ಣ ಅಧಿವೇಶನವನ್ನು ವಿವಿಧ ಆರೋಪ ಮಾಡುವ ಕುರಿತು ಬಳಸಿಕೊಳ್ಳುವ ಸಾಧ್ಯತೆಯಿದೆ. ಇದಕ್ಕೆ ಸೂಕ್ತ ಉತ್ತರ ನೀಡಲು ಅಧಿಕಾರಿಗಳು ಸಿದ್ಧರಾಗಿರಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಸರಕಾರದ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯೆಲ್, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಹಾಗೂ ಇತರ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳ ಸಭೆ ನಡೆಸಿದರು.

### ಸದನಕ್ಕೆ ಸರಿಯಾಗಿ ಬನ್ನಿ; ಶಾಸಕರಿಗೆ ಸೂಚನೆ

**ಈ ನಡುವೆ ಈ ಬಾರಿ ಪ್ರತಿಪಕ್ಷಗಳು ಸರಕಾರದ ವಿರುದ್ಧ ವಿವಿಧ ವಿಷಯವನ್ನು ಮುಂದಿಟ್ಟುಕೊಂಡು ಹೋರಾಟ ನಡೆಸುವ ಸಾಧ್ಯತೆಯಿರುವುದರಿಂದ, ಆಡಳಿತ ಪಕ್ಷದ ಶಾಸಕರು ಸರಿಯಾದ ಸಮಯಕ್ಕೆ ಸದನಕ್ಕೆ ಹಾಜರಾಗಬೇಕು. ಸರಕಾರ ಹಾಗೂ ಪಕ್ಷವನ್ನು ಸಮರ್ಥಿಸಿಕೊಳ್ಳುವ ಕೆಲಸವನ್ನು ಮಾಡಬೇಕು ಎಂದು ಸೂಚನೆ ನೀಡಲಾಗಿದೆ. ಪ್ರತಿಪಕ್ಷಗಳು ಸರಕಾರದ ಮೇಲೆ ಮಾಡುವ ಸುಳ್ಳು ಆರೋಪಕ್ಕೆ ತಕ್ಕ ಪ್ರತಿಕ್ರಿಯೆ ನೀಡದಿದ್ದರೆ, ಜನತೆಗೆ ಕೆಟ್ಟ ಸಂದೇಶ ರವಾನೆಯಾಗುತ್ತದೆ. ಆದ್ದರಿಂದ ಶಾಸಕರು, ಸಚಿವರು ಸರಕಾರವನ್ನು ಡಿಫೆಂಡ್ ಮಾಡಿಕೊಳ್ಳಲು ಸೂಕ್ತ ತಯಾರಿಯೊಂದಿಗೆ ಕಲಾಪಕ್ಕೆ ಹಾಜರಾಗಲು ಸೂಚನೆ ನೀಡಿದ್ದಾರೆ.**

### ಸಚಿವರಿಗೆ ಸಮರ್ಪಕ ಮಾಹಿತಿ ನೀಡಿ

**ವಿವಿಧ ಇಲಾಖೆಗಳಲ್ಲಿ ಚರ್ಚೆಗೆ ಬರುವ ಸಾಧ್ಯತೆ ಇರುವ ವಿಷಯಗಳ ಕುರಿತು ಇಲಾಖಾ ಕಾರ್ಯದರ್ಶಿಗಳಿಂದ ಮುಖ್ಯಮಂತ್ರಿಗಳು ಸವಿಸ್ತಾರವಾಗಿ ಮಾಹಿತಿ ಪಡೆದರು. ಚರ್ಚೆಯ ಸಾಧ್ಯತೆ ಇರುವ ವಿಷಯಗಳ ಕುರಿತು ದತ್ತಾಂಶಗಳನ್ನು ಸಂಗ್ರಹಿಸಲು ಸಹ ಸೂಚನೆ ನೀಡಿದರು. ಎಲ್ಲ ಕಾರ್ಯದರ್ಶಿಗಳೂ, ಇಲಾಖಾ ಮುಖ್ಯಸ್ಥರು ಅಧಿವೇಶನದಲ್ಲಿ ಹಾಜರಿರಬೇಕು. ಸಚಿವರಿಗೆ ಸಮರ್ಪಕವಾಗಿ ಮಾಹಿತಿ ನೀಡಬೇಕು. ಆಯಾ ಇಲಾಖಾ ಸಚಿವರು ಚರ್ಚೆಯ ವಿಷಯಗಳಿಗೆ ಉತ್ತರಿಸಬೇಕು. ಅಗತ್ಯವಿದ್ದರೆ ನಾನು ಮಧ್ಯಪ್ರವೇಶಿಸುತ್ತೇನೆ ಎಂದು ಸಿಎಂ ತಿಳಿಸಿದರು. ನಿಮ್ಮ ಇಲಾಖೆಯ ವಿಷಯ ಇದ್ದಾಗ ಕಾರ್ಯದರ್ಶಿಗಳು ಖುದ್ದು ಹಾಜರಿದ್ದು, ಸಚಿವರಿಗೆ ಸಹಕಾರ ನೀಡಬೇಕು. ಕೇವಲ ಅಧೀನ ಅಧಿಕಾರಿಗಳನ್ನು ಕಳುಹಿಸಿ ಗೈರು ಹಾಜರಾಗುವಂತಿಲ್ಲ ಎಂದು ಸೂಚನೆ ನೀಡಿದರು.**

ಕಂದಾಯ ಇಲಾಖೆಯ ಅಧಿಕಾರಿಗಳ ವರ್ಗಾವಣೆಗೆ ಚಿಂತನೆ

# ದೀರ್ಘಕಾಲ ಒಂದೇ ಕಡೆ ಇರುವವರ ವರ್ಗಾವಣೆ?

**ಬೆಂಗಳೂರು:** ಹಲವು ವರ್ಷಗಳಿಂದ ಕಂದಾಯ ಇಲಾಖೆಯ ಆಯಕಟ್ಟಿನ ಜಾಗದಲ್ಲಿರುವ ಅಧಿಕಾರಿಗಳ ವಿರುದ್ಧ ಸಾಲು ಸಾಲು ಆರೋಪದ ಬೆನ್ನಲ್ಲೇ, ದೀರ್ಘಾವಧಿ ಒಂದೇ ಕಡೆ ಸೇವೆ ಸಲ್ಲಿಸುತ್ತಿರುವವರ ಪಟ್ಟಿ ತಯಾರಿಸಲು ಜಿಲ್ಲಾಧಿಕಾರಿಗಳಿಗೆ ರಾಜ್ಯ ಸರಕಾರ ಸೂಚನೆ ನೀಡಿದೆ.

ಕಳೆದ ವಿಧಾನಸೌಧದಲ್ಲಿ ನಡೆದ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒಗಳ ಸಭೆಯಲ್ಲಿ, ಕಂದಾಯ ಇಲಾಖೆಯಲ್ಲಿ ಹಲವು ಅಧಿಕಾರಿಗಳು ಕಳೆದ ಹಲವು ವರ್ಷಗಳಿಂದ ಒಂದೇ ಕಡೆಯಲ್ಲಿದ್ದಾರೆ. ಈ ರೀತಿ ಇರುವ ಅಧಿಕಾರಿಗಳ ವಿರುದ್ಧ ಸಾಕಷ್ಟು ದೂರುಗಳಿವೆ ಎನ್ನುವ ವಿಷಯ ಪ್ರಸ್ತಾಪವಾಗಿತ್ತು. ಈ ಹಿನ್ನಲೆಯಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದು ಐದು ವರ್ಷಕ್ಕಿಂತ ಹೆಚ್ಚು ಕಾಲ ಒಂದೇ ಕಡೆಯಿರುವ ಅಧಿಕಾರಿಗಳ ಪಟ್ಟಿ ನೀಡುವಂತೆ ಸೂಚನೆ ನೀಡಿದ್ದಾರೆ.

ಸಿಎಂ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಎಲ್ಲ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜನರ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳು ಸಕಾರಾತ್ಮಕವಾಗಿ ಮತ್ತು ಗುಣಾತ್ಮಕವಾಗಿ ಇತ್ಯರ್ಥಪಡಿಸಬೇಕು. ಜಿಲ್ಲಾ ಮಟ್ಟದಲ್ಲಿ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಯಾಗುವಂತೆ ಸಮನ್ವಯತೆ ಸಾಧಿಸುವಂತೆ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ತಮ್ಮ ಅಧೀನ ಅಧಿಕಾರಿ, ಸಿಬ್ಬಂದಿಗೆ ನಿರ್ದೇಶನ ನೀಡುವಂತೆ ಸೂಚಿಸಲಾಯಿತು.

ಕಚೇರಿಯಲ್ಲಿ ಉತ್ತಮ ಕಾರ್ಯಕ್ಷಮತೆ, ಶಿಸ್ತು ಪಾಲಿಸುವಂತೆ ಕ್ರಮ ವಹಿಸಲು ಮತ್ತು ಒಂದು ವೇಳೆ ಈ ದಿಸೆಯಲ್ಲಿ ನಿರ್ಲಕ್ಷ್ಯತೆ ತೋರಿದ ಅಧಿಕಾರಿ, ಸಿಬ್ಬಂದಿ ಮೇಲೆ ನಿಯಮಾನುಸಾರ ಸೂಕ್ತ ಶಿಸ್ತು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಯಾವುದೇ ಅಧಿಕಾರಿ, ನೌಕರರ ಬಗ್ಗೆ ಅಸಮರ್ಥತೆ ಅಥವಾ ದೂರುಗಳಿದ್ದಲ್ಲಿ ಅವರನ್ನು ವರ್ಗಾವಣೆ ಮಾಡಲು ಅಥವಾ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲು ಅಗತ್ಯವಿರುವ ಪ್ರಸ್ತಾವನೆ ಕಳುಹಿಸುವಂತೆ ಸೂಚಿಸಿದ್ದರು.

### ಆಯಕಟ್ಟಿನಲ್ಲಿ ಇರುವವರ ವರ್ಗಾವಣೆ

**ದೀರ್ಘಕಾಲ ಒಂದೇ ಕಡೆಯಲ್ಲಿ ಅಧಿಕಾರಿಗಳಿದ್ದರೆ ಅಂತವರು ಸ್ಥಳೀಯರೊಂದಿಗೆ ಕೈಜೋಡಿಸುತ್ತಾರೆ. ಇದರಿಂದ ಭ್ರಷ್ಟಾಚಾರ ಸಾಧ್ಯತೆಯಿರುತ್ತದೆ. ಆದ್ದರಿಂದ ದೀರ್ಘಾವಧಿ ಕಾರ್ಯನಿರ್ವಹಿಸುವವರ ಪಟ್ಟಿಯನ್ನು ಪಡೆದು, ಹಂತ ಹಂತವಾಗಿ ವರ್ಗಾವಣೆ ಮಾಡುವ ಲೆಕ್ಕಾಚಾರದಲ್ಲಿ ಕಂದಾಯ ಇಲಾಖೆಯಿದೆ ಎಂದು ಮೂಲಗಳು ತಿಳಿಸಿವೆ.**

- **ಐದು ವರ್ಷಕ್ಕಿಂತ ಹೆಚ್ಚು ಕಾಲ ಒಂದೆಡೆಯಿರುವವರ ಪಟ್ಟಿ ನೀಡಲು ಸೂಚನೆ**
- **ಸಾರ್ವಜನಿಕರರಿಂದ ಆರೋಪವಿರುವವರ ವರ್ಗಾವಣೆ ಮೊದಲು**

**ಅಧಿಕಾರಾವಧಿಯ ವಿವರ ಪಟ್ಟಿ ಕಳುಹಿಸಿ:** ಹಲವು ಅಧಿಕಾರಿಗಳು ಮತ್ತು ನೌಕರರು ಒಂದೇ ಕಚೇರಿ ಅಥವಾ ಒಂದೇ ಸ್ಥಳದಲ್ಲಿ ಅವಧಿ ಮೀರಿ ಕೆಲಸ ಮಾಡುತ್ತಿದ್ದು, ಇಂತಹವರ ವಿರುದ್ಧ ದೂರುಗಳನ್ನು ನೀಡಲಾಗಿದೆ. ಆದ್ದರಿಂದ ಒಂದೇ ಹುದ್ದೆ, ಸ್ಥಾನದಲ್ಲಿ ಅಥವಾ ಒಂದೇ ಸ್ಥಳದಲ್ಲಿ 5 ವರ್ಷ ಮೀರಿ ಇದ್ದಲ್ಲಿ ಮತ್ತು ಅಂತಹವರ ವಿರುದ್ಧ ದೂರುಗಳಿದ್ದಲ್ಲಿ ಅವರ ಅಧಿಕಾರಾವಧಿಯ ವಿವರಗಳೊಂದಿಗೆ ವಿವರವಾದ ಪಟ್ಟಿಯನ್ನು ಸರಕಾರಕ್ಕೆ ಕಳುಹಿಸಲು ಸೂಚಿಸಿದೆ. ಇದನ್ನು ಆದ್ಯತೆಯ ಮೇರೆಗೆ ಎಂದು ಪರಿಗಣಿಸುವಂತೆ ಪ್ರಧಾನ ಕಾರ್ಯದರ್ಶಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕೇಂದ್ರ ಸಚಿವ ರಾಮದಾಸ್ ಅಠಾವಳೆ ಹೇಳಿಕೆ

## ಸಂವಿಧಾನ ಬಲಪಡಿಸಲು ಬಂದಿದ್ದೇವೆ

**ಕೋಲಾರ:** ಹೊಸ ಸರಕಾರ ಸಂವಿಧಾನ ಬದಲಾಯಿಸಲು ಅಲ್ಲ, ಅದನ್ನು ಬಲಪಡಿಸಲು ಬಂದಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ರಾಮದಾಸ್ ಅಠಾವಳೆ ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀನಿವಾಸಪುರ ತಾಲೂಕಿನ ಮಲ್ಲಗಾನಹಳ್ಳಿಯಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿ ಅನಾವರಣ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅಠಾವಳೆ, ಎನ್‌ಡಿಎ ಸ್ಪಷ್ಟ ಬಹುಮತ ಪಡೆದಿದ್ದು ಪ್ರಧಾನಿ ಮೋದಿ ಅವರ ಜನಪ್ರಿಯತೆ ಕಡಿಮೆಯಾಗಿಲ್ಲ. ಜನಪ್ರಿಯತೆಗೆ ಧಕ್ಕೆತರಲು ರಾಜಕೀಯ ವಿರೋಧಿಗಳು ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಕಾಂಗ್ರೆಸ್ ಕಾಲದಲ್ಲಿ ಆಗದ ಅಭಿವೃದ್ಧಿ ಮೋದಿ ಆಡಳಿತದಲ್ಲಿ ಆಗಿದೆ. ಕರ್ನಾಟಕದಲ್ಲೂ ಈ ಬಾರಿ ನಮಗೆ ಉತ್ತಮ ಬೆಂಬಲ ಸಿಕ್ಕಿದೆ ಎಂದರು.

**ಸುಳ್ಳು ಪ್ರಚಾರದಿಂದ ಹಿನ್ನಡೆ:** ಮಧ್ಯಪ್ರದೇಶ, ಉತ್ತರಾಖಂಡ, ಹಿಮಾಚಲ ಎಲ್ಲೆಡೆ ಉತ್ತಮ ಮುನ್ನಡೆ ಬಂದಿದ್ದು, ಮಹಾರಾಷ್ಟ್ರದಲ್ಲಿ ಸಂವಿಧಾನ ಬದಲಾವಣೆ ಮಾಡುತ್ತಾರೆ ಎಂಬ ಸುಳ್ಳುಸುದ್ದಿ ಹರಡಿದ ಪರಿಣಾಮ ಕೊಂಚ ಹಿನ್ನಡೆ ಆಯಿತು. ಆದರೂ ಸ್ಪಷ್ಟ ಬಹುಮತದೊಂದಿಗೆ ಐದು ವರ್ಷ ಸರಕಾರ ನಿರಾತಂಕವಾಗಿ ಆಡಳಿತ ನಡೆಸಲಿದೆ. ಎನ್‌ಡಿಎ ಸರಕಾರದಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಕಾಂಗ್ರೆಸ್‌ಗೆ 99 ಸ್ಥಾನ ಲಭಿಸಿದ್ದು ಬಿಜೆಪಿಗೆ 294 ಸ್ಥಾನ ಸಿಕ್ಕಿದೆ ಎಂದು ರಾಮದಾಸ್ ಅಠಾವಳೆ ತಿಳಿಸಿದರು. ಸಂಸದ ಎಂ.ಮಲ್ಲೇಶಬಾಬು, ದಳಪತಿ ಸಿ.ಎಂ.ಆರ್. ಶ್ರೀನಾಥ್, ಜಿಲ್ಲಾಧಿಕಾರಿ ಅಕ್ರಂ ಪಾಷ, ಎಸ್ಪಿ ಬಿ.ನಿಖಿಲ್ ಇದ್ದರು.

### ಇಂಡಿಯಾ ಒಕ್ಕೂಟದಲ್ಲಿ ಒಡಕು ಸಾಧ್ಯತೆ

**ಮುಂದಿನ ದಿನಗಳಲ್ಲಿ ಇಂಡಿಯಾ ಒಕ್ಕೂಟದಲ್ಲೂ ಒಡಕು ಉಂಟಾಗಬಹುದಾದ ಸಾಧ್ಯತೆ ದಟ್ಟವಾಗಿದೆ. ಆದರೆ ಚಂದ್ರಬಾಬು ನಾಯ್ಡು, ನಿತೀಶ್ ಕುಮಾರ್, ದೇವೇಗೌಡರು, ಪವನ್ ಕಲ್ಯಾಣ್ ನಮ್ಮ ಜೊತೆಗಿದ್ದಾರೆ. ನಮ್ಮ ವಿರೋಧಿಗಳಿಗೆ ಹೆಚ್ಚಿನ ಸ್ಥಾನ ಬಂದಿರಬಹುದು. ಆದರೆ ಪ್ರಜಾಪ್ರಭುತ್ವದ ತೀರ್ಪು ಒಪ್ಪಿ ನಡೆಯುತ್ತೇವೆ. ನಮಗೆ ಹಿನ್ನಡೆಯಾಗಲು ಕಾರಣ ಕುರಿತು ಆತ್ಮಾವಲೋಕನ ಮಾಡಲಿದ್ದೇವೆ ಎಂದು ಕೇಂದ್ರ ಸಚಿವ ಅಠಾವಳೆ ಹೇಳಿದರು.**

ಭಾರತ ಕ್ರಿಕೆಟ್ ತಂಡದ ಆಟಗಾರ ಕೆ.ಎಲ್ ರಾಹುಲ್ ಮಂಗಳೂರಿನ ಐತಿಹಾಸಿಕ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರಕ್ಕೆ ಭಾನುವಾರ ಭೇಟಿ ನೀಡಿದ್ದರು. ಪತ್ನಿ ಅತಿಯಾ ಶೆಟ್ಟಿ ಜತೆ ದೇಗುಲಕ್ಕೆ ತೆರಳಿ ದೇವರ ದರ್ಶನ ಪಡೆದು ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಅರ್ಚಕ ಗೋಪಾಲಕೃಷ್ಣ ಉಪಾಧ್ಯಾಯ ಅವರು ದೇವರಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿ ರಾಹುಲ್‌ಗೆ ಪ್ರಸಾದ ನೀಡಿದರು

### ಹೂಕೋಸಿನೊಳಗೆ ಹಾವು ಪ್ರತ್ಯಕ್ಷ

**ಉಡುಪಿ:** ಫ್ರಿಡ್ಜ್‌ನೊಳಗೆ ಇಟ್ಟಿದ್ದ ಹೂಕೋಸಿನೊಳಗೆ ಹಾವಿನ ಮರಿ ಕಂಡು ಮನೆಮಂದಿ ಹೌಹಾರಿದ ಘಟನೆ ಉಡುಪಿಯಲ್ಲಿ ನಡೆದಿದೆ. ಕಾಪು ತಾಲೂಕು ಪಡುಬಿದ್ರೆಯಲ್ಲಿ ಬೇಂಗ್ರೆಯ ಮಹಿಳೆಯೋರ್ವರು ಫ್ರಿಡ್ಜ್‌ನಲ್ಲಿ ತರಕಾರಿ ಇಟ್ಟಿದ್ದರು. ಅಡುಗೆ ಮಾಡುವುದಕ್ಕಾಗಿ ಫ್ರಿಡ್ಜ್‌ನಲ್ಲಿಟ್ಟಿದ್ದ ತರಕಾರಿ ತೆಗೆದು ಕತ್ತರಿಸಲು ಮುಂದಾಗಿದ್ದಾರೆ. ಈ ವೇಳೆ ಹೂಕೋಸಿನ ಒಳಭಾಗದಿಂದ ಹಾವಿನ ಮರಿ ಹೊರಗೆ ಬರುವುದನ್ನು ಕಂಡು ಹೌಹಾರಿದ್ದಾರೆ. ಕೈಯಲ್ಲಿದ್ದ ತರಕಾರಿಯನ್ನು ಚೆಲ್ಲಾಪಿಲ್ಲಿಯಾಗಿ ಬಿಟ್ಟು ಹೊರಕ್ಕೆ ಓಡಿದ್ದಾರೆ. ಬಳಿಕ ಉರಗ ತಜ್ಞರು ಹಾವನ್ನು ರಕ್ಷಿಸಿ ಕಾಡಿಗೆ ಬಿಟ್ಟಿದ್ದಾರೆ. ಇದು ಮರಿ ಹೆಬ್ಬಾವು ಎಂದು ಉರಗ ತಜ್ಞರು ಗುರುತಿಸಿದ್ದಾರೆ.

ಗ್ರಾಮಸ್ಥರಿಗೆ ಕಲುಷಿತ ನೀರು ಪೂರೈಕೆ ಆರೋಪ

## ವಾಂತಿ-ಬೇಧಿ ಪ್ರಕರಣ: ಪಿಡಿಒ ಅಮಾನತಿಗೆ ಆದೇಶ

ಕಲುಷಿತ ನೀರು ಸೇವನೆಯಿಂದ ಅಸ್ವಸ್ಥರಾದ ಕಾಕಲವಾರ ಗ್ರಾಮಕ್ಕೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗರಿಮಾ ಪನ್ವಾರ್ ಅವರು ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

**ಯಾದಗಿರಿ:** ಜಿಲ್ಲೆಯ ಗುರುಮಠಕಲ್ ತಾಲೂಕಿನ ಕಾಕಲವಾರ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ 9 ಮಂದಿ ಅಸ್ವಸ್ಥ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ಆರೋಪದಡಿ ಗ್ರಾಮ ಪಂಚಾಯಿತಿ ಸಿಇಒ ಗರೀಮಾ ಪನ್ವಾರ್ ಆದೇಶಿಸಿದ್ದಾರೆ. ಕಾಕಲವಾರ ಗ್ರಾಮ ಪಂಚಾಯಿತಿ ಪಿಡಿಒ ಮಲ್ಲರೆಡ್ಡಿಯನ್ನು ಅಮಾನತು ಮಾಡಲಾಗಿದೆ. ಗ್ರಾಮದ ಮೂರು ಕೊಳವೆಬಾಗಳ ನೀರು ಕುಡಿಯಲು ಯೋಗ್ಯವಲ್ಲ ಎಂದು ವರದಿ ಬಂದರೂ, ಅದೇ ನೀರು ಪೂರೈಸಿದ ಪರಿಣಾಮ ಕಲುಷಿತ ನೀರನ್ನು ಸೇವಿಸಿದ 10ಕ್ಕೂ ಹೆಚ್ಚು ಜನರು ವಾಂತಿ-ಬೇಧಿಯಿಂದ ಅಸ್ವಸ್ಥರಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

ವಾಲ್ಮೀಕಿ ನಿಗಮದ ಪ್ರಕರಣ | ಜಮೀನು ಮಾರಿದ 18 ಜನರಿಗೆ ನೋಟಿಸ್

## ಹಗರಣ: ಶಾಸಕ ದದ್ದಲ್‌ಗಾಗಿ ಇ.ಡಿ ಹುಡುಕಾಟ

**ರಾಯಚೂರು:** ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಹುಡುಕಾಟದ ಮಧ್ಯೆ, ಶಾಸಕ ಹಾಗೂ ವಾಲ್ಮೀಕಿ ನಿಗಮದ ಅಧ್ಯಕ್ಷ ಬಸವನಗೌಡ ದದ್ದಲ್ ರಾಯಚೂರಿನಲ್ಲಿ ಪ್ರತ್ಯಕ್ಷರಾಗಿದ್ದು, ಬಿಳಿಕಾರಿನಲ್ಲಿ ಮಂತ್ರಾಲಯದತ್ತ ಪ್ರಯಾಣಿಸಿದ ದೃಶ್ಯ ಪತ್ತೆಯಾಗಿದೆ.

ಶನಿವಾರ ಸಂಜೆ ರಾಯಚೂರಿಗೆ ಆಗಮಿಸಿದ್ದ ದದ್ದಲ್ ಭಾನುವಾರ ಕಾರಿನಲ್ಲಿ ಮಂತ್ರಾಲಯದತ್ತ ತೆರಳಿದರು ಎಂದು ಹೇಳಲಾಗಿದೆ. ಇದಕ್ಕೆ ಸಂಬಂಧಿಸಿದ ಚಿತ್ರ ಲಭ್ಯವಾಗಿದ್ದು, ಬೆಳಗಿನಜಾವ ಬೇರೊಬ್ಬರ ಕಾರಿನಲ್ಲಿ ಮುಚ್ಚಿದ ಕಿಟಕಿಯಲ್ಲಿ ಕನ್ನಡಕಧಾರಿ ದದ್ದಲ್ ಮುಖ ಕಾಣುತ್ತಿದೆ. ಜಾರಿ ನಿರ್ದೇಶನಾಲಯ ಸೋಮವಾರ ವಿಚಾರಣೆಗೆ ಹಾಜರಾಗುವಂತೆ ಬಸವನಗೌಡ ದದ್ದಲ್‌ಗೆ ನೋಟಿಸ್ ನೀಡಿದೆ. ಇ.ಡಿ ಮುಂದೆ ದದ್ದಲ್ ಹಾಜರಾಗುತ್ತಾರೆಯೇ, ಇಲ್ಲವೇ ಎನ್ನುವ ಕುತೂಹಲ ತೀವ್ರವಾಗಿದೆ.

**ದದ್ದಲ್‌ಗೆ ಬಂಧನ ಭೀತಿ:** ಮಾಜಿ ಸಚಿವ ಬಿ. ನಾಗೇಂದ್ರ ಬಂಧನದ ನಂತರ ಬಸವನಗೌಡ ದದ್ದಲ್‌ಗೆ ಬಂಧನದ ಭೀತಿ ತೀವ್ರವಾಗಿದೆ. ದದ್ದಲ್ ತಮ್ಮ ಪುತ್ರ ತ್ರಿಶೂಲ್ ಹಾಗೂ ಪತ್ನಿಯ ಸಹೋದರಿಯ ಪುತ್ರ ಕಾರ್ತಿಕ್, ಆಂಜನೇಯ ಹಾಗೂ ಇತರರ ಹೆಸರಿನಲ್ಲಿ ಖರೀದಿಸಿದ ಜಮೀನಿಗೆ ಸಂಬಂಧಿಸಿದ ದಾಖಲೆ ಪತ್ತೆಯಾದ ಹಿನ್ನೆಲೆಯಲ್ಲಿ ವಾಲ್ಮೀಕಿ ನಿಗಮದ ಅಧ್ಯಕ್ಷರು ತೀವ್ರ ಒತ್ತಡಕ್ಕೆ ಗುರಿಯಾಗಿದ್ದಾರೆ.

**ಜಮೀನು ಮಾರಿದ ಕುಟುಂಬಕ್ಕೆ ಸಂಕಷ್ಟ:** ದದ್ದಲ್ ಮತ್ತು ಕುಟುಂಬಕ್ಕೆ ಸಂಬಂಧಿಸಿದವರಿಗೆ ಜಮೀನು ಮಾರಾಟ ಮಾಡಿದ 18 ಜನರಿಗೆ ಇ.ಡಿ. ನೋಟಿಸ್ ನೀಡಿ, ಜು. 18 ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ. ಆಶಾಪುರ ರಸ್ತೆಯಲ್ಲಿರುವ ಲಕ್ಷ್ಮೀದೇವಿ, ಜಮೀನು ಮಾರಾಟ ಮತ್ತು ಇ.ಡಿ. ವಿಚಾರಣೆಯಿಂದ ಆತಂಕಗೊಂಡಿದ್ದು, ಮಾಧ್ಯಮಗಳ ಮುಂದೆ ಕಣ್ಣೀರಿಟ್ಟ ಘಟನೆ ನಡೆಯಿತು. ನಾಲ್ಕು ಎಕರೆ ಜಮೀನು ಮಾರಾಟಕ್ಕೆ ಸಂಬಂಧಿಸಿ ಮೂರು ಚೆಕ್‌ಗಳಲ್ಲಿ ತಲಾ 25 ಲಕ್ಷ ಹಾಗೂ ಒಂದು ಚೆಕ್‌ನಲ್ಲಿ 14 ಲಕ್ಷ ರು. ಪಾವತಿಸಲಾಗಿದೆ. ಆದರೆ ಉಳಿದ 3.30 ಕೋಟಿ ರು.ಗಳನ್ನು ನಗದಾಗಿ ಪಾವತಿಸಿರುವುದು ಜಮೀನು ಮಾರಾಟ ಮಾಡಿದ ಕುಟುಂಬ ಸಂಕಷ್ಟಕ್ಕೆ ಗುರಿಯಾಗುವಂತೆ ಮಾಡಿದೆ. ಲಕ್ಷ್ಮೀದೇವಿಯನ್ನು ಭೇಟಿಯಾದ ಮಾಧ್ಯಮಗಳ ಮುಂದೆ ನಾನು ಜಮೀನು ಮಾರಾಟ ಮಾಡಿ ತಪ್ಪು ಮಾಡಿದೆ. ಈಗ ನಾನು ಈ ಪ್ರಕರಣದಲ್ಲಿ ಸಿಕ್ಕಿಕೊಳ್ಳುವಂತಾಗಿದೆ. ನನಗೆ ಮೋಸ ಮಾಡಲಾಗಿದೆ ಎಂದು ಕಣ್ಣೀರಿಟ್ಟಿದ್ದಾರೆ.

10 ಕೋಟಿ ರು. ಮೌಲ್ಯದ ಮತ್ಸ್ಯ ಉತ್ಪನ್ನ ಭಸ್ಮ

## ಮೀನು ಫ್ಯಾಕ್ಟರಿಗೆ ಬೆಂಕಿ

**ಮಂಗಳೂರು:** ಇಲ್ಲಿನ ಕೈಗಾರಿಕಾ ವಲಯದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಅಥೆಂಟಿಕ್ ಓಷನ್ ಟ್ರೆಷರ್‌ನಲ್ಲಿ ಆಕಸ್ಮಿಕ ಬೆಂಕಿ ಅವಘಡ ಭಾನುವಾರ ಮಧ್ಯಾಹ್ನ ಸಂಭವಿಸಿದೆ.

ಕಂಪನಿಯಲ್ಲಿ ದುರಸ್ತಿ ಕಾರ್ಯ ನಡೆಯುತ್ತಿರುವ ಕಾರಣ ನೌಕರರು ಯಾರೂ ಇರಲಿಲ್ಲ, ಹಾಗಾಗಿ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ ಎಂದು ಅಥೆಂಟಿಕ್ ಓಷನ್ ಟ್ರೆಷರ್‌ನ ಮೂಲವೊಂದು ಮಾಹಿತಿ ನೀಡಿದೆ. ಕಂಪನಿಯ ಕೋಲ್ಡ್ ಸ್ಟೋರ್ ಸೆಕ್ಷನ್ ಮತ್ತು ಕಟ್ಟಿಂಗ್ ಸೆಕ್ಷನ್‌ಗಳಲ್ಲಿ ದುರಸ್ತಿ ಕಾರ್ಯನಡೆಯುತ್ತಿತ್ತು. ಈ ವೇಳೆ ಕೋಲ್ಡ್ ಸ್ಟೋರೆಜ್ ಸೆಕ್ಷನ್‌ನಲ್ಲಿ ಆಕಸ್ಮಿಕವಾಗಿ ಬೆಂಕಿ ತಗುಲಿ ಅವಘಡ ಸಂಭವಿಸಿದೆ ಎಂದು ತಿಳಿದುಬಂದಿದೆ. ಘಟನೆಯಿಂದ ಸುಮಾರು 10 ಕೋಟಿ ರು. ಮೌಲ್ಯದ ಮತ್ಸ್ಯ ಉತ್ಪನ್ನಗಳು ಬೆಂಕಿಗಾಹುತಿಯಾಗಿವೆ ಎಂದು ತಿಳಿದುಬಂದಿದೆ. ಕೈಗಾರಿಕಾ ವಲಯ ಎಂಆರ್‌ಪಿಎಲ್, ಗೇಲ್ ಇಂಡಿಯಾ ಕಂಪನಿಗಳ ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿವೆ. ಅಥೆಂಟಿಕ್ ಓಷನ್ ಟ್ರೆಷರ್ ಕಂಪೆನಿಯು ಮೀನುಗಳನ್ನು ಸ್ವಚ್ಛಗೊಳಿಸಿ ಮಾಂಸದ ರೂಪಕ್ಕೆ ತಂದು ವಿದೇಶಗಳಿಗೆ ರಫ್ತು ಮಾಡುವ ಕಂಪನಿಯಾಗಿದೆ.

## ಕೃಷಿಹೊಂಡಕ್ಕೆ ಬಿದ್ದು ಪ್ರೇಮಿಗಳ ಆತ್ಮಹತ್ಯೆ

**ಚಿಕ್ಕಬಳ್ಳಾಪುರ:** ಅಂತರ್ಜಾತಿ ವಿವಾಹಕ್ಕೆ ಕುಟುಂಬಸ್ಥರು ಅಡ್ಡಿಯಾಗಿದ್ದ ಪರಿಣಾಮ ಪ್ರಿಯತಮನೊಂದಿಗೆ ವಿವಾಹಿತ ಯುವತಿ ಕೃಷಿಹೊಂಡದಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಮಿಣಹಾರ ಮುದ್ದಲಹಳ್ಳಿ ಗ್ರಾಮದಲ್ಲಿ ನಡೆದಿದೆ.

ಚೇಳೂರು ತಾಲೂಕಿನ ಪೆದ್ದಪಲ್ಲಿ ಗ್ರಾಮದ ಅನುಷಾ (19) ಹಾಗೂ ಎಂ. ಮುದ್ದಲಹಳ್ಳಿಯ ವೇಣು (21) ಆತ್ಮಹತ್ಯೆಗೆ ಶರಣಾದ ಪ್ರೇಮಿಗಳು. ಕಳೆದ ಎರಡು ವರ್ಷಗಳಿಂದ ಇಬ್ಬರೂ ಪ್ರೀತಿಸುತ್ತಿದ್ದರು. ಯುವಕ ಪರಿಶಿಷ್ಟ ಜಾತಿಗೆ ಸೇರಿದ್ದು, ಯುವತಿ ಒಕ್ಕಲಿಗ ಜಾತಿಗೆ ಸೇರಿದ್ದರಿಂದ ಅಂತರ್ಜಾತಿ ವಿವಾಹಕ್ಕೆ ಆಕೆಯ ಕುಟುಂಬದವರು ಒಪ್ಪದೆ ಒಂದು ತಿಂಗಳ ಹಿಂದೆ ಬೇರೊಬ್ಬ ಯುವಕನ ಜೊತೆ ವಿವಾಹ ಮಾಡಿದ್ದರು. ಆಷಾಢಕ್ಕೆಂದು ತವರುಮನೆಗೆ ಬಂದಿದ್ದ ಅನುಷಾ ತನ್ನ ಪ್ರಿಯಕರ ವೇಣು ಜೊತೆ ಸಂಪರ್ಕ ಇಟ್ಟುಕೊಂಡಿದ್ದಳು. ನಮ್ಮನ್ನು ಜೊತೆಯಲ್ಲಿ ಬದುಕಲು ಬಿಡುವುದಿಲ್ಲ ಎಂದು ತಿಳಿದ ಪ್ರೇಮಿಗಳು ಮಣಿಹಾರ ಮುದ್ದಹಳ್ಳಿಯ ಕೃಷಿಹೊಂಡಕ್ಕೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪತ್ರಿಕೋದ್ಯಮದ ಸೇವೆ ಗುರುತಿಸಿ ಪತ್ರಕರ್ತ ಅನಿಲ್ ಎಚ್.ಟಿ.ಗೆ ವಿಶೇಷ ಗೌರವ

## ಕೊಡಗು ವಿಶ್ವವಾಣಿ ವರದಿಗಾರನಿಗೆ ದತ್ತಿನಿಧಿ ಪ್ರಶಸ್ತಿ

**ಮಡಿಕೇರಿ:** ಕಾಸರಗೋಡು ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಸೀತಂಗೋಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಶ್ವವಾಣಿ ಪತ್ರಿಕೆಯ ಕೊಡಗು ಜಿಲ್ಲಾ ವರದಿಗಾರ ಎಚ್.ಟಿ.ಅನಿಲ್ ಅವರಿಗೆ 'ಸಮಾಜಸೇವಕ ಅಶ್ರಫ್ ಷಾ ಮಂತೂರು ದತ್ತಿನಿಧಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಕಳೆದ ಮೂರು ದಶಕದಿಂದ ಪತ್ರಿಕೋದ್ಯಮದಲ್ಲಿನ ಇವರ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಯಿತು. ಪತ್ರಕರ್ತ ಅನಿಲ್ ಈವರೆಗೆ ಅತ್ಯುತ್ತಮ ವರದಿಗಳಿಗಾಗಿ 60 ಪ್ರಶಸ್ತಿಗಳನ್ನು ಪಡೆದಿದ್ದಾರೆ. ಈ ಕಾರ್ಯಕ್ರಮದಲ್ಲಿ 16 ಪತ್ರಕರ್ತರಿಗೆ ದತ್ತಿ ಪ್ರಶಸ್ತಿಗಳನ್ನು ನೀಡಲಾಯಿತು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಗಡಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ಮಂಜೇಶ್ವರ ಶಾಸಕ ಅಶ್ರಫ್, ಕಾಸರಗೋಡು ಕನ್ನಡ ಪತ್ರಕರ್ತರ ಸಂಘದ ಅಧ್ಯಕ್ಷ ರವಿ ನಾಯ್ಕಾಪು, ಸಂಘದ ಅಧ್ಯಕ್ಷ ಅಬೂಬಕರ್ ಸುಬ್ಬಯ್ಯ ಕಟ್ಟೆ ಇದ್ದರು.

ಸೀತಂಗೋಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಶ್ವವಾಣಿ ಪತ್ರಿಕೆಯ ಕೊಡಗು ಜಿಲ್ಲಾ ವರದಿಗಾರ ಎಚ್.ಟಿ.ಅನಿಲ್ ಅವರಿಗೆ 'ಸಮಾಜಸೇವಕ ಅಶ್ರಫ್ ಷಾ ಮಂತೂರು ದತ್ತಿನಿಧಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತಿತರರು ಇದ್ದರು.

### ದತ್ತಿ ಪ್ರಶಸ್ತಿಗೆ ವಿಶ್ವೇಶ್ವರ ಭಟ್ ಭಾಜನ

**ಬ್ರಹ್ಮೈಕ್ಯ ಎಡನೀರು ಶ್ರೀ ಕೇಶವನಾಂದ ಭಾರತೀ ಸ್ವಾಮೀಜಿ ಸ್ಮರಣಾರ್ಥ ಶ್ರೀಮಠ ನೀಡುವ ದತ್ತಿ ಪ್ರಶಸ್ತಿಗೆ ಭಾಜನರಾಗಿದ್ದ 'ವಿಶ್ವವಾಣಿ' ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ ಅನಾರೋಗ್ಯದ ಕಾರಣ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರಲಿಲ್ಲ. ವಿಶ್ವೇಶ್ವರ ಭಟ್ ಶೀಘ್ರ ಆರೋಗ್ಯವಂತರಾಗಲಿ ಎಂದೂ ಸಂಘಟಕರು ಕಾರ್ಯಕ್ರಮದಲ್ಲಿ ಹಾರೈಸಿದರು.**

## ಮುಡಾ ಹಗರಣದಲ್ಲಿ ಹುರುಳಿಲ್ಲ: ಸುಧಾಕರ

**ಹುಬ್ಬಳ್ಳಿ:** ಮುಡಾ ಹಗರಣದಲ್ಲಿ ಯಾವುದೇ ಹುರುಳಿಲ್ಲ. ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯದ ಜನತೆಗೆ ತಿಳಿಸಿದ್ದಾರೆ ಎಂದು ಸಚಿವ ಡಿ. ಸುಧಾಕರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಅವರು ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಬೇರೆ ಏನೂ ಕೆಲಸವಿಲ್ಲ. ಸಿಎಂ ರಾಜಕೀಯ ಇತಿಹಾಸದಲ್ಲಿ ಕಳಂಕರಹಿತವಾಗಿ ಹೊರಗೆ ಬಂದವರು. ಅವರು ಯಾವುದೇ ಒಂದು ಜಾಗದ ವಿಚಾರದಲ್ಲಿ ಭ್ರಷ್ಟಾಚಾರ ಮಾಡಲು ಸಾಧ್ಯವಿಲ್ಲ. ಬಿಜೆಪಿಯವರು ಮಾಡುತ್ತಿರುವ ಆರೋಪ ಸರಿಯಲ್ಲ. ಸಿಎಂ ಮುಡಾ ಸರಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಬಿಜೆಪಿ ಕಾಲದಲ್ಲಿ ಹಗರಣವಾಗಿದೆ ಎಂದರು.

ವಾಲ್ಮೀಕಿ ಹಗರಣದಲ್ಲಿ ಎಸ್‌ಐಟಿ ತನಿಖೆ ವೇಳೆ ಇಡಿ ಪ್ರವೇಶ ವಿಚಾರವಾಗಿ ಪ್ರತಿಕ್ರಿಯಿಸಿ, ಈ ಕುರಿತು ತನಿಖೆ ನಡೆಯುತ್ತಿದೆ. ಇದು ಬ್ಯಾಂಕ್ ಹಾಗೂ ಕಾರ್ಪೊರೇಷನ್‌ಗೆ ಸಂಬಂಧಿಸಿದ್ದು. ನಾಗೇಂದ್ರ ಅವರ ಗಮನಕ್ಕೆ ಇದು ಬಂದಿರಲಿಲ್ಲ. ಇ.ಡಿ. ಅಥವಾ ಸಿಬಿಐಯಾದರು ವಿಚಾರಣೆ ಮಾಡಲಿ. ರಾಜ್ಯ ಸರಕಾರ ಎಸ್‌ಐಟಿ ನೇಮಕ ಮಾಡಿದೆ. ಅವರು ತನಿಖೆ ಮಾಡುತ್ತಿದ್ದಾರೆ ಎಂದರು.

ವಿಶ್ವವಾಣಿ

## ಸಂಪಾದಕೀಯ

# ಬಾಲ ಗರ್ಭಿಣಿಯರ ಹೆಚ್ಚಳ; ಸಾಮಾಜಿಕ ಪಿಡುಗು

ರಾಜ್ಯದಲ್ಲಿ ಅಪ್ರಾಪ್ತ ವಯಸ್ಸಿನಲ್ಲೇ ಗರ್ಭ ಧರಿಸುತ್ತಿರುವ ಪ್ರಕರಣಗಳು ಹೆಚ್ಚಳವಾಗುತ್ತಿದ್ದು, ಕಳೆದ ಮೂರು ವರ್ಷದಲ್ಲಿ 1,33,962 ಲಕ್ಷ ಬಾಲ ಗರ್ಭಿಣಿಯರು ಪತ್ತೆಯಾಗಿವೆ ಎಂಬ ವರದಿ ಆತಂಕ ಮೂಡಿಸಿದೆ. ಬಾಲ್ಯದಲ್ಲೇ ಗರ್ಭ ಧರಿಸಿದರೆ ಬಾಲಕಿಯರ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳು ಉಂಟಾಗುತ್ತವೆ. ಬಾಲಕಿಯರು ಗರ್ಭ ಧರಿಸಿದ ವೇಳೆ ಗರ್ಭಪಾತ, ಅವಧಿ ಪೂರ್ವ ಪ್ರಸವ, ದೈಹಿಕ ನ್ಯೂನತೆ ಹೊಂದಿರುವ ಶಿಶು ಜನನ ಸೇರಿದಂತೆ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಬಾಲ ಗರ್ಭಿಣಿಯರ ಆರೋಗ್ಯದ ಮೇಲೂ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ. ಮಗು ಜನನದ ಬಳಿಕ ಬಾಲ ಬಾಣಂತಿಯರು ರಕ್ತ ಹೀನತೆ, ಅಧಿಕ ರಕ್ತದೊತ್ತಡ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುವ ಭೀತಿ ಇದೆ. ಬಾಲ ಗರ್ಭಿಣಿಯರಿಗೆ ಜನಿಸುವ ಶಿಶುಗಳು ಅತಿ ಕಡಿಮೆ ತೂಕ ಹೊಂದಿರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಜತೆಯಲ್ಲೇ ಶಿಶುಗಳಿಗೆ ಜನನದಲ್ಲೇ ಹಲವು ಆರೋಗ್ಯ ಸಮಸ್ಯೆಗಳು ಇರುತ್ತವೆ. ಬಾಲ ಗರ್ಭಿಣಿಯರಿಗೆ ಸೂಕ್ತ ಸಮಯಕ್ಕೆ ವೈದ್ಯಕೀಯ ನೆರವು ಕೂಡ ಸಿಗುತ್ತಿಲ್ಲ. ಅವರಿಗೆ ಸೂಕ್ತ ರೀತಿಯಲ್ಲಿ ಆರೈಕೆಯನ್ನೂ ಮಾಡಲಾಗುತ್ತಿಲ್ಲ. ಮಗು ಜನಿಸಿದ ಬಳಿಕ ತಾಯಿ, ಮಗು ಎರಡಕ್ಕೂ ಸೂಕ್ತ ಸೌಲಭ್ಯ ಸಿಗುತ್ತಿಲ್ಲ. ಇನ್ನು ಬಹುತೇಕ ಸಂದರ್ಭಗಳಲ್ಲಿ ಗರ್ಭಪಾತ ಆಗುತ್ತಿದೆ. ಈ ವೇಳೆ ಕೂಡಾ ಬಾಲ ಬಾಣಂತಿಯರು ಮಾನಸಿಕ ಹಾಗೂ ದೈಹಿಕ ಆಘಾತಕ್ಕೆ ತುತ್ತಾಗುತ್ತಾರೆ. ಬಾಲ್ಯದಲ್ಲೇ ಗರ್ಭ ಧರಿಸುವ ಬಾಲಕಿಯರು ಸಹಜವಾಗಿಯೇ ತಮ್ಮ ಶಿಕ್ಷಣ ಪೂರ್ಣಗೊಳಿಸುವುದಕ್ಕೆ ಸಾಧ್ಯ ಆಗಿರುವುದಿಲ್ಲ. ಹೀಗಾಗಿ, ಅವರು ವಯಸ್ಕರಾದ ಬಳಿಕ ಒಳ್ಳೆಯ ಉದ್ಯೋಗಕ್ಕೆ ಸೇರುವುದಕ್ಕೂ ಸಾಧ್ಯವಾಗುವುದಿಲ್ಲ. ಹೀಗಾಗಿ, ಜೀವನ ಪರ್ಯಂತ ಆರ್ಥಿಕವಾಗಿಯೂ ಹಿಂದುಳಿಯುವ ಸಾಧ್ಯತೆ ಇರುತ್ತದೆ. ಬಾಲಕಿಯರು ಅಪ್ರಾಪ್ತ ವಯಸ್ಸಿನಲ್ಲೇ ಗರ್ಭ ಧರಿಸುವ ಪ್ರಕರಣಗಳು ಸಾಮಾಜಿಕ ಪಿಡುಗಾಗಿ ಪರಿವರ್ತನೆಯಾಗಿದ್ದು, ಸಮಾಜಿಕ ವ್ಯವಸ್ಥೆ ಮೇಲೂ ದುಷ್ಪರಿಣಾಮ ಬೀರುತ್ತಿದೆ. ಆದ್ದರಿಂದ ಇದಕ್ಕೆ ಕಡಿವಾಣ ಹಾಕುವಲ್ಲಿ ಸಮಾಜದ ಪ್ರತಿಯೊಬ್ಬರೂ ಶ್ರಮಿಸಬೇಕಿದೆ.

## ಸೊಂಪಾದಕೀಯ

# ಅನಿಮಲ್ ನಟನ ಮಾನವೀಯತೆ

ಚಿತ್ರರಂಗದಲ್ಲಿ ಸಿನಿಮಾ ನಟರ ಸಂಭಾವನೆ ವಿಷಯದಲ್ಲಿ ಯಾವಾಗ್ಲೂ ಚರ್ಚೆಗಳು ಆಗ್ತಾನೇ ಇರ್ತವೆ. ಅದ್ರಲ್ಲೂ ನಿರ್ಮಾಪಕರ ಕಡೆಯಿಂದ, ಅಯ್ಯೋ ಸ್ಟಾರ್ ನಟರು ಬಾಯಿಗೆ ಬಂದಂಗೆ ಸಂಭಾವನೆ ಕೇಳ್ತಾರೆ ಅನ್ನೋ ಭಾವನೆಗಳು ವ್ಯಕ್ತ ಆಗ್ತಾನೇ ಇರ್ತವೆ. ಅದು ಸಹಜ. ಯಾಕಂದ್ರೆ ಸಿನಿಮಾ ಗೆಲ್ಲೋದು, ಸೋಲೋದು ಯಾರಿಗೂ ಗೊತ್ತಿರಲ್ಲ. ಗೆದ್ದರೆ ಸರಿ. ಕೊಟ್ಟ ದುಡ್ಡಿಗೆ ರಿಟರ್ನ್ ಆಗಿ ಲಾಭ ಬರುತ್ತೆ. ಆದ್ರೆ ಹೆಚ್ಚು ಕಮ್ಮಿ ಆಗಿ ಸಿನಿಮಾ ಹೊಗೆ ಹಾಕಿಸ್ಕೊಂಡ್ರೆ, ಅಲ್ಲಿಂದ ನಟ ಮತ್ತು ನಿರ್ಮಾಪಕರ ನಡುವೆ ಹಗೆತನ ಶುರು ಆಗುತ್ತೆ. ಆದರೆ ಅಲ್ಲೊಬ್ಬರು ಇಲ್ಲೊಬ್ಬರು ನಟರು ಸಿನಿಮಾ ಸೋತಾಗ ತಮ್ಮ ಕೋಟಿಗಟ್ಟಲೆ ಸಂಭಾವನೆಯಲ್ಲಿ ಒಂದಿಷ್ಟು ಹಣ ವಾಪಸ್ ಕೊಡುವ ದೊಡ್ಡ ಮನಸ್ಸು ಹೊಂದಿರುತ್ತಾರೆ. ಅಥವಾ ಆ ನಿರ್ಮಾಪಕರ ಮುಂದಿನ ಚಿತ್ರಕ್ಕೆ ಕಾಲ್‌ಶೀಟ್ ಕೊಟ್ಟು ಕಡಿಮೆ ಸಂಭಾವನೆ ತೆಗೆದುಕೊಳ್ಳುವ ಪರಿಪಾಠವೂ ಇದೆ. ನಮ್ಮ ಕನ್ನಡದ ಅಂಬರೀಷ್ ಮತ್ತು ತಮಿಳಿನ ರಜನೀಕಾಂತ್ ಇಂಥ ನಟರುಗಳಲ್ಲಿ ಒಬ್ಬರು. ಆದರೆ ನಿರ್ಮಾಪಕ ಏನಾದ್ರೂ ಮಾಡಿಕೊಳ್ಳಲಿ, ನನ್ ದುಡ್ಡು ನಂಗ್ ಬಂದ್ ಬಿಡ್ಬೇಕು ಅನ್ನೋ ನಟರೂ ಇದ್ದಾರೆ. ಅಣ್ಣಾ, ಮೊದ್ಲೇ ಲಾಸಲ್ಲಿದ್ದೀನಿ, ಈಗ ನೀವು ಬಾಕಿ ಸಂಭಾವನೆ ಕೊಡ್ಲೇಬೇಕು ಅಂತ ಹಠ ಹಿಡಿದ್ರೆ, ನಾನು ನೇಣು ಹಾಕಿಕೊಳ್ಳಬೇಕಾಗುತ್ತೆ ಅಂತ ನಿರ್ಮಾಪಕ ಹೇಳಿದ್ರೆ, ಆಯ್ತು, ಮೊದ್ಲು ನನ್ನ ಹಣ ಕೊಟ್ಟು ಆಮೇಲೆ ನೇಣು ಹಾಕಿಕೊ ಅಂತ ಹೇಳೋ ಮಹಾನುಭಾವರೂ ಇದ್ದಾರೆ. ಆದರೆ ಮೊದಲು ಹೇಳಿದ ಅಂಬಿ, ರಜನಿ ಸಾಲಿಗೆ ಈಗ ಬಾಲಿವುಡ್ ನಟ ರಣ್‌ಬೀರ್ ಕಪೂರ್ ಸೇರಿಕೊಂಡಿದ್ದಾರೆ. ದೊಡ್ಡ ಸಿನಿಮಾ ಮಾಡುತ್ತಿರುವ ನಿರ್ಮಾಪಕರಿಗೆ ಹೆಚ್ಚಿನ ಹೊರೆ ಆಗಬಾರದು ಅನ್ನೋ ಕಾರಣಕ್ಕೆ ತಮ್ಮ ಮುಂದಿನ ಚಿತ್ರದ ಸಂಭಾವನೆಯನ್ನು ಅರ್ಧಕ್ಕರ್ಧ ಕಡಿಮೆ ಮಾಡಿಕೊಂಡಿ ದ್ದಾರೆ ರಣಬೀರ್. ಹಾಗಾಗಿ ಇತ್ತೀಚಿಗೆ ಅನಿಮಲ್ ಅನ್ನೋ ಸಿನಿಮಾ ಮಾಡಿದ್ದರೂ, ರಣಬೀರ್ ಕಪೂರ್ ಮಾನವೀಯ ಗುಣಗಳನ್ನು ತೋರಿಸಿದ್ದಾರೆ. ಅನಿಮಲ್ ಚಿತ್ರದ ನಾಯಕನ ಹ್ಯುಮ್ಯಾನಿಟಿ ಇದು ಎಂದು ಬಾಲಿವುಡ್ ಮಂದಿ ರಣಬೀರ್‌ನ ಬೆನ್ನು ತಟ್ಟುತ್ತಿದ್ದಾರಂತೆ.

## ಸಂಪಾದಕರ ಸದ್ಯಶೋಧನೆ

# ಇಂದು ಇದ್ದಂತೆ ನಾಳೆ ಇರೊಲ್ಲ

ಜಗತ್ತಿನ ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ವಿಶ್ವದೆಲ್ಲೆಡೆ ಇರುವ ಬೇರೆ ಕಂಪನಿಗಳು ಏನು ಮಾಡುತ್ತಿವೆ ಎಂಬ ಬಗ್ಗೆ ಮೈಯೆಲ್ಲ ಕಣ್ಣಾಗಿ ನೋಡುತ್ತಾ ಕುಳಿತಿರುತ್ತವೆ. ತಮ್ಮ ಪ್ರತಿಸ್ಪರ್ಧಿ ಕಂಪನಿಗಳಷ್ಟೇ ಅಲ್ಲ, ಸಣ್ಣ ಪುಟ್ಟ ಕಂಪನಿಗಳು ಸಹ ಏನು ಮಾಡುತ್ತಿವೆ ಎಂಬ ಬಗ್ಗೆ ಕಾಲಕಾಲಕ್ಕೆ ತಮ್ಮದೇ ಜಾಲಗಳನ್ನು ಬಳಸಿ, ಮಾಹಿತಿಯನ್ನು ಪಡೆಯುತ್ತಿರುತ್ತವೆ. ಈ ರೀತಿ ಮಾಹಿತಿ ಪಡೆಯಲೆಂದೇ, ಸಾವಿರಾರು ಕೋಟಿ ರುಪಾಯಿ ಹಣವನ್ನು ವ್ಯಯಿಸುತ್ತವೆ. ಯಾವುದೋ ಒಂದು ಕಂಪನಿ ಸಿದ್ಧಪಡಿಸುವ ವಸ್ತು ಅಥವಾ ಉತ್ಪನ್ನ, ಈಗಾಗಲೇ ಮಾರುಕಟ್ಟೆಯಲ್ಲಿರುವ ತನ್ನ ಪ್ರಾಡಕ್ಟನ್ನು ಹಿಂದಕ್ಕೆ ಹಾಕಬಹುದು ಎಂಬ ಆತಂಕ ಅದನ್ನು ಸದಾ ಕಾಡುತ್ತಿರುತ್ತದೆ. ಈ ಕಾರಣಕ್ಕಾಗಿ ತಮ್ಮ ಪ್ರತಿಸ್ಪರ್ಧಿಗಳ ಮೇಲೆ ಹದ್ದಿನಗಣ್ಣನ್ನು ನೆಟ್ಟಿರುತ್ತವೆ. 2013 ರ ಕೊನೆಯಲ್ಲಿ ಒಂದು ದಿನ ಅನಿರೀಕ್ಷಿತವಾಗಿ, ಇಸ್ರೇಲ್ ಮೂಲದ ವಾಜ್ (Waze) ಕಂಪನಿಯ ಸಂಸ್ಥಾಪಕರಲ್ಲೊಬ್ಬನಾದ ಉರಿ ಲೆವಿನ್‌ಗೆ ಗೂಗಲ್ ಕಂಪನಿಯಿಂದ ಒಂದು ಇಮೇಲ್ ಬಂದಿತು – 'ನಾವು ನಿಮ್ಮನ್ನು ಇಸ್ರೇಲಿನ ನಿಮ್ಮ ಕಚೇರಿಯಲ್ಲಿ ಭೇಟಿ ಮಾಡಲು ಉತ್ಸುಕರಾಗಿದ್ದೇವೆ. ಸಮಯ ಮತ್ತು ದಿನಾಂಕವನ್ನು ನಿಗದಿಪಡಿಸಿ. ಇನ್ನು ಮೂರು ದಿನಗಳೊಳಗೆ ಭೇಟಿ ಸಾಧ್ಯವಾಗುವುದಾದರೆ ಒಳ್ಳೆಯದು.' ಆರು ವರ್ಷಗಳ ಹಿಂದಷ್ಟೇ ವಾಜ್ ಕಂಪನಿ ಆರಂಭವಾಗಿತ್ತು. ಆ ಹೆಸರಿನ ಕಂಪನಿ ಇದೆ ಎಂಬುದು ಹೊರ ಜಗತ್ತಿಗಲ್ಲ, ಇಸ್ರೇಲಿಗರಿಗೇ ಹೆಚ್ಚು ಜನರಿಗೆ ಗೊತ್ತಿರಲಿಲ್ಲ. ಕಾರಣ ಆ ಸಂಸ್ಥೆಯಲ್ಲಿ ಕೇವಲ ಹನ್ನೆರಡು ಜನ ಮಾತ್ರ ಕೆಲಸ ಮಾಡುತ್ತಿದ್ದರು. ವಾಜ್‌ನಲ್ಲಿ ಏನು ನಡೆಯುತ್ತಿದೆ ಎಂಬುದು ಅದೇ ಕಟ್ಟಡದಲ್ಲಿ ಕಾರ್ಯನಿರ್ವಹಿಸುವ ಇತರರಿಗೂ ಗೊತ್ತಿರಲಿಲ್ಲ. 'ಫ್ರೀಮ್ಯಾಪ್ ಇಸ್ರೇಲ್' ಎಂಬ ಹೆಸರಿನಲ್ಲಿ ಆರಂಭವಾದ ಸಂಸ್ಥೆ ನಂತರ ವಾಜ್ ಎಂದು ತನ್ನ ಹೆಸರನ್ನು ಬದಲಿಸಿಕೊಂಡಿತು. ಸ್ಮಾರ್ಟ್‌ಫೋನ್ ಮೂಲಕ ಸ್ಯಾಟಲೈಟ್ ನೇವಿಗೇಶನ್ ಸಾಫ್ಟ್‌ವೇರ್ ಅಭಿವೃದ್ಧಿಪಡಿಸುವುದರಲ್ಲಿ ನಿರತವಾದ ವಾಜ್, ಜಿಪಿಎಸ್ ತಂತ್ರಜ್ಞಾನದಲ್ಲಿ ಅಸಾಧಾರಣ ಸಾಧನೆಯನ್ನು ಮಾಡುವುದರತ್ತ ದಾಪುಗಾಲು ಹಾಕಿತ್ತು. ಈ ಸಂಗತಿ ಗೂಗಲ್‌ಗೆ ಹೇಗೋ ಗೊತ್ತಾಗಿಬಿಟ್ಟಿತು. ವಾಜ್ ಅಭಿವೃದ್ಧಿಪಡಿಸುತ್ತಿರುವ ತಂತ್ರಜ್ಞಾನ, ತನ್ನ ಹಿಡಿತದಲ್ಲಿರುವ ಜಿಪಿಎಸ್ ಮಾರುಕಟ್ಟೆಯನ್ನು ಕಬಳಿಸಿಬಿಡಬಹುದು ಎಂದು ಗೂಗಲ್‌ಗೆ ಅನಿಸಿತು. ಈ ಬೆಳವಣಿಗೆ ಗಮನಕ್ಕೆ ಬರುತ್ತಿದ್ದಂತೆ ಹಠಾತ್ ಎಚ್ಚರಗೊಂಡ ಗೂಗಲ್, ವಾಜ್ ಸಂಸ್ಥಾಪಕರನ್ನು ಸಂಪರ್ಕಿಸಿತು. ಇಮೇಲ್ ಕಳಿಸಿದ ಮೂರನೇ ದಿನ ಗೂಗಲ್ ಪ್ರತಿನಿಧಿಗಳು ಇಸ್ರೇಲಿನ ಟೆಲ್ ಅವಿವ್‌ನಲ್ಲಿರುವ ವಾಜ್ ಕಚೇರಿಯಲ್ಲಿ ಹಾಜರಿದ್ದರು. ಗೂಗಲ್ ಪ್ರತಿನಿಧಿಗಳು ಒಂದು ಪುಟದ ಒಪ್ಪಂದ ಪತ್ರವನ್ನು ಹಿಡಿದಿದ್ದರು. 'ನೀವು ಒಪ್ಪುವುದಾದರೆ, 1.15 ಶತಕೋಟಿ ಅಮೆರಿಕನ್ ಡಾಲರ್ ನಗದು ಹಣ ನೀಡಿ, ನಿಮ್ಮ ಕಂಪನಿಯನ್ನು ಖರೀದಿಸಲು ನಾವು ಸಿದ್ಧ. ನಿಮ್ಮ ಕಂಪನಿ ಹೆಸರನ್ನು ನಾವೇನೂ ಬದಲಿಸುವುದಿಲ್ಲ. ಅದು ಹಾಗೇ ಇರಲಿ. ಇಡೀ ವ್ಯವಹಾರ ಒಂದು ವಾರದೊಳಗೆ ಮುಗಿಯುತ್ತದೆ' ಎಂದು ಬರೆದಿತ್ತು. 'ಯೋಚಿಸಲು ನಮಗೆ ಕಾಲಾವಕಾಶ ಬೇಕು' ಎಂದು ವಾಜ್ ಸಂಸ್ಥಾಪಕರು ಹೇಳಿದರು. ಆದರೆ ಗೂಗಲ್ ಪ್ರತಿನಿಧಿಗಳು ಕೇಳುವ ಮನಸ್ಥಿತಿಯಲ್ಲಿ ಇರಲಿಲ್ಲ. 'ನಿಮಗೆ ಇನ್ನೂ ಹೆಚ್ಚಿನ ಹಣ ಬೇಕಾದರೆ ಹೇಳಿ. ನಾವು ಅದಕ್ಕೂ ಸಿದ್ಧರಿದ್ದೇವೆ' ಎಂದು ಗೂಗಲ್ ಪ್ರತಿನಿಧಿಗಳು ಹೇಳಿದಾಗ, ಆ ಒಪ್ಪಂದದಿಂದ ಹೊರಬರುವ ಅಥವಾ ಕಾಲ ನೂಕುವ ಪ್ರಶ್ನೆಯೇ ಇರಲಿಲ್ಲ. ಅತ್ಯಂತ ಪ್ರೀತಿಯಿಂದ ಕಟ್ಟಿದ ಆ ಕಂಪನಿಯನ್ನು ಗೂಗಲ್‌ಗೆ ಮಾರಾಟ ಮಾಡಲು ಒಪ್ಪಿದರು. ಇಡೀ ವ್ಯವಹಾರ ಹತ್ತು ದಿನಗಳಲ್ಲಿ ಮುಗಿದು ಹೋಯಿತು. ಅಲ್ಲಿಗೆ ಗೂಗಲ್ ತನ್ನ ಜಿಪಿಎಸ್ ಮಾರುಕಟ್ಟೆಯನ್ನು ಸದ್ದಿಲ್ಲದೇ ಕಬಳಿಸಲು ಹೊರಟಿದ್ದ ವಾಜ್ ಕಂಪನಿಯನ್ನು ನುಂಗಿ ನೀರು ಕುಡಿಯಿತು. ಗೂಗಲ್ ಮ್ಯಾಪ್ ಎಲ್ಲರಿಗೂ ಗೊತ್ತು. ಆ ಹೆಸರನ್ನು ಕೇಳದವರಿಲ್ಲ. ವಾಜ್ ಹೆಸರು ನೂರರಲ್ಲಿ ನಾಲ್ಕೈದು ಮಂದಿಗೆ ಗೊತ್ತಿದ್ದಿರಬಹುದು. ಅಂದು ವಾಜ್‌ನ್ನು ಖರೀದಿಸದಿದ್ದರೆ ಗೂಗಲ್ ಮ್ಯಾಪ್ ಕತೆ ಏನಾಗುತ್ತಿತ್ತೋ?

# ಇಬ್ರಾಹಿಂಗೆ ಪವಾರ್ ಫೋನು ಮಾಡಿದ್ದೇಕೆ?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಮಹಾರಾಷ್ಟ್ರದ ಎನ್.ಸಿ.ಪಿ ನಾಯಕ ಶರದ್ ಪವಾರ್ ಮೊನ್ನೆ ಕರ್ನಾಟಕದ ಮುಸ್ಲಿಂ ಲೀಡರ್ ಸಿ.ಎಂ.ಇಬ್ರಾಹಿಂ ಅವರಿಗೆ ಫೋನು ಮಾಡಿದ್ದಾರೆ. ಮುಂಬರುವ ದಿನಗಳಲ್ಲಿ ಜಾತ್ಯಾತೀತ ಶಕ್ತಿಗಳ ಬಲವನ್ನು ಹೆಚ್ಚಿಸುವ ಅನಿವಾರ್ಯತೆಯ ಬಗ್ಗೆ ಚರ್ಚಿಸಿ ಒಂದು ಪ್ರಪೋಸಲ್ಲು ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ತಮ್ಮ ನೇತೃತ್ವದ ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷಕ್ಕೆ ನೀವು ಅಧ್ಯಕ್ಷರಾಗಬೇಕು ಮತ್ತು ಮುಂದಿನ ದಿನಗಳಲ್ಲಿ ಅದೊಂದು ಶಕ್ತಿಯಾಗಿ ನೆಲೆ ನಿಲ್ಲಲು ಶ್ರಮಿಸಬೇಕು ಎಂಬುದು ಶರದ್ ಪವಾರ್ ಅವರು ಕೊಟ್ಟ ಪ್ರಪೋಸಲ್ಲು.

ಅಂದ ಹಾಗೆ ಕಳೆದ ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ತೊರೆದು ಜೆಡಿಎಸ್ ಪಾಳಯ ಸೇರಿದ್ದ ಸಿ.ಎಂ. ಇಬ್ರಾಹಿಂ ಅವರು ಪಕ್ಷದ ಅಧ್ಯಕ್ಷರಾಗಿ ಇಡೀ ರಾಜ್ಯ ಸುತ್ತಿದ್ದರು. 2023 ರ ವಿಧಾನಸಭಾ ಚುನಾವಣೆಯಲ್ಲಿ ಅತಂತ್ರ ಫಲಿತಾಂಶ ಬರುವುದು ನಿಶ್ಚಿತವಾದ್ದರಿಂದ ಜೆಡಿಎಸ್ ಮತ್ತು ಬಿಜೆಪಿ ಪರಸ್ಪರ ಕೈಗೂಡಿಸಿ ಸರಕಾರ ರಚಿಸುವುದು ಗ್ಯಾರಂಟಿ ಅಂತ ನಂಬಿದ್ದರು. ಹೀಗೆ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಸರಕಾರ ರಚನೆಯಾದರೆ ಪಕ್ಷದ ರಾಜ್ಯಾಧ್ಯಕ್ಷರಾದ ತಮಗೆ ಉಪಮುಖ್ಯಮಂತ್ರಿ ಹುದ್ದೆ ಇಲ್ಲವೇ ಪ್ರಬಲ ಮಂತ್ರಿಗಿರಿ ಸಿಗುತ್ತದೆ ಎಂದು ಇಬ್ರಾಹಿಂ ಭಾವಿಸಿದ್ದರು. ಆದರೆ ರಾಷ್ಟ್ರ ರಾಜಕಾರಣದಲ್ಲಿ ಬಿಜೆಪಿ ವಿರುದ್ಧ ಮುಸ್ಲಿಮರ ಮತಗಳು ಕನ್‌ಸಾಲಿಡೇಟ್ ಆಗಿದ್ದ ಪರಿಣಾಮವಾಗಿ ಕರ್ನಾಟಕದಲ್ಲೂ ಅವು ಕಾಂಗ್ರೆಸ್ ಪಾಲಾದವು.

ಹೀಗಾಗಿ ತಮ್ಮ ಸಮುದಾಯದ ಇಬ್ರಾಹಿಂ ಜೆಡಿಎಸ್ ರಾಜ್ಯಾಧ್ಯಕ್ಷರಾಗಿದ್ದರೂ ಮುಸ್ಲಿಮರು ಆ ಪಕ್ಷದ ಕೈಹಿಡಿಯಲಿಲ್ಲ. ಕೆಲವು ಕ್ಷೇತ್ರಗಳಲ್ಲಿ ಬಿಜೆಪಿಗೆ ಪರ್ಯಾಯವಾಗಿ ಜೆಡಿಎಸ್ ಅನ್ನು ಗೆಲ್ಲಿಸಬೇಕಾದ ಅನಿವಾರ್ಯತೆಯಿಂದ ಮುಸ್ಲಿಂ ಮತಗಳು ಜೆಡಿಎಸ್‌ಗೆ ಬಂದವೇ ಹೊರತು ಒಟ್ಟಾರೆಯಾಗಿ ಆ ಮತಗಳು ಜೆಡಿಎಸ್ ಬಲವನ್ನು ಹೆಚ್ಚಿಸಲಿಲ್ಲ. ಯಾವಾಗ ಈ ಬೆಳವಣಿಗೆ ನಡೆಯಿತೋ? ಆಗ ಜೆಡಿಎಸ್ ನಾಯಕರಾದ ದೇವೇಗೌಡ ಮತ್ತು ಕುಮಾರಸ್ವಾಮಿ ಅವರು ಇಬ್ರಾಹಿಂ ವಿಷಯದಲ್ಲಿ ನಿರಾಸಕ್ತಿ ತೋರಿಸತೊಡಗಿದರು. ಈ ನಿರಾಸಕ್ತಿ ಮುಂದುವರಿದ ಕಾಲದಲ್ಲೇ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಯ ಮಾತುಕತೆ ಶುರುವಾಯಿತು.

ಆದರೆ ಬಿಜೆಪಿ ಜತೆಗಿನ ಮಾತುಕತೆಯ ವಿಷಯದಲ್ಲಿ ಪಕ್ಷದ ರಾಜ್ಯಾಧ್ಯಕ್ಷರಾದರೂ ಇಬ್ರಾಹಿಂ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದ ಕುಮಾರಸ್ವಾಮಿ ಅವರು ತಾವೇ ನೇರವಾಗಿ ಮೋದಿ-ಅಮಿತ್ ಶಾ ಅವರ ಜತೆ ಮಾತುಕತೆ ನಡೆಸಿದರು. ಫೈನಲ್ಲಿ ತಮ್ಮ ತಂದೆ ದೇವೇಗೌಡರನ್ನು ಮೋದಿಯವರ ಮುಂದೆ ಕೂರಿಸಿ ಸೆಟ್ಲ್‌ಮೆಂಟ್ ಮಾಡಿಕೊಂಡರು. ಯಾವಾಗ ಈ ಬೆಳವಣಿಗೆ ನಡೆಯಿತೋ? ಆಗ ಕ್ರುದ್ಧರಾದ ಸಿ.ಎಂ.ಇಬ್ರಾಹಿಂ, ಪಕ್ಷ ತಮ್ಮದೇ ಎಂದು ಗಲಾಟೆ ಎಬ್ಬಿಸಿದರು. ಆದರೆ ಈ ಗಲಾಟೆಯಿಂದ ಅವರು ಜೆಡಿಎಸ್ ಪಕ್ಷವನ್ನೇನೂ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಆಗಲಿಲ್ಲ. ಸಾಲದೆಂಬಂತೆ ದೇವೇಗೌಡ-ಕುಮಾರಸ್ವಾಮಿ ಜೋಡಿ ವ್ಯವಸ್ಥಿತವಾಗಿ ರಾಜ್ಯಾಧ್ಯಕ್ಷ ಸ್ಥಾನದಿಂದ ಇಬ್ರಾಹಿಂ ಅವರನ್ನು ಕೆಳಗಿಳಿಸಿತು.

ಮುಂದೆ ಈ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿದರೂ ಅದರಿಂದ ಇಬ್ರಾಹಿಂ ಅವರಿಗೆ ಹೇಳಿಕೊಳ್ಳುವಂತಹ ಅನುಕೂಲವೇನೂ ಆಗಲಿಲ್ಲ. ಈ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆಗಿನ ಸ್ನೇಹಕ್ಕೆ ರೀಚಾರ್ಜ್ ಮಾಡಲು ಇಬ್ರಾಹಿಂ ಪ್ರಯತ್ನಿಸಿದರೂ ಸಿದ್ದರಾಮಯ್ಯ ಅದಕ್ಕೆ ರೆಡಿ ಇರಲಿಲ್ಲ. ಹೀಗಾಗಿ ಕರ್ನಾಟಕದ ಮಾತಿನ ಮಲ್ಲ ಇಬ್ರಾಹಿಂ ಮೌನಕ್ಕೆ ಶರಣಾಗಿದ್ದರು. ಹೀಗೆ ಮೌನಕ್ಕೆ ಶರಣಾಗಿದ್ದ ಅವರಿಗೆ ಮೊನ್ನೆ ವಿಸ್ಮಯ ಕಾದಿತ್ತು. ಅರ್ಥಾತ್, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ, ಎನ್‌ಸಿಪಿ ನಾಯಕ ಶರದ್ ಪವಾರ್ ಅವರು ಇಬ್ರಾಹಿಂ ಅವರಿಗೆ ಫೋನು ಮಾಡಿದ್ದಾರೆ. ಅಷ್ಟೇ ಅಲ್ಲ, ದೇಶದಲ್ಲಿ ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸುವ ಅಗತ್ಯವಿದ್ದು ಈ ಹಿನ್ನೆಲೆಯಲ್ಲಿ ನೀವು ನಮ್ಮ ಜತೆಗಿರಬೇಕು ಎಂದಿದ್ದಾರೆ.

ಅಂದ ಹಾಗೆ, ಕರ್ನಾಟಕದಲ್ಲಿ ತಮ್ಮ ನೇತೃತ್ವದ ಎನ್‌ಸಿಪಿಗೆ ಇಬ್ರಾಹಿಂ ಅಧ್ಯಕ್ಷರಾದರೆ ಹಲವು ಅನುಕೂಲಗಳಿವೆ ಎಂಬುದು ಪವಾರ್ ಲೆಕ್ಕಾಚಾರ. ಎಷ್ಟೇ ಆದರೂ ಮುಂಬೈ-ಕರ್ನಾಟಕ ಮಾತ್ರವಲ್ಲದೆ ಕರ್ನಾಟಕದ ಗಡಿ ಜಿಲ್ಲೆಗಳಲ್ಲಿ ಮರಾಠ ಮತದಾರರ ಪವರ್ ಹೆಚ್ಚಾಗಿದೆ. ಸುಮಾರು ಐವತ್ತಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮರಾಠ ಮತದಾರರ ಮತಗಳು ನಿರ್ಣಾಯಕವಾಗಿವೆ.ನಾಳೆ ಇಲ್ಲಿ ಎನ್‌ಸಿಪಿ ತಲೆ ಎತ್ತಿದರೆ ಮರಾಠ ಮತಬ್ಯಾಂಕಿನ ಮೇಜರ್ ಷೇರನ್ನು ಸೆಳೆಯಬಹುದು. ಮತ್ತು ಅದೇ ಕಾಲಕ್ಕೆ ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ವಿರುದ್ಧ ಸೆಣಸಾಡುವುದರಿಂದ ಗಣನೀಯ ಸಂಖ್ಯೆಯಲ್ಲಿ ಮುಸ್ಲಿಮರ ಮತಗಳನ್ನೂ ಸೆಳೆಯಬಹುದು ಎಂಬುದು ಪವಾರ್ ಯೋಚನೆ.

ಯಾವಾಗ ಪವಾರ್ ಅವರು ಈ ಪ್ರಪೋಸಲ್ಲು ಕೊಟ್ಟರೋ? ಇದಾದ ನಂತರ ಮರಳಿ ಮೇಲಕ್ಕೆದ್ದಿರುವ ಸಿ.ಎಂ.ಇಬ್ರಾಹಿಂ ಸದ್ಯದಲ್ಲೇ ಮಹತ್ವದ ಸಭೆ ನಡೆಸಲು ಸಜ್ಜಾಗಿದ್ದಾರೆ. ಈ ಸಭೆಗೆ ವಿವಿಧ ಪಕ್ಷಗಳ ನಾಯಕರನ್ನು ಕರೆಯಲು ತೀರ್ಮಾನಿಸಿದ್ದಾರೆ. ಅಲ್ಲಿಗೆ ಕರ್ನಾಟಕದ ರಾಜಕಾರಣದಲ್ಲಿ ಸಿ.ಎಂ.ಇಬ್ರಾಹಿಂ ಹೊಸ ಇನ್ನಿಂಗ್ಸ್ ಶುರು ಮಾಡುವುದು ಪಕ್ಕಾ ಆದಂತಾಗಿದೆ.

### ಅಮಿತ್ ಶಾ ಕೊಟ್ಟ ಡೈರೆಕ್ಷನ್ ಏನು?



ಈ ಮಧ್ಯೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿಧಾನಸಭೆಯ ಪ್ರತಿಪಕ್ಷ ನಾಯಕ ಅಶೋಕ್ ಅವರನ್ನು ಕಳೆದ ವಾರ ಗಾಢವಾಗಿ ಸಂಪರ್ಕಿಸಿದ್ದಾರೆ. ಮೈಸೂರಿನ ಮುಡಾ ಹಗರಣದ ವಿಷಯದಲ್ಲಿ ಪಕ್ಷ ಎಫೆಕ್ಟಿವ್ ಆಗಿ ಹೋರಾಟ ಮಾಡುತ್ತಿಲ್ಲ. ಹಗರಣದ ಆರೋಪ ಮಾಡಿ, ನಾಲ್ಕು ಅಧಿಕಾರಿಗಳ ಎತ್ತಂಗಡಿಯಾದ ತಕ್ಷಣ ಎಲ್ಲವೂ ಸರಿ ಆಗುವುದಿಲ್ಲ. ಹೀಗಾಗಿ ಈ ವಿಷಯದಲ್ಲಿ ನಿಮ್ಮ ಗುರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂಬುದು ನೆನಪಿನಲ್ಲಿರಲಿ. ಎಲ್ಲಕ್ಕಿಂತ ಮುಖ್ಯವಾಗಿ ಈ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಿ. ಸಿದ್ದರಾಮಯ್ಯ ರಾಜೀನಾಮೆಯೇ ನಿಮ್ಮ ಟಾರ್ಗೆಟ್ ಆಗಿರಲಿ ಎಂದಿದ್ದಾರೆ.

ಯಾವಾಗ ಮುಡಾ ಹಗರಣದ ವಿಷಯದಲ್ಲಿ ಅಮಿತ್ ಶಾ ಡೈರೆಕ್ಷನ್ನು ಬಂತೋ? ಆಗ ವಿಜಯೇಂದ್ರ ಮತ್ತು ಅಶೋಕ್ ದಡಬಡಿಸಿ ಎದ್ದು ನಿಂತಿದ್ದಾರೆ. ಅಷ್ಟೇ ಅಲ್ಲ, ಮುಡಾ ಹಗರಣದ ತಳಬುಡಕ್ಕೆ ಕೈ ಹಾಕಲು ಹೊರಟಿದ್ದಾರೆ. ಅಂದ ಹಾಗೆ ಅಮಿತ್ ಶಾ ಡೈರೆಕ್ಷನ್ನು ಬಂದ ಮೇಲೆ ಯಾವ ಮಟ್ಟದ ಸಂಚಲನ ಉಂಟಾಗಿದೆ ಎಂದರೆ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಬೀದಿ ಹೋರಾಟಕ್ಕಿಳಿದಿರುವ ರಾಜ್ಯ ಬಿಜೆಪಿ ಅದೇ ಕಾಲಕ್ಕೆ ಕಾನೂನು ಹೋರಾಟಕ್ಕೂ ತಯಾರಿ ಮಾಡಿಕೊಳ್ಳುತ್ತಿದೆ.

ಮೂಲಗಳ ಪ್ರಕಾರ ಬಿಜೆಪಿ ನಾಯಕರು ಈ ವಾರ ಲೋಕಾಯುಕ್ತ ಮತ್ತು ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಸಿದ್ದರಾಮಯ್ಯ ಮತ್ತಿತರರ ಮೇಲೆ ಮೊಕದ್ದಮೆ ಹೂಡಲಿದ್ದಾರೆ.

### ಆಂಧ್ರದಲ್ಲಿ ಕುಮಾರಣ್ಣ ಪವರ್

ಕೇಂದ್ರದ ಉಕ್ಕು ಮತ್ತು ಭಾರಿ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಒಂದೇ ಒಂದು ಹೆಜ್ಜೆಯ ಮೂಲಕ ಆಂಧ್ರಪ್ರದೇಶದಲ್ಲಿ ಜನಪ್ರಿಯರಾಗಿದ್ದಾರೆ. ದೇಶದ ಪ್ರಮುಖ ಉಕ್ಕು ಕಾರ್ಖಾನೆಗಳಲ್ಲೊಂದಾದ ಆಂಧ್ರದ ವೈಜಾಗ್ ಉಕ್ಕು ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವುದಾಗಿ ಅವರು ಹೇಳಿದ್ದೇ ಇದಕ್ಕೆ ಕಾರಣ. ವಸ್ತುಸ್ಥಿತಿಯೆಂದರೆ ಇತ್ತೀಚಿನ ದಿನಗಳಲ್ಲಿ ವೈಜಾಗ್ ಉಕ್ಕು ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಲು ವ್ಯವಸ್ಥಿತ ಪ್ರಯತ್ನಗಳು ನಡೆದಿದ್ದವು.

ಆಂಧ್ರದ ಕರಾವಳಿ ಭಾಗದಲ್ಲಿರುವ ಈ ಕಾರ್ಖಾನೆ ಉಕ್ಕು ತಯಾರಿಕೆಗೆ ಮತ್ತು ಸಾಗಾಣಿಕೆಗೆ ಎಷ್ಟು ಪ್ರಶಸ್ತವಾಗಿದೆ ಎಂದರೆ, ಇವತ್ತು ದೇಶದಲ್ಲಿ ಉಕ್ಕು ತಯಾರಿಕೆ ಮಾಡುವ ಬಹುತೇಕ ಕಾರ್ಖಾನೆಗಳಿಗೆ ಇಲ್ಲದ ಅನುಕೂಲತೆ ವೈಜಾಗ್ ಉಕ್ಕು ಕಾರ್ಖಾನೆಗೆ ಇದೆ. ಲಕ್ಷಾಂತರ ಮಂದಿಯ ಜೀವನೋಪಾಯಕ್ಕೆ ದಾರಿ ಮಾಡಿಕೊಟ್ಟಿರುವ ಇಂತಹ ಕಾರ್ಖಾನೆಯನ್ನು ಖಾಸಗಿಯವರ ವಶಕ್ಕೊಪ್ಪಿಸುವ ತಂತ್ರ ಯಾವಾಗ ಆರಂಭವಾಯಿತೋ?ಆಗ ವೈಜಾಗ್ ಉಕ್ಕು ಕಾರ್ಖಾನೆಯ ಉಳಿವಿಗಾಗಿ ದೊಡ್ಡ ಹೋರಾಟಗಳೇ ಶುರುವಾಗಿದ್ದವು.

ಆದರೆ ಯಾವಾಗ ಕೇಂದ್ರದಲ್ಲಿ ಮೂರನೇ ಬಾರಿ ಮೋದಿ ನೇತೃತ್ವದ ಬಿಜೆಪಿ ಅಧಿಕಾರಕ್ಕೆ ಬಂತೋ? ಈ ಸರಕಾರದಲ್ಲಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಉಕ್ಕು ಮತ್ತು ಭಾರೀ ಕೈಗಾರಿಕೆ ಸಚಿವರಾದರೋ? ಇದಾದ ನಂತರ ವೈಜಾಗ್ ಉಕ್ಕು ಕಾರ್ಖಾನೆಯ ವಿವರಗಳನ್ನು ತರಿಸಿಕೊಂಡಿದ್ದಾರೆ.

ಅಷ್ಟೇ ಅಲ್ಲ, ಏಳೆಂಟು ದಿನಗಳ ಕಾಲ ದಿಲ್ಲಿಯಲ್ಲಿ ಕುಳಿತು ಈ ಕಾರ್ಖಾನೆ ಖಾಸಗಿಯವರ ವಶಕ್ಕೆ ಹೋಗದಂತೆ ಮಾಡಲು ಸರಣಿ ಸಭೆಗಳನ್ನು ನಡೆಸಿದ್ದಾರೆ. ಅಂತಿಮವಾಗಿ ಕಳೆದ ಬುಧವಾರ ವೈಜಾಗ್ ಉಕ್ಕು ಕಾರ್ಖಾನೆಯ ಬಗ್ಗೆ ಹೇಳಿಕೆ ನೀಡಿದ ಕುಮಾರಸ್ವಾಮಿ, ಕೆಲವರು ಹೇಳುವಂತೆ ವೈಜಾಗ್ ಉಕ್ಕು ಕಾರ್ಖಾನೆಯ ಪರಿಸ್ಥಿತಿ ಅಷ್ಟೇನೂ ವಿಷಮವಾಗಿಲ್ಲ. ಹೀಗಾಗಿ ಸದರಿ ಉಕ್ಕು ಕಾರ್ಖಾನೆಗೆ ಪುನಶ್ಚೇತನ ನೀಡುವುದಾಗಿ ನೇರವಾಗಿ ಹೇಳಿದ್ದಾರೆ.

ಯಾವಾಗ ಕುಮಾರಸ್ವಾಮಿ ಈ ಮಾತುಗಳನ್ನಾಡಿದರೋ? ಇದಾದ ನಂತರ ಆಂಧ್ರಪ್ರದೇಶದಲ್ಲಿ ಕುಮಾರಸ್ವಾಮಿ ಜನಪ್ರಿಯರಾಗತೊಡಗಿದ್ದಾರೆ. ಅಂದ ಹಾಗೆ ವೈಜಾಗ್ ಉಕ್ಕು ಕಾರ್ಖಾನೆಯ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಕುಮಾರಸ್ವಾಮಿ ದಿಲ್ಲಿಯಲ್ಲಿ ಸಭೆ ನಡೆಸಲು ಶುರು ಮಾಡಿದಾಗ ಕೆಲ ಅಧಿಕಾರಿಗಳು ಈ ರೋಗಗ್ರಸ್ತ ಕಾರ್ಖಾನೆಯನ್ನು ನಡೆಸಲು ನಾವು ಬಂಡವಾಳ ಹೂಡಿದರೆ ಅದು ನೀರಿನಲ್ಲಿ ಹುಣಸೆ ಹಣ್ಣು ತೊಳೆದಂತಾಗುತ್ತದೆ. ಹೀಗಾಗಿ ಖಾಸಗಿಯವರಿಗೆ ಇದನ್ನು ವಹಿಸುವುದೇ ಬೆಸ್ಟು ಎಂದರಂತೆ.

ಆದರೆ ಈ ಸಂದರ್ಭದಲ್ಲಿ ಕಾರ್ಖಾನೆಗಿದ್ದ ಆಸ್ತಿಯ ವಿವರ ನೋಡಿದ ಕುಮಾರಸ್ವಾಮಿ ಹೌಹಾರಿದ್ದಾರೆ. ಕಾರಣ? ಆರು ಸಾವಿರ ಎಕರೆಗೂ ಹೆಚ್ಚು ಭೂಮಿ ಹೊಂದಿರುವ ವೈಜಾಗ್ ಉಕ್ಕು ಕಾರ್ಖಾನೆಯ ಆಸ್ತಿ ಮೌಲ್ಯ ಸುಮಾರು ಐದು ಲಕ್ಷ ಕೋಟಿ ರುಪಾಯಿಗಳಷ್ಟಿದ್ದರೆ, ಅದನ್ನು ಖಾಸಗಿಯವರಿಗೆ ಕೇವಲ ಮೂವತ್ತು ಸಾವಿರ ಕೋಟಿ ರುಪಾಯಿಗಳಿಗೆ ಮಾರಾಟ ಮಾಡುವ ತಂತ್ರ ನಡೆದಿದ್ದು ಅವರ ಗಮನಕ್ಕೆ ಬಂದಿದೆ.

ಹೀಗಾಗಿ ಸರಣಿ ಸಭೆಗಳನ್ನು ಮಾಡಿದ ಕುಮಾರಸ್ವಾಮಿ ಅಂತಿಮವಾಗಿ ವೈಜಾಗ್ ಉಕ್ಕು ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಮಾತನಾಡಿದ್ದಾರೆ. ಇಂತಹ ಮಾತುಗಳ ಮೂಲಕ ಒಂದೇ ದಿನದಲ್ಲಿ ಆಂಧ್ರಪ್ರದೇಶದಲ್ಲಿ ಸಂಚಲನ ಸೃಷ್ಟಿಸಿದ್ದಾರೆ.

### ಶುಕ್ರವಾರದ ಸೀಕ್ರೆಟ್ ಮೀಟಿಂಗು

ಕಳೆದ ಶುಕ್ರವಾರ ಕೇಂದ್ರದ ಉಕ್ಕು ಮತ್ತು ಭಾರೀ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಕರ್ನಾಟಕದ ಹಿರಿಯ ಸಚಿವರೊಬ್ಬರು ರಹಸ್ಯವಾಗಿ ಭೇಟಿ ಮಾಡಿದ್ದರಂತೆ. ಈ ಭೇಟಿಯ ಸಂದರ್ಭದಲ್ಲಿ ಅವರು ಮಾತಾಡಿದ್ದೇನು? ಎಂಬುದೇ ರಾಜ್ಯ ಬಿಜೆಪಿ ಪಾಳಯದ ಲೇಟೆಸ್ಟ್ ಹಾಟ್ ನ್ಯೂಸು.

ಮೂಲಗಳ ಪ್ರಕಾರ, ಕುಮಾರಸ್ವಾಮಿ ಅವರನ್ನು ಇತ್ತೀಚೆಗೆ ಸತತವಾಗಿ ಭೇಟಿಯಾಗುತ್ತಿರುವ ಈ ಸಚಿವರು ಮೊನ್ನೆ ಶುಕ್ರವಾರ ಈಗಿನ ಸ್ಥಿತಿಯ ಬಗ್ಗೆ ಚರ್ಚಿಸಿದ್ದಾರೆ. ಅದೇ ಕಾಲಕ್ಕೆ, ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ಜತೆ ಬರಲು ನಾನು ತಯಾರಿದ್ದೇನೆ. ಈಗಾಗಲೇ ನನ್ನ ಜತೆ ಕಾಂಗ್ರೆಸ್ಸಿನ ನಲವತ್ತೆರಡು ಶಾಸಕರು ಬರಲು ತಯಾರಿದ್ದು, ಪರ್ಯಾಯ ಸರಕಾರ ರಚಿಸುವುದು ಖಚಿತವಾದರೆ ಇನ್ನಷ್ಟು ಮಂದಿ ಬರುತ್ತಾರೆ ಎಂದಿದ್ದಾರೆ.

ಹೀಗೆ ಪರ್ಯಾಯ ಸರಕಾರ ರಚನೆಯಾದರೆ ಎರಡು ವರ್ಷದ ಮಟ್ಟಿಗೆ ನನ್ನನ್ನು ಸಿಎಂ ಮಾಡಬೇಕು. ತದನಂತರ ಬಿಜೆಪಿ, ಜೆಡಿಎಸ್‌ನಿಂದ ಯಾರಾದರೂ ಸಿಎಂ ಆಗಲಿ ಅಂತ ಈ ಸಚಿವರು ಕುಮಾರಸ್ವಾಮಿ ಅವರಿಗೆ ಹೇಳಿದ್ದಾರೆ ಎಂಬುದೇ ಬಿಜೆಪಿ ಪಾಳಯಕ್ಕಿರುವ ಸದ್ಯದ ಹಾಟ್ ನ್ಯೂಸು.

ಅಂದ ಹಾಗೆ ಪರ್ಯಾಯ ಸರಕಾರ ರಚನೆಯ ಮಾತು ಸರಳವಾಗಿಲ್ಲವಾದರೂ ಅಧಿಕಾರ ಹಂಚಿಕೆಯ ಮಾತು ಶೀಘ್ರದಲ್ಲೇ ಕಾಂಗ್ರೆಸ್ಸನ್ನು ತಲ್ಲಣಗೊಳಿಸಲಿದೆ. ಈ ಅಂಶವೇ ಕಾಂಗ್ರೆಸ್ಸಿನ ಬಹುತೇಕ ಶಾಸಕರ ಪಕ್ಷಾಂತರಕ್ಕೆ ಕಾರಣವಾಗಲಿದೆ ಎಂಬುದು ಈ ಸಚಿವರ ಲೆಕ್ಕಾಚಾರವಂತೆ.

# ಆರ್‌ಎಂಜಿ ಕೈಗಾರಿಕೆಗೆ ಜಿಎಸ್‌ಟಿಯ ಪರಿಣಾಮವೇನು?

ಅರ್ಥ-ನೀತಿ

ಡಾ. ಅರುಣಾ ಶರ್ಮಾ

vveditoped@gmail.com

ಕರ್ನಾಟಕ ಭಾರತದ ಮಾಹಿತಿ ತಂತ್ರಜ್ಞಾನ(ಐಟಿ) ಕೇಂದ್ರ ಎಂದು ಖ್ಯಾತಿ ಗಳಿಸಿರುವುದಲ್ಲದೆ, ಅನೇಕ ಆನ್‌ಲೈನ್ ಗೇಮಿಂಗ್ ಕಂಪನಿಗಳು ಮತ್ತು ಡವಲಪರ್‌ಗಳ ತಾಣವಾಗಿದೆ. ಆದರೆ, ಅಸ್ಪಷ್ಟ ನಿಯಂತ್ರಣ ನಿಯಮಗಳಿಂದಾಗಿ ಆನ್‌ಲೈನ್ ಗೇಮಿಂಗ್ ಉದ್ಯಮ ಅನಿಶ್ಚಿತತೆಯನ್ನು ಎದುರಿಸುತ್ತಿದೆ. ಇದರಿಂದ ಬಂಡವಾಳ ಮತ್ತು ಹೂಡಿಕೆಗಳು ಮಾಯವಾಗುವ ದಾರಿಯಲ್ಲಿವೆ. ನ್ಯಾಯಾಲಯದ ಆದೇಶವು ತಾತ್ಕಾಲಿಕವಾಗಿ ಆತಂಕವನ್ನು ನಿವಾರಿಸಿದ್ದರೂ ಕೂಡ ಈ ಕ್ಷೇತ್ರದ ಪಾಲುದಾರರು ಸುಪ್ರಿಂಕೋರ್ಟ್‌ನ ಅಂತಿಮ ನಿರ್ಣಯಕ್ಕಾಗಿ ಕಾಯುತ್ತಿದ್ದು, ಇದರ ಮೇಲೆ ಜಿಎಸ್‌ಟಿ ಸಮಿತಿಯಲ್ಲಿನ ಚರ್ಚೆಗಳು ಪ್ರಭಾವ ಬೀರುತ್ತ'ವೆ. ಹೀಗಾಗಿ ಗೇಮಿಂಗ್ ಕ್ಷೇತ್ರವನ್ನು ಸ್ಥಿರಗೊಳಿಸಲು ಮತ್ತು ಅದರ ಬೆಳವಣಿಗೆಗೆ ಬೆಂಬಲ ನೀಡಲು ಸ್ಪಷ್ಟ ಮತ್ತು ಸತತವಾಗಿ ಒಂದೇ ರೀತಿಯಲ್ಲಿರುವ ನಿಯಂತ್ರಣದ ನಿಯಮಗಳು ಕಡ್ಡಾಯವಾಗಿರುತ್ತವೆ.

**ಇತ್ತೀಚಿನ ಜಿಎಸ್‌ಟಿ ಸಮಿತಿ ಸಭೆಯಲ್ಲಿನ ಮುಖ್ಯಾಂಶಗಳು**

ನೂತನ ಸರಕಾರ ಅಧಿಕಾರಕ್ಕೆ ಬಂದ ತಕ್ಷಣ ನಡೆದ ಇತ್ತೀಚಿನ ಜಿಎಸ್‌ಟಿ ಸಮಿತಿ ಸಭೆ ಪ್ರಾಥಮಿಕವಾಗಿ ಹಲವಾರು ಉದ್ಯಮಗಳ ಸಮಸ್ಯೆಗಳತ್ತ ಗಮನ ಕೇಂದ್ರೀಕರಿಸಿತ್ತು. ಆದರೆ, ಆನ್‌ಲೈನ್ ಗೇಮಿಂಗ್ ಕ್ಷೇತ್ರಕ್ಕೆ ನಿರ್ದಿಷ್ಟವಾದ, ಅದರಲ್ಲಿಯೂ ಕೌಶಲ್ಯದ ಆಟಗಳಾದ ಗೇಮ್ಸ್ ಆಫ್ ಸ್ಕಿಲ್‌ಗಳ ಬಗೆಗಿನ ವಿಶೇಷವಾದ ಕಾಳಜಿಗಳ ಬಗ್ಗೆ ಗಮನ ನೀಡಲಿಲ್ಲ. ಹಾಗೆಯೇ ಅಂಶ ಎಂದರೆ ಈ ಕ್ಷೇತ್ರದ ಮೇಲಿ ಜಿಎಸ್‌ಟಿ ದರಗಳು ಶೇ.28ರಿಂದ ಶೇ.18ಕ್ಕೆ ಇಳಿಸಬೇಕಾದ ನಿರ್ಣಯವನ್ನು ಗಮನಿಸಿಲ್ಲ. ಇದರ ಹಾಗೂ ಆನ್‌ಲೈನ್ ಗೇಮಿಂಗ್ ಸೇರಿದಂತೆ ವಿಭಿನ್ನ ಕ್ಷೇತ್ರಗಳ ಮೇಲೆ ಪರಿಣಾಮ ಬೀರುವ ಇತರೆ ಜಿಎಸ್‌ಟಿ ದರಗಳ ಪರಿಷ್ಕರಣೆಯನ್ನು ಸರಕಾರದ ಸಚಿವರ ಸಮಿತಿಗೆ ಒಪ್ಪಿಸಲಾಗಿದೆ.

ಜುಲೈ 2017ರಿಂದ ಪೂರ್ವಾನ್ವಯವಾಗಿ ವಿಧಿಸಲಾಗಿರುವ ಹೆಚ್ಚು ಉನ್ನತವಾದ ಜಿಎಸ್‌ಟಿ ದರಗಳ ಸುತ್ತ ಈವರೆಗೆ ಪರಿಹರಿಸಲಾಗದ ಸಮಸ್ಯೆ ಗಮನಾರ್ಹ ವಿಷಯವಾಗಿದೆ. ಈ ಪೂರ್ವಾನ್ವಯ ತೆರಿಗೆ ಕುರಿತ ವಿಷಯಗಳನ್ನು ಸರಿಪಡಿಸಲು ಕೇಂದ್ರ ಮತ್ತು ರಾಜ್ಯಸರಕಾರಗಳಿಗೆ 11ಎ ವಿಭಾಗದಲ್ಲಿನ ತಿದ್ದುಪಡಿಗಳು ಸಬಲೀಕರಿಸುತ್ತವೆ. ಆದರೆ, ರಿಯಲ್ ಮನಿ ಗೇಮ್(ಆರ್‌ಎಂಜಿ)ಗಳಿಂದ ಗಳಿಕೆಗೆ ಸಂಬಂಧಿಸಿದಂತೆ ಗೊಂದಲ ಉಳಿದುಕೊಂಡಿದೆ. ಇವುಗಳನ್ನು ಸರಕುಗಳು ಅಥವಾ ಸೇವೆಗಳಲ್ಲಿ ವರ್ಗೀಕರಿಸಿಲ್ಲ, ಆದರೆ, ಶೇ.30ರಷ್ಟು ನೇರ ತೆರಿಗೆ ಕಡಿತಕ್ಕೆ ಒಳಪಟ್ಟಿರುತ್ತವೆ. ಆರಂಭದ ಚ'ರ್ಚೆಗಳ ನಂತರವೂ ಕೂಡ ನಿರ್ಣಾಯಕ ಪರಿಹಾರವನ್ನು ಇನ್ನು ತಲುಪಬೇಕಾಗಿದೆ. ಇದರಿಂದ ಭವಿಷ್ಯದ ತೆರಿಗೆಗಳ ಪರಿಣಾಮಗಳನ್ನು ಕುರಿತು ಈ ಕ್ಷೇತ್ರದ ಪಾಲುದಾರರು ಅನಿಶ್ಚಿತತೆಯಲ್ಲಿ ಉಳಿಯುವಂತಾಗಿದೆ.

**ಉದ್ಯಮದ ಸವಾಲುಗಳು ಮತ್ತು ಆರ್ಥಿಕ ಮುನ್ಸೂಚನೆಗಳು**

ಗ್ರಾಹಕರನ್ನು ಗೇಮ್‌ಗಳಿಗೆ ಸೇರಿಸಿಕೊಳ್ಳುವಾಗ ತಪ್ಪುದಾರಿಗೆಳೆಯುವ ಜಾಹೀರಾತುಗಳನ್ನು ತಡೆಯಲು, ಡಿಜಿಟಲ್ ಪಾವತಿಗಳ ಖಾತ್ರಿ ಮಾಡಲು ಮತ್ತು ನೊಯುವರ್ ಕಸ್ಟಮರ್(ಕೆವೈಸಿ) ಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಸ್ವಯಂ ನಿಯಂತ್ರಣ ಸಂಸ್ಥೆ(ಎಸ್‌ಆರ್‌ಒ)ಗಳು ಕಾರ್ಯಾಚರಣೆ ಮಾರ್ಗದರ್ಶಿ ಸೂತ್ರಗಳನ್ನು ಸ್ಥಾಪಿಸಿವೆ. ಇದಲ್ಲದೆ, ಕೌಶಲ್ಯದ ಆಟಗಳಾದ ಗೇಮ್ಸ್ ಆಫ್ ಸ್ಕಿಲ್ ಮತ್ತು ಅವಕಾಶದ ಆಟಗಳಾದ ಗೇಮ್ಸ್ ಆಫ್ ಚಾನ್ಸ್‌ಗಳ ನಡುವಿನ ಪ್ರತ್ಯೇಕತೆಗಳನ್ನು ತಿಳಿಸುವ ಮಾನದಂಡಗಳ ಪಟ್ಟಿಯನ್ನು ಎಸ್‌ಆರ್‌ಒಗಳು ಎಂಇಐಟಿವೈನೊಂದಿಗೆ ಅದರಲ್ಲಿಯೂ ಕೇಂದ್ರ ಸರಕಾರದೊಂದಿಗೆ ಹಂಚಿಕೊಂಡಿವೆ. ಆದರೆ, ಈ ಪ್ರತ್ಯೇಕವಾಗಿಸುವಂತಹ ಮಾನದಂಡಗಳನ್ನು ಕಾನೂನುಬದ್ಧವಾಗಿಸುವ ನಿಟ್ಟಿನಲ್ಲಿ ಸರಕಾರ ಕಾರ್ಯೋನ್ಮುಖವಾಗಬೇಕಾಗಿದೆ. ಆದ್ದರಿಂದ ಈಗ ಮುಂದುವರಿಯುತ್ತಿರುವ ಕಟ್ಟುನಿಟ್ಟಿನ ತೆರಿಗೆ ನೀತಿಗಳು ಉದ್ಯಮಕ್ಕೆ ಗಮನಾರ್ಹ ಬೆದರಿಕೆವೊಡ್ಡುವುದನ್ನು ಮುಂದುವರಿಸಿವೆ. ಇದು ಸಮಂಜಸವಾದ ಮತ್ತು ಸಮರ್ಥನೀಯ ತೆರಿಗೆಯ ಅನುಷ್ಠಾನವನ್ನು ಪ್ರೇರೇಪಿಸುತ್ತದೆ.

ಈ ರೀತಿಯ ಉನ್ನತ ತೆರಿಗೆಗಳು ಮತ್ತು ನಿಯಂತ್ರಣ ನಿಯಮಗಳಲ್ಲಿ ಅಸ್ಥಿರತೆಯಿಂದಾಗಿ ಗೇಮಿಂಗ್ ಕಂಪನಿಗಳು ವಿದೇಶಗಳಿಗೆ ತಮ್ಮ ಕಾರ್ಯಾಚರಣೆಯನ್ನು ವರ್ಗಾಯಿಸುವಂತೆ ಮಾಡುತ್ತವೆ. ಅಥವಾ ಅವು ಅನಧಿಕೃತ ಮಾರುಕಟ್ಟೆಗಳಿಗೆ ಪ್ರವೇಶಿಸುವಂತೆ ಮಾಡುತ್ತವೆ. ಇದರಿಂದ ಸ್ಥಳೀಯ ಉದ್ಯೋಗಾವಕಾಶಗಳಿಗೆ ಅಪಾಯ ಉಂಟಾಗಬಹುದಾಗಿದೆ. ಭಾರತದ ಗೇಮಿಂಗ್ ಕ್ಷೇತ್ರ 1,400ಕ್ಕೂ ಹೆಚ್ಚಿನ ಸಂಖ್ಯೆಯ ಸಂಸ್ಥೆಗಳನ್ನು ಒಳಗೊಂಡಿದ್ದು, 2028ರ ವೇಳೆಗೆ 6 ಶತಕೋಟಿ ಅಮೆರಿಕನ್ ಡಾಲರ್ ಆದಾಯದ ನಿರೀಕ್ಷೆ ಹೊಂದಿವೆ. ಆದರೆ, ಅವು ಈಗ ಸಂಭಾವ್ಯ ಅಡೆತಡೆಗಳನ್ನು ಎದುರಿಸುತ್ತಿದ್ದು ಆರ್‌ಎಂಜಿ ವೇದಿಕೆಗಳು ನಿಯಂತ್ರಣದ ಒತ್ತಡದಲ್ಲಿ ಬಂಡವಾಳವನ್ನು ಹಿಂತೆಗೆಯುವುದನ್ನು ಕುರಿತು ಚಿಂತಿಸಬೇಕಾಗಿದೆ.

**ಭವಿಷ್ಯದ ಮೇಲ್ನೋಟ ಮತ್ತು ಆರ್ಥಿಕ ಪರಿಣಾಮ**

ಭವಿಷ್ಯದೆಡೆಗೆ ಕಣ್ಣು ಹಾಯಿಸಿದಲ್ಲಿ (ಭಾರತದಲ್ಲಿ ವಿಕಸನಗೊಳ್ಳುತ್ತಿರುವ ಆನ್‌ಲೈನ್ ಗೇಮಿಂಗ್ ಕ್ಷೇತ್ರವನ್ನು ಮುಂದೆ ಸಾಗಿಸುವುದು) ಡಿಸೆಂಬರ್ 2023ರಲ್ಲಿ ಪ್ರಕಟಿಸಲಾದ ಇವೈ ವರದಿ ಗನುಗುಣವಾಗಿ ಆರ್‌ಎಂಜಿ ಉದ್ಯಮ ಭರವಸೆಯ ತೆರಿಗೆ ಆದಾಯದ ಸಾಮರ್ಥ್ಯ ಹೊಂದಿದೆ. ಅಲ್ಲದೆ, 2028ರ ಹೊತ್ತಿಗೆ 6,800 ಕೋಟಿ ರು.ಗಳಿಗೆ ತಲುಪುವ ನಿರೀಕ್ಷೆ ಇದೆ. ಇದಲ್ಲದೆ, ಪೂರ್ವಾನ್ವಯದ ತೆರಿಗೆ ಸವಾಲುಗಳನ್ನು ಗಮನಿಸಲು 11ಎ ವಿಭಾಗವನ್ನು ಬಳಸಿಕೊಳ್ಳುವಂತೆ ನ್ಯಾಯವಾದಿಗಳು ಒತ್ತಾಯಿಸುತ್ತಾರೆ. ಜತೆಗೆ ಈ ಉದ್ಯಮ ದೇಶದ ಎಲ್ಲೆಡೆ ವಿಸ್ತರಿಸುವುದನ್ನು ಪೋಷಿಸುವುದಕ್ಕಾಗಿ ಕೌಶಲ್ಯಾಧಾರಿತ ಆಟಗಳ ಮೇಲೆ ಜಿಎಸ್‌ಟಿ ಕಡಿಮೆ ಮಾಡುವಂತೆ ವಾದಿಸುತ್ತಾರೆ.

ಕೌಶಲ್ಯಾಧಾರಿತ ಗೇಮ್‌ಗಳನ್ನು ಪ್ರತ್ಯೇಕಿಸುವ ಗುರಿಯೊಂದಿಗೆ ರಾಜ್ಯದ ನಿಯಂತ್ರಣ ಸಂಸ್ಥೆಯನ್ನು ಸ್ಥಾಪಿಸುವ ತಮಿಳುನಾಡಿನ ಪ್ರಸ್ತಾಪವು ಗೇಮಿಂಗ್ ಶುಲ್ಕಗಳ ಮೇಲೆ ವಿಧಿಸುವ ಜಿಎಸ್‌ಟಿ ಮೇಲೆ ಸಂಘಟಿತ ರಾಷ್ಟ್ರೀಯ ಮಾರ್ಗದರ್ಶಿ ಸೂತ್ರಗಳನ್ನು ವಿಧಿಸುವ ತುರ್ತು ಅಗತ್ಯವನ್ನು ಒತ್ತಿ ಹೇಳುತ್ತದೆ. ಭಾರತೀಯ ಚಲನಶೀಲ ಗೇಮಿಂಗ್ ಕೈಗಾರಿಕೆಯೊಳಗಡೆ ಸುಸ್ಥಿರ ಬೆಳವಣಿಗೆಯ ಖಾತ್ರಿ ಮಾಡಿಕೊಳ್ಳಲು ಹಾಗೂ ಹೂಡಿಕೆದಾರರ ವಿಶ್ವಾಸವನ್ನು ಉಳಿಸಿಕೊಳ್ಳಲು ತೆರಿಗೆ ನೀತಿಗಳ ಮೇಲೆ ಸ್ಪಷ್ಟತೆ ಅನಿವಾರ್ಯವಾಗಿರುತ್ತದೆ.

**ಅಂತಿಮ ತೀರ್ಮಾನ**

ಭಾರತದಲ್ಲಿ ಗೇಮಿಂಗ್ ಕ್ಷೇತ್ರದ ಸಾಮರ್ಥ್ಯವನ್ನು ಪೋಷಿಸಲು ಸ್ಪಷ್ಟ ಮತ್ತು ಬೆಂಬಲ ನೀಡುವಂತಹ ನೀತಿಗಳನ್ನು ಅನುಷ್ಠಾನಕ್ಕೆ ತರುವುದು ಮತ್ತು ಈ ನಿಯಂತ್ರಣದಲ್ಲಿನ ಸವಾಲುಗಳನ್ನು ಕುರಿತು ಗಮನಿಸುವುದು ಮುಖ್ಯವಾಗಿರುತ್ತದೆ. ಕ್ಷೇತ್ರಕ್ಕೆ ನೆರವಾಗುವಂತಹ ನಿಯಂತ್ರಣ ವಾತಾವರಣವನ್ನು ಪೂರೈಸುವುದರ ಜತೆಗೆ ನೀತಿ ರೂಪಿಸುವವರು ನವೀನತೆಗೆ ಚಾಲನೆ ನೀಡಬಹುದಲ್ಲದೆ, ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸಬಹುದು. ಜತೆಗೆ ಈ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಕೈಗಾರಿಕೆಯಲ್ಲಿ ಉದ್ಯೋಗ ಸೃಷ್ಟಿಯ ಸಂರಕ್ಷಣೆ ಕೈಗೊಳ್ಳಬಹುದು.

ಅನಿಶ್ಚಿತತೆಗಳನ್ನು ಇಲ್ಲವಾಗಿಸುವ, ಹೂಡಿಕೆಗಳನ್ನು ಆಕರ್ಷಿಸುವ ಮತ್ತು ಗೇಮಿಂಗ್ ಕ್ಷೇತ್ರವನ್ನು ಸುಸ್ಥಿರ ಬೆಳವಣಿಗೆಯ ಕಡೆಗೆ ಕರೆದೊಯ್ಯುವ ನಿರ್ಣಯಾತ್ಮಕ ನಿಯಂತ್ರಣ ಕಾರ್ಯಗಳನ್ನು ಕೈಗೊಳ್ಳಬೇಕಾದ ಪ್ರಮುಖ ಹಂತದಲ್ಲಿ ಭಾರತ ಇದೆ. ಯೋಜನಾತ್ಮಕ ನೀತಿ ಹಸ್ತಕ್ಷೇಪಗಳು, ಸ್ಥಿರವಾದ ತೆರಿಗೆ ನಿಯಮಗಳು ಮತ್ತು ಪಾಲುದಾರರ ಸಹಭಾಗಿತ್ವದ ಜತೆಗೆ ಭಾರತ ತನ್ನ ಗೇಮಿಂಗ್ ಕೈಗಾರಿಕೆಯ ಸಂಪೂರ್ಣ ಆರ್ಥಿಕ ಸಾಮರ್ಥ್ಯವನ್ನು ಬಳಸಿಕೊಳ್ಳಬಹುದು. ಅಲ್ಲದೆ, ಇದರೊಂದಿಗೆ ಮುಂಬರುವ ಭವಿಷ್ಯದ ವರ್ಷಗಳಲ್ಲಿ ರಾಷ್ಟ್ರದ ಡಿಜಿಟಲ್ ಆರ್ಥಿಕತೆಗೆ ಗೇಮಿಂಗ್ ಉದ್ಯಮ ಗಮನಾರ್ಹ ಕೊಡುಗೆ ನೀಡಬಹುದು.

**(ಲೇಖಕರು: ಅಭಿವೃದ್ಧಿ ಆರ್ಥಿಕ ತಜ್ಞರು ಮತ್ತು ಭಾರತ ಸರಕಾರದ ನಿವೃತ್ತ ಕಾರ್ಯದರ್ಶಿ )**

## ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

# ಅನರ್ಹ ಕಾರ್ಡ್ ರದ್ದುಮಾಡಿ!

ಬಡತನ ರೇಖೆಗಿಂತಲೂ ಕೆಳಗಿರುವವರಿಗೆ ಅನುಕೂಲವಾಗಲೆಂದು ಬಿಪಿಎಲ್ ಕಾರ್ಡ್‌ಗಳನ್ನು ನೀಡುವುದರ ಮೂಲಕ ಪಡಿತರ ಧಾನ್ಯ ಮತ್ತು ಹಲವಾರು ಸವಲತ್ತುಗಳನ್ನು ರಾಜ್ಯ ಸರಕಾರ ನೀಡುತ್ತಾ ಬಂದಿದೆ. ಇತ್ತೀಚಿನ ವರ್ಷಗಳಲ್ಲಿ ಉಳ್ಳವರು ಕೂಡಾ ಬಿಪಿಎಲ್ ಕಾರ್ಡ್‌ಗಳನ್ನು ಪಡೆದುಕೊಂಡು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಸರಕಾರಗಳು ಬದಲಾದಾಗಲೆಲ್ಲ 'ಅನರ್ಹ ಬಿಪಿಎಲ್ ಕಾರ್ಡ್'ಗಳನ್ನು ಮುಟ್ಟುಗೋಲು ಹಾಕಿಕೊಂಡು, ಇದುವರೆಗೂ ಪಡೆದ ಪಡಿತರಕ್ಕೆ ಮಾರುಕಟ್ಟೆ ದರದಲ್ಲಿ ಹಣ ವಸೂಲಿ ಮಾಡಿ ಕ್ರಮ ಜರುಗಿಸಲಾಗುವುದೆಂದು ಸರಕಾರ ಎಚ್ಚರಿಕೆ ನೀಡಿ ಕಳೆದೆರಡು ವರ್ಷಗಳಲ್ಲಿ ಹಲವು ಕಡೆ ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ಮುಟ್ಟುಗೋಲು ಹಾಕಿಕೊಂಡು ದಂಡ ವಿಧಿಸಲಾಗಿದೆಯಾದರೂ ಬಿಪಿಎಲ್ ಕಾರ್ಡ್‌ಗಳನ್ನು ಪಡೆದುಕೊಳ್ಳುವವರ ಸಂಖ್ಯೆ ಕಡಿಮೆಯಾಗಿಲ್ಲ. ಬಿಪಿಎಲ್ ಕಾರ್ಡ್ ಪಡೆಯಲು ಕೆಲವು ಮಾನದಂಡಗಳನ್ನು ವಿಧಿಸಲಾಗಿದೆಯಾದರೂ, ಮತದಾರರನ್ನು ಓಲೈಸಲು ಜನಪ್ರತಿನಿಧಿಗಳೇ ಅನರ್ಹರಿಗೆ ಬಿಪಿಎಲ್ ಕಾರ್ಡ್‌ಗಳನ್ನು ಮಾಡಿಸಿಕೊಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಅನರ್ಹ ಬಿಪಿಎಲ್ ಕಾರ್ಡ್ ಪತ್ತೆಹಚ್ಚುವುದು ಬಹಳ ಕಷ್ಟದ ಕೆಲಸವೇನಲ್ಲ. ಬಿಪಿಎಲ್ ಕಾರ್ಡ್ ಪಡೆದುಕೊಳ್ಳಲು ಆಧಾರ್ ಕಾರ್ಡ್ ಅತ್ಯಗತ್ಯವಾಗಿ ಬೇಕು. ರಾಜ್ಯದ ಬಹುತೇಕ ಜನರು ಬ್ಯಾಂಕ್‌ಗಳಲ್ಲಿ ಖಾತೆ ತೆರೆದಿದ್ದು ಆಧಾರ್ ಮತ್ತು ಪಾನ್ ಕಾರ್ಡ್ ನಂಬರನ್ನು ತಮ್ಮ ಖಾತೆಗೆ ಜೋಡಿಸಿರುತ್ತಾರೆ ಇದರಿಂದಾಗಿ ಅವರ ಆದಾಯವನ್ನು ಕಂಡು ಹಿಡಿಯುವುದು ಕಷ್ಟವೇನಲ್ಲ. ಅದೇರೀತಿ ಕೆಲವು ವರ್ಷಗಳ ಹಿಂದೆ ನಡೆಸಿದ ಜನ ಗಣತಿಯಲ್ಲಿ ಕುಟುಂಬದ ಉದ್ಯೋಗ, ಆದಾಯ, ಗೃಹೋಪಯೋಗಿ ವಸ್ತುಗಳು, ಜಾನುವಾರುಗಳು, ವಾಹನಗಳು ಹೀಗೆ ಹಲವಾರು ವಿವರಗಳನ್ನು ಪಡೆಯಲಾಗಿದೆ. ಇದನ್ನೇ ಆಧಾರವಾಗಿಟ್ಟುಕೊಂಡು ಅನರ್ಹ ಬಿಪಿಎಲ್ ಕಾರ್ಡ್ ಗಳನ್ನು ಸುಲಭವಾಗಿ ಪತ್ತೆ ಹಚ್ಚಬಹುದು. ಅನರ್ಹ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ದಂಡ ವಿಧಿಸುವುದರೊಂದಿಗೆ ಕಾರ್ಡ್ ನೀಡಿದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಿದರೆ ಮಾತ್ರ ಅನರ್ಹ ಬಿಪಿಎಲ್ ಕಾರ್ಡ್ ಗಳಿಗೆ ಕಡಿವಾಣ ಹಾಕಬಹುದು.

– **ಜಿ.ನಾಗೇಂದ್ರ ಕಾವೂರು** ಸಂಡೂರು

# ಹೊಸ ಏರ್‌ಪೋರ್ಟ್ ಬೇಕೇ?

ಈಗಾಗಲೇ ಅಭಿವೃದ್ಧಿ ಯೋಜನೆಯ ಹೆಸರಿನಲ್ಲಿ ಸಾಕಷ್ಟು ರೈತ ಭೂಮಿಗಳು, ಅರಣ್ಯ ಪ್ರದೇಶವನ್ನು ಸರಕಾರ ಒತ್ತುವರಿ ಮಾಡಿದೆ. ಲಕ್ಷಾಂತರ ಮರಗಳ ಮಾರಣ ಹೋಮ ನಡೆದಿದೆ. ಅದರ ಪರಿಣಾಮಗಳನ್ನು ನಾವು ಪ್ರತಿನಿತ್ಯವು ಅನುಭವಿಸುತ್ತಿದ್ದೇವೆ. ಸದ್ಯಕ್ಕೆ ಬೆಂಗಳೂರಿಗೆ ಮತ್ತೊಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬೇಕೆಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಹೇಳುತ್ತಿದ್ದಾರೆ. ಅಷ್ಟೇ ಅಲ್ಲ, ಈ ಯೋಜನೆಗೆ 4500 ರಿಂದ 5000 ಎಕರೆ ಭೂಮಿ ಬೇಕಂತೆ. ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವಿಕೆ, ಜನ ಸಂದಣಿ ತಡೆಯಲು, ಐಟಿ ಹಬ್ ವಿಸ್ತರಣೆ ಮಾಡುವಿಕೆ, ಬಂಡವಾಳ ಹೂಡಿಕೆಗೆ ಅವಕಾಶ ಎಂದೆಲ್ಲ ಕಾರಣ ನೀಡಿ, ಇರುವ ಭೂಮಿಯನ್ನೆಲ್ಲ ಕೈಗಾರೀಕರಣಕ್ಕೆ ಬಳಸಿಕೊಂಡರೆ ಪರಿಸರದ ಮೇಲೆ ಎಂತಹ ಪರಿಣಾಮ ಬೀರುತ್ತದೆ ಎಂದು ಯೋಚಿಸಬೇಕಲ್ಲವೇ? ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಇಂತಹ ಅನಗತ್ಯ ಯೋಜನೆಯಿಂದ ಮನುಷ್ಯನ ಮೂಲಭೂತ ಅವಶ್ಯಕತೆಗೆ ಇಂದು ಕುತ್ತು ಬರುತ್ತಿದೆ. ಎಲ್ಲ ಅಭಿವೃದ್ಧಿಗಳು ಒಂದು ಮಿತಿಯಲ್ಲಿದ್ದರೆ ಮನುಕುಲಕ್ಕೆ ಒಳಿತು.

**–ಸುರೇಂದ್ರ ಪೈ ಭಟ್ಕಳ**

# ಹೆಸರು ಬದಲಿಸುವುದೇಕೆ?

ರಾಮನಗರ ಜಿಲ್ಲೆಗೆ 'ಬೆಂಗಳೂರು ದಕ್ಷಿಣ' ಎಂದು ಮರುನಾಮಕರಣ ಮಾಡಬೇಕು ಎಂಬ ಬೇಡಿಕೆ ಮತ್ತೆ ಮುನ್ನೆಲೆಗೆ ಬಂದಿದ್ದು ಡಿಕೆ. ಶಿವಕುಮಾರ್ ನೇತೃತ್ವದ ನಿಯೋಗ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಇದಕ್ಕೆ ಜೆಡಿಎಸ್ ಮತ್ತು ಬಿಜೆಪಿ ನಾಯಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. 'ಕಾಂಗ್ರೆಸ್ಸಿನವರು ಈಗ ಜಿಲ್ಲೆಯ ಹೆಸರು ಬದಲಿಸಬಹುದು. ಮತ್ತೆ ನಾನು ಅಧಿಕಾರಕ್ಕೆ ಬಂದೇ ಬರುತ್ತೇನೆ. ಆಗ ಇವರು ಇಟ್ಟಿರುವ ಹೆಸರನ್ನು ಕಿತ್ತೆಸೆಯುತ್ತೇನೆ' ಎಂದು ಕೇಂದ್ರದ ಭಾರೀ ಕೈಗಾರಿಕಾ ಸಚಿವ ಕುಮಾರಸ್ವಾಮಿ ಗುಡುಗಿದ್ದಾರೆ. ಇಲ್ಲಿ ಮೂಲ ಪ್ರಶ್ನೆ ಏನೆಂದರೆ ಊರುಗಳ ಹೆಸರಿನ ಬದಲಾವಣೆಯ ಅಗತ್ಯ ಇದೆಯೇ ಎಂದು. ಹಳೆಯ ಹೆಸರನ್ನು ಮರುಸ್ಥಾಪನೆಯ ಸಲುವಾಗಿ ಚೆನ್ನೈ, ಮುಂಬೈ, ಕೋಲ್ಕತ್ತಾ, ಒಡಿಶಾ ಮುಂತಾಗಿ ಬದಲಿಸಲಾಗಿದೆ. ರಾಮನಗರದ ಹೆಸರಿನ ಬದಲಾವಣೆಯ ಹಿಂದೆ ಸದುದ್ದೇಶಕ್ಕಿಂತಾ ದುರುದ್ದೇಶವೇ ಮೇಲ್ನೋಟಕ್ಕೆ ಕಾಣುತ್ತಿದೆ. ಇವರು ಬದಲಿಸಿದರೆ ಅವರು ಮತ್ತೆ ಬದಲಿಸುತ್ತೇನೆ ಎನ್ನುತ್ತಾರೆ. ಆಗಾಗ ಹೆಸರನ್ನು ಬದಲಿಸುತ್ತಿರಲು ಇದು ಮಕ್ಕಳಾಟವೇ?

ಊರು ಜಿಲ್ಲೆಗಳ ಹೆಸರುಗಳನ್ನು ಅದರ ಪಾಡಿಗೆ ಇರಲು ಬಿಟ್ಟು ಅಗತ್ಯ ಅಭಿವೃದ್ಧಿ ಮತ್ತು ಜನಪರ ಕೆಲಸಗಳತ್ತ ಗಮನ ನೀಡಲು ಜನಪ್ರತಿನಿಧಿಗಳು ಆದ್ಯತೆ ನೀಡಲಿ.

**–ಪತ್ತಂಗಿ ಎಸ್ ಮುರಳಿ**

# ಇದೆಲ್ಲ ಲಾಭವೇ?

ಕೆನರಾ ಬ್ಯಾಂಕ್ 2023 –24 ನೇ ಆರ್ಥಿಕ ವರ್ಷದಲ್ಲಿ 1838 ಕೋಟಿ ರುಪಾಯಿಗಳಷ್ಟು ಲಾಭಂಶದ ಭಾರಿ ಮೊತ್ತದ ಚೆಕ್ಕನ್ನು ಸಚಿವೆ ನಿರ್ಮಲಾ ಸೀತಾರಾಮನ್ ಮೂಲಕ ಸರಕಾರಕ್ಕೆ ಹಸ್ತಾಂತರಿಸಿರುವ ಸುದ್ದಿ ಮಾಧ್ಯಮಗಳಲ್ಲಿ ಬಂದಿದೆ. ಈ ಸಂದರ್ಭದಲ್ಲಿ ಬ್ಯಾಕಿನ ವ್ಯ.ನಿರ್ದೇಶಕ ಹಾಗೂ ಮುಖ್ಯ ನಿರ್ವಾಹಕ ಅಧಿಕಾರಿದಕ್ಷತೆ, ಬದ್ಧತೆ, ಶ್ರದ್ಧೆ ಮತ್ತು ಸಿಬ್ಬಂದಿಯ ಕಠಿಣ ಪರಿಶ್ರಮದಿಂದ ಹೆಚ್ಚು ಲಾಭ ಗಳಿಸಿದ್ದಾಗಿ ಹೇಳಿಕೊಂಡಿದ್ದಾರೆ! ಬ್ಯಾಂಕಿನಲ್ಲಿ ಪ್ರತಿಯೊಂದಕ್ಕೂ ಬೇಕಾಬಿಟ್ಟಿ ಶುಲ್ಕ ವಿಧಿಸಿ ಗ್ರಾಹಕರಿಂದ ಲೂಟಿಮಾಡಿ ಈರೀತಿ 'ಹಾವು ಹೊಡೆದು ಹದ್ದಿಗೆ' ಹಾಕಿರುವುದು ಸರಿಯಲ್ಲ. ಬ್ಯಾಂಕುಗಳ ಉದ್ದೇಶ ಗ್ರಾಹಕರಿಗೆ, ವಾಣಿಜ್ಯೋದ್ಯಮ ಮತ್ತು ಸಮಾಜದ ಏಳಿಗೆಗಾಗಿ ಹೊರತು ಲಾಭಕ್ಕಾಗಿ ವಿವಿಧ ವ್ಯವಹಾರಗಳ ಮೇಲೆ ಶುಲ್ಕವಿಧಿಸಿ ಸರಕಾರಕ್ಕೆ ಧಾರೆಯೆರೆಯಲಲ್ಲ. ಇಂತಹ ವರ್ತನೆಯಿಂದ ಬ್ಯಾಂಕ್ ಅಧಿಕಾರಿಗೆ ಇನ್ನೂ ಹೆಚ್ಚಿನ ಬಡ್ತಿ, ಉನ್ನತ ವಿವಿಧ ಅಧಿಕಾರದ ಲಾಭ ದೊರೆಯಬಹುದು. ಗ್ರಾಹಕರಿಗೆ ಬರೆಯೆಳೆದು ಸಂಗ್ರಹಿ ಲಾಭಗಳಿಸಿ ಸರಕಾರ ಬೀಗುತ್ತ ಸ್ವೀಕರಿಸಿ ಪ್ರೋತ್ಸಾಹಿಸುವುದು ಖಂಡಿತವಾಗಿಯೂ ಗ್ರಾಹಕ ಜನತೆಗೆ ಎಸಗುವ ವಂಚನೆ ಮತ್ತು ದ್ರೋಹ. ಭಾರತದ ರಿಸರ್ವ್ ಬ್ಯಾಂಕ್ ಸಹ ಇಂತಹ ಗ್ರಾಹಕ ವಿರೋಧಿ ಕ್ರಮವನ್ನು ವಿರೋ ಧಿಸದೆ ಅಸಹಾಯಕ ಆಗಿರುವುದು ಜನರ ದೌರ್ಭಾಗ್ಯ ಅಲ್ಲವೇ?

**–ಬೆಳ್ಳೆ ಚಂದ್ರಶೇಖರಶೆಟ್ಟಿ** ಬೆಂಗಳೂರು

# ದ್ರಾವಿಡ್‌ಗೆ ಬೇಕು ಸನ್ಮಾನ

ಕನ್ನಡಿಗ ರಾಹುಲ್ ದ್ರಾವಿಡ್ ರವರು ಈಗಿನ ಟಿ 20 ವಿಶ್ವ ಕಪ್ಪನ್ನು ಗೆಲ್ಲವಲ್ಲಿ ಮುಖ್ಯ ತರಬೇತುದಾರನಾಗಿ ಶ್ರಮ ವಹಿಸಿದಂತೆ, ನಾಲ್ಕೈದು ವರ್ಷಗಳ ಹಿಂದೆ ನಮ್ಮ ತಂಡವು ಕಿರಿಯರ ವಿಶ್ವ ಕಪ್ಪನ್ನು ಗೆಲ್ಲುವಾಗಲೂ ತರಬೇತುದಾರನಾಗಿ ತಮ್ಮ ಛಾಪನ್ನು ಮೂಡಿಸಿದ್ದರು. ದೇಶಕ್ಕಾಗಿ ಆಡುತ್ತಿದ್ದಾಗ 'ಗೋಡೆ'ಯಂತೆ ಅಡ್ಡ ನಿಂತು ಹಲವು ಸೋಲುವ ಪಂದ್ಯಗಳನ್ನೂ ಛಲದಿಂದ ಗೆದ್ದು, ಇನ್ನು ಹಲವಲ್ಲಿ ಡ್ರಾ ಮಾಡಿಕೊಂಡೂ ಬೇರೆ ದೇಶದ ಬೌಲರುಗಳಿಗೆ ಸವಾಲಾಗಿಯೇ ಉಳಿದಿದ್ದರು. ಅವರು ಆಟದಿಂದ ನಿವೃತ್ತರಾ ದಾಗ ಅವರಿಗೆ ಸೂಕ್ತ ಬೀಳ್ಕೊಡುಗೆ ಸಿಗಲಿಲ್ಲವೇನೋ? ಅವರ ಈ ಎಲ್ಲ ಸಾಧನೆಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ಕರ್ನಾಟಕದ ಕ್ರಿಕೆಟ್ ಮಂಡಳಿಯು ಅವರಿಗೆ ಎಲ್ಲ ಕ್ರೀಡಾ ಪ್ರೇಮಿಗಳ ಸಮ್ಮುಖದಲ್ಲಿ ಈಗಲಾದರೂ ಒಂದು ಸಕಾಲಿಕ ಸನ್ಮಾನ ಸಮಾರಂಭವನ್ನು ಏರ್ಪಡಿಸೀತೇ?

**–ಬಿ ಎನ್ ಭರತ್** ಬೆಂಗಳೂರು

## ಭಟ್ಟರ್ ಸ್ಕಾಚ್

● **ಅಮಾಸೆ ಸುಬ್ಬು, ಮೈಸೂರು**
ಒಂದು ವೇಳೆ ಡಿ ಬಾಸ್ ಅಭಿಮಾನಿಗಳು ಬಾಸ್‌ನ ಅನುಕರಣೆ ಮಾಡಲು ಹೊರಟರೆ ಸೂಕ್ತ ಸುರಕ್ಷಿತತಾಣ ಯಾವುದು?
**- ಶೆಡ್ !**

● **ಕಾಶಿಪ್ರಾಣೇಶ, ವಿದ್ಯಾಪೀಠ ಸರ್ಕಲ್**
ಭಟ್ರೇ, ರೇಣುಕಾಸ್ವಾಮಿ ಅಶ್ಲೀಲ ಮೆಸೇಜುಗಳನ್ನು ನೋಡಿ ಡಿಬಾಸ್ ಏನ್ಮಾಡಬೇಕಿತ್ತು?
**- ಡಿಲೀಟ್!**

● **ರಾಜೇಶ ಕೊಂಡಾಡಿ, (ಇಮೇಲ್ ಮೂಲಕ)**
ಭಟ್ರೇ, ನಿಮಗೆ ಹಾರ್ಟ್ ಇದೆ ಎಂಬುದನ್ನು ಸಾಬೀತು ಮಾಡಿದ್ರಲ್ಲ?
**- ಅಷ್ಟೇ ಅಲ್ಲ, ಅದು ವರ್ಕ್ ಮಾಡ್ತಾ ಇದೆ ಎಂಬುದನ್ನೂ !**

● **ಕೆ.ಎಲ್.ಗೌಡ, ಆರ್.ಆರ್.ನಗರ**
ಭಟ್ರೇ, ಆರ್.ಆರ್.ನಗರ ವಾಸ್ತು ಸರಿ ಇಲ್ಲ ಅಂತ ಆರ್ಯವರ್ಧನ್ ಎಂಬ ಜ್ಯೋತಿಷಿ ಹೇಳಿದ್ದಾನಲ್ಲ?
**- ಮೊದಲು ಆತನ ತಲೆ ಸರಿ ಇದೆಯಾ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಿತ್ತು!**

● **ಮನಗೂಳಿ ಭೀಮರಾಯ, ಬಸವನಗುಡಿ**
ಭಟ್ರೇ, ಶುದ್ಧ ಹಸ್ತನಾಗಿದ್ದುಕೊಂಡು ಜನಸೇವೆ ಮಾಡುವ ಹೆಬ್ಬಯಕೆ. ಯಾವ ಪಕ್ಷ ಸೇರಲಿ?
**- ಯಾವ ಪಕ್ಷವನ್ನೂ ಸೇರದೇ ಜನಸೇವೆ ಮಾಡುವುದು ಒಳ್ಳೆಯದು!**

● **ಶೀಲಾ ರಾಮಪ್ಪ, ಬೆಂಗಳೂರು**
ಭಟ್ರೇ, ನಿಮ್ಮ ಹಾರ್ಟ್ ಮೇಲೆ ಏನು ಬರೆಯಿಸಿಕೊಂಡಿದ್ದೀರಿ?
**-'ನನಗಾಗಿ ಬಡಿದಾಡುವವ ನೀನೊಬ್ಬನೇ!'**

● **ನಂದೀಶ ಕೆ., ಹಾರೋಹಳ್ಳಿ**
ಭಟ್ರೇ, ರಾಹುಲ್ ಗಾಂಧಿ ಚೆನ್ನಾಗಿ ಮಾತಾಡಲಾರಂಭಿಸಿದ್ದಾನಲ್ಲ?
**- ಹಾಗಾದ್ರೆ, ಬುದ್ಧಿ ಬಂತು ಅಂದುಕೊಳ್ಳಬಹುದಾ?!**

● **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಮದುವೆ ಆಗಿಲ್ಲ, ಉರುಳುಸೇವೆ ಮಾಡಲಾ?
**- ಅದು ಮದುವೆ ನಂತರ ಮಾಡೋದಲ್ವೇ ರಮೇಶಾ!**

● **ರಾಧಾಕೃಷ ಅಡಿಗ, ಮೂಲ್ಕಿ**
ಭಟ್ರೇ, ಕುಮಾರಸ್ವಾಮಿಗೆ ಇನ್ನು ಎಲ್ಲವೂ ಕಬ್ಬಿಣದ ಕಡಲೆ ಎನ್ನಬಹುದಾ?
**- ಸದ್ಯ ಹಿಂದಿ ಮಾತ್ರ ಕಬ್ಬಿಣದ ಕಡಲೆಯಂತೆ!**

● **ವೀರಣ್ಣ ಕೆ., (ಇಮೇಲ್ ಮೂಲಕ)**
ಭಟ್ರೇ, ರಾತ್ರಿ ಬೀಟ್ ಪೊಲೀಸರಿಗೆ ಗುಂಡಿಗೆ ಗಟ್ಟಿ ಇರಬೇಕು ಅಂತಾರಲ್ಲ?
**- ಹಾರ್ಟ್ ಬೀಟ್ ಸರಿ ಇದ್ದರೆ ಸಾಕು!**

# ಇದೂ ಶೆಡ್‌ನಲ್ಲೇ ಆರಂಭವಾದದ್ದು...!

**ವಿದೇಶವಾಸಿ**
**ಕಿರಣ್ ಉಪಾಧ್ಯಾಯ ಬಹ್ರೈನ್**
dhyapaa@gmail.com

ಕರ್ಸನ್ ಭಾಯಿ ಪಟೇಲ್ ಅಂದರೆ ಯಾರಾದರೂ ನೆನಪಾಗುತ್ತರೆಯೇ ಅಥವಾ ಏನಾದರೂ ನೆನಪಾಗುತ್ತದೆಯೇ? ಬೇಡ, ಹೇಮಾ, ರೇಖಾ, ಜಯಾ ಮತ್ತು ಸುಷ್ಮಾ... ಈಗ ನೆನಪಾಗಿರಬಹುದು ಅಲ್ಲವೇ? ಈಗಲೂ ನೆನಪಾಗದಿದ್ದರೆ, 'ನಿರ್ಮಾ... ಹಾಲಿನಂಥ ಬಿಳುಪು ನಿರ್ಮಾದಿಂದ ಬಂತು...' ಎಂದರಂತೂ ನೆನಪಾಗೇ ಇರುತ್ತದೆ. ಸರಿಯಾಗೇ ಊಹಿಸಿದ್ದೀರಿ, ನಿರ್ಮಾ ಸಂಸ್ಥೆಯನ್ನು ಆರಂಭಿಸಿದ ಅದೇ ಕರ್ಸನ್ ಭಾಯಿ ಪಟೇಲ್.

ನನ್ನ ಹೈಸ್ಕೂಲ್ ದಿನಗಳಲ್ಲಿ ಎಂದು ನೆನಪು, ಕರ್ಸನ್ ಎಂಬ ಹೆಸರಿನ ಇಬ್ಬರು ವ್ಯಕ್ತಿಗಳ ಕುರಿತಾಗಿ ಕೇಳಿದ್ದೆ. ಇಬ್ಬರೂ ಮೂಲತಃ ಗುಜರಾತ್‌ನವರು. ಅದರಲ್ಲಿ ಒಬ್ಬರು ಭಾರತ ಕ್ರಿಕೆಟ್ ತಂಡಕ್ಕೆ ಆಡಿದ ಕರ್ಸನ್ ಘಾವ್ರಿ. ಎಡಗೈ ವೇಗದ ಬೌಲರ್ ಘಾವ್ರಿ, ಸುಮಾರು ಏಳು-ಎಂಟು ವರ್ಷ ಭಾರತ ತಂಡಕ್ಕಾಗಿ ಆಡಿದವರು. ಎಡಗೈಯಲ್ಲಿ ಬೌಲಿಂಗ್, ಬ್ಯಾಟಿಂಗ್ ಮಾಡುತ್ತಿದ್ದ ಘಾವ್ರಿ ಉತ್ತಮ ಆಲ್ರೌಂಡರ್ ಆಗಿದ್ದರು. ಕಪಿಲ್ ದೇವ್ ಬರುವುದಕ್ಕಿಂತ ಎರಡು-ಮೂರು ವರ್ಷ ಮೊದಲೇ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದ ಘಾವ್ರಿ, ಮೊದಲ ಎರಡು ವಿಶ್ವಕಪ್ ಆಡಿದ ಭಾರತದ ತಂಡದಲ್ಲಿದ್ದರು. ಭಾರತಕ್ಕೆ ಕೆಲವು ಪಂದ್ಯಗಳನ್ನು ಘಾವ್ರಿ ಗೆದ್ದು ಕೊಟ್ಟಿದ್ದಾರೆ. ಭಾರತ ತಂಡಕ್ಕೆ ಕಪಿಲ್ ದೇವ್ ಸೇರಿಕೊಂಡಮೇಲೆ, ಘಾವ್ರಿ-ಕಪಿಲ್ ಜೋಡಿ ಎದುರಾಳಿ ತಂಡದ ಆರಂಭಿಕ ಆಟಗಾರರ ಶತಕದ ಜೊತೆಯಾಟ ಆಗಲು ಬಿಡಲಿಲ್ಲ ಎಂದು ನೆನಪು. ಏಕೋ ಏನೋ, 1981 ರ ವರೆಗೆ ಭಾರತಕ್ಕಾಗಿ ಆಡಿದ ಘಾವ್ರಿ, 1983 ರ ವಿಶ್ವಕಪ್ ಗೆದ್ದ ಭಾರತದ ತಂಡದಲ್ಲಿ ಇರಲಿಲ್ಲ. ಅವರ ಬದಲು ಮದನ್ ಲಾಲ್ ಭಾರತ ತಂಡದಲ್ಲಿದ್ದರು. ಕರ್ಸನ್ ಘಾವ್ರಿಯ ಚಿತ್ರ ಆಗಾಗ ದಿನಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತಿತ್ತು. ಆದರೆ ಇನ್ನೊಬ್ಬ ಕರ್ಸನ್ ಇದ್ದಾರಲ್ಲ, ಅವರ ಫೋಟೋ ಅಲ್ಲ, ಹೆಸರೂ ದಿನಪತ್ರಿಕೆಗಳಲ್ಲಿ ಬರುತ್ತಿರಲಿಲ್ಲ.




ಇರಲಿ, ಕರ್ಸನ್ ಭಾಯಿ ಪಟೇಲ್ ವಿಷಯಕ್ಕೆ ಬರೋಣ. ನನ್ನ ಕಾಲೇಜಿನ ದಿನಗಳಲ್ಲಿ ಅಪ್ಪ ಇಬ್ಬರು ಗುಜರಾತಿಗಳ ಉದಾಹರಣೆ ಕೊಡುತ್ತಿದ್ದರು. ಒಬ್ಬರು, ರಿಲಾಯನ್ಸ್ ಸಂಸ್ಥೆಯ ರೂವಾರಿ ಧೀರೂಭಾಯಿ ಅಂಬಾನಿ. 'ಅವರು ಮೊದಲು ಸೈಕಲ್ ಮೇಲೆ ಸೀರೆ ಹೊತ್ತು ಮಾರಾಟ ಮಾಡುತ್ತಿದ್ದರಂತೆ, ಈಗ ಎಷ್ಟು ದೊಡ್ಡದಾಗಿ ಬೆಳೆದಿದ್ದಾರೆ, ಭಾರತದ ಅತಿ ಶ್ರೀಮಂತರಲ್ಲಿ ಅವರೂ ಒಬ್ಬರಾಗಿದ್ದಾರೆ, ಮಾಡಿದರೆ ರಿಲಾಯನ್ಸ್‌ನಂಥ ಸಂಸ್ಥೆಯಲ್ಲಿ ಕೆಲಸ ಮಾಡಬೇಕು', ವಗೈರೆ, ವಗೈರೆ. ಅದೃಷ್ಟವಶಾತ್ ನನಗೆ ರಿಲಾಯನ್ಸ್ ಸಂಸ್ಥೆಯ ಜತೆ ನಾಲ್ಕು ವರ್ಷ ಕೆಲಸ ಮಾಡುವ ಅವಕಾಶವೂ ದೊರಕಿತು. ಇನ್ನೊಬ್ಬರು ಕರ್ಸನ್ ಭಾಯಿ ಪಟೇಲ್. 'ಕರ್ಸನ್ ಭಾಯಿ ಕೂಡ ಸೈಕಲ್ ಮೇಲೆ ವಾಶಿಂಗ್ ಪೌಡರ್ ಹೊತ್ತುಕೊಂಡು ಮನೆ ಮನೆಗೆ ಹೋಗಿ ಮಾರಾಟ ಮಾಡುತ್ತಿದ್ದರು. ಈಗ ನಿರ್ಮಾ ಸಂಸ್ಥೆಯನ್ನೇ ಕಟ್ಟಿದ್ದಾರೆ'. ಅಂಬಾನಿಯದ್ದಾದರೂ ಅಲ್ಲೊಂದು-ಇಲ್ಲೊಂದು ಫೋಟೋ ನೋಡಲು ಸಿಗುತ್ತಿತ್ತು. ಆದರೆ ಕರ್ಸನ್‌ಭಾಯಿ ಫೋಟೋ ಬಹಳ ವರ್ಷ ನಾನು ನೋಡಿಯೇ ಇರಲಿಲ್ಲ.

ಆ ದಿನಗಳಲ್ಲಿ ನಿರ್ಮಾ ವಾಶಿಂಗ್ ಪೌಡರ್ ಎರಡು ವಿಷಯಕ್ಕಾಗಿ ಸುದ್ದಿ ಮಾಡಿತ್ತು. ಒಂದು, ಅದರ ಬೆಲೆ, ಬಟ್ಟೆ ತೊಳೆಯುವ ಬೇರೆ ಸೋಪಿನ ಪುಡಿಗಿಂತ ನಿರ್ಮಾದ ಬೆಲೆ ಬಹಳ ಕಡಿಮೆ ಇತ್ತು. ಒಂದು ಸಂದರ್ಭದಲ್ಲಿ ನಿರ್ಮಾಕ್ಕೆ ಅದೇ ಮುಳುವೂ ಆಯಿತು. ಇನ್ನೊಂದು ಅದರ ಜಾಹೀರಾತು. ಆ ಕಾಲದಲ್ಲಿ ಚಲನಚಿತ್ರ ತಾರೆಯರನ್ನು ಬಳಸಿಕೊಂಡು ಮಾಡಿದ 'ವಾಶಿಂಗ್ ಪೌಡರ್ ನಿರ್ಮಾ' ಜಾಹೀರಾತು ದಶಕಗಳವರೆಗೆ ಚಾಲ್ತಿಯಲ್ಲಿತ್ತು. ಆ ಒಂದು ಜಾಹೀರಾತಿನಿಂದಾಗಿ ಮುಚ್ಚಿಹೋಗಲಿದ್ದ ನಿರ್ಮಾ ಸಂಸ್ಥೆ ಪುನಃ ಮಾರುಕಟ್ಟೆ ಪ್ರವೇಶಿಸಿತು. ಒಂದು ಕಾಲದಲ್ಲಿ ಸೈಕಲ್ ಮೇಲೆ ಡಿಟರ್ಜೆಂಟ್ ಪೌಡರ್ ಹೊತ್ತು ತಿರುಗಿದ್ದ ಕರ್ಸನ್‌ಭಾಯಿ ಪಟೇಲ್ ಇಂದು ಭಾರತದ ಅತಿ ಶ್ರೀಮಂತರಲ್ಲಿ ಒಬ್ಬರು. ಫೋರ್ಬ್ಸ್ ಸಂಸ್ಥೆಯ ಅಂಕಿ-ಅಂಶದ ಪ್ರಕಾರ ಈಗ ಎರಡು ವರ್ಷದ ಹಿಂದೆ ಕರ್ಸನ್‌ಭಾಯಿಯವರ ನಿವ್ವಳ ಆದಾಯ ಸುಮಾರು ನಲವತ್ತೆರಡು ಸಾವಿರ ಕೋಟಿ ರೂಪಾಯಿ. ಕರ್ಸನ್‌ಭಾಯಿ ಒಡೆತನದ ನಿರ್ಮಾ ಸಂಸ್ಥೆ ಗ್ರಾಹಕರಬಳಕೆಯ ಉತ್ಪನ್ನಗಳಿಗಷ್ಟೇ ಸೀಮಿತವಾಗಿರದೆ, ಶಿಕ್ಷಣ ಕ್ಷೇತ್ರದಲ್ಲೂ ತಳವೂರಿದೆ. ಮೊನ್ನೆ ಗುಜರಾತ್ ಪ್ರವಾಸದಲ್ಲಿದ್ದಾಗ ಅಹ್ಮದಾಬಾದ್‌ನಲ್ಲಿರುವ ನಿರ್ಮಾ ವಿಶ್ವವಿದ್ಯಾಲಯ ಕಣ್ಣಿಗೆ ಬಿದ್ದಾಗ ನಿರ್ಮಾ ಕುರಿತಾದ ಒಂದಷ್ಟು ಹಳೆಯ ಕತೆಗಳು ಪುನಃ ನೆನಪಾದವು. ಜತೆಗೆ ಒಂದಷ್ಟು ಹೊಸ ವಿಷಯಗಳನ್ನೂ ತಿಳಿಯುವಂತಾಯಿತು.

ಕರ್ಸನ್‌ಭಾಯಿ ಖೋಡಿದಾಸ್ ಪಟೇಲ್ ಹುಟ್ಟಿದ್ದು 1945 ರಲ್ಲಿ. ಅವರದ್ದು ಗುಜರಾತ್ ರಾಜಧಾನಿ ಗಾಂಧಿನಗರದಿಂದ ನೂರು ಕಿಲೋ ಮೀಟರ್ ಉತ್ತರಕ್ಕಿರುವ ಪಾಟಣ್ ಊರಿನ ರೈತ ಕುಟುಂಬ. ಇತ್ತೀಚೆಗೆ ನನಗೆ ತಿಳಿದ ವಿಷಯ ಏನೆಂದರೆ, ಈ ಪ್ರಾಂತ್ಯದ ಬಹುತೇಕ ಜನ ಸರಕಾರಿ ನೌಕರಿಯನ್ನಾಗಲಿ, ರೈತಾಪಿಯನ್ನಾಗಲಿ ಬಹಳ ದಿನ ಮಾಡುವುದಿಲ್ಲವಂತೆ. ಆರಂಭದಲ್ಲಿ ಕೆಲವು ವರ್ಷ ನೌಕರಿ, ನಂತರದ ಕೆಲವು ವರ್ಷ ಬಿಡುವಿನ ಸಮಯದಲ್ಲಿ ಯಾವುದಾದರೂ ವ್ಯಾಪಾರ ಆರಂಭಿಸುತ್ತಾರಂತೆ. ಕ್ರಮೇಣ ನೌಕರಿ ಬಿಟ್ಟು ಪೂರ್ಣ ಪ್ರಮಾಣದಲ್ಲಿ ಉದ್ಯಮದ ಕಡೆಗೆ ಗಮನ ಹರಿಸುತ್ತಾರಂತೆ. ಮಾಡುವ ಒಂದೇ ಉದ್ಯಮದಲ್ಲಿ, ವ್ಯಾಪಾರದಲ್ಲಿ ನಾಲ್ಕು-ಐದು ಬಾರಿ ನಷ್ಟವಾಗುವವರೆಗೆ ಅಥವಾ ಒಂದರಲ್ಲಿ ನಷ್ಟವಾದಾಗ ಇನ್ನೊಂದರಂತೆ, ಬೇರೆ ಬೇರೆ ವ್ಯಾಪಾರ ಮಾಡಿ ಸೋತಾಗ ಪುನಃ ನೌಕರಿಗೆ ಹೋಗುತ್ತಾರಂತೆ. ಇದು ಎಷ್ಟು ಸುಳ್ಳು, ಎಷ್ಟು ಖರೆ ಗೊತ್ತಿಲ್ಲ. ಆದರೆ ಗುಜರಾತಿಗಳಲ್ಲಿ ನೌಕರಿಗಿಂತ ವ್ಯಾಪಾರದ ಹುಚ್ಚು ಹೆಚ್ಚು ಇರುವುದಂತೂ ಹೌದು. ಅದರಲ್ಲೂ ಕರ್ಸನ್‌ಭಾಯಿಯಂಥವರನ್ನು ನೋಡಿದಾಗ ಅದು ನಿಜ ಅನ್ನಿಸುತ್ತದೆ.

ರೈತರ ಕುಟುಂಬದಲ್ಲಿ ಜನಿಸಿದ ಕರ್ಸನ್‌ಭಾಯಿ ಓದಿದ್ದು ರಸಾಯನಶಾಸ್ತ್ರ. ಓದಿನ ನಂತರ ಗುಜರಾತಿನ ಭೂವೈಜ್ಞಾನಿಕ ಮತ್ತು ಗಣಿಗಾರಿಕೆ ಇಲಾಖೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ನೌಕರಿಯಿಂದ ಸಂಬಳ ಬರುತ್ತಿತ್ತು, ಹೊಟ್ಟೆ ತುಂಬುತ್ತಿತ್ತು, ಮನಸ್ಸು ತುಂಬುತ್ತಿರಲಿಲ್ಲ. ಇನ್ನೂ ಹೆಚ್ಚಿನದನ್ನು ಸಾಧಿಸಬೇಕೆಂಬ ತುಡಿತ ದಿನದಿಂದ ದಿನಕ್ಕೆ ಹೆಚ್ಚುತ್ತಿತ್ತು. ಅದಕ್ಕಾಗಿ ತಮ್ಮ ಮನೆಯ ಹಿತ್ತಲಿನಲ್ಲಿರುವ ಶೆಡ್ ಅನ್ನು ಬಳಸಿಕೊಂಡರು. ಪ್ರತಿನಿತ್ಯ ಸರಕಾರಿ ಕೆಲಸ ಮುಗಿದ ನಂತರ ಆ ಶೆಡ್‌ನಲ್ಲಿಯೇ ಅವರ ಪ್ರಯೋಗ ನಡೆಯುತ್ತಿತ್ತು. ಅವರು ಕಾಲೇಜಿನಲ್ಲಿ ಓದಿದ್ದ ರಸಾಯನಶಾಸ್ತ್ರವನ್ನೇ ಆಧಾರವಾಗಿಟ್ಟುಕೊಂಡು ಬಟ್ಟೆ ತೊಳೆಯುವ ಸಾಬೂನಿನ ಪುಡಿ ತಯಾರಿಸುವ ಪ್ರಯೋಗ ಮಾಡುತ್ತಿದ್ದರು.

ಅರವತ್ತರ ದಶಕದಲ್ಲಿ ವಾಶಿಂಗ್ ಪೌಡರ್ ಭಾರತಕ್ಕೆ ಕಾಲಿಟ್ಟಾಗಿತ್ತು. ಆ ಲೆಕ್ಕದಲ್ಲಿ ಹೇಳುವುದಾದರೆ, ಮೊದಲನೆಯ ವಿಶ್ವಯುದ್ಧದ ಸಂದರ್ಭದಲ್ಲೇ ಕಂಡುಹಿಡಿಯಲಾಗಿದ್ದ ವಾಶಿಂಗ್ ಪೌಡರ್ ಭಾರತಕ್ಕೆ ಬರಲು ಸ್ವಲ್ಪ ತಡವಾಯಿತು ಎಂದೇ ಹೇಳಬಹುದು. ಭಾರತದಲ್ಲಿ ವಿದೇಶಿ ಸಂಸ್ಥೆಗಳು ಸಾಬೂನಿನ ಪುಡಿಯನ್ನು ತಯಾರಿಸಿ ಮಾರುತ್ತಿದ್ದವು. ಆದರೆ ಅವುಗಳ ಬೆಲೆ ಸ್ವಲ್ಪ ಹೆಚ್ಚೇ ಆಗಿದ್ದರಿಂದ ಜನ ಬಟ್ಟೆ ತೊಳೆಯಲು ಪುಡಿಗಿಂತ ಇಡಿ ಸಾಬೂನನ್ನೇ ಬಳಸುತ್ತಿದ್ದರು. ಬಟ್ಟೆ ತೊಳೆಯುವ ಸಾಬೂನಿನ ಪುಡಿಯನ್ನು ಕಡಿಮೆ ವೆಚ್ಚದಲ್ಲಿ ತಯಾರಿಸಿ ಜನರು ಕೊಂಡುಕೊಳ್ಳುವಂತಾಗಬೇಕು ಎಂದು ಪ್ರಯೋಗ ಆರಂಭಿಸಿದ್ದರು ಕರ್ಸನ್‌ಭಾಯಿ. ಅದರಲ್ಲಿ ಅವರು ಯಶಸ್ವಿಯೂ ಆದರು. ಆಗ ಅವರಿಗಿನ್ನೂ ಬರೀ ಇಪ್ಪತ್ತೈದು ವರ್ಷ! ಭಾರತದ ಡಿಟರ್ಜೆಂಟ್ ಪೌಡರ್ ಮಾರುಕಟ್ಟೆಯಲ್ಲಿ ಸಾಕಷ್ಟು ಸದ್ದು ಮಾಡಿದ ನಿರ್ಮಾ, ಮೊದಲು ಶೆಡ್‌ನಲ್ಲೇ ಆರಂಭವಾದದ್ದು!

ಕರ್ಸನ್‌ಭಾಯಿ ನಿತ್ಯವೂ ಕೆಲಸಕ್ಕೆ ಹೋಗುವಾಗ ತಾವು ತಯಾರಿಸಿದ ಪುಡಿಯನ್ನು ಸೈಕಲ್ ಮೇಲೆ ಹೇರಿಕೊಂಡು ಹೋಗುತ್ತಿದ್ದರು. ಹೋಗುವಾಗ, ಬರುವಾಗ ಮನೆ-ಮನೆಗೆ ಹೋಗಿ ಮಾರಾಟ ಮಾಡುತ್ತಿದ್ದರು. ತಾವು ತಯಾರಿಸಿದ ಪುಡಿಯನ್ನು ಬಳಸುವಂತೆ ಮನವೊಲಿಸುತ್ತಿದ್ದರು. ಸಮಾಧಾನವಾಗದಿದ್ದರೆ, ಹಣ ಹಿಂತಿರುಗಿಸುವುದಾಗಿ ಹೇಳುತ್ತಿದ್ದರು. ಮಾರಾಟಕ್ಕೆಂದು ಅವರು ಕೆಲಸಗಾರರನ್ನು ಇಟ್ಟುಕೊಂಡಿರಲಿಲ್ಲ. ಕೆಲಸಗಾರರಿಗೆ ಸಂಬಳ ಕೊಡುವಷ್ಟು ಅವರ ಬಳಿ ಹಣವೂ ಇರುತ್ತಿರಲಿಲ್ಲ. ಸರಿಯಾದ ಒಂದು ಸ್ಥಳಕ್ಕೆ ಬಾಡಿಗೆ ಕೊಡಲಾಗದೆ ಶೆಡ್‌ನಲ್ಲಿಯೇ ಪ್ರಯೋಗ, ತಯಾರಿಕೆ ಎಲ್ಲ ನಡೆಯುತ್ತಿರುವಾಗ ಸಂಬಳ ಎಲ್ಲಿಂದ ಕೊಡುವುದು? ಅದೂ ಅಲ್ಲದೆ, ಅಲ್ಲಿಯವರೆಗೂ ಶ್ರೀಮಂತರೆಂದು ಕರೆಸಿಕೊಂಡವರು ಮಾತ್ರ ಖರೀದಿಸುತ್ತಿದ್ದ ಪುಡಿಯನ್ನು ಬಡವರೂ, ಸಾಮಾನ್ಯ ವರ್ಗದವರೂ ಕೊಳ್ಳುವಂತಾಗಲು, ಉಳಿದ ಪೌಡರ್‌ಗಿಂತ ಕಮ್ಮಿ ಬೆಲೆಗೆ ತಮ್ಮ ಪುಡಿಯನ್ನು ಮಾರುತ್ತಿದ್ದರು. ಆ ಕಾಲದಲ್ಲಿ ಒಂದು ಕಿಲೋ ಸರ್ಫ್ ಎಕ್ಸೆಲ್ ಪುಡಿಗೆ ಹದಿನಾಲ್ಕು ರೂಪಾಯಿ ಇದ್ದರೆ, ಕರ್ಸನ್‌ಭಾಯಿ ತಾವು ತಯಾರಿಸಿದ ಪುಡಿಯನ್ನು ಮೂರು ರೂಪಾಯಿಗೆ ಮಾರುತ್ತಿದ್ದರು. ದಿನದಿಂದ ದಿನಕ್ಕೆ ನಿರ್ಮಾಕ್ಕೆ ಗ್ರಾಹಕರ ಸಂಖ್ಯೆ ಹೆಚ್ಚಾಯಿತು. ಕರ್ಸನ್‌ಭಾಯಿ ಅಹ್ಮದಾಬಾದ್‌ನಲ್ಲಿ ಒಂದು ಅಂಗಡಿ ಬಾಡಿಗೆಗೆ ಪಡೆದು ಅಲ್ಲಿ ತಮ್ಮ ವ್ಯಾಪಾರ ಆರಂಭಿಸಿದ್ದರು. ತಮ್ಮ ಸರಕಾರಿ ನೌಕರಿಗೆ ತಿಲಾಂಜಲಿ ಇಟ್ಟಿದ್ದರು.

'ನಿರ್ಮಾ' ಕರ್ಸನ್‌ಭಾಯಿಯವರ ಮಗಳ ಹೆಸರು ಎಂದು ನಿಮಗೆ ತಿಳಿದಿರಬಹುದು. ತಮ್ಮ ಮುದ್ದಿನ ಮಗಳು ನಿರುಪಮಾಳನ್ನು ಪ್ರೀತಿಯಿಂದ 'ನಿರ್ಮಾ' ಎಂದು ಕರೆಯುತ್ತಿದ್ದರು. ನಿರ್ಮಾ ಶಾಲೆಯಿಂದ ಹಿಂದಿರುಗುವಾಗ ಕಾರು ಅಪಘಾತದಲ್ಲಿ ಮೃತಪಟ್ಟಿದ್ದಳು. ಮಗಳ ನೆನಪಿಗಾಗಿ ಕರ್ಸನ್‌ಭಾಯಿ ತಮ್ಮ ಸಂಸ್ಥೆಗೆ ಅಂದು 'ನಿರ್ಮಾ' ಎಂದು ಹೆಸರಿಟ್ಟಿದ್ದರು. ನೀವು ಗಮನಿಸಿರಬಹುದು, ನಿರ್ಮಾದ ತಯಾರಿಕೆ, ತಂತ್ರಜ್ಞಾನ, ಜಾಹೀರಾತು, ಬೆಲೆ, ಎಲ್ಲವೂ ಕಾಲಕ್ಕೆ ತಕ್ಕಂತೆ ಬದಲಾದರೂ, ನಿರ್ಮಾ ಪ್ಯಾಕೆಟ್ ಮೇಲಿರುವ, ಬಿಳಿ ಫ್ರಾಕ್ ತೊಟ್ಟ ಹೆಣ್ಣುಮಗಳ ಚಿತ್ರ ಮಾತ್ರ ಇದುವರೆಗೂ ಬದಲಾಗಲಿಲ್ಲ. ಉಳಿದವರಿಗೆ ಅದು ಒಂದು ಸಾಮಾನ್ಯ ಚಿತ್ರವಾಗಿ ಕಂಡರೂ ಕರ್ಸನ್‌ಭಾಯಿಗೆ ಅದು ಮಗಳು ನಿರ್ಮಾಳ ಆತ್ಮ.

ಕರ್ಸನ್‌ಭಾಯಿಗೆ ಅಹ್ಮದಾಬಾದ್ ಅಂಗಡಿಯಲ್ಲಿ ವ್ಯಾಪಾರ ಚೆನ್ನಾಗಿ ಆಗುತ್ತಿತ್ತು. ಅವರು ಬೇರೆ ಪ್ರದೇಶಗಳಿಗೂ ತಮ್ಮ ವ್ಯಾಪಾರವನ್ನು ವಿಸ್ತರಿಸಿದರು. ಕೆಲವೇ ತಿಂಗಳಿನಲ್ಲಿ ನಿರ್ಮಾ ರಾಷ್ಟ್ರವ್ಯಾಪಿಯಾಯಿತು, ಜನಪ್ರಿಯವೂ ಆಯಿತು. ಜತೆಗೆ, ಸಂಸ್ಥೆಗೆ ನಷ್ಟವೂ ಆಗತೊಡಗಿತು. ಕಡಿಮೆ ಬೆಲೆಯಾಗಿದ್ದ ಕಾರಣ ಜನ ಖರೀದಿಸುತ್ತಿದ್ದರು. ಆದರೆ ಅಂಗಡಿಯವರು ಸಂಸ್ಥೆಗೆ ಹಣ ಪಾವತಿಸುತ್ತಿರಲಿಲ್ಲ. ಸಂದರ್ಭ ಹೇಗೆ ಬದಲಾಯಿತು ಎಂದರೆ, ಕಂಪನಿ ದಿವಾಳಿಯ ಅಂಚಿಗೆ ತಲುಪಿತು. ಆಗ ಕರ್ಸನ್‌ಭಾಯಿ ಅಂಗಡಿಯಲ್ಲಿ ಉಳಿದ ನಿರ್ಮಾದ ಸಾಮಾನುಗಳನ್ನೆಲ್ಲ ಹಿಂದೆ ಪಡೆದು, ತಮ್ಮ ಗೋದಾಮಿನಲ್ಲಿರಿಸಿಕೊಂಡರು. ಆಗ ಅವರ ತಲೆಗೆ ಹೊಳೆದದ್ದು ಜಾಹೀರಾತು. ಕೂಡಲೇ ಒಂದು ಜಾಹೀರಾತು ತಯಾರಿಸಿ ಸುಮಾರು ಎರಡು ತಿಂಗಳು ಟಿವಿಯಲ್ಲಿ ಓಡಿಸಿದರು. ಅದೇ 'ಹೇಮಾ, ರೇಖಾ, ಜಯಾ ಮತ್ತು ಸುಷ್ಮಾ...' ಜಾಹೀರಾತು. ಆ ಜಾಹೀರಾತು ಎಷ್ಟು ಜನಪ್ರಿಯವಾಯಿತೆಂದರೆ, ಗ್ರಾಹಕರು ಅಂಗಡಿಗೆ ಬಂದು ನಿರ್ಮಾ ಪೌಡರ್ ಬೇಕು ಎಂದು ಗಂಟುಬಿದ್ದರು. ಅಂಗಡಿಯವರು ನಿರ್ಮಾ ಸಂಸ್ಥೆಯನ್ನು ಸಂಪರ್ಕಿಸಿದಾಗ, ಕರ್ಸನ್‌ಭಾಯಿ ಮುಂಗಡ ಹಣ ನೀಡುವಂತೆ ಕೇಳಿದರು. ಬಾಕಿ ಇಡುತ್ತಿದ್ದ ಅಂಗಡಿಕಾರರು ಮುಂಗಡ ನೀಡಿ ನಿರ್ಮಾ ಪೌಡರ್ ಕೊಳ್ಳುವಂತಾಯಿತು.

ನಿರ್ಮಾ ಬಟ್ಟೆ ತೊಳೆಯುವ ಸಾಬೂನು, ಸ್ನಾನದ ಸಾಬೂನು, ಶಾಂಪೂ, ಟೂತ್‌ಪೇಸ್ಟ್, ಪಾತ್ರೆ ತೊಳೆಯಲು ಬಳಸುವ ಸಾಮಾನು, ಉಪ್ಪು ಇತ್ಯಾದಿ ಬೇರೆ ಉತ್ಪನ್ನಗಳನ್ನೂ ತಯಾರಿಸಲು ಆರಂಭಿಸಿತ್ತು. ತೊಂಬತ್ತರ ದಶಕದಲ್ಲಿ ನಿರ್ಮಾ ಕಾರ್ಖಾನೆಯಲ್ಲಿ ಹೆಚ್ಚು ಉತ್ಪನ್ನಗಳು ತಯಾರಾಗುತ್ತಿದ್ದವು. ನೋಡುತ್ತಿದ್ದಂತೆಯೇ ಸಂಸ್ಥೆಯಲ್ಲಿ ನೌಕರರ ಸಂಖ್ಯೆ ಹದಿನೈದು ಸಾವಿರ ತಲುಪಿತ್ತು. ಒಂದು ಸಮಯದಲ್ಲಿ ನಿರ್ಮಾ ವರ್ಷಕ್ಕೆ ಒಂದೂಮುಕ್ಕಾಲರಿಂದ ಎರಡು ಲಕ್ಷ ಟನ್ ವಾಶಿಂಗ್ ಪೌಡರ್ ಉತ್ಪಾದಿಸುತ್ತಿತ್ತು. ಇವುಗಳಲ್ಲಿ 'ಸೌಂದರ್ಯ ಸಾಬೂನ್' ಮಾರುಕಟ್ಟೆಯಲ್ಲಿ ತಕ್ಕ ಮಟ್ಟಿಗೆ ಓಡಿತು. ಆದರೆ ಪೇಸ್ಟ್, ಶಾಂಪೂ ಬಹಳದಿನ ನಡೆಯಲಿಲ್ಲ.

ಆಗ ಹಿಂದುಸ್ತಾನ್ ಯುನಿಲಿವರ್ ಸಂಸ್ಥೆಯ ವ್ಹೀಲ್ ಮತ್ತು ಆರ್‌ಎಸ್‌ಪಿಎಲ್ ಸಂಸ್ಥೆಯ ಘಡಿ ಡಿಟರ್ಜೆಂಟ್ ಪೌಡರ್ ಮಾರುಕಟ್ಟೆಗೆ ಬಂದವು. ನಿರ್ಮಾಕ್ಕೆ ಪೈಪೋಟಿ ನೀಡಲೆಂದೇ ಮಾರುಕಟ್ಟೆಗೆ ಬಂದ ಇವುಗಳ ಬೆಲೆಯೂ ಕಡಿಮೆ ಇತ್ತು. ಇವು ನಿರ್ಮಾದ ಮಾರುಕಟ್ಟೆಯನ್ನು ತಿಂದುಹಾಕಿದವು. ಸದ್ಯ ನಿರ್ಮಾ ಭಾರತದ ಮಾರುಕಟ್ಟೆಯ ಹತ್ತು ಪ್ರತಿಶತಕ್ಕೂ ಕಮ್ಮಿ ಇದೆ. ಹಾಗಾದರೆ ಕರ್ಸನ್‌ಭಾಯಿ ಈಗಲೂ ಶ್ರೀಮಂತರಾಗೇ ಇರುವುದು ಹೇಗೆ?

ಕರ್ಸನ್‌ಭಾಯಿ ಪಕ್ಕಾ ಗುಜರಾತಿ. ಅವರು ನಿರ್ಮಾ ಡಿಟರ್ಜೆಂಟ್ ಒಂದನ್ನೇ ನಂಬಿಕೊಂಡು ಕುಳಿತುಕೊಳ್ಳಲಿಲ್ಲ. ನಿರ್ಮಾ ಸಿಮೆಂಟ್, ನಿರ್ಮಾ ಶಿಕ್ಷಣ ಸಂಸ್ಥೆ ಇತ್ಯಾದಿಗಳನ್ನು ಆರಂಭಿಸಿದರು. ನಿರ್ಮಾ ತಾಂತ್ರಿಕ ವಿದ್ಯಾಲಯ, ಕಾನೂನು ವಿದ್ಯಾಲಯಗಳೆಲ್ಲ ಗುಜರಾತ್‌ನಲ್ಲಿ ಸಾಕಷ್ಟು ಹೆಸರು ಮಾಡಿವೆ. ಕರ್ಸನ್‌ಭಾಯಿಗೆ ಈಗ ಕೇವಲ ಎಪ್ಪತ್ತೊಂಬತ್ತು ವರ್ಷ ಅಷ್ಟೇ. ನಿರ್ಮಾ ಭಾರತದ ಮಾರುಕಟ್ಟೆಯನ್ನು ಇನ್ನೊಮ್ಮೆ ಆವರಿಸಿಕೊಳ್ಳುವುದಕ್ಕೆ ಈಗಲೂ ಅವಕಾಶವಿದೆ! ಅದಿಲ್ಲವಾದರೂ, ಹೇಗೆ ಶ್ರಮಪಡಬೇಕು, ವ್ಯಾಪಾರದ ಪಟ್ಟುಗಳನ್ನು ಹೇಗೆ ಬಳಸಬೇಕು ಎಂದು ಕರ್ಸನ್‌ಭಾಯಿ ತೋರಿಸಿಕೊಟ್ಟ ಉದಾಹರಣೆಯಂತೂ ಇದೆ!

## ಪ್ರಸ್ತುತ

**ಶ್ರೀಧರ್ ಡಿ.ರಾಮಚಂದ್ರಪ್ಪ**

### ಅಪ್ಪಟ ದೇಶಪ್ರೇಮಿ ಗಂಭೀರ್

ಭಾರತೀಯ ಕ್ರಿಕೆಟ್ ಕ್ಷೇತ್ರ ಕಂಡ ಅದ್ಭುತ ಕ್ರಿಕೆಟಿಗರಲ್ಲಿ ಒಬ್ಬರು, ದೇಶದ ರಾಜಧಾನಿ ದೆಹಲಿ ಮೂಲದ ಗೌತಮ್ ಗಂಭೀರ್. ಆರಂಭಿಕ ಬ್ಯಾಟ್ಸ್ ಮನ್ ಆಗಿ ಕೆಚ್ಚೆದೆಯ ಹೋರಾಟಕ್ಕೆ ಹೆಸರುವಾಸಿಯಾದ ಗಂಭೀರ್, ಭಾರತೀಯ ಪುರುಷರ ಕ್ರಿಕೆಟ್ ತಂಡಕ್ಕೆ ಮುಂಬರುವ ಶ್ರೀಲಂಕಾ ಟೂರ್ನಿಗೆ ಮುಖ್ಯ ಕೋಚ್ ಆಗಿ ನೇಮಕಗೊಂಡಿದ್ದಾರೆ. ಮಾಜಿ ನಾಯಕ, ಕ್ರಿಕೆಟ್ ಅಂಗಳದಲ್ಲಿ ಗೋಡೆ ಎಂದೇ ಖ್ಯಾತಿ ಪಡೆದಿರುವ ಇತ್ತೀಚೆಗೆ ನಡೆದ ಟಿ-20 ವಿಶ್ವಕಪ್ ಗೆಲುವಿನಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ್ದ ಮುಖ್ಯ ಕೋಚ್, ಕನ್ನಡಿಗ ರಾಹುಲ್ ದ್ರಾವಿಡ್ ಇಷ್ಟು ದಿನಗಳ ಕಾಲ ನಿರ್ವಹಿಸಿದ್ದ ಹುದ್ದೆಗೆ ವಿದಾಯ ಹೇಳಿದ್ದಾರೆ. ಅವರ ಜಾಗಕ್ಕೆ ಅನೇಕರ ಹೆಸರುಗಳು ಕೇಳಿ ಬಂದಿದ್ದವು. ಆದರೆ ಬಿಸಿಸಿಐ ಮಾತ್ರ ಹಾಟ್ ಫೇವರಿಟ್ ಗೌತಮ್ ಗಂಭೀರ್ ಅವರನ್ನು ಆಯ್ಕೆ ಮಾಡಿದೆ. ಆ ಮುಖೇನ ಯುವ ಪ್ರತಿಭೆಗೆ ಮಣೆ ಹಾಕಿ ಜೈ ಎಂದಿದೆ. 42 ನೇ ವಯಸ್ಸಿನ ಗೌತಮ್ ಗಂಭೀರ್ 2003 ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿ ಏಕದಿನ, ಟೆಸ್ಟ್, ಟಿ-20 ಹಾಗೂ ಜನಪ್ರಿಯತೆ ಪಡೆದಿರುವ ಐಪಿಎಲ್ ಟೂರ್ನಿಯಲ್ಲಿ ಬ್ಯಾಟ್ಸ್ ಮನ್ ಆಗಿ ಅವರ ಪ್ರದರ್ಶನ ಗಣನೀಯ, ಗಮನಾರ್ಹ.ದೇಶೀಯ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲೂ ಅವರದು ಅತ್ಯುತ್ತಮ ಫಾರ್ಮ್.

ಸರಿ ಸುಮಾರು ಹದಿಮೂರು ವರ್ಷ ಅಂದರೆ 2003-2016 ರವರಗೆ ಭಾರತೀಯ ಕ್ರಿಕೆಟ್ ತಂಡದ ಆರಂಭಿಕ ಆಟಗಾರನಾಗಿ ಗೌತಮ್ ಗಂಭೀರ್ ಅವರದು ಆಕರ್ಷಕ, ಮಹತ್ವದ ಕೊಡುಗೆ. ಹಾಗೆಯೇ 2007, 2011 ರ ಏಕದಿನ, ಟಿ-20 ಸರಣಿಗಳಲ್ಲಿ ಗಂಭೀರ್ ಕಾಣಿಕೆ ಅಮೋಘ. ಏಕೆಂದರೆ, ಈ ಎರಡು ಟೂರ್ನಿಯ ಫೈನಲ್‌ನಲ್ಲಿ ಗೌತಮ್ ಗಂಭೀರ್ ಅವರ ಉತ್ತಮ ಪ್ರದರ್ಶನ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿತ್ತು.

ಕ್ರಿಕೆಟ್ ಮೈದಾನದಲ್ಲಿ ದೇಶಪ್ರೇಮದ ಕೆಚ್ಚೆದೆಯ ಹೋರಾಟಕ್ಕೆ ಹೆಸರುವಾಸಿಯಾದ ಗಂಭೀರ್ ಬೀಸಾಟಕ್ಕೆ ಹೇಳಿ ಮಾಡಿಸಿದವರು. ಮುಖ, ಮೂಗಿನ ಮೇಲೆ ಸಿಟ್ಟಿನಿಂದ ಬ್ಯಾಟಿಂಗ್ ಮುಖೇನ ಉತ್ತರ ನೀಡುತ್ತಿದ್ದ ಗಂಭೀರ್ ಉತ್ತಮ ಫೀಲ್ಡರ್ ಸಹ. ತಮ್ಮ ಖಡಕ್ ಪ್ರದರ್ಶನ ಮೂಲಕ ಭಾರತೀಯ ಕ್ರಿಕೆಟ್ ಅಭಿಮಾನಿಗಳಿಗೆ ಚಿರಪರಿಚಿತರಾದ ಗೌತಮ್ ತಮ್ಮ ತಾಯ್ನಾಡಿನ ಬಗ್ಗೆ ಅಪಾರ ಪ್ರೀತಿ, ಗೌರವ, ಅಭಿಮಾನ ಇಟ್ಟುಕೊಂಡವರು. ಇದೇ ಭಾವನೆ ಅವರನ್ನು ರಾಜಕಾರಣಕ್ಕೂ ಎಳೆದು ತಂದಿತು. ಕಳೆದ ಅವಧಿಯಲ್ಲಿ ಅಂದರೆ 2019 ರಲ್ಲಿ ಭಾರತೀಯ ಜನತಾ ಪಕ್ಷ-ಬಿಜೆಪಿ ಮೂಲಕ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಕಂಡು ಸಂಸದರಾಗಿ ಕೆಲಸ ಮಾಡಿದವರು. ಆದರೆ ಯಾಕೋ ಅವರಿಗೆ ರಾಜಕೀಯ ಕ್ಷೇತ್ರ ಒಗ್ಗಿ ಬರಲಿಲ್ಲ, ಆದಕಾರಣ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಅವರು ಸ್ಪರ್ಧಿಸಲಿಲ್ಲ.ಇದೇ ಸಮಯದಲ್ಲಿ ಭಾತೀಯ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿದ್ದ ರಾಹುಲ್ ದ್ರಾವಿಡ್ ಅವರ ಗುತ್ತಿಗೆ ಅವಧಿ ಕೊನೆಗೊಂಡಿದೆ. ಈ ವೇಳೆಯಲ್ಲಿ ಭಾರತೀಯ ಕ್ರಿಕೆಟ್ ಮಂಡಳಿ-ಬಿಸಿಸಿಐಗೆ ದ್ರಾವಿಡ್ ಉತ್ತರಾಧಿಕಾರಿ ಯಾರು? ಎಂಬ ಪ್ರಶ್ನೆಗೆ ಭಾರತೀಯ ಕ್ರಿಕೆಟ್ ಕಂಡ ಅದ್ಭುತ ಪ್ರತಿಭೆಗಳಲ್ಲಿ ಒಬ್ಬರಾದ ಗೌತಮ್ ಗಂಭೀರ್ ಉತ್ತರ ರೂಪದಲ್ಲಿ ಸಿಕ್ಕಿದ್ದಾರೆ. ನಾಯಕ ರೋಹಿತ್ ಶರ್ಮಾ ಹಾಗೂ ಕಿಂಗ್ ಕೊಹ್ಲಿ ಸದ್ಯ ಹಿರಿಯ ಆಟಗಾರಾಗಿದ್ದು, ಉಳಿದಂತೆ ಹೊಸ, ಯುವ ಆಟಗಾರ ಪಡೆ ಭಾರತೀಯ ಕ್ರಿಕೆಟ್ ತಂಡದಲ್ಲಿ ಸದ್ಯ ಇದೆ. ಹೀಗಿರುವಾಗ ಮುಖ್ಯ ಕೋಚ್ ಆಗಿ ನೇಮಕಗೊಂಡಿರುವ ಗೌತಮ್ ಗಂಭೀರ್ ಮುಂದೆ ಹಲವು ಸವಾಲುಗಳಿವೆ. ಭಾರತೀಯ ಕ್ರಿಕೆಟ್ ಇತಿಹಾಸದಲ್ಲೇ ಕಿರಿಯ ಮುಖ್ಯ ಕೋಚ್ ಆಗಿ ನಿಯುಕ್ತಿಗೊಂಡಿರುವ ಗೌತಮ್ ಮುಂದಿನ ದಿನಗಳಲ್ಲಿ ಭಾರತೀಯ ಕ್ರಿಕೆಟ್ ತಂಡದ ಉತ್ತಮ ಪ್ರದರ್ಶನಕ್ಕೆ ಹೇಗೆ ತಂಡವನ್ನು ತಯಾರು ಮಾಡುತ್ತಾರೆ ಎಂಬ ಪ್ರಶ್ನೆ, ಅನುಮಾನ ಎಲ್ಲರಲ್ಲೂ ಇದ್ದೆ ಇದೆ.ಅವೆಲ್ಲಾ ಸಂಶಯಗಳಿಗೆ ಉತ್ತರ ನೀಡುವ ನಿಟ್ಟಿನಲ್ಲಿ ಕಟ್ಟಾ,ಅಪ್ಪಟ ದೇಶಭಕ್ತ ಗಂಭೀರ್ ಅವರು ಯಾವ ರೀತಿ ತಂಡವನ್ನು ಕಟ್ಟುವರು ಎಂಬುದು ಅವರ ಮುಂದಿರುವ ಜಿಜ್ಞಾಸೆ. ಏನೇ ಆಗಲಿ, ಭಾರತೀಯ ಕ್ರಿಕೆಟ್ ತಂಡಕ್ಕೆ ನೂತನ ಕೋಚ್ ಆಗಿ ನೇಮಕಗೊಂಡಿರುವ 'ಆಂಗ್ರಿ ಯಂಗ್ ಮ್ಯಾನ್' ಗಂಭೀರ್ ಅವರಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳು! ಇತ್ತೀಚೆಗೆ ಅಮೇರಿಕ-ವೆಸ್ಟ್ ಇಂಡೀಸ್ ನಲ್ಲಿ ನಡೆದ ಟಿ-20 ವಿಶ್ವಕಪ್ ಟೂರ್ನಿಯಲ್ಲಿ ಅತ್ಯುತ್ತಮ ಪ್ರದರ್ಶನದ ಮೂಲಕ ಗಮನಸೆಳೆದಿರುವ ಭಾರತ ಯುವ ಕ್ರಿಕೆಟ್ ತಂಡಕ್ಕೆ ಸೂತ್ರಧಾರಿಯಾಗಿ ನೇಮಕಗೊಂಡಿರುವ ಗಂಭೀರ್ ಅವರು ಉತ್ತಮ ತರಬೇತಿ ನೀಡುವ ಮೂಲಕ ಭಾರತ ಕ್ರಿಕೆಟ್ ತಂಡಕ್ಕೆ ಉತ್ತಮ, ಉಜ್ವಲ ಭವಿಷ್ಯವನ್ನು ರೂಪಿಸಲಿ ಎಂಬುದು ನಮ್ಮೆಲ್ಲರ ನಿರೀಕ್ಷೆ,ಆಶಯ-ಹಾರೈಕೆ!

# ದುಃಖ ಯಾರಿಗಿಲ್ಲ? ಆದರೆ, ಇದಕ್ಕೂ ಇದೆ ಪರಿಹಾರ

**ಸಾಂತ್ವನ**
**ಪ್ರೊ. ಸಿ. ಶಿವರಾಜು**
vveditoped@gmail.com

ದುಃಖ ಯಾರಿಗಿಲ್ಲ ಹೇಳಿ? ದುಃಖವು ಹುಟ್ಟಿನಿಂದಲೇ ಬಂದಿದ್ದು, ಜೀವನದ ಸಹಜ ಕ್ರಿಯೆ ಎನ್ನಬಹುದು. ದುಃಖವನ್ನು ಅನುಭವಿಸದಿರುವ ಮನುಷ್ಯರು ಈ ಜಗತ್ತಿನಲ್ಲಿ ಯಾರು ಇಲ್ಲ, ದುಃಖವನ್ನು ತಡೆಯಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲ. ದುಃಖ ಮನುಷ್ಯನ ಸಹಜಗುಣ, ಜೀವನದ ಹಲವಾರು ಕಹಿ ಅನುಭವಗಳಿಂದ ದುಃಖ ಹುಟ್ಟುವುದು. ಅಂದುಕೊಂಡಂತೆ ಆಗದಿದ್ದಲ್ಲಿ ದುಃಖ ತಾನಾಗಿಯೇ ಬರುವುದು, ನೋವುಗಳ ನಿವಾರಣೆಯಾಗದೆ, ಕಷ್ಟಗಳ ಮೇಲೆ ಕಷ್ಟಗಳು ಬರುತ್ತಿದ್ದರೆ ದುಃಖವಾಗುವುದು ಆಸೆಯೇ ದುಃಖಕ್ಕೆ ಕಾರಣ, ಆಸೆಯ ಮಿತಿಯೇ ಸುಖದ ಮೂಲ ಎಂದು ಬುದ್ಧರು ಜಗತ್ತಿಗೆ ಉಪದೇಶಿಸಿದ್ದಾರೆ. ನಾವು ಅಂದು ಕೊಂಡಂತೆ ಎಲ್ಲವೂ ಆಗುವುದಿದ್ದರೆ ಮನುಷ್ಯ ಜೀವಿಯನ್ನು ಯಾರು ತಡೆಯಲಿಕ್ಕೆ ಆಗುತ್ತಿರಲಿಲ್ಲ.

ದುಃಖವು ಹಲವಾರು ಕಾರಣಗಳಿಂದ, ಹಲವಾರು ವಿಧಗಳಲ್ಲಿ, ಬೇರೆ ಬೇರೆ ಸಂದರ್ಭಗಳಲ್ಲಿ ಅನೇಕ ಘಟನೆಗಳು ಸಂಭವಿಸಿದಾಗ, ಬರುವುದೇ ದುಃಖ. ದುಃಖವನ್ನು ಅನುಭವಿಸಿದಾಗಲೇ ಆ ದುಃಖ, ದುಮ್ಮಾನದ ಅರಿವಾಗುವುದು. ಅದನ್ನು ಅನುಭವಿಸದ ಹೊರತು ಮನುಷ್ಯ ಗಟ್ಟಿಯಾಗಲು, ತನ್ನ ತಪ್ಪುಗಳನ್ನು ತಿದ್ದಿಕೊಳ್ಳಲು, ತನ್ನನ್ನು ತಾನು ಸರಿದಾರಿಯಲ್ಲಿ ನಡೆಯುವಂತೆ ಮಾಡಿಕೊಳ್ಳಲು ಸಾಧ್ಯವಾಗದು. ದುಃಖ ನಿವಾರಣೆಗಿಂತ ದುಃಖದ ಕಾರಣ ಏನು ಎಂಬುದನ್ನು ಹುಡುಕಿ ಅದಕ್ಕೆ ಉತ್ತರವನ್ನು ಕಂಡುಕೊಳ್ಳಬೇಕು. ಆಗ ಮಾತ್ರ ದುಃಖದಿಂದ ಹೊರಬರಲು ಸಾಧ್ಯವಾಗುತ್ತದೆ. ಮನುಷ್ಯನಿಗೆ ಜೀವನದಲ್ಲಿ ದುಃಖವೇ ಬರಬಾರದೆಂಬುದು ತಪ್ಪು ಕಲ್ಪನೆ. ದುಃಖ ಯಾವಾಗ ಯಾವ ಸಂದರ್ಭದಲ್ಲಿ ಬರುತ್ತದೆ, ಎಂದು ಯಾರು ನಿರೀಕ್ಷಿಸಿಸಲು ಸಾಧ್ಯವಿಲ್ಲ. ನಿರೀಕ್ಷೆಗೆ ಮೀರಿ ತಮ್ಮ ಗಮನಕ್ಕೆ ಬಾರದೆ ದುಃಖ ಬಂದು ಕಾಡುತ್ತದೆ. ಯಾವ ಸಂದರ್ಭದಲ್ಲಿ ಏನಾಗುತ್ತದೆ.? ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಜೀವನದಲ್ಲಿ ಬಂದುದ್ದನ್ನು ಸ್ವೀಕರಿಸುವುದಷ್ಟೇ ಮನುಷ್ಯನಿಗೆ ಉಳಿದಿರುವುದು. ದುಃಖವನ್ನಾಗಲೀ, ನೋವು, ಕಷ್ಟಗಳನ್ನಾಗಲೀ ಯಾರು ಬರಲೆಂದು ಬಯಸುವುದಿಲ್ಲ. ಆದರೆ ಬಂದ ಮೇಲೆ ಅದನ್ನು ಎದುರಿಸಿ ಮುಂದಿನ ಮೆಟ್ಟಿಲುಗಳನ್ನು ಏರಲೇಬೇಕು. ಅದೇ ಜೀವನ ಬಂದುದ್ದೆಲ್ಲಾ ಬರಲೀ ನಾವು ಮುಂದೇ ಸಾಗೋಣ ಎಂಬ ಧ್ಯೇಯದೊಂದಿಗೆ ಜೀವನ ಸಾಗಿಸಬೇಕು. ಅದು ಅನಿವಾರ್ಯಕೂಡ. ದುಃಖ, ಬೇಸರ, ಚಿಂತೆ, ಆತಂಕ, ಒಂಟಿತನ-ಇಂತಹ ಭಾವಗಳು ಉಂಟಾದಾಗ ನಾವು ಅದನ್ನು ಹೇಗೆ ಸ್ವೀಕರಿಸುತ್ತೇವೆ ? ಹೇಗೆ ಅರ್ಥೈಸುತ್ತೇವೆ? ಜೀವನದಲ್ಲಿ ಅನೇಕ ಬಾರಿ ಇಂತಹ ನಕಾರಾತ್ಮಕ ಭಾವಗಳನ್ನು ಹಾದುಬಂದ ಅನುಭವವಿದ್ದರೂ, ವರ್ತಮಾನದಲ್ಲಿ ಇವು ಕಾಡಿಸುವಾಗ ಹಿಂದೆ ಕಲಿತ ಪಾಠವೆಲ್ಲಾ ಮರೆತುಗೋಗಿ, ಏನೂ ಉಪಯೋಗಕ್ಕೆ ಬಾರದಂತಾಗಿ ಮತ್ತೆ ಮತ್ತೆ ಉಸಿರುಗಟ್ಟಿಸುವ ಸುಳಿಯೊಳಗೆ ಸಿಕ್ಕಂತೆ ಒದ್ದಾಡುತ್ತೇವೆ. ಇದಕ್ಕೆ ಕಾರಣವೂ ಇರುವುದಿಲ್ಲ, ನಾವು ಬುದ್ಧಿಯಿಂದ ಕಲಿತದ್ದು ಮರೆತುಹೋಗುತ್ತದೆ. ಅನುಭವಗಳನ್ನು ಅಂತರ್ಗತಗೊಳಿಸಿಕೊಂಡು ಹೊಸ ವರ್ತನೆಗಳನ್ನು ಮೈಗೂಡಿಸಿಕೊಂಡಿರುವುದು ಉಳಿಯುತ್ತದೆ. ಹಾಗಾದರೆ ದುಃಖವು ನಮ್ಮನ್ನು ಆವರಿಸಿದಾಗ ನಾವೇನನ್ನು ಸಾಧಾರಣವಾಗಿ ಮರೆಯುತ್ತೇವೆ? ಏನನ್ನು ರೂಢಿಸಿಕೊಂಡರೆ ನಿರಾಳವಾಗಿರಬಹುದು ಎಂದು ಚಿಂತಿಸಬೇಕು.

ದುಃಖದಿಂದ ಹೊರತಾದವರು ಈ ಜಗತ್ತಿನಲ್ಲಿ ಯಾರೂ ಇಲ್ಲ ಎಂಬ ಅರಿವಿರುತ್ತದೆ. ಆದರೆ ನಾವು ದುಃಖದಲ್ಲಿರುವಾಗ ದುಃಖವನ್ನು ವೈಯಕ್ತಿಕವಾಗಿ ತೆಗೆದುಕೊಂಡು ನಾನು ಮಾತ್ರ ಕಷ್ಟದಲ್ಲಿರೋದು, ಇದು ನನಗೆ ಮಾತ್ರ ಬಂದಿರುವ ಸಮಸ್ಯೆ, ಎಂಬಂತಾಡುತ್ತೇವೆ. ಎಲ್ಲರೂ ಸುಖದಲ್ಲಿದ್ದಾರೆ, ನಾನು ಮಾತ್ರ ದುಃಖದಲ್ಲಿರುವುದು ಎಂಬ ಭ್ರಮೆಯುಂಟಾದಾಗ ಮತ್ತಷ್ಟು ಸಂಕಟಪಡುತ್ತೇವೆ. ಸುತ್ತಲಿನ ಸಮಾಜದಿಂದ ಕುಟುಂಬದಿಂದ, ಸಮುದಾಯದಿಂದ ನಮ್ಮನ್ನು ನಾವು ಬೇರೆಯಾಗಿಸಿಕೊಂಡು ತೊಳಲಾಡುತ್ತೇವೆ. ದುಃಖವು ಎಲ್ಲರಿಗೂ ಇರುವಂಥದ್ದೇ ಎಂಬ ತಿಳುವಳಿಕೆ ನಮ್ಮನ್ನು ಮತ್ತೆ ಪ್ರಪಂಚದೊಟ್ಟಿಗೆ ಬೆಸೆಯುತ್ತದೆ. ಇದಕ್ಕಾಗಿ ನಾವು ಮಾಡಬೇಕಾದುದೆಂದರೆ, ನಂಬಿಕೆಗೆ ಅರ್ಹರು, ಸ್ನೇಹಿತರು ಎಂದು ತಿಳಿದುಕೊಂಡವರ ಜೊತೆ ನಮ್ಮ ದುಃಖವನ್ನು ಬಿಚ್ಚಿಡುವುದು. ಮೊದಲಿಗೆ ಇದು ಸ್ವಲ್ಪ ಕಷ್ಟವೆನಿಸಬಹುದು. ನಾವು ನಮ್ಮ ಚಿಂತೆ, ಸಂಕಟಗಳನ್ನು ತೋರ್ಪಡಿಸಿಕೊಂಡರೆ ನಮ್ಮನ್ನು ಕನಿಕರದಿಂದ ನೋಡುತ್ತಾರೆ, ನಮಗೆ ಸಲಹೆಗಳನ್ನು ಕೊಡಲು ಅಥವಾ ನಮ್ಮನ್ನು ಟೀಕಿಸಲು ಮುಂದಾಗುತ್ತಾರೆ, ತಪ್ಪು ತಿಳಿದು ದೂರವಾಗುತ್ತಾರೆ, ಎಂಬ ಭಯದಿಂದ ಹೊರಬಂದು ದುಃಖದ ಬಗ್ಗೆ ಮಾತನಾಡಬೇಕು.

ನಾವು ತೆರೆದುಕೊಂಡಾಗ ನಾವು ಅವರಲ್ಲಿಟ್ಟ ನಂಬಿಕೆ, ವಿಶ್ವಾಸದಿಂದ ಪ್ರಭಾವಿತರಾಗಿ ಅವರೂ ತಮ್ಮ ದುಃಖವನ್ನು ತೋಡಿಕೊಳ್ಳಬಹುದು. ಒಂದು ವೇಳೆ ಅವರು ನಮ್ಮ ವಿಶ್ವಾಸವನ್ನು ದುರುಪಯೋಗಪಡಿಸಿಕೊಂಡು ನಮ್ಮನ್ನು ಹೀನಾಯವಾಗಿ ಕಾಣುತ್ತಲೋ, ನಮ್ಮ ನೋವಿಗೆ ಸಂತಸಪಡುತ್ತಲೋ ಇದ್ದರೆ ಅದು ಅವರ ಅಪ್ರಬುದ್ಧತೆಯೇ ಹೊರತು ನಮ್ಮ ತಪ್ಪಲ್ಲ. ದುಃಖವು ಸಂವೇದನಾಶೀಲತೆಯ ಪ್ರತೀಕ, ಬದುಕಿನ ಕ್ಷಣಿಕತೆಯನ್ನು ದುರ್ಬಲತೆಯನ್ನು ಗ್ರಹಿಸಿದ್ದೇವೆ ಎಂಬುದರ ಸಂಕೇತ. ಅದು ಮನುಷ್ಯತ್ವದ ಗುರುತೂ ಹೌದು. ದುಃಖವಿದೆ ಎಂಬ ಮಾತ್ರಕ್ಕೆ ನಾವು ಅದರಲ್ಲೇ ಮುಳುಗಿಹೋಗಿ ಜೀವನದ ಸಂಭ್ರಮಕ್ಕೆ ವಿಮುಖರಾಗ ಬೇಕಿಲ್ಲ.

ಆದ್ದರಿಂದ ಬುದ್ಧರು ಹೇಳಿದ ಪಂಚಶೀಲಗಳಾದ ಸಮಾನತೆ, ಸಹೋದರತೆ, ಮೈತ್ರಿ, ಪ್ರಜ್ಞೆ, ಹಾಗೂ ಕರುಣೆ, ಇವುಗಳೊಂದಿಗೆ ಜೀವಿಸಬೇಕಾಗಿದೆ. ಮನುಷ್ಯನಾಗಿ ಹುಟ್ಟಿದ ಮೇಲೆ ಜೀವನದಲ್ಲಿ ಏನಾದರೊಂದು ಕಷ್ಟ, ದುಃಖ, ದುಮ್ಮಾನಗಳು ಬರುತ್ತವೆ. ಅದನ್ನು ಬದಿಗಿರಿಸಿ ಏನಾದರೂ ಸಾಧನೆ ಮಾಡಬೇಕು. ಎಂದು ಎಲ್ಲರೂ ಬಯಸುತ್ತಾರೆ. ಬೆಳವಣಿಗೆ ಎಂದರೆ ಕೇವಲ ಆರ್ಥಿಕ ಬೆಳವಣಿಗೆ ಅಷ್ಟೇ ಅಲ್ಲ. ಒಬ್ಬೊಬ್ಬರದು ಒಂದೊಂದು ಕನಸು (ಗುರಿ) ಇರುತ್ತದೆ. ಅವರ ಕನಸುಗಳು ಈಡೇರದಿದ್ದಾಗ ದುಃಖ ತಾನಾಗಿಯೇ ಬರುತ್ತದೆ. ಇಂತಹ ಸಮಯದಲ್ಲಿ ತಾಳ್ಮೆ ಬಹಳ ಮುಖ್ಯವಾಗುವುದು. ತಾಳ್ಮೆ, ಇದ್ದರೆ ಎಂತಹ ಕಷ್ಟ, ದುಃಖಗಳು ಕಾಡಿದರೂ ಜಯಿಸಬಹುದು. ಜೀವನದಲ್ಲಿ ಯಾವುದು ಶಾಶ್ವತವಲ್ಲ, ಎಂದು ಬುದ್ಧರು ಹೇಳಿದ್ದಾರೆ. ಜೀವನದಲ್ಲಿ ಬದಲಾವಣೆ ಸಹಜವಾದ ನಿಯಮ ಹೀಗಾಗಿ ಸತ್ಯವನ್ನು ಅರಿತುಕೊಂಡರೆ, ದುಃಖಕ್ಕೆ ನಮ್ಮಲ್ಲಿ ಜಾಗವೇ ಇರುವುದಿಲ್ಲ. ಜೀವನದಲ್ಲಿ ಒಪ್ಪಿಕೊಳ್ಳುವುದು ಬಿಡುವುದನ್ನು ಅಭ್ಯಾಸ ಮಾಡಿಕೊಳ್ಳಬೇಕೆಂದು ಬುದ್ಧರು ಹೇಳುತ್ತಾರೆ. ಆಲೋಚನೆ ಮತ್ತು ಕಾರ್ಯದಲ್ಲಿ ಉದಾತ್ತ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಆಸೆಯನ್ನು ಮಿತಿಯಲ್ಲಿಟ್ಟುಕೊಳ್ಳಬೇಕು. ಆಗಮಾತ್ರ ಅನಾವಶ್ಯಕ ಗೊಂದಲಗಳನ್ನು ನಾವು ಕಡಿಮೆ ಮಾಡಿಕೊಳ್ಳಬಹುದು. ನಮ್ಮ ಆಸೆ ಮಿತಿಯಲ್ಲಿದ್ದರೆ, ನಿರಾಸೆಗೆ (ದುಃಖಕ್ಕೆ) ಆಸ್ಪದವಿರುವುದಿಲ್ಲ. ನಮ್ಮಲ್ಲಿ ಬಂಗಾರ ಇದ್ದ ಮಾತ್ರಕ್ಕೆ ನಮ್ಮ ಬದುಕು ಬಂಗಾರವಾಗುವುದಿಲ್ಲ. ನಮ್ಮ ಮನಸ್ಸಿಗೆ ನೆಮ್ಮದಿ ಇದ್ದರೆ ಮಾತ್ರ ನಮ್ಮ ಬದುಕು ಬಂಗಾರವಾಗುತ್ತದೆ. ಚತುರಾರ್ಯ ಸತ್ಯಗಳಾದ ದುಃಖ, ದುಃಖದ ಹುಟ್ಟು, ದುಃಖದ ಅಡಗುವಿಕೆ, ಮತ್ತು ದುಃಖ ನಿವಾರಣೆಗೆ ಒಯ್ಯುವ ಅಷ್ಟಾಂಗಿಕ ಮಾರ್ಗವನ್ನು ಕಂಡು ಹಿಡಿದ ಭಗವಾನ್ ಗೌತಮ ಬುದ್ಧರು, ವಿಪಶನ ಧ್ಯಾನ ಮಾರ್ಗವು, ದುಃಖ ಮತ್ತು ಪಾಪಕರ್ಮಗಳಿಂದ ಮುಕ್ತವಾಗಲು ಸಹಾಯ ಮಾಡುತ್ತದೆ ಎಂದು ಉಪದೇಶಿಸಿದ್ದಾರೆ.

ದುಃಖದ ಬಗ್ಗೆ ಗುಹೇಶ್ವರರು ಹೀಗೆ ಹೇಳಿರುತ್ತಾರೆ. ಸಾಸಿವೆ ಕಾಳಿನ ಗಾತ್ರದ ಆನಂದಕ್ಕಾಗಿ, ಸಂಕಟದ ಸಾಗರ, ನೀವು ನೋಡುತ್ತೀರಿ. ಇಂದ್ರಿಯಗಳ ಕ್ಷಣದ ಆನಂದಕ್ಕಾಗಿ ಒಬ್ಬರು ಹೇಗೆ ಕೆಲಸ ಮಡುತ್ತಾರೆ ಎಂಬುದು ಅದ್ಭುತವಾಗಿದೆ ಕ್ಷಣದ ಆನಂದವನ್ನು ಸಾಧಿಸಲು ತನ್ನ ನಿಜವಾದ ಆತ್ಮವನ್ನು ತ್ಯಜಿಸುವುದು, ಮುಂದೆ ಇದುವೇ ದುಃಖಕ್ಕೆ ಕಾರಣವಾಗುತ್ತದೆ.

ಜಗತ್ತಿನಲ್ಲಿ ದುಃಖವಿದೆ ಆ ದುಃಖ ಎಲ್ಲಾ ಕಡೆ ಇದೆ ನೂರಕ್ಕೆ ತೊಂಬತ್ತೈದು ಮಂದಿ ಒಂದಲ್ಲ ಒಂದು ರೀತಿಯಾದ ದುಃಖವನ್ನು ಅನುಭವಿಸುತ್ತಾ ಅಥವಾ ನೋವಿನ ಬಾದೆಯಲ್ಲಿ ನರಳುತ್ತಿದ್ದಾರೆ. ದುಃಖದಲ್ಲಿ ನರಳುತ್ತಿರುವ ಮನಷ್ಯ ಆ ದುಃಖದಿಂದ ವಿಮೋಚನೆಗೊಳಿಸುವುದೇ ಬುದ್ಧರ ಉಪದೇಶವಾಗಿದೆ. ಸರಳತೆಯ ಜೀವನ ನಡೆಸುವವರಿಗೆ ದುರಾಸೆಯು ಬರುವುದಿಲ್ಲ. ದುರಾಸೆ ಇಲ್ಲದವರಿಗೆ ದುಃಖವು ಬರುವುದಿಲ್ಲ ಬೇರೆ ರೀತಿಯ ದುಃಖ ಬರಬಹುದು, ಮನೆಯಲ್ಲಿ ಸಾವಿನಿಂದ ಬರುವ ದುಃಖವೇ ಬೇರೆ, ಆ ದುಃಖ ವಾಸ್ತವ ಏಕೆಂದರೆ ಮನುಷ್ಯ ಹುಟ್ಟಿದ ಮೇಲೆ ಮರಣ ಹೊಂದಲೇ ಬೇಕಾಗಿರುವುದರಿಂದ ಆ ದುಃಖವು ಬಂದೇ ಬರುತ್ತದೆ. ಆ ದುಃಖವನ್ನು ನಿಗ್ರಹಿಸುವ ಶಕ್ತಿಯನ್ನು, ಮನೋಬಲವನ್ನು ನಾವು ಬೆಳೆಸಿಕೊಳ್ಳಬೇಕಾಗಿದೆ. ಕಷ್ಟಗಳು ಬರುವುದು. ನಿಮ್ಮನ್ನು ನಾಶಮಾಡಲು ಅಲ್ಲ. ನಿಮ್ಮೊಳಗಿನ ಶಕ್ತಿಯನ್ನು ಅರ್ಥಮಾಡಿಸಲು ನಿಮ್ಮ ವ್ಯಕ್ತಿತ್ವದ ಗಟ್ಟಿತನವನ್ನು ಮನವರಿಕೆ ಮಾಡಿಸಲು ದುಃಖ ಬರುವುದು ನಿಮ್ಮನ್ನು ಜಾಗೃತಗೊಳಿಸಲು, ಎಂತಹ ಸಂದರ್ಭದಲ್ಲಾದರೂ ನಿಮ್ಮ ತನವನ್ನು (ಒಳ್ಳೆಯತನ) ಬಿಡಬಾರದು. ದುಃಖವನ್ನು ಸಹಿಸದ ಮನುಷ್ಯ ಜೀವನದಲ್ಲಿ ಬರುವ ಸವಾಲುಗಳನ್ನು ಎದುರಿಸಲು ಹೇಗೆ ಸಾಧ್ಯ? ಸವಾಲುಗಳ ಮೇಲೆ, ಸವಾಲುಗಳನ್ನು ಎದುರಿಸುವ ವ್ಯಕ್ತಿ ದುಃಖಕ್ಕೆ ಹೆದರುವುದಿಲ್ಲ. ಒಂದು ಕಲ್ಲು ಹಲವು ಪೆಟ್ಟುಗಳನ್ನು ತಿಂದ ಮೇಲೆಯೆ ವಿಗ್ರಹವಾಗಲು ಸಾಧ್ಯ, ಮನಷ್ಯನು ಕೂಡ ಹಲವಾರು ಕಷ್ಟ, ದುಃಖ, ನೋವು ಸಂಕಟಗಳನ್ನು ಅನುಭವಿಸಿದ ಮೇಲೆಯೇ ಪರಿಪೂರ್ಣ ಮನುಷ್ಯನಾಗಲೂ ಸಾಧ್ಯವಾಗುತ್ತದೆ. ಕಷ್ಟ (ದುಃಖ) ಕಲಿಸುತ್ತದೆ. ಸುಖ ಮರೆಸುತ್ತದೆ. ಒಳ್ಳೆಯತನ ಮೈತ್ರಿ, ಆತ್ಮವಿಶ್ವಾಸ ಮಾತ್ರ ಬಾನೆತ್ತರಕ್ಕೆ ಬೆಳೆಸುತ್ತದೆ. ಎಂಬ ಸಂದೇಶವನ್ನು ಬುದ್ಧರು ನಮಗೆ ನೀಡಿದ್ದಾರೆ. ಬುದ್ಧರು ಬೋಧನೆಗಳಲ್ಲಿ ಮೊದಲನೆಯದಾಗಿ ಜೀವನವೂ ದುಃಖದಿಂದ ಕೂಡಿದೆ, ಜನನ, ಮರಣ ರೋಗ, ವೃದ್ಧಾಪ್ಯ, ವಿರಹ, ದೇಹಗಳ ವ್ಯವಸ್ಥೆಯೇ ದುಃಖಮಯ, ಈ ದುಃಖಕ್ಕೆ ಕಾರಣವಿದೆ, ಮನುಷ್ಯ ತನ್ನ ಮೂಲ ರೂಪವನ್ನು ಅರಿಯದಿರುವುದು, ಈ ಅಜ್ಞಾನಗಳಿಂದಾಗಿಯೇ ಆತ್ಮ, ದೇಹ, ಮನಸ್ಸುಗಳಿಗೆ ಅಂಟಿಕೊಳ್ಳುತ್ತಾನೆ. ಈ ಯಾತನೆಗಳಿಗೆ ಕಾರಣ ಆಯಾ ವ್ಯಕ್ತಿಗಳೇ ಹೊರತು ವಿಧಿ ಆಕಸ್ಮಿಕ ಇತ್ಯಾದಿಗಳೆಲ್ಲಾ ಸುಳ್ಳು ಎಂದು ನಮಗೆ ಭೋದಿಸಿದ್ದಾರೆ. ದುಃಖದಿಂದ ಬಿಡುಗಡೆಯಾಗ ಬೇಕಾದರೆ ಅಷ್ಟಾಂಗ ಮಾರ್ಗಗಳಾದ ಯೋಗ್ಯವಾದ ದೃಷ್ಟಿ, ಯೋಗ್ಯವಾದ ಸಂಕಲ್ಪ, ಯೋಗ್ಯವಾದ ವಾಣಿ, ಯೋಗ್ಯವಾದ ದೈಹಿಕ ಕರ್ಮ, ಯೋಗ್ಯವಾದ ಜೀವನೋಪಾಯ, ಯೋಗ್ಯವಾದ ಪ್ರಯತ್ನ, ಯೋಗ್ಯವಾದ ಅರಿವು ಮತ್ತು ಯೋಗ್ಯವಾದ ಏಕಾಗ್ರತೆ, ಮನುಷ್ಯ ಈ ಮಾರ್ಗಗಳನ್ನು ಅನುಸರಿಸಿ ನಡೆದರೆ ದುಃಖದ ನಿವಾರಣೆಯನ್ನು ಮಾಡಿಕೊಳ್ಳಬಹುದು, ಬುದ್ಧರು ಸ್ವಯಂ ತನ್ನ ಕೊನೆಯ ಕ್ಷಣದವರೆಗೂ ತಾವೇ ಅಷ್ಟಾಂಗ ಮಾರ್ಗಗಳನ್ನು ಆಚರಿಸಿದರು. ಬುದ್ಧ ಮತ್ತು ದುಃಖದ ಪರಿಕಲ್ಪನೆ ಬುದ್ಧರು ದುಃಖ ಲೌಕೀಕ ದುಃಖವೇ ಹೊರತು ಜನ್ಮಾಂತರಗಳದ್ದಲ್ಲ. ಅದು ಮನಸ್ಸಿಗೆ ಅಂಟಿಕೊಳ್ಳುವ ವಿಕಾರಗಳೇ ಹೊರತು ಬೇರೇನೂ ಅಲ್ಲ, ಹುಟ್ಟು ಕೂಡ ಒಂದು ದುಃಖ ಅನ್ನುವ ಕಲ್ಪನೆ, ಎಂದಿದ್ದಾರೆ. ಹುಟ್ಟು ಒಂದು ದುಃಖ ಎಂದಾದರೆ ಜೀವನಕ್ಕೆ ಅರ್ಥವಿಲ್ಲ ಜೀವನದಲ್ಲಿ ದುಃಖಗಳಿವೆ, ಆದರೆ ಅದಕ್ಕೆ ಪರಿಹಾರ ಮಾರ್ಗಗಳಿವೆ ಎಂದು ಬೋಧಿಸಿದ್ದೇ ಬುದ್ಧರ ಶ್ರೇಷ್ಠತೆ. ಆದ್ದರಿಂದ ಭೌದ್ಧಧರ್ಮ ನಿರಾಶವಾದವನ್ನು ಬೋಧಿಸುವುದಿಲ್ಲ, ಬುದ್ಧರ ಅನಿತ್ಯವಾದ ಬುದ್ಧರು 'ಸರ್ವಂ ಕ್ಷಣಿಕಮ್' ಎಂದಿದ್ದಾರೆ. ಈ ಜಗತ್ತು ನಿರಂತರ ಬದಲಾವಣೆಗೆ ಒಳಪಟ್ಟಿದೆ. ನಿರಂತರ ಬದಲಾವಣೆಗೆ, ಈ ಜಗದ ನಿಯಮ ಎಂಬುದೇ ಅನಿತ್ಯವಾದ ಸಿದ್ಧಾಂತ. ಜಗತ್ತು ಭ್ರಮೆಯೆಂಬ ಸಿದ್ಧಾಂತಂತ ಇದು ಭಿನ್ನವಾದದ್ದು ಎಂದು ಪ್ರತಿವಾದಿಸಿದ್ದಾರೆ.

ಬುದ್ಧರ ನಂತರ ಬಸವಣ್ಣನವರ ಬಸವಯುಗ ಪ್ರಾರಂಭವಾಗಿ, ಸಮಾಜದ ದುಃಖ ದುಮ್ಮಾನಗಳಿಗೆ, ಅಸಮಾನತೆಗೆ, ಕಷ್ಟಗಳಿಗೆ, ನೋವು, ನಲಿವುಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಮಾರ್ಗವನ್ನು ಕಂಡುಕೊಂಡು ದೊಡ್ಡ ಸಾಮಾಜಿಕ ಕ್ರಾಂತಿಯನ್ನೇ ಮಾಡಿದ್ದಾರೆ. ಆಡುಮುಟ್ಟದ ಸೊಪ್ಪಿಲ್ಲ ಬಸವಣ್ಣನವರು ಮಾಡದ ಕ್ರಾಂತಿಯಿಲ್ಲ ಎಂದು ಹೇಳಬಹುದು. ಅಸ್ಪೃಶ್ಯತೆಯಯಾತನೆ, ಶೂದ್ರತ್ವ, ಸ್ತ್ರೀತ್ವ ಮುಂತಾದ ಶೋಷಣೆಯಿಂದ ಬಳಲುತ್ತಿದ್ದ ಜನಸಾಮಾನ್ಯರಿಗೆ ಅವರ ದುಃಖದ ನಿವಾರಣೆಗೆ ನಿರಂತರವಾಗಿ ಸಾಮಾಜಿಕ ಕ್ರಾಂತಿಯನ್ನು ಮಾಡಿದ್ದಾರೆ.

ಮನುಷ್ಯ ಯಾವುದನ್ನಾದರು ಸಾಧಿಸಬೇಕಾದರೆ ಹಲವಾರು ದುಃಖ, ವೇದನೆ, ನೋವುಗಳೆಂಬ ಶಿಖರವನ್ನು ದಾಟಿದಾಗ ಮಾತ್ರ ನಮ್ಮ ಗುರಿ ಸಾಧಿಸಲು ಸಾಧ್ಯ. ಅದಕ್ಕೆ ಬದಲಾಗಿ ಇದನ್ನು ಸಾಧಿಸಲಾಗದ ಮನಷ್ಯನು ಇದು ನನ್ನ ಪಾಪದ ಕರ್ಮ, ನನ್ನ ಹಣೆಬರಹ, ನನಗೆ ಇದನ್ನು ಪಡೆಯಲು ಪುಣ್ಯವಿಲ್ಲವೆಂದು ಕಾಣದ ಶಕ್ತಿಯ ಮೇಲೆ. ಮೂಢನಂಬಿಕೆಯಿಂದ, ಉದಾಸೀನದಿಂದ, ಹತಾಶೆಯಿಂದ, ಉದ್ವೇಗದಿಂದ ಹಾಗೂ ಸೋಮಾರಿತನದಿಂದ ಕಾಲಕಳೆದು ಇಡೀ ಜೀವನವನ್ನೇ ವ್ಯರ್ಥ ಮಾಡಿಕೊಳ್ಳುತ್ತಾನೆ, ಎಂಬ ಸಂದೇಶವನ್ನು ವಿಶ್ವಕ್ಕೇ ಸಾರಿದ್ದಾರೆ. ಡಾಂಭಿಕವಾಗಿ ಮನಸ್ಸಿನಲ್ಲಿ ಒಂದು, ಬಾಹ್ಯದಲ್ಲಿ ಮತ್ತೊಂದು ಅಂತರವನ್ನು ಕೂಡಲಸಂಗಮ ಮೆಚ್ಚಲಾರನು, ಎನ್ನುತ್ತಾ ಮನಸ್ಸು ಹತೋಟಿಯಿದ್ದರೆ, ಆಸೆ ದುರಾಸೆಗಳು ಹುಟ್ಟುವುದಿಲ್ಲ. ದುರಾಸೆಗಳು ಈಡೇರದೆ ಹೋದಾಗ ದುಃಖ ಬರುತ್ತದೆ. ಆದ್ದರಿಂದ ಮನಸ್ಸಿನ ನಿಯಂತ್ರಣ ಬಹಳ ಮುಖ್ಯವೆಂಬುದು ಇದರ ಸಾರಾಂಶ.

ಬಸವಣ್ಣನವರ ನಂತರ ಅಂಬೇಡ್ಕರ್ ರವರು ತಮ್ಮ ನುಡಿಮುತ್ತಿನಲ್ಲಿ ನಗುವ ಹೃದಯಕ್ಕಿಂತ ನಗಿಸುವ ಹೃದಯ ಮುಖ್ಯ ದುಃಖ ಪಡುವ ಮನಸ್ಸಿಗಿಂತ ದುಃಖ ಮರೆಸುವ ಮನಸ್ಸು ಮುಖ್ಯ ಎಂದು ಹೇಳಿದ್ದಾರೆ. ಅಂದರೆ ದುಃಖದಲ್ಲಿರುವ, ಕಷ್ಟದಲ್ಲಿರುವ, ನೋವಿನಲ್ಲಿರುವ ಕಣ್ಣೀರನ್ನು ಒರೆಸುವ ಪ್ರಯತ್ನ ಮಾಡಬೇಕು. ಅದು ಎಲ್ಲರಿಗೂ ಬರುವುದಿಲ್ಲ. ಸಹನೆ, ಕರುಣೆ, ಪ್ರೀತಿ, ತಾಳ್ಮೆ, ದಯೆ, ಮಾನವೀಯತೆಯಿಂದ ಕೂಡಿರುವ, ಸರಳ ಜೀವನ ನಡೆಸುವ, ಮುಖ್ಯವಾಗಿ ನೆಮ್ಮದಿಯ ಜೀವನವನ್ನು ಕಂಡು ಕೊಂಡಿರುವ ವ್ಯಕ್ತಿಗಳಿಂದ ಮಾತ್ರ ಸಾಧ್ಯ. ಶ್ರೀಮಂತಿಕೆಯಿಂದ ಸಂಪತ್ತನ್ನು ಹೊಂದಿರುವ ದರ್ಪದಿಂದ ಕೂಡಿದ ದುರ್ಜನರಿಂದ ದುಃಖಕ್ಕೆ ಸಾಂತ್ವನ ಸಿಗಲಾರದು, ಅಪಮಾನಕ್ಕಿಂತ ಆಳವಾದ ಗಾಯ ಇನ್ನೊಂದಿಲ್ಲ. ಯಾರದಾದರೂ ಒಂದು ಪೆಟ್ಟು ಹೊಡೆದರೆ ತಡೆದುಕೊಳ್ಳಬಹುದು. ಆದರೆ ಅವಮಾನ ಮಾಡಿದರೆ ಅದರಿಂದಾಗುವ ದುಃಖವನ್ನು ತಡೆಯಲ್ಲಿಕ್ಕಾಗುವುದಿಲ್ಲ. ಆದ್ದರಿಂದಲೇ ಅಂಬೇಡ್ಕರ್ ರವರು ಆತ್ಮಗೌರವ ಬಹಳ ಶ್ರೇಷ್ಠವಾದದ್ದು, ಅದಕ್ಕೆ ದಕ್ಕೆಯಾಗದ ರೀತಿ ನೋಡಿಕೊಳ್ಳುವುದು ಯಾವಾಗಲೂ ಒಳ್ಳೆಯದು ಎಂದಿದ್ದಾರೆ ಸಂತಸದ ಸಮಯದಲ್ಲಿ ಚಪ್ಪಾಳೆ ತಟ್ಟುವ ಹತ್ತು ಬೆರಳುಗಳಿಗಿಂತ ದುಃಖದ ಸಮಯದಲ್ಲಿ ಕಣ್ಣೀರು ಒರೆಸುವ ಒಂದು ಬೆರಳು ಶ್ರೇಷ್ಠವಾದದು ಎಂಬ ಜಾಣ್ಮೆಯ ನುಡಿಯನ್ನು ನಮ್ಮ ಮುಂದಿಟ್ಟಿದ್ದಾರೆ.

ಬುದ್ಧರು ತೋರಿದ ಅಷ್ಟಾಂಗ ಮಾರ್ಗಗಳು, ಪಂಚಶೀಲಗಳು, ಉದಾತ್ತ ಸತ್ಯಗಳು ಹಾಗೂ ಮಧ್ಯಮ ಮಾರ್ಗದಲ್ಲಿ ನಡೆಯುವುದರಿಂದ ದುಃಖದ ನಿವಾರಣೆಯಾಗಿ, ಮನುಷ್ಯ ನೆಮ್ಮದಿಯ ಜೀವನ ಸಾಗಿಸಬಹುದು. ಪಾಲಿಗೆ ಬಂದದ್ದು ಪಂಚಾಮೃತ ಎಂದು ಬಸವಣ್ಣನವರ ಹಿತನುಡಿ. ಆಸೆಯನ್ನು ಮಿತಿಯಲ್ಲಿಟ್ಟುಕೊಳ್ಳಬೇಕೆಂದು ಬುದ್ಧರ ನುಡಿ. ಹಾಸಿಗೆ ಇದ್ದಷ್ಟು ಕಾಲು ಚಾಚು ಎಂಬುದು ಹಿರಿಯರ ಸಂದೇಶ, ದುಃಖ ಪಡುವ ಮನಸ್ಸಿಗಿಂತ, ದುಃಖ ಮರೆಸುವ ಮನಸ್ಸು ಮುಖ್ಯ ಎಂಬ ಅಂಬೇಡ್ಕರ್ ರವರ ನುಡಿಮುತ್ತುಗಳಿಂದ ನಮಗೆ ಅರಿವಾಗಬೇಕಾಗಿದೆ. ಆಗ ಮಾತ್ರ ಜೀವನದಲ್ಲಿ ಬರುವ ದುಃಖದಿಂದ ಪಾರಾಗಲು ಸಾಧ್ಯವಾಗುತ್ತದೆ.

**(ಲೇಖಕರು: ಸಂಸ್ಕೃತ ವಿಭಾಗದ ಅಧ್ಯಕ್ಷರು, ಬೆಂಗಳೂರು ವಿಶ್ವವಿದ್ಯಾಲಯ)**

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
**VISHVAVANI**, Printed & Published by: **VISHWESHWAR BHAT**, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 203

## ಸಮಾಚಾರ ಸಣ್ಣದಲ್ಲ

### 20 ಲಕ್ಷ ರು. ವಂಚನೆ; ಪಿಎಚ್ಡಿ ವಿದ್ಯಾರ್ಥಿ ಸೆರೆ

**ಹೈದರಾಬಾದ್:** ಆನ್‌ಲೈನ್ ಕೆಲಸದ ಮೂಲಕ ಹೆಚ್ಚು ಹಣ ಗಳಿಸುವ ಅವಕಾಶ ಮಾಡಿಕೊಡುವುದಾಗಿ ನಂಬಿಸಿ ದೆಹಲಿ ವ್ಯಕ್ತಿಗೆ 20 ಲಕ್ಷ ರು. ವಂಚಿಸಿದ ಆರೋಪದಡಿ ಪಿಎಚ್‌ಡಿ ಅಧ್ಯಯನ ನಡೆಸಿದ್ದವ ಪ್ರತಿಭಾವಂತನನ್ನು ತೆಲಂಗಾಣ ಪೊಲೀಸರು ಬಂಧಿಸಿದ್ದಾರೆ. ಬಿಸಿನೆಸ್ ಮ್ಯಾನೇಜ್‌ಮೆಂಟ್ ಶಿಕ್ಷಣ ವಿಭಾಗದಲ್ಲಿ ಪಿಎಚ್‌ಡಿ ಅಧ್ಯಯನ ನಡೆಸಿದ್ದ, ಜತೆಗೇ ಫ್ಲೆಕ್ಸ್ ಮುದ್ರಣ ವ್ಯವಹಾರ ನಡೆಸುತ್ತಿದ್ದ ತೆಲಂಗಾಣ ನಿವಾಸಿ ಲಕ್ಕು ಅಖಿಲೇಶ್ವರ್ ರೆಡ್ಡಿಯನ್ನು ಹೈದರಾಬಾದ್ ಪೊಲೀಸರು ವಂಚನೆ ಪ್ರಕರಣದಲ್ಲಿ ಬಂಧಿಸಿದ್ದಾರೆ. ಆರೋಪಿಗಳು ಕ್ರಿಪ್ಟೊ ಕರೆನ್ಸಿ ಖರೀದಿಸಿ ಮಾರಾಟ ಮಾಡಲು ವೆಬ್‌ಸೈಟ್‌ನಲ್ಲಿ ಖಾತೆ ತೆರೆಯಲು ಸೂಚಿಸಿದರು. ಬಳಿಕ ಆರೋಪಿಗಳ ನಿರ್ದೇಶನದಂತೆ 20.16 ಲಕ್ಷ ರು. ಹೂಡಿಕೆ ಮಾಡಿದ್ದೆ. ಬಳಿಕ ವಂಚಿಸಿದ್ದಾರೆಂದು ದೆಹಲಿಯ ದ್ವಾರಕ ನಿವಾಸಿ ಅಕ್ಷಯ್ ಕುಮಾರ್ ಸಿಂಗ್ ದೂರಿದ್ದಾರೆ. ದೆಹಲಿ ಸೈಬರ್ ಕ್ರೈಂ ವಿಭಾಗಕ್ಕೆ ನೀಡಿದ ದೂರಿನ ಮೇರೆಗೆ ಹೈದರಾಬಾದ್ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

### ಪಾಕ್ ಡ್ರೋನ್ ಉರುಳಿಸಿದ ಬಿಎಸ್ಎಫ್

**ಚಂಡೀಗಢ:** ಪಾಕಿಸ್ತಾನದಿಂದ ಹಾರಿಬಂದ ಡ್ರೋನನ್ನು ಪಂಜಾಬ್‌ನ ಫಜಿಲ್ಕಾ ಜಿಲ್ಲೆಯ ಅಂತಾರಾಷ್ಟ್ರೀಯ ಗಡಿ ಬಳಿ ಬಿಎಸ್‌ಎಫ್ ಯೋಧರು ಶನಿವಾರ ಹೊಡೆದುರುಳಿಸಿದ್ದಾರೆ. ಡ್ರೋನ್‌ಗೆ ಜೋಡಿಸಿ ಕಳ್ಳಸಾಗಣೆ ಮಾಡುತ್ತಿದ್ದ 3 ಪಿಸ್ತೂಲ್‌ಗಳು ಹಾಗೂ ಜತೆಗೆ ಚೀನಾ ನಿರ್ಮಿತ ಡ್ರೋನನ್ನು ವಶಪಡಿಸಿಕೊಳ್ಳಲಾಗಿದೆ. ಗುಂಡು ಹಾರಿಸಿದ ಬಳಿಕ ಫಾಜಿಲ್ಕಾ ಜಿಲ್ಲೆಯ ಮಹರ್‌ಸೋನಾ ಗ್ರಾಮದ ಕೃಷಿ ಜಮೀನಿನಲ್ಲಿ ಡ್ರೋನ್ ಬಿದ್ದಿತ್ತು. ಡ್ರೋನ್‌ಗೆ ಬಿಗಿದಿದ್ದ ಪಾರ್ಸೆಲ್‌ನಲ್ಲಿ 3 ಪಿಸ್ತೂಲ್, 7 ಮ್ಯಾಗಜೀನ್‌ಗಳಿದ್ದವು ಎಂದು ಬಿಎಸ್‌ಎಫ್ ಅಧಿಕಾರಿ ತಿಳಿಸಿದ್ದಾರೆ. ಮತ್ತೊಂದೆಡೆ, ಗುರುದಾಸ್‌ಪುರ ಜಿಲ್ಲೆಯ ರಟ್ಟಾರ್ ಚತ್ತರ್ ಗ್ರಾಮದ ಬಳಿ ಹೊಲದಲ್ಲಿ ಬಿದ್ದಿದ್ದ 2.3 ಕೆಜಿ ಹೆರಾಯಿನ್ ಪ್ಯಾಕೆಟ್ ಕೂಡಾ ವಶವಾಗಿದೆ. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದಾಗ ಹೆರಾಯಿನ್ ಪತ್ತೆಯಾಯಿತು ಎಂದು ಬಿಎಸ್‌ಎಫ್ ಅಧಿಕಾರಿ ತಿಳಿಸಿದ್ದಾರೆ.

### ಗುಜರಾತ್‌ನಲ್ಲಿ ಶಂಕಿತ ವೈರಸ್: 4 ಮಕ್ಕಳು ಬಲಿ

**ಅಹ್ಮದಾಬಾದ್:** ಗುಜರಾತ್‌ನ ಸಬರ್ಕಾಂತ ಜಿಲ್ಲೆಯ ಚಂಡೀಪುರದಲ್ಲಿ ಹೊಸಬಗೆಯ ಶಂಕಿತ ವೈರಸ್ ಸೋಂಕಿಗೆ 4 ಮಕ್ಕಳು ಬಲಿಯಾಗಿದ್ದಾರೆ. ಮತ್ತಿಬ್ಬರು ಮಕ್ಕಳು ಜಿಲ್ಲೆಯ ಹಿಮ್ಮತ್ ನಗರದ ಸಿವಿಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಆರೋಗ್ಯಾಧಿಕಾರಿ ಶನಿವಾರ ತಿಳಿಸಿದ್ದಾರೆ. ಎಲ್ಲಾ ಆರು ಮಕ್ಕಳ ರಕ್ತದ ಮಾದರಿಯನ್ನು ಪುಣೆಯ ರಾಷ್ಟ್ರೀಯ ವೈರಾಲಜಿ ಸಂಸ್ಥೆಗೆ (ಎನ್‌ಐವಿ) ದೃಢೀಕರಣಕ್ಕಾಗಿ ಕಳುಹಿಸಲಾಗಿದ್ದು, ಅದರ ಫಲಿತಾಂಶಕ್ಕಾಗಿ ಕಾಯಲಾಗುತ್ತಿದೆ ಎಂದು ಸಬರಕಾಂತ ಮುಖ್ಯ ಜಿಲ್ಲಾ ಆರೋಗ್ಯ ಅಧಿಕಾರಿ ರಾಜ್ ಸುತಾರಿಯಾ ತಿಳಿಸಿದ್ದಾರೆ. ಈ ವಿಚಿತ್ರ ವೈರಸ್ ಸೋಂಕು ಎನ್‌ಸೆಫಾಲಿಟಿಸ್(ಮೆದುಳಿನ ಉರಿಯೂತ) ಸೋಂಕಿನಂತೆ ಇದೆ. ಈ ವೈರಸ್, ರಾಬ್ಡೋವಿರಿಡೆ ಕುಟುಂಬದ ವೆಸಿಕ್ಯುಲೋವೈರಸ್ ಕುಟುಂಬಕ್ಕೆ ಸೇರಿದ್ದಾಗಿದೆ. ಸೊಳ್ಳೆ, ಉಣ್ಣೆ, ಮರಳು ನೊಣಗಳಂತಹ ವಾಹಕಗಳಿಂದ ಹರಡುತ್ತದೆ ಎಂದು ವೈದ್ಯರು ಮಾಹಿತಿ ನೀಡಿದ್ದಾರೆ.

### ಶರ್ಮಾ ಒಲಿ ನೇಪಾಳ ಪ್ರಧಾನಿ

**ದೆಹಲಿ:** ನೇಪಾಳದ 'ಯುನಿಫೈಡ್ ಮಾರ್ಕ್ಸಿಸ್ಟ್ ಲೆನಿನಿಸ್ಟ್' ಕಮ್ಯೂನಿಸ್ಟ್ ಪಕ್ಷದ ಅಧ್ಯಕ್ಷ ಕೆ.ಪಿ.ಶರ್ಮಾ ಒಲಿ 3ನೇ ಬಾರಿಗೆ ಹಿಮಾಲಯ ತಪ್ಪಲಿನ ರಾಷ್ಟ್ರದ ಪ್ರಧಾನಿಯಾಗಿದ್ದಾರೆ. ಸಂಸತ್‌ನಲ್ಲಿ ವಿಶ್ವಾಸಮತ ಸಾಬೀತು ಪಡಿಸುವಲ್ಲಿ ಪುಷ್ಪ ಕಮಲ್ ದಹಾಲ್ ಪ್ರಚಂಡ ವಿಫಲಗೊಂಡ ಬಳಿಕ ನೇಪಾಳ ರಾಷ್ಟ್ರಪತಿ ರಾಮಚಂದ್ರ ಪೌದಲ್ ಅವರು, ಶರ್ಮಾ ಒಲಿ ಅವರನ್ನು ಪ್ರಧಾನಿಯಾಗಿ ಭಾನುವಾರ ನೇಮಕ ಮಾಡಿದ್ದಾರೆ. ರಾಷ್ಟ್ರಪತಿ ಸೋಮವಾರ ನೂತನ ಪ್ರಧಾನಿ ಹಾಗೂ ಸಂಪುಟ ಸಚಿವರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ. ಸಿಪಿಎನ್-ಎಂಸಿ ಪಕ್ಷದ ಅಧ್ಯಕ್ಷ ಪ್ರಚಂಡಗೆ ನೀಡಿದ್ದ ಬೆಂಬಲವನ್ನು ಸಿಪಿಎನ್-ಯುಎಂಎಲ್ ಪಕ್ಷ ಕಳೆದ ವಾರ ಹಿಂಪಡೆಯಿತು. ಪರಿಣಾಮ ಸರಕಾರ ಅತಂತ್ರಗೊಂಡಿತು. ಶುಕ್ರವಾರ ಕೆ.ಪಿ.ಶರ್ಮಾ ಒಲಿ ಎನ್‌ಸಿ ಅಧ್ಯಕ್ಷ ಶೇರ್ ಬಹಾದುರ್ ದುಬಾ ಅವರ ಬೆಂಬಲ ಹಾಗೂ 165 ಪ್ರತಿನಿಧಿಗಳ ಸಹಿಯ ಪತ್ರದೊಂದಿಗೆ ಮುಂದಿನ ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಲು ಅವಕಾಶ ನೀಡುವಂತೆ ರಾಷ್ಟ್ರಪತಿಗಳೆದುರು ಹಕ್ಕು ಮಂಡಿಸಿದ್ದರು. ಇದಕ್ಕೂ ಮುನ್ನ, ಹಿಂದಿನ ಪ್ರಧಾನಿ ಪ್ರಚಂಡ ಸಂಸತ್‌ನಲ್ಲಿ ವಿಶ್ವಾಸಮತ ಯಾಚಿಸಿ ವಿಫಲರಾಗಿದ್ದರು. ಸರಕಾರ ಉಳಿಸಿಕೊಳ್ಳಲು 138 ಮತಗಳ ಬೆಂಬಲ ಬೇಕಿತ್ತು. ಆದರೆ 63 ಮತಗಳನ್ನಷ್ಟೇ ಪಡೆಯಲು ಪ್ರಚಂಡ ಅವರಿಗೆ ಸಾಧ್ಯವಾಯಿತು. ಈ ಹಿನ್ನೆಲೆ ಸರಕಾರ ಪತನವಾಯಿತು.

{ ಮಮತಾ ಬ್ಯಾನರ್ಜಿ } ಪ.ಬಂಗಾಳ ಸಿಎಂ

**ದೇಶದಲ್ಲೀಗ ಬಿಜೆಪಿ ವಿರೋಧಿ ಅಲೆ ಎದ್ದಿದೆ. ಅದು ಈಗಷ್ಟೇ ನಡೆದ 13 ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ದೃಢಪಟ್ಟಿದೆ. ಹಾಗಾಗಿ ಕೇಂದ್ರದಲ್ಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಹೆಚ್ಚು ದಿನ ಅಧಿಕಾರದಲ್ಲಿ ಇರುವುದಿಲ್ಲ. ಮೇ ತಿಂಗಳಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿಯೂ ಜನಾದೇಶ ಬಿಜೆಪಿ ಪರವಾಗಿಯೇನೂ ಇರಲಿಲ್ಲ.**

# ಕಾರ್ಗಿಲ್‌ಗೆ 25 ವರ್ಷ: ಆಪರೇಶನ್ ಸಫೇದ್ ಸಾಗರ್ ಸ್ಮರಿಸಿದ ಐಎಎಫ್

**ದೆಹಲಿ:** ಕಾರ್ಗಿಲ್ ಯುದ್ಧ ಸಮಯ ಭಾರತೀಯ ವಾಯುಪಡೆಯ(ಐಎಎಫ್) ಯೋಧರ ಕೆಚ್ಚೆದೆಯ ಹೋರಾಟ ನೆನೆದು ಗೌರವ ಸಮರ್ಪಿಸಲು ಜು.12ರಿಂದ 26ರವರೆಗೆ ಐಎಎಫ್ 'ಕಾರ್ಗಿಲ್ ವಿಜಯ್ ದಿವಸ್ ರಜತ ಜಯಂತಿ' ಆಚರಿಸುತ್ತಿದೆ. ಈ ಬಗ್ಗೆ ರಕ್ಷಣಾ ಸಚಿವಾಲಯ ಭಾನುವಾರ ಮಾಹಿತಿ ಹಂಚಿಕೊಂಡಿದೆ.

ಭಾರತೀಯ ವಾಯುಪಡೆಯ ಮುಖ್ಯಸ್ಥ ವೈಸ್ ಮಾರ್ಷಲ್ ವಿ.ಆರ್.ಚೌಧರಿ ಯುದ್ಧ ಸ್ಮಾರಕಕ್ಕೆ ಪುಷ್ಪಗುಚ್ಛವಿರಿಸಿ ಹುತಾತ್ಮ ಯೋಧರಿಗೆ ಗೌರವ ಸಲ್ಲಿಸಿದರು. ಈ ಸಮಯದಲ್ಲಿ ಹುತಾತ್ಮ ಯೋಧರ ಕುಟುಂಬದವರನ್ನು ಭೇಟಿ ಮಾಡಿ ಕುಶಲೋಪರಿ ನಡೆಸಿದರು. 'ಕಾರ್ಗಿಲ್ ವಿಜಯ್ ದಿವಸ್ ರಜತ ಜಯಂತಿ' ಅಂಗವಾಗಿ ಭಾನುವಾರ ವಿಶೇಷ ವಿಮಾನಗಳ ಹಾರಾಟ ಪ್ರದರ್ಶನ ಕೂಡಾ ಆಯೋಜಿಸಲಾಗಿತ್ತು. 'ಮಿಸ್ಸಿಂಗ್ ಮ್ಯಾನ್' ಮಾದರಿಯಲ್ಲಿ ಎಂಐ 17ವಿ5, ಹೆಲಿಕಾಪ್ಟರ್ ಚೀತಾ, ಚಿನೂಕ್ ಹೆಲಿಕಾಪ್ಟರ್‌ಗಳ ಪ್ರದರ್ಶನ ಕಣ್ಮನ ಸೆಳೆದವು. ಮಕ್ಕಳು, ಸ್ಥಳೀಯರು ಸೇರಿದಂತೆ 5 ಸಾವಿರಕ್ಕೂ ಅಧಿಕ ಜನರು ನೆರೆದಿದ್ದು, ಕಾರ್ಯಕ್ರಮವನ್ನು ಕಣ್ತುಂಬಿಕೊಂಡು ಸಂಭ್ರಮಿಸಿ ದರು. ಹುತಾತ್ಮ ಯೋಧರ ತ್ಯಾಗ, ಬಲಿದಾನವನ್ನು ಸ್ಮರಿಸಿ ನಮನ ಸಲ್ಲಿಸಿದರು.

### ಆಪರೇಷನ್ ಸಫೇದ್ ಸಾಗರ್

1999ರ ಕಾರ್ಗಿಲ್ ಯುದ್ಧ ಸಮಯದಲ್ಲಿ ಭೂಸೇನೆಯ ಜತೆಗೆ ವಾಯುಪಡೆ ಕೂಡ ವೀರಾವೇಶದಿಂದ ಹೋರಾಡಿ ಸಾವಿರಾರು ದಾಳಿಗಳನ್ನು ನಡೆಸಿತ್ತು. 'ಆಪರೇಷನ್ ಸಫೇದ್ ಸಾಗರ್' ಮೂಲಕ ಹಿಮಾಲಯ ಪರ್ವತ ಶ್ರೇಣಿಗಳಲ್ಲಿ 16 ಸಾವಿರ ಅಡಿಗಳಷ್ಟು ಎತ್ತರದಲ್ಲಿ ಯುದ್ಧ ವಿಮಾನಗಳ ಹಾರಾಟ ನಡೆಸಿ, ಶತೃದೇಶ ಪಾಕಿಸ್ತಾನದ ಸೇನೆಯ ಫಿರಂಗಿಗಳ ದಾಳಿಯನ್ನು ತಪ್ಪಿಸಿಕೊಂಡು ಶತೃನಾಶ ಮಾಡಿತ್ತು. ವಿಶೇಷ ಕಾರ್ಯಾಚರಣೆ ನಡೆಸಿ ಕಾರ್ಗಿಲ್ ಶ್ರೇಣಿಯ ಪರ್ವತಗಳ ಮೇಲೆ ಅಡಗಿದ್ದ ಶತೃಪಡೆಯ ಪಾಕ್ ಸೈನಿಕರನ್ನು ಕೊಂದುಹಾಕಿತ್ತು. ಕಾರ್ಗಿಲ್ ಪ್ರದೇಶದಿಂದ ಶತೃಪಡೆ ಸೋತು ಹಿಮ್ಮೆಟ್ಟುವಂತೆ ಮಾಡಿತ್ತು.

ಪೆನ್ಸಿಲ್ವೇನಿಯಾದ ಬಟ್ಲರ್ ನಗರದಲ್ಲಿ ಪ್ರಚಾರ ಸಭೆಯಲ್ಲಿ ಗುಂಡಿನ ದಾಳಿ | ಟ್ರಂಪ್ ಬಲಗಿವಿಯನ್ನು ಸವರಿಕೊಂಡು ಹೋದ ಗುಂಡು-ರಕ್ತಗಾಯ | ವೇದಿಕೆಯಲ್ಲಿ ಬಗ್ಗಿ ಕುಳಿತು ಪ್ರಾಣಾಪಾಯದಿಂದ ಪಾರಾದ ಟ್ರಂಪ್

# ಹತ್ಯಾಯತ್ನ: ಟ್ರಂಪ್ ಸ್ವಲ್ಪದರಲ್ಲೇ ಪಾರು

**ಪೆನ್ಸಿಲ್ವೇನಿಯಾ:** ಅಮೆರಿಕದಲ್ಲಿ ಮತ್ತೊಮ್ಮೆ ಗುಂಡಿನ ಮೊರೆತ ಕೇಳಿದೆ. ಈ ಬಾರಿ ಮಾಜಿ ಅಧ್ಯಕ್ಷ, ವರ್ಷಾಂತ್ಯದ ಅಧ್ಯಕ್ಷೀಯ ಚುನಾವಣೆಯ ಅಭ್ಯರ್ಥಿಯನ್ನೇ ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ.

ಪೆನ್ಸಿಲ್ವೇನಿಯಾದ ಬಟ್ಲರ್‌ನಲ್ಲಿ ಶನಿವಾರ ಸಂಜೆ ಚುನಾವಣಾ ಪ್ರಚಾರ ನಡೆಸಿದ್ದ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ, ಅಮೆರಿಕದ ಮಾಜಿ ಅಧ್ಯಕ್ಷ 78 ವರ್ಷದ ಡೊನಾಲ್ಡ್ ಟ್ರಂಪ್ ಅವರನ್ನೇ ದಾಳಿಕೋರ ಗುರಿಯಾಗಿಸಿಕೊಂಡಿದ್ದ.

- ವೇದಿಕೆ ಹಿಂಬದಿ ಇದ್ದ ಸಹಾಯಕ ಸಾವು, ಇನ್ನಿಬ್ಬರಿಗೆ ಗುಂಡೇಟಿನಿಂದ ಗಾಯ
- ದಾಳಿಕೋರನನ್ನು ಗುರಿಯಿಟ್ಟು ಗುಂಡಿಕ್ಕಿ ಸಾಯಿಸಿದ ಸ್ನೈಪರ್ ಶೂಟರ್

ಟ್ರಂಪ್ ಅವರ ಬಲಗಿವಿಗೆ ಗುಂಡು ಸವರಿಕೊಂಡು ಹೋಗಿದೆ. ಕಿವಿಗೆ ಸಣ್ಣ ರಕ್ತಗಾಯವಾಗಿದೆ. ಟ್ರಂಪ್ ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗುಂಡು ಬಲಗಿವಿಗೆ ತಾಗುತ್ತಲೇ ತಕ್ಷಣ ಎಚ್ಚೆತ್ತ ಟ್ರಂಪ್ ಪೋಡಿಯಂ ಹಿಂದೆ ಕುಳಿತು ಪ್ರಾಣ ಉಳಿಸಿ ಕೊಂಡಿದ್ದಾರೆ. ಧಾವಿಸಿ ಬಂದ ಭದ್ರತಾ ಸಿಬ್ಬಂದಿ, ಟ್ರಂಪ್ ಅವರನ್ನು ಬಿಗಿಭದ್ರತೆಯಲ್ಲಿ ಸುರಕ್ಷಿತವಾಗಿ ವೇದಿಕೆಯಿಂದ ಕರೆದುಕೊಂಡು ಹೋಗಿದ್ದಾರೆ. ಗುಂಡಿನ ದಾಳಿ ಸದ್ದು ಕೇಳುತ್ತಿದ್ದಂತೆಯೇ ಸಭೆಯಲ್ಲಿ ಗೊಂದಲ, ಗದ್ದಲ ಕಿರುಚಾಟ ಕೇಳಿಬಂದಿತು. ನೆರೆದಿದ್ದ ಜನರು ಭೀತಿಯಿಂದ ಓಡಿಹೋದರು ಎಂದು ಸಭೆಯಲ್ಲಿದ್ದವರೊಬ್ಬರು ಪ್ರತಿಕ್ರಿಯಿಸಿದ್ದಾರೆ.

**ಗಣ್ಯರ ಖಂಡನೆ:** ಅಮೆರಿಕ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಹತ್ಯೆ ಯತ್ನವನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹಾಗೂ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಸೇರಿದಂತೆ ದೇಶಾದ್ಯಂತದ ಪ್ರಮುಖರು ತೀವ್ರವಾಗಿ ಖಂಡಿಸಿದ್ದಾರೆ.ಸ್ನೇಹಿತ, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇಲಿನ ಹತ್ಯಾಯತ್ನದಿಂದ ತೀವ್ರ ಕಳವಳಗೊಂಡಿದ್ದೇನೆ. ಘಟನೆಯನ್ನು ಬಲವಾಗಿ ಖಂಡಿಸುತ್ತೇನೆ. ರಾಜಕೀಯ ಮತ್ತು ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಸ್ಥಾನವಿಲ್ಲ. ಅವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಕ್ರಿಯಿಸಿದ್ದಾರೆ.

**ಹಿಂಸೆಯ ಇತಿಹಾಸ:** ಅಮೆರಿಕದ ರಾಜಕೀಯ ಹಿಂಸೆಯ ಇತಿಹಾಸ ಹೊಂದಿದೆ. ಅಧ್ಯಕ್ಷರು, ಮಾಜಿ ಅಧ್ಯಕ್ಷರು ಮತ್ತು ಅಧ್ಯಕ್ಷೀಯ ಚುನಾವಣೆ ಅಭ್ಯರ್ಥಿಗಳಿಗೆ ಬಿಗಿ ಭದ್ರತೆ ಇರುತ್ತದೆ. ಮಾಜಿ ಅಧ್ಯಕ್ಷ ಜಾನ್ ಎಫ್.ಕೆನಡಿ ಅವ ರನ್ನು 1963ರಲ್ಲಿ ವಾಹನದಲ್ಲಿ ಹೋಗುತ್ತಿದ್ದಾಗ ಹತ್ಯೆ ಮಾಡಲಾಯಿತು, ಅವರ ಸಹೋದರ ಬಾಬಿ ಕೆನಡಿ ಅವರನ್ನು 1968ರಲ್ಲಿ ಗುಂಡಿಕ್ಕಿ ಕೊಲ್ಲಲಾಯಿತು. ಮಾಜಿ ಅಧ್ಯಕ್ಷ ರೊನಾಲ್ಡ್ ರೇಗನ್ 1981ರಲ್ಲಿ ಹತ್ಯೆ ಯತ್ನದಿಂದ ಬದುಕುಳಿದರು.

### ಬುಲೆಟ್ ಪ್ರೂಫ್ ಜಾಕೆಟ್ ಧರಿಸಿದ್ದ ಟ್ರಂಪ್

ಹತ್ಯೆ ಯತ್ನದಲ್ಲಿ ಪಾರಾಗಿರುವ ಡೊನಾಲ್ಡ್ ಟ್ರಂಪ್ ಅವರ ಬಲಕಿವಿಗೆ ಗಾಯವಾಗಿ ರಕ್ತ ಬಂದಿದೆ. ಡೊನಾಲ್ಡ್ ಟ್ರಂಪ್ ಗುಂಡು ನಿರೋಧಕ ಜಾಕೆಟ್ ಧರಿಸಿದ್ದರು. ಹಾಗಾಗಿ ಅವರ ಎದೆ, ಹೊಟ್ಟೆಯ ಭಾಗಕ್ಕೇನೂ ಗುಂಡು ತಗಲಿಲ್ಲ. ಆದರೆ, ಬಲಗಿವಿಯ ತುದಿಗೆ ಗುಂಡು ಸವರಿಕೊಂಡು ಹೋಗಿದೆ. ಹಾಗಾಗಿ ಕಿವಿಯಿಂದ ಸ್ವಲ್ಪವೇ ರಕ್ತ ಬಂದಿದೆ. ಅಲ್ಲದೇ, ಗುಂಡಿನ ಸದ್ದು ಕೇಳುತ್ತಲೇ ಟ್ರಂಪ್ ಥಟ್ಟನೆ ವೇದಿಕೆಯ ಪೋಡಿಯಂ ಹಿಂದೆ ಬಗ್ಗಿ ಕುಳಿತು ಗುಂಡಿನ ದಾಳಿಯಿಂದ ತಪ್ಪಿಸಿಕೊಂಡರು. ತಕ್ಷಣವೇ ಭದ್ರತಾ ಸಿಬ್ಬಂದಿ ಬಂದು ವೇದಿಕೆಯನ್ನು ಸುತ್ತುವರಿದ ಬಳಿಕ ಮೇಲೆದ್ದು ನಿಂತ ಟ್ರಂಪ್, ಮುಖ ಹೊರಕ್ಕೆ ಹಾಕಿ 'ಈ ಗುಂಡಿನ ದಾಳಿ ನನ್ನನ್ನು ಇನ್ನಷ್ಟು ಬಲಪಡಿಸುತ್ತದೆ' ಎಂದು ಕೂಗಿದರು. ಬಳಿಕ ಭದ್ರತಾ ಸಿಬ್ಬಂದಿ ಅವರನ್ನು ವೇದಿಕೆಯಿಂದ ಕರೆದೊಯ್ದರು.

### ಗುರಿತಪ್ಪದ ಸ್ನೈಪರ್

ಇನ್ನೊಂದೆಡೆ, ದೂರದ ಕಟ್ಟಡದ ತಾರಸಿ ಮೇಲೆ ಕುಳಿತು ಸಭೆಯ ಕಣ್ಗಾವಲು ನಡೆಸಿದ್ದ ಸ್ನೈಪರ್ ಶೂಟರ್, ತಕ್ಷಣವೇ ದಾಳಿಕೋ ರನನ್ನು ಗುರುತಿಸಿ ಗುರಿಯಿಟ್ಟು ಗುಂಡು ಹಾರಿಸಿ ಕೊಂದು ಹಾಕಿದ್ದಾರೆ. ದಾಳಿಕೋರನ ಶವದ ಬಳಿ ಆಟೊಮ್ಯಾಟಿಕ್ ರೈಫಲ್ ವಶಪಡಿಸಿಕೊಳ್ಳಲಾಗಿದೆ. ಟ್ರಂಪ್ ಮೇಲೆ ದಾಳಿ ನಡೆಸಿದವನನ್ನು ಪೆನ್ಸಿಲ್ವೇನಿಯ ನಿವಾಸಿ 20 ವರ್ಷದ ಥಾಮಸ್ ಕ್ರೂಕ್ ಎಂದು ಫೆಡರಲ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್(ಎಫ್‌ಬಿಐ) ಗುರುತಿಸಿದೆ. ವೇದಿಕೆಯಿಂದ 130 ಗಜ ದೂರದಲ್ಲಿ ನಿಂತು ಬಂದೂಕುಧಾರಿ ಕ್ರೂಕ್, ಟ್ರಂಪ್ ಅವರತ್ತ ಗುಂಡು ಹಾರಿಸಿದ್ದ.

### ಶೂಟರ್ ಪೆನ್ಸಿಲ್ವೇನಿಯದ ಥಾಮಸ್ ಕ್ರೂಕ್ಸ್: ಎಫ್‌ಬಿಐ

ಪೆನ್ಸಿಲ್ವೇನಿಯ: ಟ್ರಂಪ್ ಮೇಲೆ ಗುಂಡು ಹಾರಿಸಿದವನನ್ನು ಪೆನ್ಸಿಲ್ವೇನಿಯದ ಬೆಥೆಲ್ ಪಾರ್ಕ್‌ನ 20 ವರ್ಷದ ಥಾಮಸ್ ಮ್ಯಾಥ್ಯೂ ಕ್ರೂಕ್ಸ್ ಎಂದು ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್(ಎಫ್‌ಬಿಐ)ಗುರುತಿಸಿದೆ. ದಾಳಿಕೋರ ವೇದಿಕೆಯಿಂದ 130 ಗಜ ದೂರದಲ್ಲಿ ನಿಂತು ಟ್ರಂಪ್ ಅವರತ್ತ ಗುಂಡು ಹಾರಿಸಿದ. ಆತ ಟ್ರಂಪ್ ಅವರತ್ತ ಗುಂಡು ಹಾರಿಸಿದ್ದು ತಿಳಿದ ತಕ್ಷಣವೇ ದೂರದ ಕಟ್ಟಡದ ಮೇಲಿದ್ದ ಸ್ನೈಪರ್ ಶೂಟರ್ ಗುರಿಯಿಟ್ಟು ಗುಂಡು ಹಾರಿಸಿ ಕೊಂದು ಹಾಕಿದರು ಎಂದು ಅಧಿಕಾರಿಗಳು ವಿವರಿಸಿದ್ದಾರೆ.

### ಅಮೆರಿಕದಲ್ಲಿ ಹಿಂಸೆಗೆ ಅವಕಾಶವಿಲ್ಲ: ಬೈಡನ್



ನವೆಂಬರ್‌ನಲ್ಲಿ ಅಧ್ಯಕ್ಷೀಯ ಚುನಾವಣೆ ನಡೆಯಲಿರುವಾಗಲೇ ಅಭ್ಯರ್ಥಿ ಮೇಲೆ ಗುಂಡಿನ ದಾಳಿಯಾಗಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಅಮೆರಿಕ ಅಧ್ಯಕ್ಷ ಜೋ ಬೈಡನ್, ಅಮೆರಿಕದಲ್ಲಿ ಈ ಬಗೆಯ ಹಿಂಸಾಚಾರಕ್ಕೆ ಅವಕಾಶವಿಲ್ಲ. ಘಟನೆಯನ್ನು ಖಂಡಿತಾ ಸಮರ್ಥಿಸುವುದಿಲ್ಲ ಎಂದಿದ್ದಾರೆ.

### ನಂಬಲಾಗುತ್ತಿಲ್ಲ: ಟ್ರಂಪ್ ಪ್ರತಿಕ್ರಿಯೆ

ವಾಷಿಂಗ್ಟನ್: ನಮ್ಮ ದೇಶದಲ್ಲಿ ಇಂತಹ ಕೃತ್ಯ ನಡೆದಿರುವುದನ್ನು ನಂಬಲಾಗುತ್ತಿಲ್ಲ ಎಂದು ಡೊನಾಲ್ಡ್ ಟ್ರಂಪ್ ತಕ್ಷಣದ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಘಟನೆ ಬಳಿಕ ಅಮೆರಿಕ ಸೀಕ್ರೆಟ್ ಸರ್ವಿಸ್ ಹಾಗೂ ಕಾನೂನು ವ್ಯವಸ್ಥೆ ಕೈಗೊಂಡ ತ್ವರಿತ ಕ್ರಮ ಪ್ರಶಂಸಾರ್ಹ. ಅದಕ್ಕೆ ಧನ್ಯವಾದ ಹೇಳಲು ಬಯಸುತ್ತೇನೆ ಎಂದೂ ಟ್ರಂಪ್ ಹೇಳಿದ್ದಾರೆ. ಗುಂಡಿನ ದಾಳಿಯಿಂದ ಕಿವಿಗೆ ಗಾಯವಾಗಿ ರಕ್ತಸುರಿದಿದೆ. ಘಟನೆಯಲ್ಲಿ ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಹಾರೈಸುವೆ. ಮೃತ ಸಹಾಯಕನ ಕುಟುಂಬಕ್ಕೆ ಸಂತಾಪ ಸೂಚಿಸುತ್ತೇನೆ ಎಂದಿದ್ದಾರೆ.

### ಟ್ರಂಪ್ ಹತ್ಯಾ ಯತ್ನ ನೈಜವೋ-ಒಳಸಂಚೊ?

**ಪೆನ್ಸಿಲ್ವೇನಿಯ:** ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇಲೆ ಪೆನ್ಸಿಲ್ವೇನಿಯ ಪ್ರಚಾರ ಸಭೆಯಲ್ಲಿ ಶನಿವಾರ ಸಂಜೆ ನಡೆದಿದ್ದು ನೈಜ ದಾಳಿಯೋ ಅಥವಾ ಒಳಸಂಚೋ ಎಂಬ ಚರ್ಚೆ ಅಮೆರಿಕದಲ್ಲಿ ಜೋರಾಗಿ ನಡೆದಿದೆ.

ದಾಳಿಯ ಮರುಕ್ಷಣ ಟ್ರಂಪ್ ನೀಡಿದ 'ಈ ದಾಳಿ ನನ್ನನ್ನು ಇನ್ನಷ್ಟು ಶಕ್ತಿಶಾಲಿಯಾಗಿಸಿದೆ; ಎಂಬ ಪ್ರತಿಕ್ರಿಯೆ ಹಾಗೂ ಅವರ ದೇಹದ ಮೇಲೆಲ್ಲೂ ಗುಂಡು ತಾಕಿದ ಗಾಯ ಗೋಚರಿಸದೇ ಇರುವುದು, 'ದಾಳಿಯೊಂದು ಚುನಾವಣಾ ರಾಜಕೀಯದ ಸಂಚು' ಎಂಬ ಶಂಕೆಗೆ ಕಾರಣವಾಗಿದೆ ಎಂದೇ ರಾಜಕೀಯ ತಜ್ಞರು ವಿಶ್ಲೇಷಿಸುತ್ತಿದ್ದಾರೆ. ಅಧ್ಯಕ್ಷೀಯ ಚುನಾವಣೆ ಸಮೀಪದಲ್ಲಿರುವಾಗ ನಡೆದ ಈ ದಾಳಿ ರಾಜಕೀಯ ಗಿಮಿಕ್ ಇರಬಹುದೆಂಬ ಅನುಮಾನವನ್ನೂ ಹುಟ್ಟುಹಾಕಿದೆ.

**ಶಂಕೆಯೇಕೆ?:** ಟ್ರಂಪ್ ಮೇಲಿನ ದಾಳಿ ವಿಡಿಯೊ ವೈರಲ್ ಆಗಿದ್ದು, ದಾಳಿ ಬಳಿಕ ಕೆಳಕ್ಕೆ ಬಗ್ಗಿ ಅಡಗಿದ್ದ ಟ್ರಂಪ್, ಕೆಲ ಕ್ಷಣದಲ್ಲೇ ಮೇಲೆದ್ದು ನಿಂತು ಮುಷ್ಠಿ ಬಿಗಿ ಮಾಡಿ ಕೈ ಮೇಲೆತ್ತಿ ಸಂದೇಶ ನೀಡಿದ್ದನ್ನು ಬಹಳ ಜನರು 'ಅಸ್ವಾಭಾವಿಕ ಪ್ರತಿಕ್ರಿಯೆ' ಎಂದೇ ವಿಶ್ಲೇಷಿಸಿದ್ದಾರೆ. ಬುಲೆಟ್ ದಾಳಿ ನಡೆದಿದ್ದರೆ ಕಿವಿಯ ಚರ್ಮ ಹರಿದು ಹೋಗಬೇಕಿತ್ತು. ಅಂತಹ ಯಾವುದೇ ಕುರುಹು ಕಂಡು ಬಂದಿಲ್ಲ ಎಂದು ಕೆಲವರು ಶಂಕೆ ವ್ಯಕ್ತಪಡಿಸಿದ್ದಾರೆ. ಇನ್ನು ಕೆಲವರು, ಟ್ರಂಪ್ ಪೋಡಿಯಂ ಹಿಂದೆ ಅಡಗಿ ಮೇಲೆದ್ದಾಗ ರಕ್ತ ಕಂಡಿದೆ, ಟೆಲಿಪ್ರಾಂಪ್ಟರ್‌ನಿಂದ ಹಾರಿದ ಗಾಜಿನ ಚೂರು ಕಿವಿಗೆ ತಾಗಿರಬೇಕು ಎಂದು ಪ್ರತಿಪಾದಿಸಿದ್ದಾರೆ.

### ಮೂವರು ಉಗ್ರರು ಹತ

**ಕುಪ್ವಾರಾ:** ನುಸುಳುಕೋರರ ವಿರುದ್ಧ ಭಾನುವಾರ ನಡೆದ ಕಾರ್ಯಾಚರಣೆಯಲ್ಲಿ ಮೂವರು ಉಗ್ರರನ್ನು ಗಡಿ ಭದ್ರತಾ ಪಡೆಗಳ ಯೋಧರು ಹೊಡೆದುರುಳಿಸಿದ್ದಾರೆ. ಭಾರತೀಯ ಸೇನೆಯ ಚಿನಾರ್ ಕಾರ್ಪ್ಸ್ ಈ ಮಾಹಿತಿ ನೀಡಿದೆ. ಹತರಾದ ಉಗ್ರರಿಂದ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕುಪ್ವಾರಾ ಜಿಲ್ಲೆಯ ಕೆರನ್ ಸೆಕ್ಟರ್‌ನಲ್ಲಿ ನುಸುಳುಕೋರರ ವಿರುದ್ಧ 'ಧನುಷ್ 2' ಕೋಡ್‌ನಲ್ಲಿ ಕಾರ್ಯಾಚರಣೆ ಆರಂಭಿಸಲಾಗಿದೆ. ಕಳೆದ ಕೆಲವು ವಾರಗಳಿಂದ ಈ ಭಾಗದಲ್ಲಿ ನುಸುಳುಕೋರರ ಆತಂಕ ಹೆಚ್ಚಾಗಿದ್ದು ಈ ಬಗ್ಗೆ ಸುಳಿವು ಸಿಕ್ಕ ಹಿನ್ನೆಲೆ ಭದ್ರತಾಪಡೆ ಭಾರಿ ಕಾರ್ಯಾಚರಣೆ ನಡೆಸಿದೆ. ಅಮರನಾಥ ಯಾತ್ರೆ ಕೂಡ ನಡೆಯುತ್ತಿರುವುದರಿಂದ ಭದ್ರತೆ ಹೆಚ್ಚಿಸಲು ಅಡಗಿ ಕುಳಿತಿರುವ ಉಗ್ರರ ಪತ್ತೆಗೆ ಸೇನೆ ನಿರಂತರ ಹುಡುಕಾಟ ನಡೆಸುತ್ತಿದೆ. ಇದರ ಭಾಗವಾಗಿ ನಡೆದ ಕಾರ್ಯಾಚರಣೆಯಲ್ಲಿ ಮೂವರನ್ನು ಹತ್ಯೆಗೈಯ್ಯಲಾಗಿದೆ.

ಇಂದಿರಾ ಗಾಂಧಿಯೇ ಒಪ್ಪಿದ್ದರು: ಚಿದಂಬರಂ

### 'ತುರ್ತು ಪರಿಸ್ಥಿತಿ' ಹೇರಿಕೆ ತಪ್ಪು ನಿರ್ಧಾರ: ಕಾಂಗ್ರೆಸ್

**ದೆಹಲಿ:** 1975ರಲ್ಲಿ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದ್ದು ಒಂದು ತಪ್ಪು ನಿರ್ಧಾರ ಎಂಬುದನ್ನು ಖುದ್ದು ಇಂದಿರಾ ಗಾಂಧಿ ಅವರೇ ಒಪ್ಪಿಕೊಂಡಿದ್ದರು ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡ, ರಾಜ್ಯಸಭಾ ಸದಸ್ಯ ಪಿ.ಚಿದಂಬರಂ ಭಾನುವಾರ ಹೇಳಿದ್ದಾರೆ. 50 ವರ್ಷ ಹಿಂದೆ ನಡೆದ ಘಟನೆ ಬಗ್ಗೆ ಈಗ ಚರ್ಚೆ ಏಕೆ? ಎಂದೂ ಪ್ರಶ್ನಿಸಿದ್ದಾರೆ.

ಮಾಧ್ಯಮದ ಜತೆ ಮಾತನಾಡಿದ ಕೇಂದ್ರದ ಮಾಜಿ ಹಣಕಾಸು ಮತ್ತು ಗೃಹ ಸಚಿವ ಚಿದಂಬರಂ, ಜೂ.25ರಂದು ತುರ್ತು ಪರಿಸ್ಥಿತಿ ಘೋಷಣೆಯಾಗಿ 50 ವರ್ಷ ಸಂದ ಹಿನ್ನೆಲೆ 'ಸಂವಿಧಾನ ಹತ್ಯಾ ದಿವಸ್' ಆಚರಿಸುವುದಾಗಿ ಎನ್‌ಡಿಎ ಸರಕಾರ ಹೇಳಿದೆ. ಭಾರತದಲ್ಲಿ ಈಗಿರುವ ಶೇ.75ರಷ್ಟು ಜನ 1975ರ ಬಳಿಕ ಹುಟ್ಟಿದವರು. 'ಎಮರ್ಜೆನ್ಸಿ ಘೋಷಣೆ ಒಂದು ತಪ್ಪು ನಿರ್ಧಾರ' ಎಂದು ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರೇ ಒಂದು ಸಂದರ್ಭ ಒಪ್ಪಿಕೊಂಡಿದ್ದರು. ಅದೇ ಕಾರಣವಾಗಿ ಮತ್ತೆಂದೂ ಬಹಳ ಸುಲಭವಾಗಿ ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಗೆ ತರುವಂತೆ ಆಗಬಾರದು ಎಂದೇ ಸಂವಿಧಾನದಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಲಾಯಿತು ಎಂದು ವಿವರ ನೀಡಿದರು. ಬಿಜೆಪಿ ಏಕೆ 18 ಅಥವಾ 17ನೇ ಶತಮಾನಕ್ಕೇಕೆ ಹೋಗಬಾರದು? ಎಂದೂ ಚಿದಂಬರಂ ವ್ಯಂಗ್ಯವಾಗಿ ಪ್ರಶ್ನಿಸಿದ್ದಾರೆ. 50 ವರ್ಷಗಳ ಹಿಂದಿನ ಘಟನೆಯನ್ನು ಈಗ ಚರ್ಚೆ ಮಾಡುವುದರಲ್ಲಿ ಯಾವುದೇ ಪ್ರಯೋಜನವಿಲ್ಲ. ಬಿಜೆಪಿ ಹಳೆಯದನ್ನೆಲ್ಲಾ ಮರೆಯಬೇಕು. ಹಳೆಯ ತಪ್ಪಿನಿಂದ ಪಾಠ ಕಲಿತಿದ್ದೇವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದೂ ಚಿದಂಬರಂ ಕಿವಿಮಾತು ಹೇಳಿದ್ದಾರೆ.

### ಜಿರಿಬಮ್‌ನಲ್ಲಿ ಉಗ್ರರ ದಾಳಿ; ಸಿಆರ್‌ಪಿಎಫ್ ಯೋಧ ಹುತಾತ್ಮ

**ಇಂಫಾಲ:** ಮಣಿಪುರದ ಜಿರಿಬಮ್ ಜಿಲ್ಲೆಯಲ್ಲಿ ಕುಕಿ ಉಗ್ರರು ಹೊಂಚು ಹಾಕಿ ನಡೆಸಿದ ದಾಳಿಗೆ ಸಿಆರ್‌ಪಿಎಫ್ ಯೋಧರೊಬ್ಬರು ಭಾನುವಾರ ಹುತಾತ್ಮರಾದರು. ಇಬ್ಬರು ಪೊಲೀಸ್ ಕಮಾಂಡೋಗಳು ಗಾಯಗೊಂಡರು.

ರಾಜ್ಯ ಪೊಲೀಸ್ ಮತ್ತು ಸಿಆರ್‌ಪಿಎಫ್ ಜಂಟಿ ಭದ್ರತಾ ಪಡೆಯೂ ತೀವ್ರ ಸ್ವರೂಪದ ಕಾರ್ಯಾಚರಣೆ ನಡೆಸಿದೆ. ದಟ್ಟ ಅರಣ್ಯದಲ್ಲಿ ಅಡಗಿಕೊಂಡು ದಾಳಿ ನಡೆಸಿದ ಉಗ್ರರ ಗುಂಪಿನ ಸಾವು-ನೋವು ಬಗ್ಗೆ ಭಾನುವಾರ ಸಂಜೆವರೆಗೂ ಮಾಹಿತಿ ಲಭ್ಯವಾಗಿರಲಿಲ್ಲ.

ಅಸ್ಸಾಂ ಗಡಿಯಲ್ಲಿನ ಜಿರಿಬಮ್ ಪ್ರದೇಶದಲ್ಲಿ ಗಸ್ತು ತಿರುಗುತ್ತಿದ್ದ ರಾಜ್ಯ ಪೊಲೀಸ್ ಮತ್ತು ಸಿಆರ್‌ಪಿಎಫ್ ಯೋಧರ ತಂಡದ ಮೇಲೆ ಕುಕಿ ಉಗ್ರರು ಹೊಂಚು ದಾಳಿ ನಡೆಸಿದರು. ಜಂಟಿ ಭದ್ರತಾ ಪಡೆಯೂ ತಕ್ಕ ಪ್ರತಿರೋಧ ತೋರಿದೆ. ಕುಕಿ ಉಗ್ರರು ಸಿಆರ್‌ಪಿಎಫ್ ಯೋಧನನ್ನು ಹತ್ಯೆಗೈದಿರುವುದನ್ನು ತೀವ್ರವಾಗಿ ಖಂಡಿಸುತ್ತೇನೆ. ಮೃತನ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿ ಸಿಗಲಿ, ಗಾಯಾಳು ಸಿಬ್ಬಂದಿ ಶೀಘ್ರ ಗುಣಮುಖರಾಗಲಿ ಎಂದು ಮುಖ್ಯಮಂತ್ರಿ ಬಿರೇನ್‌ಸಿಂಗ್ ಎಕ್ಸ್ ಸಂದೇಶ ರವಾನಿಸಿದ್ದಾರೆ. ಕೆಲ ವಾರಗಳ ಹಿಂದಿನಿಂದ ಜಿರಿಬಮ್ ಜಿಲ್ಲೆಯಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಮೈಥೇಯಿ ಸಮುದಾಯ ಹಾಗೂ ಕುಕಿಯ ಮಾರ್ ಗುಂಪಿನ ನಡುವೆ ಘರ್ಷಣೆಯಾಗಿತ್ತು. ಜೂನ್‌ನಲ್ಲಿ ಗಲಭೆಯಾದಾಗ ಕುಕಿ, ಮೈಥೇಯಿ ಸಮುದಾಯದ ಸಾವಿರಾರು ಜನರು ನಿರಾಶ್ರಿತ ಕೇಂದ್ರಗಳಲ್ಲಿ ಉಳಿಯುವಂತಾಗಿದೆ.

### ತ.ನಾಡು ಆರ್ಮ್‌ಸ್ಟ್ರಾಂಗ್ ಹತ್ಯೆ ಆರೋಪಿ ಎನ್‌ಕೌಂಟರಲ್ಲಿ ಹತ

**ಚೆನ್ನೈ:** ಬಿಎಸ್‌ಪಿ ತಮಿಳುನಾಡು ಘಟಕ ಅಧ್ಯಕ್ಷ ಕೆ.ಆರ್ಮ್‌ಸ್ಟ್ರಾಂಗ್ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಕೆ. ತಿರುವೆಂಗಡಂ ಪೊಲೀಸರ ಗುಂಡೇಟಿನಿಂದ ಸಾವಿಗೀಡಾಗಿದ್ದಾನೆ.

ಆರ್ಮ್‌ಸ್ಟ್ರಾಂಗ್ ಹತ್ಯೆ ನಡೆದ ಸ್ಥಳದ ಮಹಜರು ಮತ್ತು ಬಿಎಸ್‌ಪಿ ಮುಖಂಡನ ಹತ್ಯೆಗೆ ಬಳಸಿದ್ದ ಶಸ್ತ್ರಾಸ್ತ್ರಗಳನ್ನು ಪತ್ತೆಹಚ್ಚಲು ಆರೋಪಿಯನ್ನು ಉತ್ತರ ಚೆನ್ನೈಗೆ ಕರೆದೊಯ್ದಿದ್ದಾಗ ತಪ್ಪಿಸಿಕೊಳ್ಳಲು ಯತ್ನಿಸಿದ. ಪೊಲೀಸರ ಮೇಲೆಯೇ ಹಲ್ಲೆಗೆ ಯತ್ನಿಸಿದ ಆಗ ಆತ್ಮರಕ್ಷಣೆಗಾಗಿ ಆತನತ್ತ ಗುಂಡು ಹಾರಿಸಿದೆವು. ಗಾಯಗೊಂಡ ಆರೋಪಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆಯೇ ಕೊನೆಯುಸಿರೆಳೆದ ಎಂದು ಪೊಲೀಸರು ಹೇಳಿದ್ದಾರೆ.

ಜು.5ರಂದು ಆರ್ಮ್‌ಸ್ಟ್ರಾಂಗ್ ಕೊಲೆಯಾಗಿತ್ತು. ರೌಡಿಶೀಟರ್ ಆಗಿರುವ 30 ವರ್ಷದ ತಿರುವೆಂಗಡಂ ಆರ್ಮ್‌ಸ್ಟಾಂಗ್ ಹತ್ಯೆ ಪ್ರಕರಣದಲ್ಲಿ ಬಂಧಿತನಾಗಿದ್ದ. ಆತನೂ ಸೇರಿದಂತೆ ಈವರೆಗ ಒಟ್ಟು 11 ಆರೋಪಿಗಳನ್ನು ಪ್ರಕರಣದಲ್ಲಿ ಬಂಧಿಸಲಾಗಿತ್ತು. ನ್ಯಾಯಾಲಯ 5 ದಿನ ಪೊಲೀಸ್ ಕಸ್ಟಡಿಗೆ ನೀಡಿತ್ತು.

### ನಕಲಿ ಎನ್‌ಕೌಂಟರ್: ಎಐಎಡಿಎಂಕೆ ಟೀಕೆ

ಇದೊಂದು ನಕಲಿ ಎನ್‌ಕೌಂಟರ್ ಎಂದು ಎಐಎಡಿಎಂಕೆ ನಾಯಕ ಎಡಪ್ಪಾಡಿ ಕೆ.ಪಳನಿಸ್ವಾಮಿ ತಮಿಳುನಾಡು ಪೊಲೀಸರ ಕ್ರಮವನ್ನು ಟೀಕಿಸಿದ್ದಾರೆ. ಆರ್ಮಸ್ಟ್ರಾಂಗ್ ಹತ್ಯೆ ಪ್ರಕರಣದಲ್ಲಿ ಹೆಸರು ಕೇಳಿಬಂದ ಬಳಿಕ ಖುದ್ದು ಆರೋಪಿಯೇ ಪೊಲೀಸರೆದುರು ಶರಣಾಗಿದ್ದಾನೆ. ಹೀಗಿರುವಾಗ ಆತ ಏಕೆ ಪರಾರಿಯಾಗಲು ಯತ್ನಿಸುತ್ತಾನೆ. ಆತನನ್ನು ಉದ್ದೇಶಪೂರ್ವಕ ಎನ್‌ಕೌಂಟರ್ ಮಾಡಲಾಗಿದೆ. ಇದು ಅನುಮಾನಕ್ಕೆ ಕಾರಣವಾಗಿದೆ. ಈ ಬಗ್ಗೆ ಕೂಲಂಕಷ ತನಿಖೆ ಆಗಬೇಕು ಎಂದು ಆಗ್ರಹಿಸಿದ್ದಾರೆ.

ಆ.1ರಿಂದ ಹೊಸ ನಾಯಕನ ಆಯ್ಕೆ ಪ್ರಕ್ರಿಯೆ

### ವರ್ಷಾಂತ್ಯವರೆಗೂ ಅಧ್ಯಕ್ಷರಾಗಿ ನಡ್ಡಾ!

**ದೆಹಲಿ:** ಲೋಕಸಭಾ ಚುನಾವಣೆ ಬಳಿಕ ಸಚಿವರಾಗಿ ಕೇಂದ್ರ ಸಂಪುಟ ಸೇರಿದ ಜಗತ್ ಪ್ರಕಾಶ್ ನಡ್ಡಾ(ಜೆಪಿ ನಡ್ಡಾ) ಅವರಿಗೆ ಸದ್ಯಕ್ಕೆ ಪಕ್ಷಾಧ್ಯಕ್ಷ ಜವಾಬ್ದಾರಿಯಿಂದ ಬಿಡುಗಡೆ ಆಗುವುದಿಲ್ಲ. ವರ್ಷಾಂತ್ಯದವರೆಗೂ ಬಿಜೆಪಿ ರಾಷ್ಟ್ರಾಧ್ಯಕ್ಷ ಸ್ಥಾನದಲ್ಲಿ ಮುಂದುವರೆ ಯುವಂತೆ ಸೂಚನೆ ನೀಡಲಾಗಿದೆ.

ಸದ್ಯ ಪ್ರಧಾನಿ ಮೋದಿ ಸಂಪುಟದಲ್ಲಿ ಆರೋಗ್ಯ, ರಾಸಾಯನಿಕ, ರಸಗೊಬ್ಬರಗಳಂತಹ ಮಹತ್ವದ ಖಾತೆಗಳ ಜವಾಬ್ದಾರಿಯನ್ನೂ ಹೊತ್ತಿರುವ ಜೆ.ಪಿ. ನಡ್ಡಾ ಅವರ ಹೆಗಲ ಮೇಲೆ ವಿಶ್ವದಲ್ಲೇ ಅತಿ ದೊಡ್ಡ ರಾಜಕೀಯ ಪಕ್ಷ ಎನಿಸಿಕೊಂಡಿರುವ 'ಬಿಜೆಪಿ' ಅಧ್ಯಕ್ಷ ಹುದ್ದೆಯ ಜವಾಬ್ದಾರಿಯೂ ಮುಂದುವರಿದಿದೆ.

ಪಕ್ಷದ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಸೂಕ್ತ ನಾಯಕನ ಹುಡುಕಾಟದಲ್ಲಿರುವ ಬಿಜೆಪಿ, ಆ.1ರಿಂದ ಪಕ್ಷಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಆರಂಭಿಸಲಿದೆ. ಅದೇ ವೇಳೆ, ಸದಸ್ಯತ್ವ ಅಭಿಯಾನವನ್ನೂ ನಡೆಸಲಿದೆ. ಸೆ.16ರಿಂದ 30ರವರೆಗೆ ಸಕ್ರಿಯ ಸದಸ್ಯತ್ವ ಅಭಿಯಾನ ನಡೆಯಲಿದೆ. ಅ.1ರಿಂದ 15ರವರೆಗೆ ಸದಸ್ಯತ್ವ ಅರ್ಜಿಗಳ ಪರಿಶೀಲನೆ ನಡೆಯಲಿದೆ.

#### ಚುನಾವಣೆಗಳ ಸರಣಿ

ಪಕ್ಷದ ಮಂಡಲ ಮತ್ತು ಜಿಲ್ಲಾಧ್ಯಕ್ಷರ ಚುನಾವಣೆ ನಡೆಯಲಿದೆ. ಆ ಬಳಿಕ ರಾಜ್ಯ ಪರಿ ಷತ್ ಮತ್ತು ಕೇಂದ್ರ ಪರಿಷತ್ ಸದಸ್ಯರ ಆಯ್ಕೆ ನಡೆದ ನಂತರ ರಾಜ್ಯಾಧ್ಯಕ್ಷರ ಆಯ್ಕೆ ನಡೆಯಲಿದೆ. ಈ ಎಲ್ಲಾ ಚುನಾವಣಾ ಪ್ರಕ್ರಿಯೆಗಳ ನಂತರವಷ್ಟೇ ರಾಷ್ಟ್ರಾಧ್ಯಕ್ಷರ ಆಯ್ಕೆ ನಡೆಯಲಿದೆ ಎಂದು ಹೇಳಲಾಗಿದೆ.

ಆಂಧ್ರಪ್ರದೇಶ ಮುಖ್ಯಮಂತ್ರಿ, ಚಂದ್ರಬಾಬು ನಾಯ್ಡು, ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಭಾನುವಾರ ಮುಂಬೈನಲ್ಲಿ ಶಿಂದೆ ಅವರ ನಿವಾಸದಲ್ಲಿ ಭೇಟಿಯಾಗಿ ಎರಡೂ ರಾಜ್ಯಗಳ ನಡುವಿನ ಸಮಾನ ಸಮಸ್ಯೆಗಳು, ಪರಸ್ಪರ ಸಹಕಾರ, ಆರ್ಥಿಕ ವಿಚಾರಗಳ ಬಗ್ಗೆ 30 ನಿಮಿಷಗಳಿಗೂ ಹೆಚ್ಚು ಕಾಲ ಚರ್ಚೆ ನಡೆಸಿದರು. ಈ ಸಂದರ್ಭ ನಾಗರಿಕ ವಿಮಾನಯಾನ ಸಚಿವ ಟಿಡಿಪಿಯ ಕಿಂಜಾರಪು ರಾಮಮೋಹನ ನಾಯ್ಡು, ಮಹಾರಾಷ್ಟ್ರ ಲೋಕೋಪಯೋಗಿ ಸಚಿವ ದಾದಾಭುಸೆ, ಸಂಸದ ಶ್ರೀಕಾಂತ್ ಶಿಂದೆ ಉಪಸ್ಥಿತರಿದ್ದರು.

### ಕಲ್ಲಿದ್ದಲು ಗಣಿಯಲ್ಲಿ ಉಸಿರುಗಟ್ಟಿ 3 ಬಲಿ

**ಸುರೇಂದ್ರನಗರ್:** ಗುಜರಾತ್‌ನ ಸುರೇಂದ್ರನಗರ್ ಜಿಲ್ಲೆಯಲ್ಲಿನ ಅಕ್ರಮ ಕಲ್ಲಿದ್ದಲು ಗಣಿಯಲ್ಲಿ ಭಾನುವಾರ ಅವಘಡ ಸಂಭವಿಸಿ ಮೂವರು ಕಾರ್ಮಿಕರು ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ. ಲಕ್ಷ್ಮಣ ದಾಬಿ(35), ಖೊದಾಭಾಯಿ ಮಕ್ವಾನಾ(32), ವಿಕ್ರಮ್ ಕೆರಳಿಯಾ (35)ಮೃತರು. ಕಾರ್ಮಿಕರು ಭೇಟ್ ಗ್ರಾಮದಲ್ಲಿ ಗಣಿ ಅಗೆಯುತ್ತಿದ್ದಾಗ ವಿಷಕಾರಿ ಅನಿಲ ಸೇವಿಸಿ ಸಾವನ್ನಪ್ಪಿದ್ದಾರೆ. ಕಾರ್ಮಿಕರು ಹೆಲ್ಮೆಟ್, ಮಾಸ್ಕ್‌ನಂತಹ ಯಾವುದೇ ಸುರಕ್ಷಾ ಸಾಧನಗಳನ್ನು ಧರಿಸಿರಲಿಲ್ಲ ಎಂದು ಹೇಳಲಾಗಿದೆ. ಪ್ರಕರಣ ಸಂಬಂಧ ಗಣಿಯ ಮಾಲೀಕ ಸೇರಿದಂತೆ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆರೋಪಿಗಳ ಪತ್ತೆಗೆ ಪೊಲೀಸರು ಶೋಧ ಕಾರ್ಯಾಚರಣೆ ನಡೆಸಿದ್ದಾರೆ.

## ಸಮಾಚಾರ ಸಣ್ಣದಲ್ಲ

### 30 ವರ್ಷ ಬಳಿಕ ಬಾಗಿಲು ತೆರೆದ ದೇಗುಲ!

**ಅನಂತನಾಗ್:** ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿನ ಪ್ರಸಿದ್ಧ ಉಮಾ ಭಗವತಿ ದೇಗುಲದ ಬಾಗಿಲನ್ನು 30 ವರ್ಷಗಳ ಬಳಿಕ ಭಾನುವಾರ ತೆರೆಯಲಾಗಿದೆ.

ಕೇಂದ್ರ ಸಚಿವ ನಿತ್ಯಾನಂದ ರೈ ಸಮ್ಮುಖ ದೇಗುಲದ ಬಾಗಿಲು ತೆರೆಯಲಾಯಿತು. ಜೀರ್ಣೋದ್ಧಾರ ಕಾರ್ಯದ ನಂತರ ದೇವಾಲಯವನ್ನು ಭಕ್ತರಿಗೆ ಮುಕ್ತಗೊಳಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಾಜಸ್ಥಾನದಿಂದ ತರಲಾದ ಉಮಾ ದೇವಿಯ ವಿಗ್ರಹವನ್ನು ಧಾರ್ಮಿಕ ಸ್ತೋತ್ರ ಪಠಣಗಳ ನಡುವೆ ಗರ್ಭಗುಡಿಯಲ್ಲಿ ಇರಿಸಲಾಯಿತು. ಸ್ಥಳೀಯರು, ಕಾಶ್ಮೀರಿ ಪಂಡಿತ ಸಮುದಾಯದವರು ಮತ್ತು ಮುಸ್ಲಿಮರು, ದೇವಾಲಯದ ಜೀರ್ಣೋದ್ಧಾರದ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. 34 ವರ್ಷಗಳ ನಂತರ ದೇವಾಲಯದಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆದಿರುವುದು ಸಂತಸ ತಂದಿದೆ. ನಮ್ಮ ಪಂಡಿತ ಸಹೋದರರಿಗೆ ಸಾಧ್ಯವಿರುವ ರೀತಿಯಲ್ಲಿ ಸಹಾಯ ಮಾಡುತ್ತೇವೆ ಎಂದು ಸ್ಥಳೀಯ ನಿವಾಸಿ ಗುಲ್ಜಾರ್ ಅಹ್ಮದ್ ಹೇಳಿದರು.

### ಮೋದಿಗೆ ಎಕ್ಸ್‌ನಲ್ಲಿ 10 ಕೋಟಿ ಫಾಲೋವರ್ಸ್

**ದೆಹಲಿ:** ಪ್ರಧಾನಿ ನರೇಂದ್ರ ಮೋದಿ ಜಾಗತಿಕವಾಗಿ ಹೆಚ್ಚು ಇಷ್ಟಪಡುವ ನಾಯಕ. ಈಗ ಅವರ ಎಕ್ಸ್ ಮಾಧ್ಯಮದ ಹಿಂಬಾಲಕರ ಸಂಖ್ಯೆ 10 ಕೋಟಿ ದಾಟಿದ್ದು ಮೋದಿ ಜನಪ್ರಿಯತೆ ಯನ್ನು ಇನ್ನಷ್ಟು ಹೆಚ್ಚಿಸಿದೆ. ಅತಿ ಹೆಚ್ಚು ಹಿಂಬಾಲಕರನ್ನು ಹೊಂದಿದ ವಿಶ್ವನಾಯಕ ಎಂಬ ಹೆಗ್ಗಳಿಕೆಗೆ ಮೋದಿ ಪಾತ್ರರಾಗಿದ್ದಾರೆ.

ಈ ಬಗ್ಗೆ ಖುದ್ದು ಮೋದಿ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದು '100 ಮಿಲಿಯನ್ (10 ಕೋಟಿ) ಹಿಂಬಾಲಕರನ್ನು ಪಡೆದಿದ್ದು ಖುಷಿ ತಂದಿದೆ. ಹಲವು ಬಗೆಯ ಚರ್ಚೆ, ಸಂವಾದ, ದೃಷ್ಟಿಕೋನಗಳನ್ನು, ಜನರ ಆಶೀರ್ವಾದವನ್ನು ಪಡೆಯಲು ಸಂತೋಷವಾಗುತ್ತದೆ. ಮುಂದಿನ ದಿನಗಳಲ್ಲೂ ಇಷ್ಟೇ ಸಕ್ರೀಯವಾಗಿ ಇರುವುದನ್ನು ಎದುರು ನೊಡುತ್ತೇನೆ' ಎಂದು ತಿಳಿಸಿದ್ದಾರೆ. ಡ ಬೇರೆ ಎಲ್ಲಾ ಭಾರತೀಯ ರಾಜಕೀಯ ನಾಯಕರ ಹಿಂಬಾಲಕರಿಗೆ ಹೋಲಿಸಿದ್ದಾರೆ ಪ್ರಧಾನಿ ಮೋದಿ ಅಗ್ರ ಸ್ಥಾನದಲ್ಲಿದ್ದಾರೆ. ಜೋ ಬಿಡನ್(38.1 ಮಿಲಿಯನ್), ದುಬೈ ನಾಯಕ ಶೈಕ್ ಮೊಹಮ್ಮದ್(11.2 ಮಿಲಿಯನ್), ಜಾರ್ಜಿಯಾ ಮೆಲೊನಿ (2.4 ಮಿಲಿಯನ್) ಫಾಲೋವರ್ಸ್ ಹೊಂದಿದ್ದರೆ ಮೋದಿ ಫಾಲೋವರ್ಸ್ ಸಂಖ್ಯೆ 100 ಮಿಲಿಯನ್ ದಾಟಿದೆ. ಅಷ್ಟೇ ಅಲ್ಲ ಅನೇಕ ಅಂತರಾಷ್ಟ್ರೀಯ ಕ್ರೀಡಾಪಟುಗಳು, ಸಿನಿಮಾ ತಾರೆಯರಿಗಿಂತಲೂ ಹೆಚ್ಚು ಹಿಂಬಾಲಕರು ಪ್ರಧಾನಿ ಮೋದಿಯವರಿಗಿದ್ದಾರೆ. ಕಳೆದ ಮೂರು ವರ್ಷದಲ್ಲಿ ಎಕ್ಸ್ ಮಾಧ್ಯಮದಲ್ಲಿ ಮೋದಿ ಹಿಂಬಾಲಕರ ಸಂಖ್ಯೆ 3 ಕೋಟಿ ಹೆಚ್ಚಿದೆ.

### ವಿಶ್ವ ಅಥ್ಲೆಟಿಕ್ಸ್ ಪಟ್ಟಿ: ಅಭಾ ಹೆಸರು ನಾಪತ್ತೆ

**ದೆಹಲಿ:** ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತದ ಅಥ್ಲೀಟುಗಳ ಪಟ್ಟಿಯನ್ನು ವಿಶ್ವ ಅಥ್ಲೆಟಿಕ್ಸ್ ಶುಕ್ರವಾರ ರಾತ್ರಿ ಪ್ರಕಟಿಸಿದ್ದು, ಇದರಲ್ಲಿ ಷಾಟ್‌ಪುಟ್ ಸ್ಪರ್ಧಿ ಅಭಾ ಖತುವಾ ಅವರ ಹೆಸರು ಇಲ್ಲ. ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಸಲು ಆಭಾ ಈಗ ಪೋಲೆಂಡ್‌ನಲ್ಲಿ ತರಬೇತಿಯಲ್ಲಿದ್ದಾರೆ.

ಆಭಾ ಅವರು ರ್‍ಯಾಂಕಿಂಗ್ ಮೂಲಕ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದು, ಪೋಲೆಂಡ್‌ನ ಸ್ಪಾಲಾದಲ್ಲಿ ತರಬೇತಿ ಪಡೆಯಲು ಇತರ ಅಥ್ಲೀಟುಗಳ ಜತೆ ಕಳೆದ ಗುರುವಾರ ಇಲ್ಲಿಂದ ತೆರಳಿದ್ದರು. ಅಥ್ಲೀಟುಗಳು ತರಬೇತಿ ನಂತರ ಹೊರಟು ಜುಲೈ 28ರಂದು ಪ್ಯಾರಿಸ್ ತಲುಪಲಿದ್ದಾರೆ. ಪಟ್ಟಿಯಲ್ಲಿ ಆಭಾ ಹೆಸರು ನಾಪತ್ತೆಗೆ ಕಾರಣ ತಿಳಿದುಬಂದಿಲ್ಲ. ಪ್ಯಾರಿಸ್ ಕೂಟದಲ್ಲಿ ಭಾಗವಹಿಸಲು ಕಳುಹಿಸಿದ್ದ 30 ಅಥ್ಲೀಟುಗಳ ಪಟ್ಟಿಯಲ್ಲಿ 29 ಮಂದಿಯ ಹೆಸರುಗಳು ವಿಶ್ವ ಅಥ್ಲೆಟಿಕ್ಸ್ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಇವೆ. ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಮೂಲಕ ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ಅಥ್ಲೀಟುಗಳ 30 ಮಂದಿಯ ಹೆಸರುಗಳನ್ನು ಕಳಿಸಿತ್ತು. ಈ ಬಗ್ಗೆ ಅಂತಾರಾಷ್ಟ್ರೀಯ ಸಂಸ್ಥೆ ಸಂಪರ್ಕಕ್ಕೆ ಸಿಕ್ಕಿಲ್ಲ. ಎಎಫ್‌ಐ ಅಧಿಕಾರಿ ಕೂಡ ಪ್ರತಿಕ್ರಿಯೆ ನೀಡಿಲ್ಲ. ಹೆಸರು ಕೈಬಿಟ್ಟುಹೋಗಿರುವ ವಿಷಯವನ್ನು ವಿಶ್ವ ಅಥ್ಲೆಟಿಕ್ಸ್ ಗಮನಕ್ಕೆ ತರಲಾಗಿದೆ ಎಂದು ಇನ್ನೊಬ್ಬ ಅಧಿಕಾರಿ ತಿಳಿಸಿದರು. ಆಭಾ ಅವರೂ ವಾಟ್ಸ್‌ ಆ್ಯಪ್ ಕರೆ ಅಥವಾ ಸಂದೇಶಕ್ಕೆ ಪ್ರತಿಕ್ರಿಯಿಸಿಲ್ಲ.

### ಅಗಲಿದ ಜೀವ

### ಮಹಿಷಿ ಗೋಪಾಲಚಾರ್ಯ

**ಬೆಂಗಳೂರು:** ಉತ್ತರಾದಿ ಮಠದಲ್ಲಿ ರಥ (ವಾಹನ) ಸೇವೆ

ಸಲ್ಲಿಸಿದ್ದ ಖ್ಯಾತ ವೇದ ವಿದ್ವಾಂಸರೂ, ಜನಪ್ರಿಯ ಪುರೋಹಿತರೂ ಆಗಿದ್ದ ಮಹಿಷಿ ಗೋಪಾಲಚಾರ್ಯರು ಇಹಲೋಕ ತ್ಯಜಿಸಿದ್ದಾರೆ. ಅವರಿಗೆ 89 ವರ್ಷ ವಯಸ್ಸಾಗಿತ್ತು. ನೂರಾರು ವಿದ್ಯಾರ್ಥಿಗಳಿಗೆ ವೇದಭಾಗ ಹಾಗು ಪೌರೋಹಿತ್ಯ ಶಿಕ್ಷಣ ಕೊಟ್ಟಿದ್ದಾರೆ. ಕೂಡಲಿ ಶ್ರೀಆರ್ಯ ಅಕ್ಷೋಭ್ಯ ಮಠದ ಶ್ರೀರಘುವೀರತೀರ್ಥರಿಗೆ ಹಾಗೂ ಉತ್ತರಾದಿ ಮಠದ ಶ್ರೀಸತ್ಯಪ್ರಮೋದ ತೀರ್ಥ ಶ್ರೀಪಾದಂಗಳವರ ಮೆಚ್ಚಿನ ಶಿಷ್ಯರೂ ಆಗಿದ್ದರು.

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿಕೆ

# ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯಿದೆ ಉಲ್ಲಂಘಿಸಿಲ್ಲ

**ಬೆಂಗಳೂರು:** ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯಿದೆ ನಿಯಮಗಳಡಿಯೇ ಪರಿಶಿಷ್ಟರ ಬದುಕಿಗೆ ಗ್ಯಾರಂಟಿ ಸೌಲಭ್ಯಗಳನ್ನು ನೀಡಲಾಗಿದೆಯೇ ಹೊರತು, ಎಲ್ಲೂ ಕಾಯಿದೆಯನ್ನು ಸರಕಾರ ಉಲ್ಲಂಘಿಸಿಲ್ಲ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದ್ದಾರೆ.

ಕೆಳಸಮುದಾಯಗಳ ಹಣವನ್ನು ಸಿಎಂ ಅವರಾಗಲಿ, ನಾನಾಗಲೀ ಸ್ವಂತಕ್ಕೆ ಬಳಸಿಕೊಂಡಿಲ್ಲ. ಸ್ವಾರ್ಥ, ದುರುದ್ದೇಶದಿಂದ ಬಳಸಿಕೊಂಡಾಗ ಮಾತ್ರವೇ ಕನ್ನ ಎನಿಸಿಕೊಳ್ಳುವುದೇ ವಿನಾ, ಪರಿಶಿಷ್ಟ ಸಮುದಾಯದ ಬದುಕಿಗೆ ಹಂಚಿಕೆ ಮಾಡಿದಾಗ ಅದು ಸಹಾಯ ಎನಿಸಿಕೊಳ್ಳುತ್ತದೆ ಎಂದಿದ್ದಾರೆ.

ಈ ಕಾಯಿದೆಯನ್ನು ಇತಿಹಾಸದಲ್ಲೇ ಜಾರಿ ಮಾಡಿದ ಯಾವುದಾದರೂ ಸರಕಾರವಿದ್ದರೆ, ಅದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ. ಕಾಯಿದೆಯ 7 ಡಿ ಸೆಕ್ಷನ್ ಬಗ್ಗೆ ತಕರಾರು ಎತ್ತಿದ್ದ ಬಿಜೆಪಿಗರು, ತಾವು ಅಧಿಕಾರದಲ್ಲಿದ್ದ ಅದನ್ನು ರದ್ದು ಮಾಡದೆ, ಇತರೆ ಇಲಾಖೆಗಳಿಗೆ ಹಣ ಹಂಚಿಕೆ ಮಾಡಿದ್ದರು. ನಮ್ಮ ಸರಕಾರ ಸೆಕ್ಷನ್ 7 ಡಿ ರದ್ದು ಮಾಡಿದೆ ಎಂದಿದ್ದಾರೆ.

**ಗ್ಯಾರಂಟಿಗಳ ಜಾರಿ ವಿಷಯದಲ್ಲಿಯೂ ಎಸ್‌ಸಿಎಸ್‌ಪಿ, ಟಿಎಸ್‌ಪಿ ಮೊತ್ತದ ಶೇ.24ರಷ್ಟನ್ನು ಅದೇ ಸಮುದಾಯದ ಜನರ ಬದುಕಿಗೆ ನೀಡಲಾಗಿದೆ. ನಮ್ಮಿಂದ ಯಾವ ಕಾರಣಕ್ಕೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಅನ್ಯಾಯ ಆಗಿಲ್ಲ. ಆಗುವುದೂ ಇಲ್ಲ.**

**- ಎಚ್.ಸಿ.ಮಹದೇವಪ್ಪ** ಸಚಿವ

### ಕಾಂಗ್ರೆಸ್‌ನಿಂದ ದಲಿತ ದ್ರೋಹಿ ಕ್ರಮ

**ಬೆಂಗಳೂರು:** ಶೋಷಿತ ಸಮುದಾಯಗಳನ್ನು ನಿರಂತರ ವಂಚಿಸಿ ಅಧಿಕಾರ ಕಬಳಿಸುತ್ತಾ ಬಂದಿರುವ ಕಾಂಗ್ರೆಸ್ ಈ ಬಾರಿಯ ತನ್ನ ಆಡಳಿತದಲ್ಲಿ (ಮಹಮದ್ ಘಜನಿಯ ಮಾದರಿ) ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಾದ

ನಿಧಿಯಲ್ಲಿ ₹ 25396 ಕೋಟಿಯನ್ನು ತನ್ನ ಗ್ಯಾರಂಟಿ ಯೋಜನೆಗಳಿಗಾಗಿ ಬಳಸಿಕೊಂಡಿದೆ. ಇದು ಸಾಮಾಜಿಕ ನ್ಯಾಯ ವ್ಯವಸ್ಥೆಯ ಮೂಲೋದ್ದೇಶದ ಅಸ್ತಿತ್ವವನ್ನು ಅಲುಗಾಡಿಸಲು ಹೊರಟ ದಲಿತ ದ್ರೋಹಿ ಕ್ರಮ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ಈಗಾಗಲೇ ಪರಿಶಿಷ್ಟ ಪಂಗಡದ ಕಲ್ಯಾಣಕ್ಕೆ ಮೀಸಲಿಟ್ಟಿದ್ದ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಲೂಟಿ ಹೊಡೆದ ರಾಜ್ಯ ಕಾಂಗ್ರೆಸ್ ಸರಕಾರ ಇದೀಗ ದಲಿತರ ಶ್ರೇಯೋಭಿವೃದ್ಧಿಗೆ ಇದ್ದ ಹಣವನ್ನೆಲ್ಲ ಅನ್ಯಕಾರ್ಯಗಳಿಗೆ ಬಳಸಿ ಪರಿಶಿಷ್ಟ ಸಮುದಾಯದ ಕಲ್ಯಾಣ ಕಾರ್ಯಗಳಿಗೆ ಇತಿಶ್ರೀ ಹಾಡಲು ಹೊರಟಿದೆ. ಈ ಕ್ರಮವನ್ನು ಬಿಜೆಪಿ ಸಹಿಸುವ ಮಾತೇ ಇಲ್ಲ. ದಲಿತ ಪರ ದನಿ ಎತ್ತಿ ಸದನದ ಒಳಗೆ ಹೊರಗೆ ಹೋರಾಡುವ ಸಂಕಲ್ಪ ತೊಟ್ಟಿದ್ದೇವೆ ಎಂದೂ ಹೇಳಿದ್ದಾರೆ.

# ಸಮಾಜದ ಕಟ್ಟಕಡೆಯ ವ್ಯಕ್ತಿಗೆ ನ್ಯಾಯ ಸಿಗ್ಬೇಕು

## ಜನಸಂಪರ್ಕ ಕಚೇರಿ ಲೋಕಾರ್ಪಣೆ

**ಬೆಂಗಳೂರು:** ಸಮಾಜದ ಕಟ್ಟಕಡೆಯ ವ್ಯಕ್ತಿಗೆ ನ್ಯಾಯ ಸಿಗಬೇಕು, ಸಾರ್ವಜನಿಕರ ಸಮಸ್ಯೆಗಳ ನಿವಾರಣೆ ಹಾಗೂ ಸುಸಜ್ಜಿತ ರಾಜಾಜಿನಗರ ವಿಧಾನಸಭಾ ಕ್ಷೇತ್ರ ನಿರ್ಮಾಣವಾಗಬೇಕು ಎಂದು ಕಾಯಕ ಸೌಧ ಕಚೇರಿ ಲೋಕಾರ್ಪಣೆ ಮಾಡಲಾಗಿದೆ ಎಂದು ಮಾಜಿ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಹೇಳಿದರು.

ರಾಜಾಜಿನಗರ ವಾರ್ಡ್‌ನಲ್ಲಿ ಬಿಬಿಎಂಪಿ ಕಾಯಕ ಸೌಧ ಬಹು ಉಪಯೋಗಿ ಕಚೇರಿಗಳ ಕಟ್ಟಡ ಮತ್ತು ಶಾಸಕರ ಜನಸಂಪರ್ಕ ಕಚೇರಿ ಲೋಕರ್ಪಣೆ ಸಮಾರಂಭದಲ್ಲಿ ಮಾತನಾಡಿ, ಕಾಯಕಯೋಗಿ ಬಸವೇಶ್ವರರ ಕಾಯಕ ತತ್ವ ಮತ್ತು ಸಿದ್ಧಾಂತದದ ಪೇರಣೆ ಸ್ಪೂರ್ತಿಯಿಂದ ನೂತನ ಕಟ್ಟಡಕ್ಕೆ ಕಾಯಕಸೌಧ ಎಂದು ನಾಮಕರಣ ಮಾಡಲಾಗಿದೆ. ಮುಂದಿನ ತಿಂಗಳು ರಾಜಾಜಿನಗರ ನವರಂಗ್ ಮೇಲು ಸೇತುವೆ ಬಳಿ ಬಸವೇಶ್ವರರ ಪ್ರತಿಮೆ ಲೋಕರ್ಪಣೆ ಮಾಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಕಾರ್ಯಪಾಲಕ ಅಭಿಯಂತರ ಗಂಗಾಧರ್, ಮಾಜಿ ಉಪಮಹಾಪೌರರಾದ ರಂಗಣ್ಣ, ಮಾಜಿ ಪಾಲಿಕೆ ಸದಸ್ಯರುಗಳಾದ ಎಂ.ಮುನಿರಾಜು, ರಾಜಣ್ಣ, ಎಚ್.ಆರ್.ಕೃಷ್ಣಪ್ಪ, ದೀಪ ನಾಗೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರ ಯೋಗೇಶ್, ಸಹಾಯಕ ಅಭಿಯಂತರ ಸುಭಾಶ್ ಪಾಟೀಲ್ ಮತ್ತು ಬಿಜೆಪಿ ಮುಖಂಡರುಗಳಾದ ರಾಘವೇಂದ್ರರಾವ್, ಸುದರ್ಶನ್, ಬಿ.ಎನ್. ನಿವಾಸ್, ಯಶಸ್ ನಾಯಕ್, ಗಿರೀಶ್ ಗೌಡ ಮತ್ತು ದೇವಿಕಾ ರಾಜ್ ಭಾವಹಿಸಿದ್ದರು.

### ಏನಿದು ಕಾಯಕಸೌಧ?

**ಕಾಯಕಸೌಧ ಬಹುಪಯೋಗಿ ನಾಲ್ಕು ಮಹಡಿ ಕಟ್ಟಡವಾಗಿದ್ದು, ಶಾಸಕರ ಜನಸಂಪರ್ಕ ಕಚೇರಿ, ಕಾರ್ಯಪಾಲಕ, ಸಹಾಯಕ ಕಾರ್ಯಪಾಲಕ ಅಭಿಯಂತರುಗಳ ಕಚೇರಿ ಮತ್ತು ಬಿಬಿಎಂಪಿ ಆರೋಗ್ಯ, ಕಂದಾಯ ಕಚೇರಿಗಳು ಹಾಗೂ ರೂಫ್ ಟಾಪ್ ಮೀಟಿಂಗ್ ಹಾಲ್ ನಿರ್ಮಾಣವಾಗಿದೆ.**

# 2047ಕ್ಕೆ ಭಾರತ ಅಭಿವೃದ್ಧಿ ದೇಶ: ಶಾ

**ಇಂದೋರ್:** ಪ್ರಧಾನಿ ನರೇಂದ್ರ ಮೋದಿ ಅವರು ದೂರದೃಷ್ಟಿಯಿಂದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೆ ತಂದಿದ್ದು, ಇದರಿಂದ 2047ರ ವೇಳೆಗೆ ದೇಶವು ಅಭಿವೃದ್ಧಿ ಹೊಂದಿದ ದೇಶವಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಭಿಪ್ರಾಯಪಟ್ಟರು.

ಇಂದೋರ್‌ನ ಅಟಲ್ ಬಿಹಾರಿ ವಾಜಪೇಯಿ ಸರಕಾರಿ ಕಾಲೇಜಿನಲ್ಲಿ ಭಾನುವಾರ ನಡೆದ ಮಧ್ಯಪ್ರದೇಶದ 55 ಜಿಲ್ಲೆಗಳಲ್ಲಿ ಆರಂಭಗೊಂಡ ಪ್ರಧಾನಮಂತ್ರಿ ಕಾಲೇಜ್ ಆಫ್ ಎಕ್ಸಲೆನ್ಸ್‌ಗೆ ಚಾಲನೆ ನೀಡಿ ಮಾತನಾಡಿದರು.

ಮಧ್ಯಪ್ರದೇಶ ಸೇರಿದಂತೆ ಇತರೆ ರಾಜ್ಯಗಳಲ್ಲಿ ಎನ್‌ಇಪಿ ಜಾರಿಗೊಳಿಸಿದ್ದನ್ನು ಶ್ಲಾಘಿಸಿದ ಶಾ, 2047ರ ವೇಳೆಗೆ ದೇಶವು ಅಭಿವೃದ್ಧಿ ಹೊಂದಿದ ದೇಶವಾಗಿರಬೇಕು ಎಂದು ಪ್ರಧಾನಿ ಮೋದಿ ಗುರಿ ನಿಗದಿಪಡಿಸಿದ್ದಾರೆ. ಇದು ಸಾಧ್ಯವಾಗಲು ಎನ್‌ಇಪಿಯು ಪ್ರಮುಖ ಪಾತ್ರ ವಹಿಸುತ್ತದೆ. ದೇಶ ಅಭಿವೃದ್ಧಿಯಾಗಬೇಕಾದರೆ, ಶಿಕ್ಷಣವೇ ಮುಖ್ಯ ಅಡಿಪಾಯ. ಮುಂದಿನ 25 ವರ್ಷದ ದೂರದೃಷ್ಟಿ ಇಟ್ಟುಕೊಂಡು ಎನ್‌ಇಪಿ ಜಾರಿಗೆ ತರಲಾಗಿದೆ ಎಂದರು.

### ಒಂದೇ ದಿನ 11 ಲಕ್ಷ ಗಿಡ ನೆಟ್ಟು ವಿಶ್ವದಾಖಲೆ

**ಇಂದೋರ್:** ಪ್ರಧಾನಿ ನರೇಂದ್ರ ಮೋದಿ ಅವರು ಆರಂಭಿಸಿದ ಏಕ್ ಪೆಡ್ ಮಾ ಕೆ ನಾಮ್ (ಅಮ್ಮನ ಹೆಸರಲ್ಲಿ ಒಂದು ಗಿಡ) ಅಭಿಯಾನ ಹವಾಮಾನ ಬದಲಾವಣೆಯ ಸವಾಲುಗಳಿಗೆ ಸೂಕ್ತ ಉತ್ತರ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಒಂದೇ ದಿನ 11 ಲಕ್ಷ ಗಿಡಗಳನ್ನು ನೆಟ್ಟು ವಿಶ್ವದಾಖಲೆ ನಿರ್ಮಿಸುವ ಕಾರ್ಯಕ್ರಮಕ್ಕೆ ಅಮಿತ್ ಶಾ ಭಾನುವಾರ ಮಧ್ಯಪ್ರದೇಶದ ಇಂದೋರ್‌ನಲ್ಲಿ ಚಾಲನೆ ನೀಡಿದರು.

ಬಳಿಕ ಮಾತನಾಡಿ, ದೇಶದಲ್ಲಿ ಸ್ವಚ್ಛತೆ, ಉತ್ತಮ ಆಡಳಿತ, ಸಹಕಾರ ಮತ್ತು ಭಾಗವಹಿಸುವಿಕೆಗೆ ಹೆಸರುವಾಸಿ ಆಗಿರುವ ಇಂದೋರ್, ಇಂದಿನಿಂದ ಏಕ್ ಪೆಡ್ ಮಾ ಕೆ ನಾಮ್ ಅಭಿಯಾನಕ್ಕೆ ಹೆಸರಾಗಲಿದೆ ಎಂದರು.

ಜೂ.5ರಂದು ವಿಶ್ವ ಪರಿಸರ ದಿನ ಪ್ರಧಾನಿ ಮೋದಿ ಅವರು ಈ ಅಭಿಯಾನ ಪ್ರಾರಂಭಿಸಿದರು. ದೇಶಾದ್ಯಂತ 140 ಕೋಟಿ ಗಿಡಗಳನ್ನು ನೆಡಲಾಗುವುದು. ಮಧ್ಯಪ್ರದೇಶದಲ್ಲಿ 5.5 ಕೋಟಿ ಸಸಿಗಳನ್ನು ನೆಡಲಾಗುತ್ತಿದೆ. ಹೀಗಾಗಿ ಮಧ್ಯಪ್ರದೇಶ ಭಾರತದ ಶ್ವಾಸಕೋಶ ಎನಿಸಿಕೊಳ್ಳಲಿದೆ ಎಂದು ಬಣ್ಣಿಸಿದರು.

ಅಭಿವೃದ್ಧಿ ನಡೆಯುತ್ತಿದೆ ಮತ್ತು ನಾವು ಸೌಲಭ್ಯಗಳನ್ನು ಹೆಚ್ಚಿಸುತ್ತಿದ್ದೇವೆ. ಮೋದಿ ಅವರು ಹಿಂದಿನದನ್ನು ಪ್ರತಿಬಿಂಬಿಸುವಂತೆ ಮತ್ತು ಮುಂದಿನ ಪೀಳಿಗೆಗೆ ಕೆಲಸ ಮಾಡಲು ಮನವಿ ಮಾಡಿದ್ದಾರೆ. ಪರಿಸರ ಕಾಳಜಿ ದೇಶಕ್ಕೆ ಮಾತ್ರವಲ್ಲ. ಕಾರ್ಬನ್ ಮಾನಾಕ್ಸೈಡ್ ಭೂಮಿಯ ರಕ್ಷಾ ಕವಚವಾಗಿರುವ ಓಝೋನ್ ಮಟ್ಟವನ್ನು ಕಡಿಮೆ ಮಾಡಿ ಅದರ ಪದರದಲ್ಲಿ ರಂಧ್ರಗಳನ್ನು ಸೃಷ್ಟಿಸಿದೆ ಎಂದು ಶಾ ಕಳವಳ ವ್ಯಕ್ತಪಡಿಸಿದರು.

# ಪ್ರಧಾನಿ ನರೇಂದ್ರ ಮೋದಿ ಮೇಲೆ ಹಿಂಸೆಗೆ ಉತ್ತೇಜನ

## ರಾಹುಲ್ ಗಾಂಧಿ ವಿರುದ್ಧ ಅಮಿತ್ ಮಾಳವೀಯಾ ಆರೋಪ

**ದೆಹಲಿ:** ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ಹಿಂಸಾಚಾರವನ್ನು ಉತ್ತೇಜಿಸುತ್ತಿದ್ದಾರೆ ಎಂದು ಬಿಜೆಪಿ ಭಾನುವಾರ ಆರೋಪಿಸಿದೆ.

ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹತ್ಯೆ ಯತ್ನದ ಬೆನ್ನಲ್ಲೇ ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯಾ ಅವರು ರಾಹುಲ್ ಗಾಂಧಿ ಅವರನ್ನು ಖಂಡಿಸಿದ್ದಾರೆ.

3ನೇ ಬಾರಿ ವಿಫಲರಾಗಿರುವ ರಾಹುಲ್ ಗಾಂಧಿ ಅವರು ಮೋದಿ ಮೇಲೆ ಹಿಂಸಾಚಾರವನ್ನು ಪ್ರೋತ್ಸಾಹಿಸಿ, ಸಮರ್ಥಿಸಿದ್ದಾರೆ. ಪಂಜಾಬಿನಲ್ಲಿ ಕಾಂಗ್ರೆಸ್ ಸರಕಾರವಿದ್ದಾಗ ಪೊಲೀಸರು ಉದ್ದೇಶಪೂರ್ವಕವಾಗಿಯೇ ಪ್ರಧಾನಿಯ ಭದ್ರತೆಯೊಂದಿಗೆ ರಾಜಿ ಮಾಡಿಕೊಂಡಿದ್ದರು. ಇದರಿಂದ ಪ್ರಧಾನಿಯ ಬೆಂಗಾವಲು ಪಡೆ ಮೇಲ್ಸೇತುವೆ ಮೇಲೆ ಸಿಲುಕಿಕೊಂಡಿತ್ತು. ಇದನ್ನು ಭಾರತ ಹೇಗೆ ಮರೆಯುತ್ತದೆ ಎಂದು ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ರಾಹುಲ್ ಗಾಂಧಿ ಅವರು ಮೋದಿ ಅವರನ್ನು ಸರ್ವಾಧಿಕಾರಿ ಎಂದು ಟೀಕಿಸಿದ್ದಾರೆ. ಇದೇ ರೀತಿಯ ಟೀಕೆಗಳನ್ನು ಟ್ರಂಪ್ ವಿರುದ್ಧ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಮಾಡಿದ್ದರು. ಇದೀಗ ಟ್ರಂಪ್ ಅವರ ಹತ್ಯೆ ಯತ್ನದ ಬಳಿಕ ಅವರ ಬೆಂಬಲಿಗರು, ಪ್ರತಿ ಸ್ಪರ್ಧಿಗಳ ಹೇಳಿಕೆಗಳು ದ್ವೇಷದ ವಾತಾವರಣ ಸೃಷ್ಟಿಸಿವೆ ಎಂದು ಆರೋಪಿಸುತ್ತಿದ್ದಾರೆ ಎಂದು ಮಾಳವೀಯಾ ಹೇಳಿದ್ದಾರೆ. ಟ್ರಂಪ್ ಅವರಿಂದ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ಅವರ ವಿರೋಧಿಗಳು ಟೀಕಿಸಿದ್ದಾರೆ. ಅದೇ ರೀತಿ ಭಾರತದ ವಿರೋಧ ಪಕ್ಷಗಳು ಮೋದಿ ಅವರಿಂದ ಸಂವಿಧಾನ ಅಪಾಯದಲ್ಲಿದೆ ಎಂದು ಟೀಕೆಗಳನ್ನು ಮಾಡಿದ್ದಾರೆ. ಆದರೆ ಮೋದಿ ಅವರು ಮೂರನೇ ಬಾರಿಗೆ ಅಧಿಕಾರಕ್ಕೆ ಮರಳಿದ್ದಾರೆ.

# ಜಲಗಾಂವ್ ರೈಲಿಗೆ ಪ್ರಯಾಣಿಕರಿಂದಲೇ ಕಲ್ಲೆಸೆತ

## ಮಹಿಳೆಯರು, ಮಕ್ಕಳ ಕಿರುಚಾಟ ಕ್ಯಾಮೆರಾದಲ್ಲಿ ಸೆರೆ | ಪ್ರಾಣಹಾನಿಯಾಗಿಲ್ಲ | ಬೋಗಿ, ಕಿಟಕಿಗಳಿಗೆ ಹಾನಿ

**ಜಲಗಾಂವ್:** ಮಹಾರಾಷ್ಟ್ರದ ಜಲಗಾಂವ್‌ನಲ್ಲಿ ಪ್ಯಾಸಂಜರ್ ರೈಲಿನ ಮೇಲೆ ಪ್ರಯಾಣಿಕರೇ ಕಲ್ಲು ತೂರಾಟ ನಡೆಸಿರುವುದು ವರದಿಯಾಗಿದೆ. ಈ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

ರೈಲಿನಿಂದ ಇಳಿದು ಹೊರಗೆ ನಿಂತ ನೂರಾರು ಮಂದಿ ಪಕ್ಕದಲ್ಲೇ ಇದ್ದ ಹಳಿ ಮೇಲಿಂದ ಕಲ್ಲುಗಳನ್ನು ತೆಗೆದುಕೊಂಡು ರೈಲಿನ ಮೇಲೆ ಏಕಾಏಕಿ ಕಲ್ಲು ತೂರಾಟ ನಡೆಸಿರುವುದು ವಿಡಿಯೋದಲ್ಲಿ ದಾಖಲಾಗಿದೆ.

ರೈಲಿನೊಳಗಿನ ಪ್ರಯಾಣಿಕರಲ್ಲಿ ಹಠಾತ್ ಕಲ್ಲು ತೂರಾಟ ಭಯ ಉಂಟುಮಾಡಿದ್ದು, ಮಹಿಳೆಯರು ಮತ್ತು ಮಕ್ಕಳ ಕಿರುಚಾಟ ಕೇಳಿಬರುತ್ತಿದೆ. ಘಟನೆ ಜುಲೈ 12 ರಂದು ನಡೆದಿದೆ.

ಭೂಸಾವಲ್‌ನಿಂದ ನಂದೂರ್‌ಬಾರ್‌ಗೆ ಪ್ಯಾಸಂಜರ್ ರೈಲು ಹೋಗುತ್ತಿತ್ತು. ರೈಲು ಬೆಳಗ್ಗೆ 11 ಗಂಟೆಗೆ ಅಮಲ್ನೇರ್‌ನಿಂದ ಮುಂದೆ ಸಾಗಿದ್ದಾಗ

ಕೆಲವರು ಮಾರ್ಗಮಧ್ಯೆ ಚೈನ್ ಎಳೆದು ರೈಲು ನಿಲುಗಡೆ ಆಗುವಂತೆ ಮಾಡಿ ಕೆಳಕ್ಕೆ ಇಳಿದಿದ್ದಾರೆ. ಕೆಳಗಿಳಿದ ಅದೇ ಗುಂಪು ರೈಲಿನ ಮೇಲೆ ಕಲ್ಲು ತೂರಾಟ ನಡೆಸಿದೆ. ಘಟನೆಯಲ್ಲಿ ಪ್ರಾಣಹಾನಿಯಾಗಿಲ್ಲ, ಆದರೆ ರೈಲು ಬೋಗಿ, ಕಿಟಕಿಗಳಿಗೆ ಹಾನಿಯಾಗಿದೆ.

**ಉರುಸ್‌ಗೆ ಹೋಗುತ್ತಿದ್ದವರಿಂದ ಕಲ್ಲೆಸೆತ:** ಉರುಸ್‌ಗೆ ಹೋಗುತ್ತಿದ್ದವರು ಕಲ್ಲು ತೂರಾಟ ನಡೆಸಿದರು. ರೈಲು ದರ್ಗಾ ಬಳಿ ಬಂದ ತಕ್ಷಣ ಚೈನ್ ಎಳೆದು ರೈಲನ್ನು ನಿಲ್ಲಿಸಿದರು. ನೂರಾರು ಮಂದಿ ಇಳಿದು ಹೋಗುವಾಗ ಹಳಿಗಳಿಗೆ ಹಾಕಿದ್ದ ಕಲ್ಲುಗಳನ್ನೇ ತೆಗೆದುಕೊಂಡು ರೈಲಿನತ್ತ ಏಕಾಏಕಿ ಕಲ್ಲು ತೂರಿದರು. ರೈಲಿನಲ್ಲಿದ್ದ ಪ್ರಯಾಣಿಕ ಮಹಿಳೆಯರು, ಮಕ್ಕಳು ಭಯದಿಂದ ಚೀರಿದರು. ತಕ್ಷಣವೇ ರೈಲಿನ ಕಿಟಕಿಯನ್ನು ಮುಚ್ಚಿ ಕಲ್ಲೆಸೆತದ ಅಪಾಯದಿಂದ ತಪ್ಪಿಸಿಕೊಂಡರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸಿದ್ದಾರೆ

# ಶ್ರೀನಗರ: 3 ಉಗ್ರರ ಹತ್ಯೆ

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ಕೆರಾನ್ ವಲಯದ ಗಡಿ ನಿಯಂತ್ರಣ ರೇಖೆ ಬಳಿ ಭಾನುವಾರ ಒಳನುಸುಳಲು ಯತ್ನಿಸುತ್ತಿದ್ದ ಭಯೋತ್ಪಾದಕರನ್ನು ಸೇನೆಯು ಹಿಮ್ಮೆಟ್ಟಿಸಿದ್ದು, ಮೂವರನ್ನು ಹತ್ಯೆ ಮಾಡಿದೆ.

ಗಡಿ ಭಾಗದಲ್ಲಿ ಉಗ್ರರ ಒಳನುಸುಳುವಿಕೆಯನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆ ರಾತ್ರಿಯೂ ಮುಂದುವರಿದಿದೆ ಎಂದು ಸೇನೆಯ ಮೂಲಗಳು ತಿಳಿಸಿವೆ. ಕಾರ್ಯಾಚರಣೆಯಲ್ಲಿ ಇದುವರೆಗೆ ಮೂವರು ಉಗ್ರರನ್ನು ಕೊಲ್ಲಲಾಗಿದ್ದು, ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಶ್ರೀನಗರದಲ್ಲಿ ನೆಲೆ ಹೊಂದಿರುವ ಸೇನೆಯ ಚಿನಾರ್ ಕೋರ್ ಅಧಿಕಾರಿ ಎಕ್ಸ್‌ನಲ್ಲಿ ತಿಳಿಸಿದ್ದಾರೆ.

# ಪುರಿ ಜಗನ್ನಾಥ ರತ್ನ ಭಂಡಾರದಲ್ಲಿ 1978ರಲ್ಲಿ ಸಿಕ್ಕಿದ್ದು 128 ಕೆಜಿ ಚಿನ್ನ

**ಪುರಿ:** ಒಡಿಶಾ ರಾಜ್ಯದ ಪುಣ್ಯ ಕ್ಷೇತ್ರ ಪುರಿಯಲ್ಲಿರುವ ಶ್ರೀ ಭಗವಾನ್ ಜಗನ್ನಾಥ ಮಂದಿರ ರತ್ನಭಂಡಾರವನ್ನು 46 ವರ್ಷಗಳ ಬಳಿಕ ಪ್ರಮುಖರ ಸಮಕ್ಷಮದಲ್ಲಿ ತೆರೆಯಲಾಗಿದ್ದು, ಅದರಲ್ಲಿ ದೊರೆತ ಬೆಲೆಬಾಳುವ ವಸ್ತುಗಳ ಮೌಲ್ಯ ಮಾಪನ, ಲೆಕ್ಕಾಚಾರ, ದತ್ತಾಂಶ ಸಂಗ್ರಹ ನಡೆದಿದೆ. ಇದಕ್ಕೂ ಮೊದಲು 1978ರಲ್ಲಿ ಭಂಡಾರದ ಕೋಣೆ ತೆರೆದಾಗ 128 ಕೆಜಿ ಚಿನ್ನದ ವಸ್ತುಗಳು ಪತ್ತೆಯಾಗಿದ್ದವು ಎಂದು ವರದಿಯಾಗಿದೆ.

ಜಗನ್ನಾಥ ದೇವಾಲ ಯದ ಬಳಿಯೇ ಸಣ್ಣ ದೇವಾಲಯವಿದೆ. ಅದನ್ನು ರತ್ನ ಭಂಡಾರ ಎಂದೇ ಕರೆಯಲಾ ಗುತ್ತದೆ. ಈ ಭಂಡಾರದಲ್ಲಿ ಎರಡು ಚೇಂಬರ್(ಕೋಣೆ)ಗಳಿವೆ.

ರಾಜ್ಯದ ಆಡಳಿತ ನಡೆಸಿದ ಬಹಳಷ್ಟು ರಾಜರು ಹಾಗೂ ನೇಪಾಳದ ರಾಜರು ಕೂಡ ಭಗವಾನ್ ಜಗನ್ನಾಥನಿಗೆ ಭಾರಿ ಮೊತ್ತದ ಚಿನ್ನಾಭರಣಗಳನ್ನು ಕಾಣಿಕೆಯಾಗಿ ಅರ್ಪಿಸಿದ್ದರು ಎಂದು ಹೇಳಲಾಗುತ್ತದೆ. ರಾಜ ಅನಂಗಭೀಮ ದೇವ ಅವರು ಜಗನ್ನಾಥ ಸ್ವಾಮಿ ದೇವಾಲಯಕ್ಕೆ 1.25 ಲಕ್ಷ ತೊಲ ಚಿನ್ನವನ್ನು ಕಾಣಿಕೆಯಾಗಿ ನೀಡಿದ್ದರು. ರಾಜ ಕಪಿಲೇಂದ್ರ ಕೂಡ ದೊಡ್ಡ ಪ್ರಮಾಣದಲ್ಲಿ ಚಿನ್ನಾಭರಣವನ್ನು ದೇಣಿಗೆಯಾಗಿ ನೀಡಿದ್ದರು ಎಂದು ಹೇಳಲಾಗುತ್ತದೆ.

### ಈ ಮೊದಲು...

**1805ರಲ್ಲಿ ಈ ರತ್ನ ಬಂಡಾರ ತೆರೆದು ಪರಿಶೀಲಿಸಲಾಗಿತ್ತು. ಆಗ ರತ್ನಗಳಿಂದ ಕೂಡಿದ್ದ ಬಂಗಾರ ಮತ್ತು ಚಿನ್ನದ 64 ಆಭರಣಗಳು, 128 ಚಿನ್ನದ ನಾಣ್ಯ, ವಿವಿಧ ರೀತಿಯ 24 ಚಿನ್ನದ ಮುದ್ರೆಗಳು, 1297 ಬೆಳ್ಳಿಯ ನಾಣ್ಯಗಳು, 1333 ಬಗೆಯ ವಸ್ತ್ರಗಳು ಪತ್ತೆಯಾಗಿದ್ದವು ಎಂದು ಅಂದಿನ ಪುರಿಯ ಕಲೆಕ್ಟರ್ ಚಾರ್ಲ್ಸ್ ಗ್ರೋಮ್ ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ ಎನ್ನಲಾಗಿದೆ.**

**1978ರಲ್ಲಿ ಭಂಡಾರ ಕೋಣೆ ತೆರೆದಾಗ 128 ಕೆಜಿ 380 ಗ್ರಾಂ ತೂಕದ 454 ಚಿನ್ನದ ವಸ್ತುಗಳು, 221 ಕೆಜಿ 530 ಗ್ರಾಂ ತೂಕದ 293 ಬೆಳ್ಳಿ ವಸ್ತುಗಳು ಎರಡೂ ಚೇಂಬರ್‌ಗಳಲ್ಲಿ ಪತ್ತೆಯಾಗಿದ್ದವು. ಒಳಗಿನ ಕೋಣೆಯಲ್ಲಿ 43 ಕೆಜಿ 640 ಗ್ರಾಂ ತೂಕದ 367 ಚಿನ್ನದ ವಸ್ತು ಹಾಗೂ 148 ಕೆಜಿ ತೂಕದ 231 ಬೆಳ್ಳಿ ವಸ್ತುಗಳು ಸಿಕ್ಕಿದ್ದವು. ಈ ಸಂಪತ್ತಿನ ಲೆಕ್ಕ ಪರಿಶೀಲನೆಯೇ 70 ದಿನಗಳಷ್ಟು ದೀರ್ಘ ಕಾಲ ನಡೆದಿತ್ತು.**

**1978ರ ಬಳಿಕವೂ ಎರಡು ಬಾರಿ ಈ ರತ್ನ ಭಂಡಾರವನ್ನು ತೆರೆದು ನೋಡಲಾಗಿದೆ. ಆದರೆ ವಸ್ತುಗಳ ಮೌಲ್ಯ ಪರಿಶೀಲನೆ ನಡೆದಿಲ್ಲ. ಈ ಸಂದರ್ಭ ಮುಖ್ಯ ಬಾಗಿಲಿಗೆ ಬೆಳ್ಳಿಯ ಹೊದಿಕೆ ಹಾಗೂ ಬಲಭದ್ರನ ವಿಗ್ರದ ದುರಸ್ತಿಗೆ ಸ್ವಲ್ಪ ಪ್ರಮಾಣದಲ್ಲಿ ಚಿನ್ನ ಮತ್ತು ಬೆಳ್ಳಿ ಹೊರತೆಗೆಯಲಾಗಿದೆ ಎಂದು ಹೇಳಲಾಗುತ್ತದೆ.**

# ಚುನಾವಣೆಗೆ ಸಜ್ಜಾಗುತ್ತಿರುವ ಬಿಜೆಪಿ

## ಜಾರ್ಖಂಡ್: ಜೆಎಂಎಂ ಆಡಳಿತ ವೈಫಲ್ಯ-ಭ್ರಷ್ಟಾಚಾರ ಪ್ರಚಾರ

**ರಾಂಚಿ:** ವರ್ಷಾಂತ್ಯಕ್ಕೆ ನಡೆಯಲಿರುವ ಜಾರ್ಖಂಡ್ ವಿಧಾನಸಭಾ ಚುನಾವಣೆಗೆ ಬಿಜೆಪಿ ಅದಾಗಲೇ ಸಿದ್ಧತೆ ಆರಂಭಿಸಿದೆ. ಲೋಕಸಭೆ ಚುನಾವಣೆಯಲ್ಲಿ ಜಾರ್ಖಂಡ್ ರಾಜ್ಯದಲ್ಲಿ ಭಾರಿ ಹಿನ್ನಡೆ ಅನುಭವಿಸಿದ ಬಿಜೆಪಿ, ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲಲೇಬೇಕೆಂಬ ಪಣ ತೊಟ್ಟಿದೆ. ಜೆಎಂಎಂ ಸರಕಾರದ ಆಡಳಿತ ವೈಫಲ್ಯ, ಭ್ರಷ್ಟಾಚಾರ ವಿಚಾರಗಳನ್ನು ಹೆಚ್ಚು ಪ್ರಚಾರಕ್ಕೆ ತರಲು ಯೋಚಿಸಿದೆ.

ಪೂರ್ವ ಭಾರತದ ಪುಟ್ಟ ರಾಜ್ಯ ಜಾರ್ಖಂಡ್‌ನಲ್ಲಿ ಶೇ.34.6ರಷ್ಟು ಮತದಾರರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ. 81 ವಿಧಾನಸಭಾ ಕ್ಷೇತ್ರಗಳಲ್ಲಿ 28ರಲ್ಲಿ ಎಸ್‌ಟಿ ಸಮುದಾಯದ ಪ್ರಾಬಲ್ಯವಿದೆ. ಬಿಜೆಪಿಗೆ 2019ರ ವಿಧಾನಸಭಾ ಚುನಾವಣೆ ಹಾಗೂ 2024ರ ಲೋಕಸಭೆ ಚುನಾವಣೆಯಲ್ಲಿಯೂ ಬುಡಕಟ್ಟು ಜನರ ಮತಗಳೇ ಹೊಡೆತ ಕೊಟ್ಟಿದ್ದವು. ಎಸ್‌ಟಿ ಮೀಸಲು ಕ್ಷೇತ್ರಗಳಲ್ಲಿ ಒಂದರಲ್ಲೂ ಗೆಲುವು ಸಾಧಿಸಲು ಬಿಜೆಪಿಗೆ ಆಗ ಸಾಧ್ಯವಾಗಿರಲಿಲ್ಲ. ಹೀಗಾಗಿ ಈ ಬಾರಿ ಬಹಳ ಮುತುವರ್ಜಿಯಿಂದ ಈ ಸ್ಥಿತಿಯನ್ನು ನಿಭಾಯಿಸಲು ಬಿಜೆಪಿ ಯತ್ನಿಸುತ್ತಿದೆ.

ಇತ್ತೀಚೆಗೆ ನಡೆದ ಸಭೆಯಲ್ಲಿ ಜಾರ್ಖಂಡ್ ಚುನಾವಣೆ ಉಸ್ತುವಾರಿಗಳಾಗಿ ನೇಮಕಗೊಂಡಿರುವ ಶಿವರಾಜ್ ಸಿಂಗ್ ಚೌಹಾಣ್ ಹಾಗೂ ಹಿಮಂತ್ ಬಿಸ್ವಾ ಶರ್ಮಾ ಅವರ ಎದುರು ಕಾರ್ಯಕರ್ತರು ಬುಡಕಟ್ಟು ಸಮುದಾಯ ಹಾಗೂ ಉಳಿದ ಹಿಂದುಳಿದ ವರ್ಗಗಳ ಜನತೆಯನ್ನು ಹಾಗೂ ನಗರವಾಸಿಗಳನ್ನು ತಲುಪಲು ಹೊಸ ಮಾರ್ಗಗಳನ್ನು ಕಂಡುಕೊಳ್ಳಬೇಕಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹೇಮಂತ್ ಸೋರೆನ್ ಬಂಧನವನ್ನು ರಾಜಕೀಯ ದ್ವೇಷ ಎಂಬ ರೀತಿಯಲ್ಲಿ ಕೆಲವರು ಬಿಂಬಿಸಿರುವ ಕಾರಣ ಇದು ಬುಡಕಟ್ಟು ಜನರ ಭಾವನೆಗೆ ಧಕ್ಕೆ ಉಂಟಾಗಿದೆ. ಹೀಗಾಗಿ ಆಡಳಿತ ವೈಫಲ್ಯ, ಉದ್ಯೋಗ ಸೃಷ್ಟಿಯ, ಹಿಂದುಳಿದ ವರ್ಗಗಳ ಜನರ ಸಮಸ್ಯೆ, ಭೂ ಅತಿಕ್ರಮಣ ವಿಚಾರಗಳ ಮೂಲಕ ಜನರ ಗಮನ ಸೆಳೆಯಲು ಬಿಜೆಪಿ ಚಿಂತನೆ ನಡೆಸಿದೆ ಎನ್ನಲಾಗಿದೆ.

# ಬಿಹಾರ: ಟ್ರಕ್-ಕಾರು ಡಿಕ್ಕಿ, ಐವರ ಸಾವು

**ಕಿಶನ್‌ಗಂಜ್:** ಬಿಹಾರದ ಕಿಶನ್‌ಗಂಜ್ ರಾಷ್ಟ್ರೀಯ ಹೆದ್ದಾರಿ 327 ಇ ಪೆಟ್‌ಭರಿ ಪ್ರದೇಶದಲ್ಲಿ ಸ್ಕಾರ್ಪಿಯೋ ಕಾರು ಹಾಗೂ ಟ್ರಕ್ ನಡುವೆ ಭಾನುವಾರ ಬೆಳಿಗ್ಗೆ ಮುಖಾಮುಖಿ ಡಿಕ್ಕಿ ಸಂಭವಿಸಿ, ಇಬ್ಬರು ಮಕ್ಕಳು ಸೇರಿ ಐವರು ಸಾವನ್ನಪ್ಪಿದ್ದಾರೆ. ಅಪಘಾತದಲ್ಲಿ ಇಬ್ಬರು ಮಹಿಳೆಯರು, ಇಬ್ಬರು ಮಕ್ಕಳು ಹಾಗೂ ಸ್ಕಾರ್ಪಿಯೋ ಚಾಲಕ ಸಾವನ್ನಪ್ಪಿದ್ದಾರೆ. 6 ಮಕ್ಕಳು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಮೃತರೆಲ್ಲರೂ ಅರಾರಿಯಾ ಜಿಲ್ಲೆಯ ಥಫ್ಕೋಲ್ ಪ್ರದೇಶದವರು. ಅಪಘಾತದಲ್ಲಿ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದರೆ, ಇಬ್ಬರು ಆಸ್ಪತ್ರೆಗೆ ಕೊಂಡೊಯ್ಯುವ ಮಾರ್ಗದಲ್ಲಿ ಕೊನೆಯುಸಿ ರೆಳೆದರು. ಗಾಯಗೊಂಡವರನ್ನು ಕಿಶನ್‌ಗಂಜ್‌ನ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಸಂತ್ರಸ್ತರು ವಿದೇಶದಿಂದ ಆಗಮಿಸುತ್ತಿದ್ದ ಸಂಬಂಧಿಕರನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ಹೊರಟಿದ್ದರು ಎಂದು ತಿಳಿದುಬಂದಿದೆ.

@vishwavaninews
ವಿಶ್ವವಾಣಿ
ಬೆಂಗಳೂರು
ಸೋಮವಾರ
15 | 07 | 2024

ಅನುದಿನವೂ ವಿರಾಮಕ್ಕೆ ಒಂದು ನೆಪ

# ಆರಾಮ

## ಬಿ ಪಾಸಿಟಿವ್

### ಸದಾ ಸಲ್ಲದು ಹಿಂಜರಿಕೆ

ಕುಮಾರ ಸಂಭವ ಕಾವ್ಯದಲ್ಲಿದಲ್ಲಿನ ದೃಷ್ಟಾಂತವೊಂದರಲ್ಲಿ ಪರ್ವತ ರಾಜನ ಮಗಳು, ಅಪರೂಪದ ಚಲುವೆ ಪಾರ್ವತಿಯ ವಿವಾಹದ ಪ್ರಸ್ತಾಪ ಬರುತ್ತದೆ. ಆಕೆಯ ತಂದೆ ಪರ್ವತರಾಜ ಮಗಳನ್ನು ಯೋಗ್ಯ ವರನಿಗೆ ಕೊಟ್ಟು ಮದುವೆ ಮಾಡಬೇಕೆಂಬ ಸಹಜ ಅಭಿಲಾಷೆ ಹೊಂದಿರುತ್ತಾನೆ. ಅವನಿಗೆ ಆಗ ಮತಿಗೆ ಹೊಳೆದದ್ದು ಜಗತ್‌ರಕ್ಷಕ ಪರಮೇಶ್ವರ. ಲೋಕದೊಡೆಯನಿಗೆ ತನ್ನ ಮಗಳನ್ನು ಕೊಡಬೇಕು ಎಂಬುವ ಅಪರಿಮಿತ ಆಸೆ. ಆದರೂ ಅದನ್ನು ಪರಮೇಶ್ವರನ ಎದುರಲ್ಲಿ ಹೇಳಿಕೊಳ್ಳಲು ಒಂದಷ್ಟು ಹಿಂಜರಿಕೆ.

ಹೀಗಿರುವಾಗ ಒಂದೊಮ್ಮೆ ಲೋಕ ಸಂಚಾರಿ ನಾರದ ಮಹರ್ಷಿಗಳು ಆಗಮಿಸಿ ರಾಜನೇ ನಿನ್ನ ಮಗಳು ಪಾರ್ವತಿಯು, ಪರಮೇಶ್ವರನ ಅರ್ಧಾಂಗಿಯಾಗುತ್ತಾಳೆ ಎಂದು ಹೇಳುತ್ತಾರೆ. ನಾರದರ ಮಾತನ್ನು ಕೇಳಿ ಪರ್ವತರಾಜನಿಗೆ ತುಂಬ ಸಂತೋಷವಾಗುತ್ತದೆ. ಆದರೆ ಅದನ್ನು ಪರಮೇಶ್ವರನ ಹತ್ತಿರ ಕೇಳಲು ಮತ್ತದೇ ಹಿಂಜರಿಕೆ. ಎಲ್ಲಿ ತನ್ನ ಬೇಡಿಕೆಯನ್ನು ಪರಮೇಶ್ವರ ಒಪ್ಪಿಕೊಳ್ಳದೇ ತಿರಸ್ಕರಿಸುವನೋ ಎಂಬ ಆತಂಕ. ಪರ್ವತರಾಜನಿಗೆ ಪರಮೇಶ್ವರನ ಬಗೆಗೆ ಇರುವ ಅತಿಯಾದ ಗೌರವ, ಧನ್ಯತೆಯ ಭಾವ, ಪ್ರೀತಿ ಇದರ ಜೊತೆಗೆ ತನ್ನದೇ ಸಜ್ಜನ ಸ್ವಭಾವ, ಸಂಸ್ಕಾರ ಅಡ್ಡಿಯಾಗಿ ಬಿಡುತ್ತದೆ. ತನ್ನ ಮನೋಭಿಲಾಷೆಯನ್ನು ತನ್ನಲ್ಲಿಯೇ ಇಟ್ಟುಕೊಳ್ಳುತ್ತಾನೆ. ಹಿಂಜರಿಕೆಯೇ ಆತನಲ್ಲಿ ಮುಂದಾಗುತ್ತದೆ.

ನಮ್ಮ ನಡೆಯೂ ಇದಕ್ಕಿಂತ ಕೆಲವು ಬಾರಿ ಭಿನ್ನವಾಗಿಯೇನೂ ಇರುವುದಿಲ್ಲ. ಯಾವುದೋ ಒಂದಷ್ಟು ಕಟ್ಟಳೆಗೆ ಒಳಗಾಗಿ ನಾವು ನಮ್ಮ ಬಯಕೆಗಳನ್ನು ನಮ್ಮೆದೆಯಲ್ಲಿಯೇ ಬಚ್ಚಿಟ್ಟುಕೊಳ್ಳುತ್ತೇವೆ. ವ್ಯಕ್ತಪಡಿಸುವ ಗೋಜಿಗೆ ಹೋಗುವುದೇ ಇಲ್ಲ. ಇದು ಮೇಲ್ನೋಟಕ್ಕೆ ನಮ್ಮ ಸಜ್ಜನಿಕೆ ಸೌಜನ್ಯದ ಸ್ವಭಾವಕ್ಕೆ ಸಮರ್ಥನೆ ನೀಡಿದರೂ ನಮ್ಮ ಕನಸುಗಳು ಸಾಕಾರಗೊಳ್ಳಲು ಅಡ್ಡಗೋಡೆಯಾಗಿಯೇ ನಿಲ್ಲುತ್ತದೆ. ಕೆಲವು ಬಾರಿ ನಮ್ಮ ವಿನಂತಿಗಳು ಕೂಡ ಅವರ ಅಪೇಕ್ಷೆಗಳೂ ಆಗಿರುವ ಸಾಧ್ಯತೆಗಳನ್ನು ನಾವು ಅಲ್ಲಗಳೆಯಲಾಗುವುದಿಲ್ಲ. ಇತರರಿಗೆ ತೊಂದರೆ ಕೊಡದ, ಅವರ ಮನಸ್ಸನ್ನು ಘಾಸಿಗೊಳಿಸದ, ಒತ್ತಾಯವನ್ನು ಹೇರದ, ಪ್ರೀತಿಯಿಂದ ಕೇಳುವ ನಮ್ಮ ಕೋರಿಕೆಗಳು ಖಂಡಿತವಾಗಿಯೂ ಅಸಂಬದ್ಧವಂತೂ ಅಲ್ಲ. ಅವುಗಳು ನಮಗೆ ಭಾಗ್ಯದ ಬಾಗಿಲನ್ನು ತೆರೆಯಬಹುದು.

ನಮ್ಮ ವಿಚಾರಗಳು ಸರಿ ಎನಿಸಿದಾಗ, ಹಿಂಜರಿಕೆ ಸಲ್ಲದು, ಧೈರ್ಯ ಮಾಡಿ ಮುಂದಡಿ ಇಡಬೇಕು; ಹೇಳಬೇಕೆನಿಸದ್ದನ್ನು ಹೇಳಲೇಬೇಕು, ಮಾಡಬೇಕೆನಿಸಿದ್ದನ್ನು ಮಾಡಲೇಬೇಕು.

● ಮಹಾದೇವ ಬಸರಕೋಡ

## ಹೆಲ್ತ್ ಕಾರ್ನರ್

### ಪಪಾಯ

ಪಪಾಯ ಎಲೆಯ ರಸವನ್ನು ಬಹು ಹಿಂದಿನಿಂದಲೂ ಔಷಧವನ್ನಾಗಿ ಮೆಕ್ಸಿಕೋದ ಜನರು ಬಳಸುತ್ತಿದ್ದರು. ಆದರೆ, ಈ ಕುರಿತು ಹೆಚ್ಚಿನ ವೈಜ್ಞಾನಿಕ ಅಧ್ಯಯನ ನಡೆದಿಲ್ಲ. ಪಪಾಯ ಎಲೆಯನ್ನು ಈಚಿನ ದಿನಗಳಲ್ಲಿ ರಕ್ತದ ಪ್ಲೇಟ್‌ಲೆಟ್ ಹೆಚ್ಚಿಸಲು ಬಳಸುವುದುಂಟು. ವೈರಸ್‌ನಿಂದ ಹರಡುವ ಡೆಂಗ್ಯೂ ಜ್ವರಕ್ಕೆ ನಿರ್ದಿಷ್ಟ ಔಷಧ ಇಲ್ಲ. ಈ ಜ್ವರವು ಕೆಲವರಲ್ಲಿ ತೀವ್ರವಾದಾಗ, ರಕ್ತದಲ್ಲಿನ ಪ್ಲೇಟ್ ಲೆಟ್ ಸಂಖ್ಯೆ ಕಡಿಮೆಯಾಗುತ್ತದೆ. ಡೆಂಗ್ಯೂ ಸಮಸ್ಯೆಗೆ ನಿರ್ದಿಷ್ಟ ಔಷಧ ಇಲ್ಲದೇ ಇರುವುದರಿಂದ, ಈ ಸಮಸ್ಯೆಯನ್ನು ಪರಿಹರಿಸಲು ಪಪಾಯ ಎಲೆಯ ರಸವನ್ನು ಸೇವಿಸುವ ಪದ್ಧತಿ ಜನಪ್ರಿಯವಾಗಿದೆ. ಪಪಾಯ ರಸವನ್ನು ಸೇವಿಸಿದವರಲ್ಲಿ ಪ್ಲೇಟ್ ಲೆಟ್ ಸಂಖ್ಯೆ ವೃದ್ಧಿಯಾಗಿರುವುದು ಕೆಲವು ಅಧ್ಯಯನಗಳಲ್ಲಿ ಕಂಡುಬಂದಿದ್ದರೂ, ಆಧುನಿಕ ವೈದ್ಯ ಪದ್ಧತಿಯು ಇದನ್ನು ಅಧಿಕೃತವಾಗಿ ಮಾನ್ಯ ಮಾಡಿಲ್ಲ ಮತ್ತು ಕೆಲವು ವೈದ್ಯರು ಪಪಾಯ ಎಲೆಯಿಂದ ಅಪಾಯವಿದೆ ಎಂದೂ ಹೇಳಿದ್ದಾರೆ.

## ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, ಮೊದಲ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಸೊಳ್ಳೆಗಳಿರುವವರೆಗೆ ಡೆಂಗ್ಯೂ ಜ್ವರದ ಡೊಂಬರಾಟ ತಪ್ಪಿದ್ದಲ್ಲ. ಆದ್ದರಿಂದ ಸೊಳ್ಳೆ ನಿಯಂತ್ರಿಸಿ, ಡೆಂಗ್ಯೂ ಜ್ವರ ಓಡಿಸಿ. ಇದು ಸತ್ಯ.

# ಡೆಂಗ್ಯೂ

## ತಡೆಯಲು ಮುಂಜಾಗ್ರತೆಯೇ ಮದ್ದು!



ಕೆಲವು ಪ್ರಕರಣಗಳಲ್ಲಿ ರೋಗ ಲಕ್ಷಣ ತೀವ್ರವಾಗಿ ರುತ್ತವೆ. ಅಂತಹ ಸಮಯದಲ್ಲಿ ವೈದ್ಯರ ಸಲಹೆ ಅಗತ್ಯ. ಸುಮಾರು 20 ಸೋಂಕಿತರಲ್ಲಿ ಒಬ್ಬರಿಗೆ ಡೆಂಗ್ಯೂ (ಶೇ.5ರಷ್ಟು) ತೀವ್ರವಾಗಿರುತ್ತದೆ.

- ಹೊಟ್ಟೆ ನೋವು
- ಅತಿಯಾದ ವಾಂತಿ
- ರಕ್ತ ವಾಂತಿ ಅಥವಾ ಮಲದಲ್ಲಿ ರಕ್ತ ಕಾಣಿಸಿಕೊಳ್ಳುವಿಕೆ
- ಅತಿಯಾದ ಸುಸ್ತು, ಒತ್ತಡ

### ಉಪಚಾರ ಏನು?

ಡೆಂಗ್ಯೂ ಜ್ವರಕ್ಕೆ ಇಲ್ಲಿಯವರೆಗೆ ಯಾವುದೇ ನಿರ್ದಿಷ್ಟ ಚಿಕಿತ್ಸೆ ಇಲ್ಲ. ಆದರೆ, ಜ್ವರ ಮತ್ತು ನೋವಿಗೆ ಸೂಕ್ತ ಚಿಕಿತ್ಸೆಯನ್ನು ವೈದ್ಯರು ನೀಡುತ್ತಾರೆ. ವಿಶ್ರಾಂತಿ ಅವಶ್ಯ. ಸಾಕಷ್ಟು ದ್ರವ ಆಹಾರ ಸೇವಿಸಬೇಕು. ನೀರಿನಾಂಶವಿರುವ ಹಣ್ಣು, ಜ್ಯೂಸ್‌ಗಳ ಸೇವನೆಯಿಂದ ಸುಸ್ತು, ಅಶಕ್ತಿಯನ್ನು ಕಡಿಮೆ ಮಾಡಬಹುದು. ಜ್ವರ ಕಡಿಮೆ ಆದ ಬಳಿಕ, ಮೊದಲಿನ ಸ್ಥಿತಿಗೆ ಮರಳಲು ಕೆಲವು ದಿನ ಅಗತ್ಯ.
ನೆನಪಿಡಿ : ಡೆಂಗ್ಯೂ ಜ್ವರಕ್ಕೆ ಹೆದರುವ ಅವಶ್ಯಕತೆಯಿಲ್ಲ, ಆದರೆ ಮುಂಜಾಗ್ರತೆ ಅಗತ್ಯ. ಇವೇ ಅತ್ಯುತ್ತಮ ಮದ್ದುಗಳು.

ಆರೋಗ್ಯದ ಅಂಗಳ
● ಡಾ.ಕರವೀರಪ್ರಭು ಕ್ಯಾಲಕೊಂಡ

ಉಷ್ಣವಲಯ ಪ್ರದೇಶದಲ್ಲಿ ವೈರಸ್ ಸೋಂಕಿನಿಂದ ಬರುವ ಡೆಂಗ್ಯೂ ಜ್ವರ ಇಂದು ನೂರಕ್ಕೂ ಹೆಚ್ಚು ದೇಶಗಳಲ್ಲಿ ಹರಡಿಕೊಂಡಿದೆ. ವಿಶ್ವದಲ್ಲಿ ವಾರ್ಷಿಕ 5 ಕೋಟಿ ಜನರು ಡೆಂಗ್ಯೂ ಜ್ವರ ಪೀಡಿತರಾಗುತ್ತಿದ್ದಾರೆ. ಅವುಗಳ ಪೈಕಿ ಸುಮಾರು 5 ಲಕ್ಷ ರೋಗಿಗಳಿಗೆ, (ಅಂದರೆ ಸೋಂಕು ತಗುಲಿದ ಶೇ.1 ರಷ್ಟು ರೋಗಿಗಳಿಗೆ ಮಾತ್ರ) ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ಅಗತ್ಯ. ವಿಚಿತ್ರವೆಂದರೆ ಕಾಯಿಲೆಗೆ ತುತ್ತಾಗುವವರಲ್ಲಿ ಶೇ.95 ರಷ್ಟು ಜನ 14 ವರ್ಷದೊಳಗಿನ ಮಕ್ಕಳು.

ನಮ್ಮ ರಾಜ್ಯದಲ್ಲಿ ಚೆನ್ನಾಗಿ ಮಳೆಯಾಗಿದೆ; ಇದೇ ಸಮಯದಲ್ಲಿ ಡೆಂಗ್ಯೂ ಸ್ಫೋಟ ಜನರ ದುಗುಡ, ದುಮ್ಮಾನ ಹೆಚ್ಚಿಸಿದೆ. ಮಳೆಗೂ ಈ ಜ್ವರಕ್ಕೂ ಏನು ಸಂಬಂಧ ಎಂದು ಅಚ್ಚರಿಯೆ? ಸಂಬಂಧವಿದೆ; ಮಳೆಯಿಂದ ಅಲ್ಲಲ್ಲಿ ನಿಂತ ನೀರಿನಿಂದ, ಸೊಳ್ಳೆಗಳ ಸಂಖ್ಯೆ ಜಾಸ್ತಿಯಾಗಿ, ಸೋಂಕು ಬೇಗನೆ ಹರಡುತ್ತಿದೆ. ಈಗಾಗಲೇ ಸಾವಿರಾರು ಡೆಂಗ್ಯೂ ಪ್ರಕರಣಗಳು ವರದಿಯಾಗಿದ್ದು , ಹಲವರು ಅಸು ನೀಗಿದ್ದಾರೆ. ಜುಲೈ ತಿಂಗಳಾಂತ್ಯಕ್ಕೆ ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿಗೆ ಈ ಜ್ವರ ಬರಲಿದೆ ಎಂದು ಆರೋಗ್ಯ ತಜ್ಞರು ಮಾಹಿತಿ ನೀಡಿದ್ದಾರೆ. ಹರಡುತ್ತಿರುವ ಡೆಂಗ್ಯೂ ಜ್ವರ ಕುರಿತಂತೆ ಹೈಕೋರ್ಟ್ ಕಳವಳ ವ್ಯಕ್ತಪಡಿಸಿದ್ದು, ತಕ್ಷಣ ಕ್ರಮ ಕೈಗೊಳ್ಳುವಂತೆ ನಮ್ಮ ರಾಜ್ಯ ಸರಕಾರಕ್ಕೆ ಆದೇಶ ನೀಡಿದೆ.

### ರೋಗ ಪ್ರಸಾರ

ಡೆಂಗ್ಯೂ ಜ್ವರ ಆರ್ಬೋವೈರಸ್‌ದ ನಾಲ್ಕು ಪ್ರಭೇದಗಳ ವೈರಸ್‌ನಿಂದ ಉಂಟಾಗುವುದು : ಡೆಂಗ್ಯೂ - 1,ಡೆಂಗ್ಯೂ - 2, ಡೆಂಗ್ಯೂ - 3, ಡೆಂಗ್ಯೂ - 4. ಈ ಕಾಯಿಲೆ ಈತನಕ ಮಾನವನ ಹೊರತು ಪಡಿಸಿ ಬೇರಾವ ಪ್ರಾಣಿಗಳಲ್ಲೂ ಕಂಡು ಬಂದಿಲ್ಲ. ಈ ರೋಗದ ಪ್ರಸಾರದಲ್ಲಿ ಏಡಿಸ್ ಈಜಿಪ್ತಿ ಸೊಳ್ಳೆ ಪ್ರಮುಖ ಪಾತ್ರ ವಹಿಸುವುದು. ಟಾಸ್ಕ್ ಫೋರ್ಸ್ ರಚನೆ ಮಾಡಲಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರಾದರೂ, ಈ ಸೊಳ್ಳೆಗಳು ಟಾಸ್ಕ್ ಫೋರ್ಸ್‌ಗೆ ಅಂಜಿದಂತೆ ಕಾಣುತ್ತಿಲ್ಲ. ಅವ್ಯವಸ್ಥಿತ ನೀರಿನ ನಿರ್ವಹಣೆ, ರಸ್ತೆಯಲ್ಲಿನ ಗುಂಡಿ, ನೀರು ಸಂಗ್ರಹವಾಗುವಂಥಹ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆಯುವುದು, ಪರಿಸರ ಮಲಿನಗೊಳಿಸುವ ಉದ್ಯಮಗಳು, ನೀರು ಸಂಗ್ರಹವಾಗದಂತೆ ಜನರು ಎಚ್ಚರಿಕೆ ವಹಿಸದೇ ಇರುವುದು ಇವೆಲ್ಲವೂ ಡೆಂಗ್ಯೂ ಹರಡಲು ಮುಖ್ಯ ಕಾರಣಗಳು. ನಿಂತ ನೀರಿನಲ್ಲಿ ಸೊಳ್ಳೆಗಳು ತಮ್ಮ ಮೊಟ್ಟೆ ಇಡದಂತೆ ನೋಡಿಕೊಂಡರೆ, ಸೊಳ್ಳೆ ಕಡಿತವನ್ನು ನಿಯಂತ್ರಿಸಿದರೆ, ಈ ರೋಗವನ್ನು ನಿಯಂತ್ರಿಸಿದಂತೆಯೇ!

ರೋಗದ ಅದಿಶಯನ ಕಾಲ 2 - 15 ದಿನಗಳು. ಆರಂಭಿಕ ಲಕ್ಷಣವೇ ಜ್ವರ. ಏಳೆಂಟು ದಿನಗಳವರೆಗೆ ಮುಂದುವರಿಯುವ ಜ್ವರದ ಪ್ರಮಾಣ 38 ಡಿಗ್ರಿ ಸೆಲ್ಸಿಯಸ್‌ರಿಂದ 40 ಡಿಗ್ರಿ ಸೆಲ್ಸಿಯಸ್. ತಲೆನೋವು, ಮೈ ಕೈ ನೋವು, ಮೂಳೆ ಕೀಲುಗಳ ನೋವು, ಮಾಂಸಖಂಡಗಳ ನೋವು ಕಾಣಿಸಿಕೊಳ್ಳುತ್ತದೆ. ಶೇ.85ರಷ್ಟು ಜನರಿಗೆ ಈ ಹಂತದಲ್ಲಿ ಜ್ವರ ಕಡಿಮೆಯಾಗುತ್ತದೆ. ಜ್ವರ ಮುಂದುವರಿದರೆ, ರೋಗಿ ನಿತ್ರಾಣವಾಗಿ ಹಾಸಿಗೆ ಹಿಡಿಯುತ್ತಾನೆ. ಕೆಲವರಲ್ಲಿ ರಕ್ತಸ್ರಾವ ಉಂಟಾಗುತ್ತದೆ. ಕೆಲವರಲ್ಲಿ ರಕ್ತರಸ ಇಂಗಿ ಆಘಾತಕ್ಕೊಳಗಾಗಿ ಅವರು ಸಾವಿನಂಚಿಗೆ ತಲುಪಬಹುದು! ರಕ್ತದಲ್ಲಿ ಪ್ಲೇಟ್ ಲೆಟ್ ಕಡಿಮೆಯಾಗುವುದು ಇಂತಹ ವೈರಸ್ ಜ್ವರಗಳ ಲಕ್ಷಣ.

ಡೆಂಗ್ಯೂ ಜ್ವರ ನಿಂತ ನಂತರದ ಎರಡು ಮೂರು ದಿನಗಳು ರೋಗಿಯ ಆರೋಗ್ಯದ ದೃಷ್ಟಿಯಿಂದ ನಿರ್ಣಾಯಕ. ಶೇ.90 ರಷ್ಟು ಜನರು ಯಾವುದೇ ಚಿಕಿತ್ಸೆಯಿಲ್ಲದೆ ಸುಧಾರಿಸಿಕೊಳ್ಳುತ್ತಾರೆ. ತೀವ್ರ ಜ್ವರಕ್ಕೆ ತುತ್ತಾದ ರೋಗಿಗಳಲ್ಲಿ ರಕ್ತದೊತ್ತಡ ತೀವ್ರಗತಿಯಲ್ಲಿ ಕುಸಿಯಬಹುದು. ರಕ್ತನಾಳಗಳ ಸೋರಿಕೆಯ ಜೊತೆ ಜೊತೆಗೆ ಪ್ಲೇಟ್ ಲೆಟ್ ಕಣಗಳು ಕಡಿಮೆ ಆಗುವುದರಿಂದ ದೇಹದೊಳಗೆ ರಕ್ತಸ್ರಾವವಾಗಬಹುದು. ಸಕ್ಕರೆಕಾಯಿಲೆ, ರಕ್ತದೊತ್ತಡ, ಯಕೃತ್ ಸಂಬಂಧಿ ಕಾಯಿಲೆಗಳನ್ನು ಹೊಂದಿರುವವರು, ಗರ್ಭಿಣಿಯರು ಮತ್ತು ಚಿಕ್ಕಮಕ್ಕಳಲ್ಲಿ ಡೆಂಗ್ಯೂ ಹೆಚ್ಚು ಅಪಾಯಕಾರಿ.

### ಸರಪಳಿ ಕತ್ತರಿಸಬೇಕು

ರೋಗಿ - ಸೊಳ್ಳೆ - ಆರೋಗ್ಯವಂತ ವ್ಯಕ್ತಿ - ಈ ಮೂರು ಕೊಂಡಿಗಳ ಚಕ್ರದಲ್ಲಿಯೇ ಡೆಂಗ್ಯೂ ಕಾಯಿಲೆ ಸುತ್ತುತ್ತದೆ. ಈ ಸರಪಳಿಯ ಕೊಂಡಿಗಳನ್ನು ಕತ್ತರಿಸುವ ಮೂಲಕ, ಈ ರೋಗಕ್ಕೆ ಕಡಿವಾಣ ಹಾಕಬಹುದು. ಇದಕ್ಕೆ ಪ್ರಬಲ ಅಸ್ತ್ರವೆಂದರೆ ಏಡಿಸ್ ಈಜಿಪ್ತಿ ಸೊಳ್ಳೆಗಳನ್ನು ನಿಯಂತ್ರಿಸುವುದು ಹಾಗೂ ಸೊಳ್ಳೆ ಕಡಿತದಿಂದ ರಕ್ಷಿಸಿಕೊಳ್ಳುವುದು. ಸೊಳ್ಳೆಗಳ ಸಂತಾನ ಅಭಿವೃದ್ಧಿಯಾಗುವುದನ್ನು ತಡೆಯಲು ಮನೆಯ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿರಿಸಿಕೊಳ್ಳಬೇಕು. ತಗ್ಗು ಗುಂಡಿಗಳನ್ನು ಮುಚ್ಚಬೇಕು. ಸೊಳ್ಳೆಗಳು ಹೆಚ್ಚಾಗದಂತೆ ಖಾಲಿಡಬ್ಬ, ಬಾಟಲಿ, ಹೂವಿನ ಕುಂಡ, ತೆಂಗಿನ ಕರಟ, ಮರದ ಪೊರಟೆ, ಮೊಟ್ಟೆಯ ಚೂರು, ಚಿಪ್ಪುಗಳಲ್ಲಿ , ಟ್ಯೂಬ್, ಟಾಯರ್‌ಗಳಲ್ಲಿಯ ನೀರಿನಲ್ಲಿ ಸೊಳ್ಳೆ ಸಂತತಿ ಹೆಚ್ಚಾಗದಂತೆ ನೋಡಿಕೊಳ್ಳಬೇಕು. ವಾಸಸ್ಥಳದ ಸುತ್ತ ಮುತ್ತ ನೀರು ನಿಲ್ಲದಂತೆ ನಿಗಾ ವಹಿಸಬೇಕು. ಇದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ. ಡೆಂಗ್ಯೂ ತಡೆಗಟ್ಟುವಲ್ಲಿ ಆರೋಗ್ಯ ಇಲಾಖೆಗಿಂತ ಹೆಚ್ಚಿನ ಜವಾಬ್ದಾರಿ ನಗರಪಾಲಿಕೆಯ ಮೇಲಿರುತ್ತದೆ. ಸೊಳ್ಳೆ ಮರಿಗಳ ನಾಶಪಡಿಸಲು ಕೀಟನಾಶಕಗಳ ಸಿಂಪಡಣೆ, ಧೂಳೀಕರಣ ಉಪಯುಕ್ತ. ಇದಕ್ಕಾಗಿ ಮೆಲಾಥಿಯಾನ್ ಅಥವಾ ಸುಮಿಥಿಯಾನ್ ಬಳಸಬೇಕು. ಮನೆಯ ಬಾಗಿಲು ಮತ್ತು ಕಿಟಕಿಗಳಿಗೆ ಸೊಳ್ಳೆಗಳು ಒಳ ನುಗ್ಗದಂತೆ ಜಾಲರಿಗಳನ್ನು ಹಚ್ಚಬೇಕು.

### ಮನೆಯಲ್ಲಿ ಎಚ್ಚರಿಕೆ

ಸಂಗ್ರಹಿಸಿದ ನೀರಿನಲ್ಲಿ ಸೊಳ್ಳೆ ಸಂತಾನಾಭಿವೃದ್ಧಿಯಾಗುವುದರಿಂದ ಪ್ರತಿ ಎರಡು ದಿನಗಳಿಗೊಮ್ಮೆ ನೀರನ್ನು ಖಾಲಿ ಮಾಡಬೇಕು. ಸೊಳ್ಳೆಯ ಲಾರ್ವಾ ಪಾತ್ರೆಯ ಒಳಭಾಗಕ್ಕೆ ಅಂಟಿಕೊಂಡು ಬೆಳೆಯುವ ಸಾಮರ್ಥ್ಯ ಹೊಂದಿರುವುದರಿಂದ ನೀರು ಸಂಗ್ರಹಿಸುವ ಪಾತ್ರೆ ಹಾಗೂ ತೊಟ್ಟಿಗಳ ಒಳಮೈಯನ್ನು ತಿಕ್ಕಿ ತೊಳೆಯಬೇಕು. ಸಿಮೆಂಟ್ ನಿರ್ಮಿತ ತೊಟ್ಟಿಯಲ್ಲಿ ಲಾರ್ವಾ ಬೆಳೆಯುವ ಅವಕಾಶ ಹೆಚ್ಚಿರುವುದರಿಂದ ಸೂಕ್ತ ಸ್ವಚ್ಛತಾ ಕ್ರಮಗಳು ಅನಿವಾರ್ಯ. ಹೂದಾನಿ, ಅಕ್ವೇರಿಯಂ, ಏರ್ ಕೂಲರ್ ಮೊದಲಾದವುಗಳಲ್ಲಿಯ ನೀರನ್ನು ಕನಿಷ್ಠ ಮೂರು ದಿನಗಳಿಗೊಮ್ಮೆಯಾದರೂ ಬದಲಿಸಬೇಕು. ನೀರಿನ ಸಂಪರ್ಕ ಇಲ್ಲದಿದ್ದರೂ ಮೂರು ವರ್ಷಗಳವರೆಗೆ ಏಡಿಸ್ ಈಜಿಪ್ತಿ ಸೊಳ್ಳೆ ಮೊಟ್ಟೆಗಳು ಜೀವಂತವಾಗಿರುತ್ತವೆ. ಮೊಟ್ಟೆಯಿಂದ ಮರಿ ಜನಿಸಲು 10 ರಿಂದ 12 ದಿನಗಳು ಬೇಕು. ಆದರೆ, ಬೇಸಿಗೆಯಲ್ಲಿ ಒಂದೇ ವಾರದಲ್ಲಿ ಮರಿಗಳು ಹೊರಬರುತ್ತವೆ. ಸೊಳ್ಳೆ ಜೀವಿತಾವಧಿ ಒಂದು ತಿಂಗಳಿದ್ದು, ಈ ಅವಧಿಯಲ್ಲಿ ಲಕ್ಷಾಂತರ ಮೊಟ್ಟೆಗಳನ್ನು ಇಡುತ್ತದೆ .ಏಡಿಸ್ ಈಜಿಪ್ತಿ ಸೊಳ್ಳೆ ಹಗಲಿನಲ್ಲಿ ಕ್ರಿಯಾಶೀಲ. 50 ಮೀಟರ್ ಸುತ್ತಮುತ್ತಲಿನ ಪ್ರದೇಶದಲ್ಲಿ ಹಾರಾಡುವ ಸಾಮರ್ಥ್ಯ ಹೊಂದಿದೆ.

## 60 ವರ್ಷಗಳ ಹಿಂದೆ..

● ಶಶಾಂಕ್ ಮುದೂರಿ

1963ನೇ ಇಸವಿ, ನವೆಂಬರ್ 22. ಅಂದು ಅಮೆರಿಕದಲ್ಲಿ ಪ್ರಗತಿಯಲ್ಲಿದ್ದ ಚುನಾವಣಾ ಪ್ರಚಾರಕ್ಕಾಗಿ ಅಧ್ಯಕ್ಷ ಜಾನ್.ಎಫ್. ಕೆನಡಿ, ತೆರೆದ ಕಾರಿನಲ್ಲಿ ತೆರಳುತ್ತಿದ್ದರು; ಸುತ್ತಲೂ ಸೀಕ್ರೆಟ್ ಸರ್ವಿಸ್ ಪೊಲೀಸರ ದಂಡು; ಮೋಟಾರು ಸೈಕಲ್‌ನಲ್ಲೂ ಪೊಲೀಸರು. ಟೆಕ್ಸಾಸ್‌ನ ಬೀದಿಗಳಲ್ಲಿ ಅಧ್ಯಕ್ಷ ಜಾನ್ ಎಫ್. ಕೆನಡಿ ಸಂಚರಿಸುತ್ತಿದ್ದಾಗ, ಅವರ ಪತ್ನಿ ಜಾಕಲೀನ್ ಕೆನಡಿ ಸಹ ಇದ್ದರು.

ಒಮ್ಮೆಗೇ ಗುಂಡುಗಳ ಸದ್ದು ಕೇಳಿಸಿತು. ಥೇಟ್ ನಿನ್ನೆ ಟ್ರಂಪ್ ಮೇಲೆ ನಡೆದಂತೆ! ನಿನ್ನೆ ನಡೆದ ಗುಂಡಿನ ದಾಳಿಯಲ್ಲಿ ಅದೃಷ್ಟವಶಾತ್, ಮಾಜಿ ಅಧ್ಯಕ್ಷ ಟ್ರಂಪ್‌ಗೆ ಯಾವುದೇ ಗಂಭಿರ ಸ್ವರೂಪದ ಗಾಯಗಳಾಗಲಿಲ್ಲ. ಅದರೆ ಜಾನ್ ಎಫ್. ಕೆನಡಿಯವರ ಮೇಲೆ ನಡೆದ ಇಂತಹದೇ ಗುಂಡಿನ ದಾಳಿಯಲ್ಲಿ, ಕೆನಡಿಯ ತಲೆ ಮತ್ತು ಬೆನ್ನಿಗೆ ಗುಂಡು ಹೊಕ್ಕವು. ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಚಿಕಿತ್ಸೆ ಕೊಡಿಸಲಾಯಿತಾದರೂ, ಫಲ ನೀಡಲಿಲ್ಲ; ಅವರು ಅದೇ ದಿನ ಅಸು ನೀಗಿದರು. ಉಪಾಧ್ಯಕ್ಷರಾಗಿದ್ದ ಲಿಂಡನ್ ಬಿ. ಜಾನ್ಸನ್ ಅವರನ್ನು ಅಧ್ಯಕ್ಷರನ್ನಾಗಿ ತಕ್ಷಣ ಆಯ್ಕೆ ಮಾಡಲಾಯಿತು.

ನಿನ್ನೆ ಟ್ರಂಪ್ ಮೇಲೆ ಗುಂಡಿನ ದಾಳಿ ಮಾಡಿದ ವ್ಯಕ್ತಿ ಎಂದು ಗುರುತಿಸಲಾದ ಕ್ರುಕ್ ಎಂಬುವವನನ್ನು ರಹಸ್ಯ ಪೊಲೀಸರು ತಕ್ಷಣ ಗುಂಡಿಟ್ಟು ಸಾಯಿಸಿದರು. 1963ರಲ್ಲಿ ಕೆನಡಿಯವರನ್ನು ಹತ್ಯೆ ಮಾಡಿದ್ದು ಯಾರು ಎಂಬುದನ್ನು ಒಂದೆರಡು ಗಂಟೆಗಳಲ್ಲೇ ಅಲ್ಲಿನ ಪೊಲೀಸರು ಪತ್ತೆ ಹಚ್ಚಿದರು. ಲೀ ಹಾರ್ವೆ ಓಸ್ವಾಲ್ಡ್ ಎಂಬ 24 ವರ್ಷ ವಯಸ್ಸಿನ, ಮರೈನ್‌ನಲ್ಲಿ ಸೇವೆ ಸಲ್ಲಿಸಿದ್ದ ವ್ಯಕ್ತಿಯನ್ನು ಅದೇ ದಿನ ಸಂಜೆ, ಸಿನಿಮಾ ಥಿಯೇಟರ್‌ನಲ್ಲಿ ಬಂಧಿಸಲಾಯಿತು. ಆತ ಒಬ್ಬ ಪೊಲೀಸನ್ನು ಸಾಯಿಸಿದ ಆರೋಪವನ್ನೂ ಎದುರಿಸಬೇಕಾಯಿತು.

ಕೆನಡಿಯನ್ನು ಕೊಂದ ಓಸ್ವಾಲ್‌ನನ್ನು ಕಾನೂನು ಪ್ರಕ್ರಿಯೆಗೆ ಒಳಪಡಿಸಲಾಯಿತು; ಆದರೆ, ಆತನನ್ನು ಒಂದು ಜೈಲಿನಿಂದ ಇನ್ನೊಂದು ಜೈಲಿಗೆ ಪೊಲೀಸರು ಸಾಗಿಸುವಾಗ, ಟಿವಿ ಕ್ಯಾಮೆರಾಗಳ ಎದುರಿನಲ್ಲೇ ಜಾಕ್ ರುಬಿ ಎಂಬಾತ ಆತನನ್ನು ಸಾಯಿಸಿದ! ಓಸ್ವಾಲ್ ಹೇಳಬಹುದಾದ ಒಳಸಂಚಿನ ಕಥೆಗಳನ್ನು ಮುಚ್ಚಿಹಾಕಲು, ಆತನ ಕೊಲೆಗೆ ಅವಕಾಶ ಮ ಮಾಡಿ ಕೊಡಲಾಗಿತ್ತು ಎಂಬ ಗಾಳಿ ಸುದ್ದಿಗಳೂ ಹರಡಿದವು.

ಅಮೆರಿಕದ ದೀರ್ಘ ಇತಿಹಾಸದಲ್ಲಿ ಹಲವು ಅಧ್ಯಕ್ಷರು ಗುಂಡೇಟಿಗೆ ಬಲಿಯಾಗಿದ್ದಾರೆ. ಇನ್ನು ಕೆಲವರು, ಟ್ರಂಪ್ ರೀತಿ, ಗುಂಡೇಟಿಗೆ ಗುರಿಯಾದರೂ, ಬಚಾವಾಗಿದ್ದಾರೆ. ಜಾನ್ ಎಫ್. ಕೆನಡಿಯು ಅತಿ ಜನಪ್ರಿಯ ಅಧ್ಯಕ್ಷರಾಗಿದ್ದರಿಂದ, ಅವರ ಕೊಲೆಯು ಹೆಚ್ಚು ಪ್ರಚಾರ ಪಡೆದಿದೆ. ಮಾಜಿ ಅಧ್ಯಕ್ಷ ಟ್ರಂಪ್ ಅವರು ಈಗ ಗುಂಡಿನ ದಾಳಿ ಎದುರಿಸಿ, ಬಚಾವಾಗಿದ್ದಾರೆ; ಇದು ಅವರ ಪುನರ್ಜನ್ಮ ಎಂದೂ ಕರೆಯಬಹುದು. ಸದ್ಯದಲ್ಲೇ ನಡೆಯಲಿರುವ ಅಲ್ಲಿನ ಚುನಾವಣೆಯ ಫಲಿತಾಂಶದ ಮೇಲೆ ಈ ಗುಂಡಿನ ದಾಳಿಯು ಪರಿಣಾಮ ಬೀರಲೂಬಹುದು!

## ಆರೋಗ್ಯದತ್ತ ಓಟ!

ಶ್ವೇತ ವರ್ಣ
● ಶ್ವೇತಾ ಭಿಡೆ

ನಿಮಗಾಗಿ, ನಿಮ್ಮ ಕುಟುಂಬಕ್ಕಾಗಿ, ಕುಟುಂಬದ ಜೊತೆ ಖುಷಿಯಾಗಿರಬೇಕು ಎಂದರೆ ಒಳ್ಳೆ ಆರೋಗ್ಯ ಬೇಕೇ ಬೇಕು. ಆ ಕಡೆ ಪುಟ್ಟ ಹೆಜ್ಜೆಗಳನ್ನಿಡುತ್ತಾ ಆರೋಗ್ಯಕರ ಜೀವನದತ್ತ ನಿಮ್ಮ ಓಟವಿರಲಿ.

ಫಿಟ್‌ನೆಸ್ ಬೇಕು. ಸಣ್ಣ ಆಗಬೇಕು, ಆರೋಗ್ಯ ಸುಧಾರಿಸಿಕೊಳ್ಳಬೇಕು, ಫಿಟ್ ಅಂಡ್ ಫೈನ್ ಕಾಣಬೇಕು ಅನ್ನೋ ಆಸೆ ಇದೆ. ಜಿಮ್ ಹೋಗೋಕೆ ಟೈಮ್ ಇಲ್ಲ. ಯೋಗ ಮಾಡೋದಕ್ಕೆ ಒಳ್ಳೆ ಟ್ರೈನರ್ ಇಲ್ಲ. ಕ್ರಿಕೆಟ್, ಬ್ಯಾಡ್ಮಿಂಟನ್ ಆಡೋಣ ಅಂದ್ರೆ, ಗೆಳೆಯರಿಲ್ಲ.ಇಂಥ ಭಾವನೆ ನಿಮಗೂ ಇದ್ದರೆ ಖಂಡಿತವಾಗಿ ಈ ಬರಹ ನಿಮಗಾಗಿ.

ವಾಕಿಂಗ್ ಮಾಡೋದ್ರಿಂದ ಕೂಡ ಒಳ್ಳೇ ವ್ಯಾಯಾಮ ಆಗತ್ತೆ, ಕಡೆಯ ಪಕ್ಷ ದಿನಕ್ಕೆ ಅರ್ಧ ಗಂಟೆಯಿಂದ ಒಂದು ಗಂಟೆ ಓಡಾಡಿ ಸಾಕು ಅಂತ ವೈದ್ಯರೂ ಹೇಳುವುದನ್ನೂ ನೀವು ಕೇಳಿರಬಹುದು. ಹೌದು, ಓಡುವುದು, ಜಾಗಿಂಗ್ ಕೂಡ ಅಷ್ಟೇ ಪ್ರಭಾವಶಾಲಿಯಾಗಿ ಪರಿಣಾಮ ಬೀರುತ್ತದೆ.

### ಓಟ ಆಯ್ಕೆ ಹೇಗೆ?

ವೃತ್ತಿಪರ ಓಟಗಾರರನ್ನು ನೀವೂ ನೋಡಿರಬಹುದು. ಹಾಫ್ ಮ್ಯಾರಥಾನ್(21 ಕಿಲೋಮೀಟರ್) ಫುಲ್ ಮ್ಯಾರಥಾನ್ (42.195 ಕಿಲೋಮೀಟರ್) ಹೇಗೆ ಓಡುತ್ತಾರೆ ಎನ್ನುವ ಪ್ರಶ್ನೆ ನಿಮಗೂ ಕಾಡಿರಬಹುದು. ಯಾವುದೂ ಒಂದೇ ದಿನದಲ್ಲಿ ಆಗುವಂಥದ್ದಲ್ಲ. ಓಡಬೇಕು ಎನ್ನುವ ಅಚಲ ಛಲವಿದ್ದರೆ ಎಲ್ಲವೂ ಸಾಧ್ಯ. ಮೊದಲು ನಿಮ್ಮ ನಡಿಗೆಯನ್ನು ಬಿರುಸು ನಡಿಗೆಯನ್ನಾಗಿ, ನಂತರ ಜಾಗಿಂಗ್, ಬಳಿಕ ರನ್ನಿಂಗ್ ಆಗಿ ಮುಂದುವರೆಸಬಹುದು. ಕ್ರಮೇಣ ದೂರವನ್ನು ಹೆಚ್ಚಿಸುತ್ತಾ ಓಟವನ್ನು ಮುಂದುವರೆಸಬಹುದು.

2018 ರಿಂದ ಸತತವಾಗಿ ರನ್ನಿಂಗ್ ಮಾಡುತ್ತಿರುವ ಮತ್ತು ಈಗಾಗಲೇ ಗೋವಾದಲ್ಲಿ ಎರಡು ಹಾಫ್ ಐರನ್ ಮ್ಯಾನ್ ಈವೆಂಟ್ ಮುಗಿಸಿರುವ ಟ್ರೈಯಥ್ಲೀಟ್ ವಿನೀತ್ ಡಿ.ಎಸ್ ಅವರು ತಮ್ಮ ಅನುಭವಗಳನ್ನು ಹೀಗೆ ಹಂಚಿಕೊಂಡಿದ್ದಾರೆ.

'ಒಂದು ಕಡೆ ವೃತ್ತಿಯ ಬಿಡುವಿಲ್ಲದ ಕೆಲಸಗಳು, ಒತ್ತಡ, ಅಸಮರ್ಪಕ ಜೀವನಶೈಲಿ; ಏನನ್ನಾದರೂ ಮಾಡಬೇಕೆಂದು ಪ್ರೇರೇಪಿಸಿದಾಗ ಅವರ ಸಹಾಯಕ್ಕೆ ಬಂದಿದ್ದು ರನ್ನಿಂಗ್. ರನ್ನಿಂಗ್ ಒಟ್ಟಾರೆ ಆರೋಗ್ಯವನ್ನು ಸುಧಾರಿಸಿದ್ದಲ್ಲದೇ, ಜೀವನವನ್ನು ನೋಡುವ ದೃಷ್ಟಿಕೋನವನ್ನು ಬದಲಿಸಿದೆ, ಮಗು, ಕುಟುಂಬದ ಜೊತೆ ಒಳ್ಳೆಯ ಸಮಯ ಕಳೆಯಲು, ಉತ್ತಮ ಗೆಳೆಯರ ಬಳಗ ಹೊಂದಲು ಸಹಾಯ ಮಾಡಿದೆ. ಅಲ್ಲದೇ, ಎಷ್ಟೇ ಒತ್ತಡವಿದ್ದರೂ ಓಡಲು ಹೋದರೆ ಸಾಕು, ಮೂಡ್ ಬದಲಾಗಿ ಮನಸ್ಸು ಹಗುರಾಗುತ್ತದೆ' ಎನ್ನುತ್ತಾರೆ ವಿನೀತ್.

### ವೃತ್ತಿಯಲ್ಲಿ ಪ್ರಗತಿ

ದೈಹಿಕ ಆರೋಗ್ಯ ಸುಧಾರಿಸಿದಂತೆಲ್ಲಾ ಮಾನಸಿಕವಾಗಿ ಗಟ್ಟಿಯಾಗುತ್ತಾ ಹೋಗುತ್ತೀರಿ. ಚಲನಶೀಲತೆ ಹೆಚ್ಚುತ್ತದೆ ಮತ್ತು ಒಟ್ಟಾರೆ ಆರೋಗ್ಯ ಸುಧಾರಿಸುವಲ್ಲಿ ಸಹಾಯವಾಗುತ್ತದೆ. ಮುಂದೆ ಬರಬಹುದಾದ ಜೀವನಶೈಲಿ ಸಂಬಂಧಿ ಆರೋಗ್ಯ ಸಮಸ್ಯೆಗಳಿಂದ ದೂರವಿರಲು ಓಟ ಸಹಾಯ ಮಾಡುತ್ತದೆ. ಮಾನಸಿಕ ಆರೋಗ್ಯವನ್ನು ಕಾಪಾಡುತ್ತದೆ.

### ನೀವೂ ರನ್ನಿಂಗ್ ಪ್ರಾರಂಭಿಸಬೇಕಾ?

ನಿಮ್ಮ ದೇಹದ ಸ್ಥಿತಿಗೆ ಅನುಗುಣವಾಗಿ ವೇಗ ಮತ್ತು ದೂರವನ್ನು ನಿರ್ಧರಿಸಿ. ಓಡುವಾಗ ಒಂದುವೇಳೆ ಹೃದಯದ ಬಡಿತ ಹೆಚ್ಚಾಗಿ, ಸುಸ್ತಾಗುತ್ತಿದ್ದರೆ ಓಟದ ವೇಗ ತಗ್ಗಿಸಿ, ವಿಶ್ರಮಿಸಿ ನಂತರ ಪ್ರಯತ್ನಿಸಿ.

ಸಾಕಷ್ಟು ನೀರನ್ನು ಕುಡಿಯಿರಿ. ಓಟದ ಬಳಿಕವೂ ಹೆಚ್ಚು ನೀರನ್ನು ಕುಡಿಯುತ್ತೀರೆಂದು ಗಮನಿಸಿಕೊಳ್ಳಿ.

ಬರೀ ರನ್ನಿಂಗ್ ಬದಲು ಮಧ್ಯೆ ಸ್ಟ್ರೆಂಥ್ ಟ್ರೈನಿಂಗ್ ರೀತಿಯ ವ್ಯಾಯಾಮಗಳನ್ನೂ ಮಾಡುವುದರಿಂದ ಕ್ಷಮತೆ ಹೆಚ್ಚುತ್ತದೆ. ಯಾವುದೇ ಕ್ರೀಡೆ, ವ್ಯಾಯಾಮವನ್ನು ಮಾಡುವಾಗ ಅದಕ್ಕೆ ತಕ್ಕ ಹಾಗೆ ದೇಹಕ್ಕೆ ವಿಶ್ರಾಂತಿ ನೀಡುವುದು ಅಗತ್ಯ.

ಬಿಡುವಿಲ್ಲದ ಜೀವನ ಎಲ್ಲರಿಗೂ ಇದೆ ನಿಜ. ಆದರೆ ನಿಮಗಾಗಿ, ನಿಮ್ಮ ಕುಟುಂಬಕ್ಕಾಗಿ, ಕುಟುಂಬದ ಜೊತೆ ಖುಷಿಯಾಗಿರಬೇಕು ಎಂದರೆ ಒಳ್ಳೆ ಆರೋಗ್ಯ ಬೇಕೇ ಬೇಕು. ಆ ಕಡೆ ಪುಟ್ಟ ಹೆಜ್ಜೆಗಳನ್ನಿಡುತ್ತಾ ಆರೋಗ್ಯಕರ ಜೀವನದತ್ತ ನಿಮ್ಮ ಓಟವಿರಲಿ. ಓಟ ಸಾಧ್ಯವಾಗದೇ ಇದ್ದರೆ ನಡಿಗೆ ಮಾಡಿ!

**ರನ್ನಿಂಗ್ ನೀವೂ ಮಾಡಬೇಕು ಎಂದಾದರೆ ಸುಲಭವಾಗಲು ಇಲ್ಲಿವೆ ಹಲವು ವಿಷಯಗಳು.**

- ಕಡಿಮೆ ವೆಚ್ಚದ ಸುಲಭದ ಕ್ರೀಡೆ ಇದು.
- ಒಂದೊಳ್ಳೆ ಜೊತೆ ಶೂಸ್ ಇದ್ದರೆ ಸಾಕು.
- ನಿಮ್ಮ ಸಮಯಕ್ಕೆ ತಕ್ಕ ಹಾಗೆ ನೀವು ನಿಮ್ಮ ದಿನಚರಿಯನ್ನು ರೂಪಿಸಿಕೊಳ್ಳಬಹುದು.
- ಸಂಗಾತಿಗಳ ಅಗತ್ಯವಿಲ್ಲ.

**ಹೊರಾಂಗಣದಲ್ಲಿ ಓಡುವಾಗ ಸಿಗುವ ಶುದ್ಧ ಗಾಳಿ, ಪರಿಸರ, ಆಗೀಗ ಸಿಗುವ ಸಮಾನ ಮನಸ್ಕರು ನಿಮ್ಮ ಮೇಲೆ ಸಕಾರಾತ್ಮಕ ಪರಿಣಾಮ ಬೀರುವಲ್ಲಿ ಸಹಾಯ ಮಾಡುತ್ತವೆ.**

### ಶಿಸ್ತು ರೂಢಿ

ನಡಿಗೆ, ಓಟ ಈ ರೀತಿ ಯಾವುದೇ ರೀತಿಯ ವ್ಯಾಯಾಮವನ್ನು ಆರಿಸಿಕೊಂಡರೂ ಸಿಗುವ ಲಾಭವೆಂದರೆ ನಿಮಗೆ ಗೊತ್ತಿಲ್ಲದೇ ಶಿಸ್ತು ರೂಢಿಯಾಗುತ್ತದೆ. ಸಮಯಕ್ಕೆ ಸರಿಯಾಗಿ ಮಲಗುವುದು, ಏಳುವುದು, ಸಾಧ್ಯವಾದಷ್ಟೂ ಉತ್ತಮ ಆಹಾರವನ್ನೇ ಸೇವಿಸುವುದು ಮುಂತಾದಂತೆ ಕ್ರಮೇಣ ಆರೋಗ್ಯಕರ ರೀತಿಯಲ್ಲಿ ಬದಲಾಯಿಸಿಕೊಳ್ಳುತ್ತಾ ಹೋಗುತ್ತೀರಿ.

# ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
15.07.2024 ಸೋಮವಾರ
vishwavani.news

## ದಿನ ದರ್ಶಿಕೆ

ಆಷಾಢ ಮಾಸ, ಶುಕ್ಲ ಪಕ್ಷ, ನವಮಿ 1946 ಕ್ರೋಧಿ, ಶಕ ಸಂವತ, ನವಮಿ ತಿಥಿ, ಸ್ವಾತಿ ನಕ್ಷತ್ರ, ಮಿಥುನ ರಾಶಿ,

## ಮನೆಮದ್ದು

ಒಂದು ಕಪ್ ನೀರಿಗೆ, 2 ಪುದೀನಾ ಎಲೆಗಳನ್ನು ಹಾಕಿ ಚೆನ್ನಾಗಿ ಕುದಿಸಿ. ಕೆಳಗಿಳಿಸಿದ ನಂತರ ಅದಕ್ಕೆ ನಿಂಬೆರಸ ಮತ್ತು ಉಪ್ಪು ಸೇರಿಸಿ ಕುಡಿಯುವುದರಿಂದ ವಾಂತಿ ಸಮಸ್ಯೆ ನಿವಾರಣೆಯಾಗುವುದು

## ಸೌಂದರ್ಯ ಸೂತ್ರ



ಕಾಫಿ ಪೌಡರ್‌ಗೆ ನೀವು ಬಳಸುವ ನೈಸರ್ಗಿಕ ಐಸ್ ಕ್ರೀಮ್‌ನ್ನು ಸೇರಿಸಿ ಕಣ್ಣಿನ ಕೆಳಗೆ ನಿಯಮಿತವಾಗಿ ಹಚ್ಚಿಕೊಳ್ಳಿ. ವಾರದಲ್ಲಿ ಕನಿಷ್ಠ ಮೂರು ದಿನ ಈ ರೀತಿ ಮಾಡಿ ಇದರಿಂದ ಕಣ್ಣಿನ ಕೆಳಗಿರುವ ಕಪ್ಪು ಕಲೆ ಅಥವಾ ಡಾರ್ಕ್ ಸರ್ಕಲ್ ಮಾಯವಾಗುವುದು.

## ದಿನ ಭವಿಷ್ಯ

**ಮೇಷ** ವಿದ್ಯೆ, ಜ್ಞಾನ ವಿಚಾರದಲ್ಲಿ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತದೆ. ವ್ಯವಹಾರಗಳಲ್ಲಿ ಗೌರವ ಲಭ್ಯ. ಮೇಲಾಧಿಕಾರಿಗಳಿಂದ ಪ್ರೋತ್ಸಾಹ.

**ವೃಷಭ** ಮನೆಯಲ್ಲಿ ಸಂತಸದ ವಾತಾವರಣ. ನಿರೀಕ್ಷಿತ ಧನ ಸಂಚಯನ ವೃದ್ಧಿ. ಕೆಲಸ ಕಾರ್ಯಗಳಲ್ಲಿ ಪ್ರಗತಿ. ವಿದ್ಯಾರ್ಥಿಗಳು ಅಧ್ಯಯನಕ್ಕೆ ಆದ್ಯತೆ ನೀಡಬೇಕು.

**ಮಿಥುನ** ಬಹಳ ಸಮಯದಿಂದ ಬಳಲುತ್ತಿದ್ದ ಅನಾರೋಗ್ಯಕ್ಕೆ ಪರಿಹಾರ. ನೂತನ ಮಿತ್ರರ ಭೇಟಿಯಿಂದ ಸಂತೋಷ. ಸಾಂಸಾರಿಕವಾಗಿ ಉತ್ತಮ ದಿನ.

**ಕಟಕ** ಧಾರ್ಮಿಕ ಕಾರ್ಯಗಳಿಗೆ ಪ್ರಯಾಣ. ದೇವತಾ ಸ್ಥಳ ಸಂದರ್ಶನ. ಗುರುಹಿರಿಯರಿಂದ ಸಂಭ್ರಮ. ದೂರದ ಮಿತ್ರರೊಂದಿಗೆ ಸಮಾಲೋಚನೆ.

**ಸಿಂಹ** ವ್ಯವಹಾರದಲ್ಲಿ ಹೊಸ ತಂತ್ರಜ್ಞಾನದ ಅಳವಡಿಕೆಯಿಂದ ಭವಿಷ್ಯದಲ್ಲಿ ಸಾಕಷ್ಟು ಲಾಭ. ಸ್ನೇಹಿತರನ್ನು ಭೇಟಿ ಮಾಡುವಿರಿ.

**ಕನ್ಯಾ** ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗಳು ಇಂದು ಕೊನೆಗೊಳ್ಳುತ್ತವೆ. ಪ್ರೀತಿಯ ವಿಚಾರದಲ್ಲಿ ಅದೃಷ್ಟದ ದಿನ.

**ತುಲಾ** ಹೊಸ ವ್ಯವಹಾರವನ್ನು ಪ್ರಾರಂಭಿಸಲು ಯೋಚಿಸುತ್ತಿದ್ದರೆ, ಅನುಭವಿಗಳ ಅಭಿಪ್ರಾಯ ಪಡೆದುಕೊಳ್ಳಿ. ಉದ್ಯೋಗ ಹುಡುಕುತ್ತಿರುವವರಿಗೆ ಅವಕಾಶ.

**ವೃಶ್ಚಿಕ** ವ್ಯಾಪಾರದಲ್ಲಿ ಲಾಭಕ್ಕಾಗಿ ಹೊಸ ಕ್ರಮ ಅಳವಡಿಸಿಕೊಳ್ಳಬೇಕು. ಕೆಲಸದ ಸ್ಥಳದಲ್ಲಿನ ಬದಲಾವಣೆಗಳು ನಿಮ್ಮ ಪರವಾಗುವುದು.

**ಧನು** ಕೆಲಸದ ಒತ್ತಡದಿಂದಾಗಿ ದೈಹಿಕವಾಗಿ ಬಳಲುತ್ತೀರಿ. ನಿಮ್ಮ ಬುದ್ಧಿವಂತಿಕೆ, ಚುರುಕುತನ ಪ್ರಶಂಸೆಗೆ ಪಾತ್ರವಾಗುತ್ತದೆ. ವಿದ್ಯಾರ್ಥಿಗಳಿಗೆ ಅನುಕೂಲ.

**ಮಕರ** ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಜನಾನುರಾಗಿ ವರ್ತನೆಯಿಂದ ಮೆಚ್ಚುಗೆ. ಕುಟುಂಬದೊಂದಿಗೆ ಪ್ರಯಾಣ.

**ಕುಂಭ** ನಿರೀಕ್ಷಿತ ಸ್ಥಾನ- ಗೌರವ ದೊರಕುತ್ತದೆ. ಧಾರ್ಮಿಕ ಕಾರ್ಯಗಳಲ್ಲಿ ತಲ್ಲೀನರಾಗುತ್ತೀರಿ. ಧಾರ್ಮಿಕ ಕಾರ್ಯಗಳಿಗೆ ದುಡ್ಡನ್ನು ವಿನಿಯೋಗಿಸುತ್ತೀರಿ.

**ಮೀನ** ಮಕ್ಕಳಿಂದ ಸಂತೋಷ ವೃದ್ಧಿ. ಆರ್ಥಿಕ ಸಮೃದ್ಧಿಯ ದಿನ. ಪರೀಕ್ಷೆಗೆ ತಯಾರಿ ನಡೆಸುತ್ತಿರುವವರು ಅಧ್ಯಯನದ ಬಗ್ಗೆ ಗಮನ ಹರಿಸಿ.

● ಕೆ.ಬಿ.ಸಂತೋಷ್ ಗುರೂಜಿ

## ಈ ದಿನ ಇತಿಹಾಸ

- 2010: ಭಾರತದ ರುಪಾಯಿಯ ಚಿಹ್ನೆಯನ್ನು ಅಂಗೀಕರಿಸಿದ ದಿನ
- 1955: ಪಂಡಿತ್ ಜವಾಹರ್‌ಲಾಲ್ ನೆಹರೂ ಅವರು ಭಾರತ ರತ್ನ ಪ್ರಶಸ್ತಿಗೆ ಭಾಜನರಾದ ದಿನ
- 1903: ರಾಷ್ಟ್ರೀಯ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಕೆ. ಕಾಮರಾಜ್ ಜನಿಸಿದ ದಿನ
- ವಿಶ್ವ ಕೌಶಲ ದಿನ

## ಚಿತ್ರಸ್ಫೂರ್ತಿ

ಒಂದು ಸಿನಿಮಾದಲ್ಲಿ ವಿಷ್ಣುವರ್ಧನ್ ಮತ್ತು ದೊಡ್ಡಣ್ಣ ಬಾತುಕೋಳಿಗಳನ್ನು ಮೇಯಿಸುತ್ತಾ ಹೊರಟಾಗ, ಬಂದ ಮುಖ್ಯಮಂತ್ರಿ ಚಂದ್ರು ಬಾತುಕೋಳಿಗಳನ್ನು ತೊಗೊಂಡು ಏನು ಮಾಡ್ತೀರಾ ಎಂದು ಕೇಳಿದರೆ, ಅದಕ್ಕೆ ದೊಡ್ಡಣ್ಣ 'ಸಿಟಿಗೆ ಕರ್ಕೊಂಡು ಹೋಗಿ ಕಂಪ್ಯೂಟರ್ ಕ್ಲಾಸ್‌ಗೆ ಸೇರಿಸ್ತೀನಿ' ಅಂತ ಹೇಳುವ ಆ ಡೈಲಾಗ್ ನೆನಪಿನಲ್ಲಿರಬಹುದು. ಅದೇ ರೀತಿಯೇ ಈ ಫೋಟೋಗೂ ಆ ಸಿನಿಮಾಗೂ ಏನೂ ಸಂಬಂಧ ಇಲ್ಲ. ಈ ಫೋಟೋವನ್ನು 1991ರ ಮಾರ್ಚ್‌ನಲ್ಲಿ ತಗೆದಿದ್ದಾರೆ. ಅದೂ ಸೋವಿಯಟ್ ಯುನಿಯನ್‌ನ ವಿಸರ್ಜನೆಯಾದ ಮೇಲೆ. ಈ ಚಿತ್ರದಲ್ಲೂ ಹಂಗೇರಿಯ ರೈತ ತನ್ನ ಬಾತುಕೋಳಿಗಳನ್ನು ಮೇಯಿಸಲು ಕರೆದುಕೊಂಡು ಹೋಗುತ್ತಿದ್ದಾನೆ.

ಚಿತ್ರಕೃಪೆ: ಟೋಮಾಸ್ಜ್ ಟೋಮಾಸ್ಜೇವ್ಸ್ಕಿ

# ಇಂತಹ ಮಕ್ಕಳೂ ಇರುತ್ತಾರೆ!

## ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ತುಂಬಾ ಬಡತನದಲ್ಲಿ ಬೆಳೆದ ಒಬ್ಬ ಆರ್ಡಿನರಿ ಅಂಚೆ ಕಚೇರಿಯ ಉದ್ಯೋಗಿ. ತನ್ನ ಇಬ್ಬರು ಮಕ್ಕಳನ್ನು ಚೆನ್ನಾಗಿ ಓದಿಸಿ ಉದ್ಯೋಗಸ್ಥರನ್ನಾಗಿ ಮಾಡಿ ವಿದೇಶಗಳಲ್ಲಿ ವಾಸ್ತವ್ಯ ಹೂಡುವ ಹಾಗೇ ಮಾಡಿದ. ಇಬ್ಬರು ಮಕ್ಕಳಿಗೆ ಮದುವೆಯಾಗಿ ಮಕ್ಕಳಾದವು. ಇಬ್ಬರೂ ಸುಖೀ ಸಂಸಾರಸ್ಥರೇ. ಆದರೆ ತಂದೆಗೆ ಊರಿಂದೂರಿಗೆ ವರ್ಗಾವಣೆಗಳಾಗುತ್ತಾ ಕೊನೆಗೆ ಆಂಧ್ರಪ್ರದೇಶದ ಚಿಂತಲಪಲ್ಲಿ ಎಂಬ ಕಚೇರಿಯಲ್ಲಿ ನಿವೃತ್ತಿ ಸ್ಥಾನಕ್ಕೆ ಬಂದು ನಿಂತರು. ನಿವೃತ್ತಿಯೂ ಆಯಿತು, ಈಗ ಅಪ್ಪನಿಗೆ ಚಿಂತೆ. ಮಕ್ಕಳಿಗೆ ಫೋನಾಯಿಸುತ್ತಾರೆ ಒಂದೆರಡು ದಿನ ಊರಿಗೆ ಬಂದುಹೋಗಲು ಸಾಧ್ಯವೇ ಎಂದು?

ಮಕ್ಕಳು ಸಹ ಒಪ್ಪುತ್ತಾರೆ. ಆದರೆ ಮಕ್ಕಳು ಒಂದೆರಡು ದಿನವಲ್ಲದೆ ಒಂದು ತಿಂಗಳು ರಜೆ ಮಾಡಿ ಊರಿಗೆ ಬರುತ್ತಾರೆ. ಬಂದ ಮಕ್ಕಳಿಗೆ ತಂದೆ ಹೇಳುತ್ತಾರೆ ನಿಮಗೊಂದು ವಿಷಯ ತಿಳಿಸಬೇಕಿದೆ ಎಂದು. ನನ್ನ ನಿವೃತ್ತಿಯಾಗಿದೆ. ಹಾಗೆಯೇ ನನ್ನ ಖಾತೆಗೆ ಒಂದಷ್ಟು ಲಕ್ಷ ಪಿಎಫ್ ಹಣವು ಬಂದಿದೆ. ನೀವಿಬ್ಬರು ಆ ಹಣವನ್ನು ಹಂಚಿಕೊಂಡರೆ ನಾನು ನನ್ನ ಪೆನ್ಶನ್ ಹಣದಲ್ಲಿ ನಿಮ್ಮ ತಾಯಿಯನ್ನು ಸಾಕಬಲ್ಲೆ. ಈ ಸುದ್ದಿ ಹೇಳಲಿಕ್ಕೆಂದೇ ನಿಮ್ಮನ್ನು ಕರೆಸಿದೆ ಎಂದು ಮತ್ತೆ ಒಂದೆರಡು ದಿನ ಒಟ್ಟಿಗೆ ಎಲ್ಲರೂ ಎಲ್ಲಾದರೂ ಸುತ್ತಿ ಬರೋಣವೆಂದು ಇಚ್ಛೆ ವ್ಯಕ್ತಪಡಿಸುತ್ತಾರೆ.

ಅದಕ್ಕೆ ಮಕ್ಕಳು ಹೇಳುತ್ತಾರೆ. ಮೊದಲ ಸಲ ಕೆಲಸ ಮಾಡಿದ ಅಂಚೆ ಕಚೇರಿಯಾದ 'ಉಡುಪಿಯ ಹಿತ್ತಲುಮನೆ ಎಂಬ ಗ್ರಾಮಕ್ಕೆ ಹೋಗಿ ಬರೋಣ' ಎಂದು ಹೇಳುತ್ತಾರೆ, ತಂದೆಗೆ ಆಶ್ಚರ್ಯ ಆ ಗ್ರಾಮದಲ್ಲೇನಿದೆ ಎಂದು ಆದರೂ ಮಕ್ಕಳಿಗೆ ನಿರಾಸೆಗೊಳಿಸದೆ ಹೊರಟುನಿಲ್ಲುತ್ತಾರೆ. ಆ ಗ್ರಾಮದಲ್ಲಿ ಮೊದಲು ಕೆಲಸ ಮಾಡುವ ಸಮಯದಲ್ಲಿ ವಾಸ್ತವ್ಯ ಹೂಡಿದ್ದ ಚಿಕ್ಕ ಚೊಕ್ಕವಾದ ಮನೆ. ತನ್ನ ಮಕ್ಕಳು ಆಟವಾಡಿದ್ದ ಅಂಗಳ ಹಸಿರುಮಯವಾಗಿದೆ. ಆಗ ನೆಟ್ಟ ಸಸಿಗಳು ಮರಗಳಾಗಿವೆ. ತೆಂಗಿನ ಮರ ತುಂಬಾ ಕಾಯಿಗಳಿವೆ. ಎತ್ತ ನೋಡಿದರೂ ಹಸಿರು, ಮನೆಯ ಕಂಪೌಂಡಿನ ಒಳಗೆ ಪರಿಶುದ್ಧ ತುಳಸಿ ಗಿಡ. ಗೇಟು ಪ್ರವೇಶಿಸುವಷ್ಟರಲ್ಲಿ ಒಬ್ಬ ಆಳು ಬಂದು ಗೇಟಿನ ಬೀಗದ ಕೀಲಿಯನ್ನು ಮಗನ ಕೈಗೆ ಇಡುತ್ತಾನೆ. ಮಗ ಬೀಗ ತೆಗೆದು ಒಳ ಬಂದಾಗ ತಂದೆಗೆ ಎಲ್ಲವೂ ಅಯೋಮಯ. ಈ ಆಳು ಯಾರು, ಈ ಮನೆಗೆ ಏಕೆ ಬಂದೆವು, ಎಲ್ಲವೂ ನಿಗೂಢವೇ!

ಮನೆಯ ಒಳಗೆ ಬರುವಷ್ಟರಲ್ಲಿ ಎಲ್ಲವೂ ಸ್ವಚ್ಛ! ತಂದೆ ಏನೋ ಕೇಳಲು ಬರುವಷ್ಟರಲ್ಲಿ ಮಕ್ಕಳೇ ಮಾತನಾಡಲು ಶುರು ಮಾಡುತ್ತಾರೆ ಅಪ್ಪ... ನಿಮ್ಮ ನಿವೃತ್ತಿ ಹತ್ತಿರವಿದೆಯೆಂದು ತಿಳಿಯಿತು. ಈ ಸ್ಥಳ ನಿಮಗೆ ತುಂಬಾ ಇಷ್ಟವೆಂದು ಒಂದು ವರ್ಷದ ಹಿಂದೆಯೇ ಈ ಸ್ಥಳವನ್ನು ನಾವೇ ಕೊಂಡುಕೊಂಡಿದ್ದೇವೆ. ವರ್ಗಾವಣೆಗಳಿಂದ ಬಸವಳಿದಿದ್ದೀರಿ ಸಾಕು. ನಿಮ್ಮ ನೆಮ್ಮದಿಗೆ ಒಂದು ಮನೆ ಇರಬೇಕು ಎಂದು ನಿಮಗೆ ತಿಳಿಸದೆ ನಾವಿಬ್ಬರು ಬಂದು ಇಲ್ಲಿ ಎಲ್ಲವನ್ನೂ ಸರಿಪಡಿಸಿ ಹೋದೆವು. ನಿಮ್ಮ ಪಿಎಫ್ ಹಣ ಖಾತೆಯಲ್ಲೇ ಇರಲಿ. ನಮ್ಮನ್ನು ಬಡತನದಲ್ಲಿ ಓದಿಸಿದಿರಿ, ಬೆಳೆಸಿದಿರಿ. ನಾವು ಈಗ ಸದೃಢರಾಗಿದ್ದೇವೆ, ನಮ್ಮ ಮಕ್ಕಳನ್ನು ನಿಮ್ಮಲ್ಲಿಯೇ ಬಿಟ್ಟು ಹೋಗುತ್ತೇವೆ. ಅವರು ನಿಮ್ಮ ಅಡಿಯಲ್ಲಿ ಬೆಳೆದರೆ ನಮ್ಮ ಸಂಸ್ಕೃತಿ ಸಂಪ್ರದಾಯಗಳು ಅವರಿಗೂ ತಿಳಿಯುತ್ತದೆ. ಅಮ್ಮನನ್ನು ಚೆನ್ನಾಗಿ ನೋಡಿಕೊಳ್ಳಿ ನಿಮ್ಮ ಆರೋಗ್ಯದ ಕಡೆ ಗಮನ ಕೊಡಿ. ಮೊಮ್ಮಕ್ಕಳನ್ನು ಓದಿಸಿ ಕೆಲಸಕ್ಕೆಂದು ಆಳು ಇದ್ದಾನೆ. ಪ್ರತಿ ತಿಂಗಳು ಅವನ ಸಂಬಳವನ್ನು ಅವನ ಖಾತೆಗೆ ತುಂಬುತ್ತೇವೆ. ನಮ್ಮ ಮನೆಯ ಪಕ್ಕದಲ್ಲೇ ಅವನಿಗೂ ವಾಸ್ತವ್ಯವಿದೆ. ವರ್ಷಕ್ಕೊಮ್ಮೆ ತಪ್ಪದೆ ಬಂದುಹೋಗುತ್ತೇವೆ, ಎಂದು ಹೇಳುವಷ್ಟರಲ್ಲಿ ಅಪ್ಪನ ಕಣ್ಣಾಲಿಗಳು ತುಂಬಿ, ಮೂಕಪ್ರೇಕ್ಷಕರಾಗಿ ಬಿಟ್ಟರು. ಪ್ರತಿಮನೆಯ ಮಕ್ಕಳೂ ಇದೇ ತರಹ ನಡೆದುಕೊಂಡರೆ ಸಮಾಜದಲ್ಲಿ ವೃದ್ಧಾಶ್ರಮಗಳ ಅಗತ್ಯವೇ ಉದ್ಭವಿಸುವುದಿಲ್ಲ. ಇಂತಹ ಕಥೆಗಳನ್ನು ನಾವು ನಮ್ಮ ಮಕ್ಕಳಿಗೆ ಹೇಳಿದಾಗ ಅವರಲ್ಲಿ ಸದ್ಭಾವನೆ ಮೂಡುತ್ತದೆ. ಎಲ್ಲ ಮಕ್ಕಳು ಕೆಟ್ಟವರಾಗಿರುವುದಿಲ್ಲ, ನಾವು ಕೊಟ್ಟ ಸಂಸ್ಕಾರ ನಮ್ಮ ಮಕ್ಕಳನ್ನ ಒಳ್ಳೆಯ ದಾರಿಯಲ್ಲಿ ನಡೆಯುವಂತೆ ಪ್ರೇರೇಪಿಸುತ್ತದೆ.

## ಪ ದ ಬಂ ಧ



**ಎಡದಿಂದ ಬಲಕ್ಕೆ:**

1. ವಿಘ್ನ ನಾಶಕ ಗಣೇಶ (4)
3. ಪಂಜು ಅಥವಾ ದೊಂದಿಗೆ ಹೀಗೆನ್ನಬಹುದು (4)
5. ಆಲಾಪವಲ್ಲ, ಅಳುವಿಕೆ (3)
7. ಮೃತ್ಯುದೇವತೆಯಿಂದ ಆರಂಭವಾದ ಜೋಡಿ (3)
9. ಮತ್ತೊಂದು ಹಸುವನ್ನು ಕಟ್ಟಿಕೊಂಡಿರುವ ಮನೆ (3)
10. ಅಲೆಯುವವನು ಅಥವಾ ನೀಚ ಎಂದರ್ಥ (2)
11. ತಿರುಗಿ ಬಂದಿರುವ ಮಹಿಳೆ (2)
12. ಕೊಳೆಯಿಲ್ಲದೆ ಶುದ್ಧವಾದದ್ದು (3)
14. ಪ್ರತಿದಿನ ಬರುವ ಸೂರ್ಯ (3)
16. ಮೇಲೆ ನೀಲಿಯಾಗಿ ಕಂಡ ಬಾನು (3)
18. ಪಕ್ಕದಲ್ಲಿರುವ ಗೃಹ (4)
19. ಕಡೆಗಣಿಸುವಿಕೆ ಹೀಗೆ ಬಂದಿದೆ (4)

**ಎಡದಿಂದ ಬಲಕ್ಕೆ:**

1. ಒಂದು ಪದಾರ್ಥಕ್ಕೆ ಬದಲಾಗಿ ಮತ್ತೊಂದನ್ನು ಕೊಡುವಿಕೆ (4)
2. ಪದ್ಯ ರಚಿಸಿದಾತ (2)
3. ಬೆಳಕನ್ನುಂಟುಮಾಡುವ ಸಾಧನ (2)
4. ಎಳೆತನದಿಂದಲೇ ಬಂದಿರುವ ಮಿತ್ರತ್ವ (4)
6. ಅತಿಯಾದ ಆಸೆ (3)
8. ಕೆನ್ನೆಗೆ ಇನ್ನೊಂದು ಹೆಸರು (3)
9. ಅಪ್ಪಣ್ಣ ನುಡಿಸುವ ವಾದ್ಯ (3)
12. ವೇದನೆಯಿಲ್ಲದೆ ಮಾಡಿಕೊಂಡ ಅರಿಕೆ (4)
13. ಗುಂಪು ಎನ್ನುವುದನ್ನು ಹೀಗೆಯೂ ಹೇಳಬಹುದು (3)
15. ಕಳೆದುಹೋದದ್ದನ್ನು ಹುಡುಕಿ ಕೊಡುವವನು (4)
16. ದೊಡ್ಡದಾದ ದೇಹ ಹೊಂದಿರುವ ಕರಿ (2)
17. ಹೆಂಡತಿ, ಪತಿವ್ರತೆ (2)

**ನಿನ್ನೆಯ ಉತ್ತರ**

**ಎಡದಿಂದ ಬಲಕ್ಕೆ:** 1. ಜಾಹೀರಾತು 2. ಗೋವರ್ಧನ 5. ಸುಗತ 7. ಸಮರ 9. ಮನುಜ 11. ಪ್ರಕಾಶಕ 12. ವಾಸುದೇವ 13. ರಸನ 15. ಹಸುಳೆ 16. ಹರುಷ 18. ಗೆಳೆತನ 19. ದಸಕತ್ತು

**ಮೇಲಿನಿಂದ ಕೆಳಕ್ಕೆ:** 1. ಜಾಡಿಸು 3. ನಗರ 4. ಕಮಾನು 6. ಗತಿಕಾಣಿಸು 8. ಮನೆದೇವರು 9. ಮಕರ 10. ಜವಾನ 14. ಸಪ್ತಾಹ 15. ಹಣೆಗೆ 17. ಷರತ್ತು

● ಸಿ. ರವಿಶಂಕರ ಶಾಸ್ತ್ರಿ, ದಂಬೆ

## ದಿನಕ್ಕೊಂದು ಮಾಹಿತಿ

### ವಿಶ್ವದ ಅತಿ ದೊಡ್ಡ ಜಲಪಾತ



ಆಫ್ರಿಕಾದ ದಕ್ಷಿಣ ಭಾಗದಲ್ಲಿ ಜಿಂಬಾಬ್ವೆ ಮತ್ತು ಜಾಂಬಿಯ ದೇಶಗಳ ಗಡಿಯಲ್ಲಿರುವ ಜಾಂಬೆಜಿ ನದಿಯ ವಿಕ್ಟೋರಿಯಾ ಜಲಪಾತ ವಿಶ್ವದಲ್ಲೇ ಅತಿ ದೊಡ್ಡ ಜಲಪಾತ ಎಂದು ಹೆಸರಾಗಿದೆ. ಈ ಜಲಪಾತವನ್ನು ಸ್ಥಳೀಯವಾಗಿ ಗರ್ಜಿಸುವ ಹೊಗೆ ಎಂದು ಕರೆಯಲಾಗುತ್ತದೆ. ವಿಶಾಲ ಗೋಡೆಯಂತೆ ಧುಮುಕುವ ಜಲಧಾರೆಯ ಕೆಲ ಭಾಗವು ನೆಲವನ್ನು ತಲುಪುವಷ್ಟರೊಳಗೆ ತುಂತುರು ತುಂತುರಾಗಿ, ಅಡಿಭಾಗದಿಂದ ನೀರಾವಿಯ ಮೋಡಗಳಾಗಿ ಮೇಲೇಳುವುದರಿಂದ ಈ ಹೆಸರು ಬಂದಿದೆ. ಸ್ಕಾಟ್ಲೆಂಡ್‌ನ ಅನ್ವೇಷಕ ಡೇವಿಡ್ ಲಿವಿಂಗ್‌ಸ್ಟನ್ ಈ ಜಲಪಾತಕ್ಕೆ ವಿಕ್ಟೋರಿಯಾ ಜಲಪಾತ ಎಂಬ ಹೆಸರನ್ನಿಟ್ಟರು. ಆದರೆ ಜಿಂಬಾಬ್ವೆ ದೇಶದಲ್ಲಿ ಇದು ಡೇವಿಡ್ ಲಿವಿಂಗ್‌ಸ್ಟನ್ ಜಲಪಾತವೆಂದೇ ಕರೆಯಾಗುತ್ತದೆ.

## ಪುಸ್ತಕ ಲೋಕ

### ಕಥನಾವಕಾಶ




ಲೇಖಕ ಚಿದಾನಂದ ಸಾಲಿಯವರು ವಿವಿಧ ಭಾಷೆಗಳಿಂದ ಆಯ್ದು ಅನುವಾದಿಸಿದ ಕತೆಗಳ ಸಂಕಲನ ಇದು. ಈ ಸಂಕಲನದಲ್ಲಿ ಸಾಲಿಯವರು ರವೀಂದ್ರನಾಥ ಟ್ಯಾಗೋರ್, ಗುಡಿಪಾಟಿ ವೆಂಕಟಾಚಲಂ, ಅರ್ನೆಸ್ಟ್ ಹೆಮಿಂಗ್ವೆ, ಹರ್ನಾಂಡೋ ಟೆಲ್ಲೆಝ್, ಕರ್ತಾರ್‌ಸಿಂಗ್ ದುಗ್ಗಲ್, ದೇವರಕೊಂಡ, ಬಾಲಗಂಗಾಧರ ತಿಲಕ್, ಕಾಳಿಪಟ್ನಂ ರಾಮಾರಾವು, ಪೌಲ್ ಝಕಾರಿಯಾ, ಮಹೆಜಬಿನ್, ಮಹಮ್ಮದ್ ಖದೀರ್ ಬಾಬು, ಎಂಡ್ಲೂರಿ ಮಾನಸ ಅವರ ಕತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇಲ್ಲಿನ ಪ್ರತಿಯೊಂದು ಕಥೆಯ ವಸ್ತು ಮತ್ತು ಆಶಯಗಳು ಮೂಲಲೇಖಕರ ಶೈಲಿಗೆ ಧಕ್ಕೆಯಾಗದಂತೆ, ಕನ್ನಡಕ್ಕೆ ಅನುವಾದಗೊಂಡಿವೆ.

## ಟ್ವೀಟ್‌ಮೆಂಟ್

**ಇಶಿತಾ ಪಾಂಡೆ:** ಗೊತ್ತಿರದ ಅಭಿಪ್ರಾಯ; ಮಿಲ್ಲೇನಿಯಲ್ಸ್‌ಗಿಂತ ಜಾಸ್ತಿ. ಇಂದಿನ ಜೆನ್ ಝಿಗಳು ಧರ್ಮ ಮತ್ತು ಸಂಸ್ಕೃತಿಯಡೆಗೆ ಒಲವು ತೋರಿಸುತ್ತಿದ್ದಾರೆ.

**ವಿಟಲೈಟಿ ವೈಟಲ್ ಹಬ್:** ಜೈ ಶ್ರೀರಾಂ ಅನ್ನುವುದು ಧರ್ಮಾಧಾರಿತವಲ್ಲ!

## ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಆರ್.ವೈಶಾಲಿ ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

- ಎ. ಚೆಸ್.
- ಬಿ. ಸ್ನೂಕರ್.
- ಸಿ. ಬಾಸ್ಕೆಟ್ ಬಾಲ್.
- ಸಿ. ಕ್ರಿಕೆಟ್.

ಉತ್ತರ: ಎ. ಚೆಸ್.

**ಮಾಹಿತಿ**

ಡಿಸೆಂಬರ್ 1, 2023 ರಂದು, ಆರ್. ವೈಶಾಲಿ ಭಾರತದ ಮೂರನೇ ಮಹಿಳಾ ಚೆಸ್ ಗ್ರ್ಯಾಂಡ್ ಮಾಸ್ಟರ್ ಆದರು. ಅವರು ಭಾರತದ 84ನೇ ಗ್ರ್ಯಾಂಡ್ ಮಾಸ್ಟರ್ ಕೂಡ ಆಗಿದ್ದಾರೆ. 22 ವರ್ಷದ ಈ ಆರ್. ವೈಶಾಲಿ, ಭಾರತದ ಮಹಿಳಾ ಗ್ರ್ಯಾಂಡ್ ಮಾಸ್ಟರ್‌ಗಳಾದ ಕೊನೇರು ಹಂಪಿ ಮತ್ತು ಡಿ.ಹರಿಕಾ ಅವರ ಸಾಲಿಗೆ ಸೇರಿದರು. ಕೊನೇರು ಹಂಪಿ 2002 ರಲ್ಲಿ 15 ನೇ ವಯಸ್ಸಿನಲ್ಲಿ ಗ್ರ್ಯಾಂಡ್ ಮಾಸ್ಟರ್ ಆದ ಮೊದಲ ಭಾರತೀಯ ಮಹಿಳೆ.

## ಬೆಳದಿಂಗಳ ಇರುಳು

ಮಂಜುಶ್ರೀ ಮುರಳೀಧರ್

ಪುಟ್ಟ ಕಂದಮ್ಮನ ಅರಳಿದ ಕಂಗಳು
ನೋಡಲು ಬೆಳದಿಂಗಳ ಇರುಳು

ಕೆಲವೊಮ್ಮೆ ಮಗು ಆಟವಾಡುತ ಮಲಗದೆ
ಅಮ್ಮನಿಗೆ ಇರುಳೆಲ್ಲ ಹಗಲು

ಮುದ್ದಿಸಿದವರ ಕೆನ್ನೆ ಕಚ್ಚುವ
ಪುಟ್ಟ ಮುತ್ತಿನ ಹರಳು

ಮುದ್ದು ಮಗುವಿನ ತೊದಲು ನುಡಿ
ಉರಿದಂತೆ ಜೋಳದ ಅರಳು

ಸಮಯವೇ ಸಾಕಾಗುತ್ತಿಲ್ಲ ಅಮ್ಮನಿಗೆ
ನಿನ್ನ ಮುದ್ದಾಡಲು, ನೀ ಎನ್ನ ಪ್ರೀತಿಯ ಕಡಲು

ನೀ ಮಲಗಿರಲು ಹಗಲು ಸಹ ಇರುಳು
ನಿನ್ನ ನಗುವಿನಲ್ಲಿ ಕತ್ತಲೆಯ ಇರುಳಿನಲೊಂದು
ಬೆಳದಿಂಗಳು

# ಅಪರೂಪವಾಗುತ್ತಿರುವ ಎತ್ತಿನಬಂಡಿ

ಲೀಲಾವತಿ ವಿಜಯಕುಮಾರ

ಬಂಡಿ ಎಂದರೆ ಸಾಕು, ನೊಗ ಕಟ್ಟಿದ, ಎತ್ತಿನ ಕೊರಳಿಗೆ ಗೆಜ್ಜೆ ಕಟ್ಟಿದ ಬಂಡಿಗಳೇ ಕಣ್ಮುಂದೆ ನಿಲ್ಲುವುದು. ಚಕ್ರ ಕಂಡುಹಿಡಿದ ನಂತರ, ಬಹು ಹಿಂದಿನಿಂದಲೂ ಎತ್ತಿನ ಬಂಡಿಯೇ, ಪಟ್ಟಣ ಪ್ರದೇಶ, ಹಳ್ಳಿಗಳ ನಾಡಿಯಾಗಿ ಪ್ರಯಾಣಕ್ಕೆ, ಸರಕು ಸಾಗಾಣಿಕೆಗೆ, ಮೇವು ತರಲು, ಬೆಳೆದ ಬೆಳೆ, ತರಕಾರಿಗಳ ರವಾನೆಗೆ ಬೇಕಾದ ಬದುಕಿನ ಬಂಡಿಯಾಗಿತ್ತು. ಊರಿಂದ ಊರಿಗೆ ಹೋಗಲು, ಜಾತ್ರೆಗೆ ಹೋಗಲು ಸವಾರಿ ಬಂಡಿಯಾಗಿತ್ತು. ಮನೆಯವರೆಲ್ಲಾ ಸೇರಿ ತೋಟ, ಹೊಳೆ ಹತ್ತಿರ ಊಟಕ್ಕೆ ಹೋದಾಗ ಕರೆದೊಯ್ಯಲು ಎತ್ತಿನಬಂಡಿ ಜತೆಯಾಗುತ್ತಿತ್ತು. ಕೃಷಿ ಉತ್ಪನ್ನಗಳನ್ನು ಸಾಗಿಸಲು, ಕೃಷಿಕರ ನಿತ್ಯದ ಹೊಲ-ಮನೆ ಓಡಾಟಕ್ಕೆ ಬಹುಮುಖ್ಯವಾಗಿ ಬೇಕಾಗಿತ್ತು. ಕೃಷಿ ಉಪಕರಣಗಳಲ್ಲಿ ಬಹುಮುಖ್ಯವಾಗಿ, ಪ್ರತಿಯೊಬ್ಬರ ಮನೆಯಂಗಳ, ಹಿತ್ತಲಲ್ಲಿ ಒಂದೆರಡು ಬಂಡಿಗಳು ಇದ್ದೇ ಇರುತ್ತಿದ್ದವು. ಹಿರಿಯರು ಹಿಂದೆಲ್ಲ, ಒಂದು ಎತ್ತಿನಿಂದ ಬಂಡಿ ಕಟ್ಟಲು ಆಗದು ಎನ್ನುವಂತೆ, ಒಂಟಿ ಎತ್ತು, ಎತ್ತಲ್ಲ, ಎನ್ನುವ ಒಳಾರ್ಥದ ನಾಣ್ನುಡಿ ಬಳಸುತ್ತಿದ್ದರು. ಇದರರ್ಥ, ಒಂದಕ್ಕಿಂತ ಜೊತೆಯಾಗಿದ್ದರೆ ಬಲ ಜಾಸ್ತಿ, ಯಾರು ಬೇರ್ಪಡಿಸಲಾಗದು, ಎರಡಿದ್ದರೆ ಭಾರ ಹಂಚಿಕೆಯಾಗುವುದು ಎನ್ನುವ ಸೂಕ್ಷ್ಮ ಅರ್ಥದಲ್ಲಿ, ಎರಡ್ಮೂರು ಜೋಡಿ ಎತ್ತುಗಳು ಕೊಟ್ಟಿಗೆಯಲ್ಲಿ ಇದ್ದೆ ಇರುತ್ತಿದ್ದವು. ಆದರೀಗ ಭೂಮಿಯ ಕಡಿಮೆ ಹಿಡುವಳಿಯಲ್ಲಿ ಲಕ್ಷ್ಯಾಂತರ ರುಪಾಯಿ ಬೆಲೆಬಾಳುವ ಎತ್ತುಗಳನ್ನು ಮತ್ತೆ ಖರೀದಿಸಲು ಎಲ್ಲರಿಗೂ ಸಾಧ್ಯವಿಲ್ಲ. ಹಾಗಾಗಿ ಬದಲಾದ ಕಾಲಮಾನದಲ್ಲಿ, ಅನುಕೂಲವಾಗಿರುವ ಪರ್ಯಾಯ ವಾಹನದ ಜೊತೆ, ಮನೆಯಲ್ಲಿ ಒಂದು ಎತ್ತಿನ ಬಂಡಿ ಇದ್ದರೆ ಅದೇ, ಬಹುದೊಡ್ಡ ಬಳುವಳಿ, ಹೆಮ್ಮೆ ಅಲ್ಲವೇ! ಆದರೆ ಕೆಲವರ ಮನೆಯಲ್ಲಿ ಬಂಡಿಗಳಿದ್ದ ಕುರುಹುಗಳು ಇಲ್ಲ.

ಈಗ ಬಂಡಿ ಓಡಾಟ ಕಡಿಮೆಯಾಗಿದೆ ಎನಿಸಿದರು, ಹಲವು ವರ್ಷಗಳ ಹಿಂದೆ, ಪ್ರತಿ ಮನೆಯಲ್ಲಿ, ಬಂಡಿ ಕಟ್ಟಿಕೊಂಡು ಹೊಲ-ಗದ್ದೆಗೆ ಹೋಗುತ್ತಿದ್ದರು. ಮುಂಜಾನೆ- ಮುತ್ಸಂಜೆ ಹೊತ್ತು ಹಳ್ಳಿಗಳಲ್ಲಿ, ಎತ್ತಿನ ಬಂಡಿಗಳ ಓಡಾಟ ಸಾಮಾನ್ಯ ದೃಶ್ಯವೇ ಆಗಿತ್ತು. ಈಗ ಬಂಡಿ ಇದ್ದರೂ, ಹೊಲದ ದಾರಿಯಲ್ಲಿ ಓಡಾಡಲು ಇದೇ ಸೂಕ್ತವಾದರೂ, ವೇಗದ ಕಾಲಮಾನಕ್ಕೆ ತಕ್ಕಂತೆ ಕೆಲವು ಸಲ 'ಬಂಡಿ ಕಟ್ಟುವುದಿಲ್ಲ'. ಆ ಜಾಗವನ್ನು ಟ್ರ್ಯಾಕ್ಟರ್ ಇನ್ನಿತರೇ ವಾಹನಗಳು ಆವರಿಸಿ, ವೇಗದ ಜಗತ್ತಿನಲ್ಲಿ ಕೃಷಿಯ ಅನುಕೂಲತೆಗೆ, ಅನಿವಾರ್ಯವಾಗುವುದನ್ನು ಅಲ್ಲಗಳೆಯುವಂತಿಲ್ಲ.

ಈಗೀಗ ಬಂಡಿ ಸವಾರಿ ಕಡಿಮೆ ಎನ್ನಬಹುದು. ಸಾಂದರ್ಭಿಕವಾಗಿ ಕೆಲವು ಜಾತ್ರೆಯ ನಿಯಮದಂತೆ, ಜಾತ್ರೆಗಳಲ್ಲಿ ಬಂಡಿ ಕಟ್ಟುವುದು ಬಿಟ್ಟರೆ, ಎತ್ತಿನ ಬಂಡಿ ಸವಾರಿ ಅಪರೂಪವಾಗುತ್ತಿವೆ. ನಮ್ಮ ಭಾಗದಲ್ಲಿ ಕೊಟ್ಟೂರು ರಥೋತ್ಸವ, ಮೈಲಾರ ಕಾರ್ಣಿಕದ ಸಮಯ, ಕುರುವತ್ತಿ, ನಂದಿಪುರದ ದೊಡ್ಡ ಬಸವೇಶ್ವರರ ತೇರಿನ ಸಮಯ, ತಂಬ್ರಹಳ್ಳಿಯ ಬಂಡೇ ರಂಗನಾಥನ ತೇರಿನ ಸಮಯ, ಎತ್ತಿನ ಬಂಡಿಗಳ ಅಲಂಕಾರದ ಸ್ಪರ್ಧೆಯೇ ನಡೆಯುವುದು. ಅಲಂಕೃತಗೊಂಡು, ಸಾಲಾಗಿ ಉತ್ಸಾಹದಿಂದ ತೇರಿಗೆ ಬರುವ ಎತ್ತಿನ ಬಂಡೆಗಳನ್ನು ನೋಡುವುದೇ ಚಂದ. ಇದೇ ಅಲ್ಲವೇ ನಮ್ಮ ಊರುಗಳ ಅಂದದ ಸಂಪ್ರದಾಯ ಎನಿಸುವುದು!

'ಎತ್ತಿನ ಬಂಡಿ' ಕೇವಲ ವಸ್ತುಗಳ ಸಾಗಾಣಿಕೆ, ಪ್ರಯಾಣದ ದೃಷ್ಟಿಯಿಂದ ಮಾತ್ರ ನೋಡುವುದಲ್ಲ. ಅದು ಹಳ್ಳಿ ಸಂಸ್ಕೃತಿ, ಕೃಷಿ ಸಂಸ್ಕೃತಿಯೇ ಆಗಿದೆ. ಕಾರಣ ಅಮವಾಸ್ಯೆ, ಹಬ್ಬ-ಹರಿದಿನಗಳು, ದೊಡ್ಡ ಹಬ್ಬಗಳಲ್ಲಿ, ಸೋಮವಾರಗಳಲ್ಲಿ ಬಸವಣ್ಣನ ವಾರವೆಂದು ಎತ್ತು-ಬಂಡಿಗೆ ಪೂಜೆ ಮಾಡಿ, ಅಂದು ಕೃಷಿ ಕೆಲಸದಿಂದ ವಿಶ್ರಾಂತಿ ನೀಡುವರು. ಎತ್ತುಗಳು ಕಲ್ಲು, ಹರಳು, ಮಣ್ಣಿನ ಹೆಂಟೆ, ಮುಳ್ಳು ತುಳಿದರೆ ಅಪಾಯವಾಗಬಾರದೆಂಬ ದೃಷ್ಟಿಯಿಂದ, ವರ್ಷಕ್ಕೊಮ್ಮೆ ಸೇಫ್ಟಿ ಶೂಗಳಂತೆ ನಾಲು ಹಾಕಿಸುವರು. ಇದು ಮೂಕ ಪ್ರಾಣಿಗಳಿಗೆ ರೈತರು ನೀಡುವ ಕಾಳಜಿ. ಊರಿನ ತೇರು, ಸಂಕ್ರಾಂತಿ, ಕಾರಹುಣ್ಣಿಮೆ, ಬಸವ ಜಯಂತಿಗಳಲ್ಲಿ ಬಂಡಿ-ಎತ್ತುಗಳನ್ನು ಅಲಂಕರಿಸಿ, ಊರ ತುಂಬಾ ಮೆರೆಸುವರು. ಜಾನಪದರ ಹಬ್ಬಗಳೇ ಆದ ಇವು, ಕೃಷಿಕರ ಆಯಾಸ ಮರೆಸಿ ನವ ಚೈತನ್ಯ ಒದಗಿಸುತ್ತವೆ.

ಅದರಂತೆ ಹಲವರ ಬದುಕಿಗೆ, ಎತ್ತಿನ ಬಂಡಿ ಆಧಾರವಾಗಿತ್ತು ಎಂಬುದನ್ನು ಅಲ್ಲಗಳೆಯಲಾಗದು. ಕಾರಣ, ಮೊದಲು ಎತ್ತಿನ ಬಂಡಿ ಸಂಪೂರ್ಣವಾಗಿ ಮರದಿಂದಲೇ ಮಾಡುತ್ತಿದ್ದರು. ಅದನ್ನು ಪ್ರಮಾಣ ಬದ್ಧವಾಗಿ ಬಡಗಿತನದವರು ತಯಾರಿಸಬೇಕಿತ್ತು. ಜೊತೆಗೆ ಕಬ್ಬಿಣದ ಕೀಲು,ಎರಡೂ ಗಾಲಿಗಳನ್ನು ಜೋಡಿಸುವ 'ಬಂಡಿಅಚ್ಚು', ಚಕ್ರಕ್ಕೆ ಹಾಕುತ್ತಿದ್ದ ಕಬ್ಬಿಣ 'ಬಂಡಿಹಳಿ' ಕಮ್ಮಾರಿಕೆಯಿಂದ ತಯಾರಾಗುತ್ತಿತ್ತು. ಒಟ್ಟಾರೆ ದೃಷ್ಟಿಯಿಂದ ನೋಡಿದರೆ, ಹಳ್ಳಿಯ ಕೃಷಿ ಬದುಕಿನೊಂದಿಗೆ, ಉಳಿದ ಕುಲ ಕಸುಬುಗಳು ಜೊತೆ ಜೊತೆಯಾಗಿ ಸಾಗುತ್ತಿತ್ತು. ಈಗ ಬಿಡಿ, ಎತ್ತಿನ ಬಂಡಿಗಳನ್ನು ಕಾಣಲೇ ಸಾಧ್ಯವಿಲ್ಲ. ಬಂಡಿ ಎತ್ತರ ಕಡಿಮೆಯಾಗಿ, ಆಕಾರ ಬದಲಾಗಿ, ಬಂಡಿ ಗಾಲಿಗಳು ಬಸ್ ಗಾಲಿಗಳಂತೆ ಚಿಕ್ಕದಾಗಿ, ಅಂತಹುದೇ ಗಾಳಿ ತುಂಬಿಸುವ ಚಕ್ರ ಬಂದು, ಟೈರ್ ಬಂಡಿ ಎನಿಸಿವೆ. ರೈತರ ಜೇಬಿಗೂ ಭಾರ, ತನ್ನೊಡೆಯನಿಗೆ ಹೆಗಲಾದ ಎತ್ತಿಗಳಿಗೂ ಭಾರ ಎಂಬಂತಾಗಿದೆ. ಮೂಲ ಎತ್ತಿನ ಚಕ್ರಗಳು ಗಾಲಿ ಕಳಚಿ ಮೂಲೆಯಲ್ಲಿ ಓರೆಯಾಗಿ ನಿಂತಿವೆ. ಬಂಡಿಗಳ ಗಾಲಿಗಳು, ಹೆರಿಟೇಜ್ ಸಿಟಿಗಳಲ್ಲಿ, ರೆಸಾರ್ಟ್‌ಗಳಲ್ಲಿ, ವಸ್ತು ಸಂಗ್ರಹಾಲಯಗಳಲ್ಲಿ ಅಲಂಕಾರಿಕ ವಸ್ತುಗಳಾಗಿವೆ. ಕಲಾತ್ಮಕ ಮನೆ-ಕಟ್ಟಡಗಳ ಗೇಟ್ ಗಳಾಗಿವೆ, ಆ್ಯಂಟಿಕ್ ಪೀಸ್ ಗಳಾಗಿ ಹೊಸ ರೂಪ ಪಡೆದಿವೆ.

## ಸಮಾಚಾರ ಸಣ್ಣದಲ್ಲ

### ಜೀವಶಾಸ್ತ್ರ ಒಲಿಂಪಿಯಾಡ್: ಭಾರತಕ್ಕೆ ಮೂರು ಪದಕ

**ಮುಂಬೈ:** ಕಜಕಿಸ್ತಾನದ ರಾಜಧಾನಿ ಆಸ್ತಾನದಲ್ಲಿ ನಡೆದ 35ನೇ ಅಂತಾರಾಷ್ಟ್ರೀಯ ಜೀವಶಾಸ್ತ್ರ ಒಲಿಂಪಿಯಾಡ್‌ನಲ್ಲಿ ಭಾರತಕ್ಕೆ ಒಂದು ಚಿನ್ನ ಮತ್ತು 2 ಬೆಳ್ಳಿ ಪದಕಗಳು ಲಭಿಸಿವೆ. ಮುಂಬೈನ ವೇದಾಂತ್ ಸಕ್ರೆ ಅವರು ಚಿನ್ನದ ಪದಕ ಪಡೆದಿದ್ದು, ರತ್ನಗಿರಿಯ ಇಶಾನ್ ಪೆಡ್ನೇಕರ್, ಚೆನ್ನೈನ ಶ್ರೀಜಿತ್ ಶಿವಕುಮಾರ್ ಮತ್ತು ಬರೇಲಿಯ ಯಶಸ್ವಿಕುಮಾರ್ ಅವರು ರಜತ ಪದಕ ಗಳಿಸಿದ್ದಾರೆ. ಜುಲೈ 7ರಿಂದ 13ರವರೆಗೆ ನಡೆದ ಒಲಿಂಪಿಯಾಡ್ನಲ್ಲಿ ಭಾರತಕ್ಕೆ ಪ್ರಶಸ್ತಿ ದೊರಕಿರುವ ಬಗ್ಗೆ ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಸಂಸ್ಥೆಯಡಿ ಕಾರ್ಯನಿರ್ವಹಿಸುವ ಹೋಮಿ ಭಾಭಾ ವಿಜ್ಞಾನ ಅಧ್ಯಯನ ಕೇಂದ್ರ ಮಾಹಿತಿ ನೀಡಿದೆ. ಐಬಿಒ 2024ರಲ್ಲಿ ಜೀವಶಾಸ್ತ್ರಕ್ಕೆ ಸಂಬಂಧಿಸಿದ 1:05 ಗಂಟೆಗಳ ಪ್ರಾಯೋಗಿಕ ಪರೀಕ್ಷೆ ಮತ್ತು ಸಂಶೋಧನಾ ಪ್ರಬಂಧಗಳ ಆಧರಿತ ಮೂರೂಕಾಲು ಗಂಟೆಗಳ ಲಿಖಿತ ಪರೀಕ್ಷೆಯನ್ನು ನಡೆಸಲಾಗಿತ್ತು.

### ಅಂಶುಮನ್‌ಗೆ ಬಿಸಿಸಿಐ ಒಂದು ಕೋಟಿ ರು. ನೆರವು

**ಬೆಂಗಳೂರು:** ರಕ್ತದ ಕ್ಯಾನ್ಸರ್ ವಿರುದ್ಧ ಹೋರಾಡುತ್ತಿರುವ ಹಿರಿಯ ಕ್ರಿಕೆಟಿಗ ಅಂಶುಮಾನ್ ಗಾಯಕ್ವಾಡ್ ಅವರಿಗೆ ಆರ್ಥಿಕ ನೆರವು ಕೊಡಲು ತಕ್ಷಣ ಒಂದು ಕೋಟಿ ರು.ಗಳನ್ನು ಬಿಡುಗಡೆ ಮಾಡುವಂತೆ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಸೂಚನೆ ನೀಡಿದ್ದಾರೆ. ಕಳೆದ ಒಂದು ವರ್ಷದಿಂದ ತಮ್ಮ ಅನಾರೋಗ್ಯದ ವಿರುದ್ಧ ಹೋರಾಡುತ್ತಿರುವ 71 ವರ್ಷದ ಅವರಿಗೆ ಇದು ಭರವಸೆಯಾಗಿದೆ. 1983ರ ವಿಶ್ವಕಪ್ ವಿಜೇತ ನಾಯಕ ಕಪಿಲ್ ದೇವ್ ಕೂಡ ಗಾಯಕ್ವಾಡ್ ಅವರ ಚಿಕಿತ್ಸೆಗೆ ಸಹಾಯ ಮಾಡಲು ತಮ್ಮ ಪಿಂಚಣಿ ದಾನ ಮಾಡಲು ನಿರ್ಧರಿಸಿರುವುದಾಗಿ ಹೇಳಿದ್ದರು. ಮಾಜಿ ಆಟಗಾರರಿಗೆ ಸಹಾಯ ಮಾಡಬೇಕು ಎಂದು ಅವರು ಒತ್ತಾಯಿಸಿದ್ದರು. ಪರಿಸ್ಥಿತಿಯನ್ನು ಅವಲೋಕಿಸಿದ ಜಯ್ ಶಾ ವೈಯಕ್ತಿಕವಾಗಿ ಗಾಯಕ್ವಾಡ್ ಅವರ ಕುಟುಂಬದ ಜತೆ ಮಾತನಾಡಿದ್ದಾರೆ. ನೆರವಿನ ಭರವಸೆ ನೀಡಿದ್ದಾರೆ. ಗಾಯಕ್ವಾಡ್ ಅವರ ಕ್ರಿಕೆಟ್ ಪ್ರಯಾಣವು ಗಮನಾರ್ಹ ಸಾಧನೆಗಳಲ್ಲಿ ಒಂದಾಗಿದೆ. ಈ ಬಗ್ಗೆ ಮಾಜಿ ಕ್ರಿಕೆಟಿಗ ದಿಲೀಪ್ ವೆಂಗ್‌ಸರ್ಕಾರ್ ಈ ಹಿಂದೆ ಬಿಸಿಸಿಐ ಖಜಾಂಚಿ ಆಶಿಶ್ ಶೆಲಾರ್ ಅವರೊಂದಿಗೆ ಮಾತನಾಡಿದ್ದರು

ಪ್ರತಿ ಶುಕ್ರವಾರ
ಸಿನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್

# ಜಿಂಬಾಂಬ್ವೆ ಸರಣಿ: ಭಾರತದ ವಶ

## ಸರಣಿಯ 5 ಪಂದ್ಯಗಳಲ್ಲಿ ನಾಲ್ಕನ್ನು ಗೆದ್ದ ಭಾರತ | ಕೈಹಿಡಿದ ಸಂಜು ಸ್ಯಾಮ್ಸನ್ ಸ್ಫೋಟಕ ಬ್ಯಾಟಿಂಗ್

**ಹರಾರೆ:** ಸಂಜು ಸ್ಯಾಮ್ಸನ್ (55) ಬಾರಿಸಿದ ಅಮೋಘ ಅರ್ಧ ಶತಕ ಹಾಗೂ ಮುಕೇಶ್ ಕುಮಾರ್ ಅವರ 4 ವಿಕೆಟ್ ಸಾಧನೆಯೊಂದಿಗೆ ಮಿಂಚಿದ ಭಾರತ ತಂಡ ಆತಿಥೇಯ ಜಿಂಬಾಬ್ವೆ ವಿರುದ್ಧದ ಟಿ20 ಸರಣಿಯ ಐದನೇ ಪಂದ್ಯದಲ್ಲೂ ವಿಜಯ ಸಾಧಿಸಿದೆ. ಇದರೊಂದಿಗೆ ಭಾರತ ತಂಡ ಸರಣಿಯನ್ನು 4-1 ಅಂತರದಿಂದ ತನ್ನದಾಗಿಸಿಕೊಂಡಿದೆ. ಆರಂಭಿಕ ಪಂದ್ಯದಲ್ಲಿ ಅಚ್ಚರಿಯ ಸೋಲನ್ನು ಕಂಡ ಕಾರಣ ಕ್ಲೀನ್ ಸ್ವೀಪ್ ಮಾಡುವ ಅವಕಾಶವನ್ನು ಶುಬ್‌ಮನ್ ಗಿಲ್ ನೇತೃತ್ವದ ಬಳಗ ಕಳೆದುಕೊಂಡಿತು. ಆದಾಗ್ಯೂ ಮೊದಲ ನಾಯಕತ್ವದಲ್ಲಿಯೇ ಶುಬ್‌ಮನ್ ಗಿಲ್ ತಮ್ಮ ಸಾಮರ್ಥ್ಯವನ್ನು ಸಾಬೀತಪಡಿಸಿಕೊಂಡಿದ್ದಾರೆ.

ಇಲ್ಲಿನ ಹರಾರೆ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಜಿಂಬಾಬ್ವೆ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಂತೆಯೇ ಮೊದಲು ಬ್ಯಾಟ್ ಮಾಡಿದ ಭಾರತ ತಂಡ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 167 ರನ್ ಬಾರಿಸಿತು. ಪ್ರತಿಯಾಗಿ ಬ್ಯಾಟ್ ಮಾಡಿದ ಜಿಂಬಾಬ್ವೆ 18.3 ಓವರ್‌ಗಳಲ್ಲಿ 125 ರನ್ ಬಾರಿಸಿ ಸೋಲೊಪ್ಪಿಕೊಂಡಿತು.

ಮೊದಲು ಬ್ಯಾಟ್ ಮಾಡಿದ ಭಾರತ ತಂಡ 12 ರನ್‌ಗಳಿಗೆ ಯಶಸ್ವಿ ಜೈಸ್ವಾಲ್ ಔಟಾಗುವ ಮೂಲಕ ಆರಂಭಿಕ ಹಿನ್ನಡೆಗೆ ಒಳಗಾಯಿತು. ಜತೆಗೆ ಶುಭ್‌ಮನ್ ಗಿಲ್ ಕೂಡ 13 ರನ್‌ಗೆ ಸೀಮಿತಗೊಂಡರು. ನಂತರದಲ್ಲಿ ಅಭಿಷೇಕ್ ಶರ್ಮಾ 14 ರನ್‌ಗೆ ಔಟಾಗುವ ಮೂಲಕ 40 ರನ್‌ಗಳಿಗೆ 3 ವಿಕೆಟ್ ನಷ್ಟ ಮಾಡಿಕೊಂಡಿತು. ಆದರೆ ಆ ಬಳಿಕ ಆಡಲು ಬಂದ ಸಂಜು ಸ್ಯಾಮ್ಸನ್ (58) ಹಾಗೂ ರಿಯಾನ್ ಪರಾಗ್ (22) ತಂಡವನ್ನು ಆರಂಭಿಕ ಆಘಾತದಿಂದ ಕಾಪಾಡಿದರು. ಇವರಿಬ್ಬರೂ ಸೇರಿ ತಂಡದ ಮೊತ್ತವನ್ನು 105 ರನ್‌ಗಳಿಗೆ ಕೊಂಡೊಯ್ದರು. ಬಳಿಕ ಶಿವಂ ದುಬೆ 12 ಎಸೆತಕ್ಕೆ 26 ರನ್ ಬಾರಿಸಿ ಮಿಂಚಿದರು. ಅವರು ಅಮೋಘ ಎರಡು ಸಿಕ್ಸರ್ ಹಾಗೂ ಅಷ್ಟೇ ಸಂಖ್ಯೆಯ ಫೋರ್ ಹೊಡೆದರು.

ಸಂಕಷ್ಟದಲ್ಲಿದ್ದ ವೇಳೆ ಬ್ಯಾಟ್ ಮಾಡಲು ಬಂದ ಸಂಜು ಸ್ಯಾಮ್ಸನ್ ನಿಧಾನವಾಗಿ ಇನಿಂಗ್ಸ್ ಕಟ್ಟಿದರು. 39 ಎಸೆತಕ್ಕೆ ಅರ್ಧ ಶತಕ ಬಾರಿಸಿದ ಅವರು 45ಎಸೆತಕ್ಕೆ 58 ರನ್ ಬಾರಿಸಿ ಔಟಾದರು. ಅವರ ಇನಿಂಗ್ಸ್‌ನಲ್ಲಿ 4 ಸಿಕ್ಸರ್ ಹಾಗೂ ಒಂದು ಫೋರ್ ಸೇರಿದ್ದವು. ರಿಂಕು ಸಿಂಗ್ 9 ಎಸೆತಕ್ಕೆ 11 ರನ್ ಬಾರಿಸಿದ್ದಾರೆ.

### ಬೌಲರ್‌ಗಳ ಅಬ್ಬರ

ಭಾರತ ನೀಡಿದ ಸ್ಪರ್ಧಾತ್ಮಕ ಗುರಿಯನ್ನು ಬೆನ್ನಟ್ಟಿದ ಜಿಂಬಾಬ್ವೆ ಶೂನ್ಯಕ್ಕೆ ಔಟಾದರು. 15 ರನ್‌ಗೆ 2 ವಿಕೆಟ್ ಕಳೆದುಕೊಂಡು ಆತಂಕಕ್ಕೆ ಬಿತ್ತು. ಬಳಿಕ ಡಿಯೋನ್ ಮೈರ್ಸ್ 34 ರನ್ ಬಾರಿಸಿ ತಂಡಕ್ಕೆ ಆಧಾರವಾದರು. ಅಲ್ಲದೆ ಕೊನೆಯಲ್ಲಿ ಫರಾಜ್ ಅಕ್ರಮ್ 27 ರನ್ ಬಾರಿಸಿದರು. ಮರುಮಣಿ 27 ರನ್ ಬಾರಿಸಿದ್ದು ಹೊರತುಪಡಿಸಿದರೆ ಜಿಂಬಾಬ್ವೆ ತಂಡದಿಂದ ಹೆಚ್ಚು ಪ್ರತಿರೋಧ ಬರಲಿಲ್ಲ. ಇನ್ನೂ 9 ಎಸೆತಗಳು ಇರುವಂತೆಯೇ ಆಲ್‌ಔಟ್ ಆಯಿತು. ಭಾರತ ಪರ ಬೌಲಿಂಗ್‌ನಲ್ಲಿ ಮುಕೇಶ್ ಕುಮಾರ್ 22 ರನ್‌ಗಳಿಗೆ 4 ವಿಕೆಟ್ ಉರುಳಿಸಿದರೆ ಶಿವಂ ದುಬೆ 2 ವಿಕೆಟ್ ತಮ್ಮದಾಗಿಸಿಕೊಂಡರು.

ಪಾಕ್ ಸೋಲಿಸಿ ಚಾಂಪಿಯನ್ ಆದ ಭಾರತ

# ಲೆಜೆಂಡ್ಸ್ ಕಪ್ ಸಹ ನಮ್ಮದೇ!

**ಬರ್ಮಿಂಗ್‌ಹ್ಯಾಮ್:** ಪಾಕಿಸ್ತಾನ ತಂಡವನ್ನು ಮಣಿಸಿದ ಇಂಡಿಯಾ ಚಾಂಪಿಯನ್ಸ್ ತಂಡ ಉದ್ಘಾಟನಾ ಆವೃತ್ತಿಯ ಲೆಜೆಂಡ್ಸ್ ವಿಶ್ವ ಕಪ್‌ನಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಇದು ಕ್ರಿಕೆಟ್ ದೇಶಗಳ ನಿವೃತ್ತ ಆಟಗಾರರನ್ನು ಒಳಗೊಂಡಿರುವ ಟೂರ್ನಿಯಾಗಿದೆ. ಮೊದಲ ಆವೃತ್ತಿಯಲ್ಲಿ ಗೆದ್ದ ಯುವರಾಜ್ ಸಿಂಗ್ ನೇತೃತ್ವದ ಭಾರತ ತಂಡ 2007ರ ಟಿ20 ವಿಶ್ವ ಕಪ್ ಟೂರ್ನಿಯನ್ನು ನೆನಪಿಸಿದೆ. ಟಿ20 ವಿಶ್ವ ಕಪ್‌ನ ಮೊದಲ ಆವೃತ್ತಿಯಲ್ಲೇ ಧೋನಿ ನೇತೃತ್ವದ ಭಾರತ ತಂಡ ಚಾಂಪಿಯನ್ ಆಗಿತ್ತು. ಅಲ್ಲೂ ಪಾಕಿಸ್ತಾನವನ್ನೇ ಕೊನೇ ಎಸೆತದಲ್ಲಿ ಪಡೆದ ನಾಟಕೀಯ ಫಲಿತಾಂಶದ ಮೂಲಕ ಸೋಲಿಸಿತ್ತು.

ಭಾರತ ಪರ ಬ್ಯಾಟಿಂಗ್‌ನಲ್ಲಿ ಅಂಬಾಟಿ ರಾಯುಡು (50) ಅರ್ಧ ಶತಕ ಬಾರಿಸಿ ಮಿಂಚಿದರೆ ಯೂಸುಫ್ ಪಠಾಣ್ 16 ಎಸೆತಕ್ಕೆ 30 ರನ್ ಬಾರಿಸಿ ಮಿಂಚಿದರು. ಯುವರಾಜ್ ಸಿಂಗ್ 15 ರನ್ ಬಾರಿಸಿದರೆ ಇರ್ಫಾಣ್ ಪಠಾಣ್ 5 ರನ್ ಬಾರಿಸಿದರು. ಬೌಲಿಂಗ್‌ನಲ್ಲಿ ಅನುರೀತ್ ಸಿಂಗ್ ಮೂರು ವಿಕೆಟ್ ಪಡೆದರು. ಇಲ್ಲಿನ ಎಜ್‌ಬಾಸ್ಟನ್ ಕ್ರಿಕೆಟ್ ಸ್ಟೇಡಿಯಮ್‌ನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ತಂಡ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 156 ರನ್ ಗಳಿಸಿತು. ಪ್ರತಿಯಾಗಿ ಬ್ಯಾಟ್ ಮಾಡಿದ ಭಾರತ ತಂಡ ಇನ್ನೂ ಐದು ಎಸೆತ ಬಾಕಿ ಇರುವಂತೆಯೇ 5 ವಿಕೆಟ್ ನಷ್ಟಕ್ಕೆ 159 ರನ್ ಬಾರಿಸಿ ಗೆಲುವು ಸಾಧಿಸಿತು.

ಸಾಧಾರಣ ಮೊತ್ತವನ್ನು ಬೆನ್ನಟ್ಟಲು ಆರಂಭಿಸಿದ ಭಾರತ ತಂಡ ಉತ್ತಮ ಆರಂಭ ಪಡೆಯಿತು. ಮೊದಲ ವಿಕೆಟ್‌ಗೆ 34 ರನ್ ಬಾರಿಸಿತು. ಪ್ರಮುಖವಾಗಿ ಅಂಬಾಟಿ ರಾಯುಡು 30 ಎಸೆತಕ್ಕೆ 50 ರನ್ ಬಾರಿಸಿ ಭಾರತ ತಂಡಕ್ಕೆ ಉತ್ತಮ ಆರಂಭ ತಂದುಕೊಟ್ಟರು. ಆದರೆ, ಮತ್ತೊಬ್ಬ ಆರಂಭಿಕ ಆಟಗಾರ ರಾಬಿನ್ ಉತ್ತಪ್ಪ 10 ರನ್‌ಗೆ ಔಟಾಗುವ ಮೂಲಕ ನಿರಾಸೆ ಮೂಡಿಸಿದರು. ಬಳಿಕ ಸುರೇಶ್ ರೈನಾ ಕೂಡ 4 ರನ್‌ಗೆ ವಿಕೆಟ್ ಒಪ್ಪಿಸಿ ಆತಂಕ ತಂದರು. ಆದರೆ, 4ನೇ ಕ್ರಮಾಂಕದಲ್ಲಿ ಆಡಲು ಬಂದ ಗುರುಕೀರತ್ ಸಿಂಗ್ ಮಾನ್ 34 ರನ್ ಬಾರಿಸಿ ಆಧಾರವಾದರು. ಕೊನೆ ಹಂತದಲ್ಲಿ ಯೂಸುಫ್ ಪಠಾಣ್ ಭರ್ಜರಿಯಾಗಿ ಬ್ಯಾಟ್ ಬೀಸಿ 30 ರನ್ ಬಾರಿಸಿ ಗೆಲುವು ತಂದುಕೊಟ್ಟರು.

### ಪಾಕಿಸ್ತಾನ ಉತ್ತಮ ಮೊತ್ತ

**ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ ತಂಡವೂ ಉತ್ತಮ ಮೊತ್ತ ಪೇರಿಸಿತು. ಕಮ್ರಾನ್ ಅಕ್ಮಲ್ 24 ರನ್ ಬಾರಿಸಿದರೆ ಶ್ರಜೀಲ್ ಖಾನ್ 12 ರನ್ ಬಾರಿಸಿದರು. ಶೋಯೆಬ್ ಮಕ್ಸೂದ್ 21 ರನ್ ಗಳಿಸಿದರೆ ಶೋಯೆಬ್ ಅಬ್ಬರದ ಬ್ಯಾಟಿಂಗ್ ಪ್ರದರ್ಶನ ನೀಡಿ 36 ಎಸೆತಕ್ಕೆ 41 ರನ್ ಗಳಿಸಿದರು. ಅವರ ವೇಗದ ರನ್ ಗಳಿಕೆಯಿಂದಾಗಿ ಪಾಕ್ ಉತ್ತಮ ಮೊತ್ತದತ್ತ ಸಾಗಿತು. ಮಿಸ್ಬಾ ಉಲ್ ಹಕ್ 18 ರನ್ ಬಾರಿಸಿದ ಬಳಿಕ ಗಾಯಗೊಂಡು ನಿವೃತ್ತರಾದರು. ಕೊನೆಯಲ್ಲಿ ಸೋಹೈಲ್ ತನ್ವೀರ್ 9 ಎಸೆತಕ್ಕೆ 19 ರನ್ ಬಾರಿಸಿದರು. ಭಾರತ ಪರ ಬೌಲಿಂಗ್‌ನಲ್ಲಿ ಅನುರೀತ್ ಸಿಂಗ್ 3 ವಿಕೆಟ್ ಪಡೆದರೆ, ವಿನಯ್ ಕುಮಾರ್, ಪವನ್ ನೇಗಿ, ಇರ್ಫಾನ್ ಪಠಾಣ್ ತಲಾ 1 ವಿಕೆಟ್ ತಮ್ಮದಾಗಿಸಿಕೊಂಡರು.**

# ವಿಂಬಲ್ಡನ್ ಎತ್ತಿದ ಸ್ಪೇನ್ ಕಾರ್ಲೋಸ್ ಅಲ್ಕರಾಜ್

## ಸತತ 2ನೇ ಬಾರಿಗೆ ಗ್ರ್ಯಾನ್‌ಸ್ಲಾಮ್ ವಿಜೇತ | ಜೋಕೋವಿಚ್‌ರನ್ನು ಪರಾಜಿತಗೊಳಿಸಿದ ಹೊಸ ಸೂಪರ್‌ಸ್ಟಾರ್

**ಲಂಡನ್:** ಭಾನುವಾರ ನಡೆದ ವಿಂಬಲ್ಡನ್ 2024ನೇ ಆವೃತ್ತಿಯ ಫೈನಲ್ ಪಂದ್ಯದಲ್ಲಿ ಸ್ಪೇನ್ ಕಾರ್ಲೋಸ್ ಅಲ್ಕರಾಜ್ 7 ಬಾರಿಯ ಚಾಂಪಿಯನ್ ಸರ್ಬಿಯಾದ ನೊವಾಕ್ ಜೊಕೊವಿಕ್ ಅವರನ್ನು 6-2, 6-2, 7-6 (7/4) ಸೆಟ್ ಗಳಿಂದ ಸೋಲಿಸಿ ವಿಂಬಲ್ಡನ್ ಪ್ರಶಸ್ತಿಯನ್ನು ಕಾಪಾಡಿಕೊಂಡರು. ಇದು ಅವರಿಗೆ ಸತತ ಎರಡನೇ ವಿಂಬಲ್ಡನ್ ವಿಜಯವಾಗಿದ್ದು, ಒಟ್ಟು ನಾಲ್ಕನೇ ಗ್ರ್ಯಾನ್ ಸ್ಲಾಮ್ ಕಿರೀಟವಾಗಿದೆ. ಆಲ್ ಇಂಗ್ಲೆಂಡ್ ಕ್ಲಬ್ ಹುಲ್ಲು ಹಾಸಿನ ಮೇಲೆ ನಡೆಸ ಹಣಾಹಣಿಯು ಕಳೆದ ಆವೃತ್ತಿಯ ಫಲಿತಾಂಶದ ಪುನರಾವರ್ತನೆಯಾಗಿದೆ.

ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ಪ್ರಶಸ್ತಿಗಳನ್ನು ಸತತವಾಗಿ ಗೆದ್ದ ವಿಶ್ವದ ಆರನೇ ಆಟಗಾರ ಎಂಬ ಹೆಗ್ಗಳಿಕೆಗೆ ಸ್ಪೇನ್‌ನ ಈ ಆಟಗಾರ ಪಾತ್ರರಾಗಿದ್ದಾರೆ. ವಿಶ್ವದ ಮೂರನೇ ಶ್ರೇಯಾಂಕಿತ ಕಾರ್ಲೋಸ್, ಎರಡನೇ ಶ್ರೇಯಾಂಕದ ಜೊಕೊವಿಕ್ ವಿರುದ್ಧ ಪಾರುಪತ್ಯ ಸ್ಥಾಪಿಸಿದರು. ಅಲ್ಲದೆ, ಜೊಕೊವಿಕ್ ದಾಖಲೆಯ 25ನೇ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆದ್ದು ದಾಖಲೆಯ ನಿರ್ಮಿಸಲು ಬಿಡಲಿಲ್ಲ.

ಸೆಂಟರ್ ಕೋರ್ಟ್‌ನಲ್ಲಿ ಕಿಕ್ಕಿರಿದು ತುಂಬಿದ್ದ ಪ್ರೇಕ್ಷಕರ ಮುಂದೆ ನಡೆದ ಫೈನಲ್ ಪಂದ್ಯವು ಅಲ್ಕರಾಜ್‌ಗೆ ಹೆಚ್ಚು ಸರಳವಾಗಿ ಕಾಣಿಡಿತು. ನೇರ ಮೂರು ಸೆಟ್‌ಗಳ ಮೂಲಕ ಅವರು ವಿಜಯಮಾಲೆಯನ್ನು ತಮ್ಮ ಕೊರಳಿಗೆ ಹಾಕಿಕೊಂಡರು. ಅಲ್ಕರಾಜ್ ಕಳೆದ ತಿಂಗಳು ಫ್ರೆಂಚ್ ಓಪನಲ್ಲಿಯೂ ಚಾಂಪಿಯನ್ ಆಗಿದ್ದರು. ಆವೆ ಮಣ್ಣಿನ ಅಂಗಣದಲ್ಲಿ ನಡೆದ ಆ ಟೂರ್ನಿಯಲ್ಲಿ ಟ್ರೋಫಿ ಗೆದ್ದು ಸತತ ಎರಡನೇ ಟ್ರೋಫಿ ಗೆದ್ದು ಸಾಧನೆ ಮಾಡಿದರು.

ಈ ಯುವ ಟೆನಿಸ್ ಪಟು 2022ರ ಯುಎಸ್ ಓಪನ್ ಮೂಲಕ ತನ್ನ ಮೊದಲ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆದ್ದಿದ್ದರು. ಅದೇ ರೀತಿ ಪ್ರಮುಖ ಫೈನಲ್ ಪಂದ್ಯಕ್ಕೆ ಪ್ರವೇಶಿಸಿದ ಬಳಿಕ 4-0 ಗೆಲುವು ಸೋಲಿನ ಅಂತರದ ಸಾಧನೆಯೂ ತಮ್ಮದಾಗಿಸಿಕೊಂಡರು.

ಇದೇ ವೇಳೆ ಬಲಮೊಣಕಾಲು ಶಸ್ತ್ರ ಚಿಕಿತ್ಸೆಗೆ ಒಳಗಾದ ಬಳಿಕ ಬಲವಾದ ಪ್ರದರ್ಶನ ನೀಡಿದ್ದ 37 ವರ್ಷದ ಜೊಕೊವಿಕ್, ಎಂಟನೇ ವಿಂಬಲ್ಡನ್ ಪ್ರಶಸ್ತಿ ಮತ್ತು ಒಟ್ಟಾರೆ 25 ನೇ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆಲ್ಲುವ ತವಕದಲ್ಲಿದ್ದರು. ಆದರೆ ಅವರು ಆಸೆ ಕೈಗೂಡಲಿಲ್ಲ.

ಮೂರನೇ ಸೆಟ್‌ನಲ್ಲಿ ಟೈಬ್ರೇಕರ್ ಮೊರೆ ಹೋಗಲಾಯಿತು. ಅಲ್ಲಿ ಕಾರ್ಲೋಸ್ ಮುನ್ನಡೆ ಸಾಧಿಸಿದ ಸಂಭ್ರಮಿಸಿದರು. ಬಳಿಕ ಅವರು ಕೋಚ್ ಜುವಾನ್ ಕಾರ್ಲೋಸ್ ಫೆರೆರೊ ಮತ್ತು ಇತರರನ್ನು ತಬ್ಬಿಕೊಂಡರು. ಕೊನೆ ಸೆಟ್ 14 ನಿಮಿಷಗಳಲ್ಲಿ ಕೊನೆಗೊಂಡಿತು.

# ಶೀಘ್ರ ಕಾಳಿ ಚಿತ್ರೀಕರಣ

ಬ್ಯಾಡ್ ಮ್ಯಾನರ್ಸ್ ಚಿತ್ರದ ಬಳಿಕ ಅಭಿಷೇಕ್ ಅಂಬರೀಶ್ ಯಾವ ಸಿನಿಮಾದಲ್ಲಿಯೂ ಕಾಣಿಸಿಕೊಳ್ಳಲಿಲ್ಲ. ಅಭಿಷೇಕ್ ಅವರ ಮುಂದಿನ ಸಿನಿಮಾ ಯಾವುದು ಎಂದು ಅಭಿಮಾನಿಗಳು ಕಾದು ಕುಳಿತ್ತಿದ್ದಾರೆ. ಮುಂದೆ ಅಭಿಷೇಕ್, ಕಾಳಿ ಚಿತ್ರದಲ್ಲಿ ನಟಿಸುವುದು ಈ ಹಿಂದೆಯೇ ಖಚಿತವಾಗಿತ್ತು. 2022ರಲ್ಲಿಯೇ ಕಾಳಿ ಚಿತ್ರದ ಫಸ್ಟ್ ಲುಕ್ ಬಿಡುಗಡೆಯಾಗಿ ಕುತೂಹಲ ಮೂಡಿಸಿತ್ತು. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಇಷ್ಟೊತ್ತಿಗೆ ಚಿತ್ರದ ಶೂಟಿಂಗ್ ಮುಗಿಸಿ ತೆರೆಗೆ ಬರಬೇಕಿತ್ತು. ಆದರೆ ಕಾರಣಾಂತರಗಳಿಂದ ಸಿನಿಮಾ ಸೆಟ್ಟೇರುವುದು ತಡವಾಯಿತು.

ಕಾಳಿ ಎಪ್ಪತ್ತರ ದಶಕದಲ್ಲಿ ನಡೆಯುವ ಕಥೆಯನ್ನು ಒಳಗೊಂಡಿದ್ದು, ಕಾವೇರಿ ಸಂಘರ್ಷದ ನಡುವೆ ಅರಳುವ ಅಪರೂಪದ ಪ್ರೇಮ ಕಥೆ ಚಿತ್ರದಲ್ಲಿದೆ.

ಅಭಿಷೇಕ್ ಈ ಕಥೆ ಕೇಳಿ ಬಲು ಖುಷಿಯಿಂದ ಚಿತ್ರದಲ್ಲಿ ನಟಿಸಲು ಸಮ್ಮತಿಸಿದ್ದರು. ಚಿತ್ರಕ್ಕೆ ತಕ್ಕಂತೆ ಅಗತ್ಯ ಸಿದ್ಧತೆಗಳನ್ನು ನಡೆಸಿದ್ದರು. ಆದರೆ ಸಿನಿಮಾ ಸೆಟ್ಟೇರಲೇ ಇಲ್ಲ. ಈಗ ಸಿನಿಮಾದ ತಯಾರಿಗಳು ನಡೆಯುತ್ತಿದ್ದು ಶೀಘ್ರವೇ ಚಿತ್ರೀಕರಣ ಆರಂಭವಾಗುವ ಸಾಧ್ಯತೆಗಳಿವೆ. ಅಭಿಷೇಕ್ ಅಂಬರೀಶ್ ಜತೆಯಾಗಿ ಸಪ್ತಮಿ ಗೌಡ ಬಣ್ಣಹಚ್ಚಲಿದ್ದಾರೆ. ಕೃಷ್ಣ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದು, ಸ್ವಪ್ನಾ ಕೃಷ್ಣ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಲಿದ್ದಾರೆ.

# ತೆರೆಗೆ ಸಿದ್ಧವಾದ ಶಾನುಭೋಗರ ಮಗಳು

ಭಾಗ್ಯ ಕೃಷ್ಣಮೂರ್ತಿ ಕಾದಂಬರಿ ಆಧರಿಸಿ ಸಿದ್ಧವಾಗಿರುವ ಶಾನುಭೋಗರ ಮಗಳು ಚಿತ್ರ ತೆರೆಗೆ ರೆಡಿಯಾಗಿದೆ. ಈ ಸಿನಿಮಾ ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯು/ಎ ಪ್ರಮಾಣ ಪತ್ರ ನೀಡಿದೆ. ಹಿರಿಯ ನಿರ್ದೇಶಕ ಕೋಡ್ಲು ರಾಮಕೃಷ್ಣ ಚಿತ್ರ ನಿರ್ದೇಶಿಸಿದ್ದು ಚಿತ್ರದ ಬಗ್ಗೆ ಅಪಾರ ನಿರೀಕ್ಷೆಯಿದೆ. ರಾಗಿಣಿ ಪ್ರಜ್ವಲ್ ಶಾನುಭೋಗರ ಮಗಳ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಪ್ರಜ್ವಲ್, ನಿರಂಜನ್ ಶೆಟ್ಟಿ, ರಮೇಶ್ ಭಟ್, ಶ್ರೀನಿವಾಸಮೂರ್ತಿ, ಸುಧಾ ಬೆಳವಾಡಿ, ವಾಣಿಶ್ರೀ, ಪದ್ಮಾ ವಾಸಂತಿ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ಟಿಪ್ಪುಸುಲ್ತಾನ್ ಪಾತ್ರದಲ್ಲಿ ಖ್ಯಾತ ನಟ ಕಿಶೋರ್ ಅಭಿನಯಿಸಿದ್ದಾರೆ.

ಭುವನ್ ಫಿಲಂಸ್ ಲಾಂಛನದಲ್ಲಿ ಸಿ. ಎಂ.ನಾರಾಯಣ್ ನಿರ್ಮಿಸಿರುವ ಈ ಚಿತ್ರ ಹಲವು ವಿಶೇಷಗಳನ್ನೊಳಗೊಂಡಿದೆ. ಜೈ ಆನಂದ್ ಛಾಯಾಗ್ರಹಣವಿರುವ ಈ ಚಿತ್ರಕ್ಕೆ ಬಿ.ಎಸ್ ಕೆಂಪರಾಜ್ ಅವರ ಸಂಕಲನವಿದೆ. ವಸಂತ ಕುಲಕರ್ಣಿ ಕಲಾ ನಿರ್ದೇಶನ, ರಮೇಶ್ ಕೃಷ್ಣನ್ ಸಂಗೀತ ನಿರ್ದೇಶನ, ಬಿ.ಎ.ಮಧು ಸಂಭಾಷಣೆ ಬರೆದಿದ್ದಾರೆ.

ಬೆಂಗಳೂರು, ಶ್ರೀರಂಗಪಟ್ಟಣ, ಚನ್ನಪಟ್ಟಣ, ಚಿಕ್ಕಬಳ್ಳಾಪುರ ಮುಂತಾದ ಕಡೆ ಚಿತ್ರೀಕರಣ ನಡೆಸಲಾಗಿದೆ.

# ಮುಂದಿನ ವಾರ ರೂಪಾಂತರ

ಕಿತ್ತಾಳೆ ಎನ್ನುವ ಇಂಪಾದ ಹಾಡನ್ನು ಬಿಡಗಡೆ ಮಾಡಿ ಸಿನಿಪ್ರಿಯರನ್ನು ಸೆಳೆದ ರೂಪಾಂತರ ಚಿತ್ರತಂಡ, ಈಗ ಸಿನಿಮಾದ ಬಿಡುಗಡೆಯ ದಿನಾಂಕವನ್ನು ಘೋಷಿಸಿದೆ. ಇದೇ ತಿಂಗಳ 26 ರಂದು ರೂಪಾಂತರ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಒಂದು ಮೊಟ್ಟೆಯ ಕಥೆ ಹೇಳಿ ರಂಜಿಸಿ, ಮಲೆಯಾಳಂನ ಟರ್ಬೋ ಚಿತ್ರದಲ್ಲಿ ವೆಟ್ರಿವೇಲ್ ಶನ್ಮುಗಸುಂದರಂ ಎಂಬ ಪಾತ್ರದಲ್ಲಿ ಪ್ರಸಿದ್ಧಿ ಪಡೆದ, ರಾಜ್ ಬಿ ಶೆಟ್ಟಿ ರೂಪಾಂತರ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಸಿನಿಮಾದಲ್ಲಿ ಹೊಸ ಪಾತ್ರದಲ್ಲಿ ಮಿಂಚಲು ಬರುತ್ತಿದ್ದಾರೆ. ಸೋಮಶೇಖರ್ ಬೋಲೇಗಾಂವ್, ಲೇಖಾ ನಾಯ್ಡು, ಹನುಮ್ಮಕ್ಕ, ಭರತ್, ಅಂಜನ್ ಭಾರಧ್ವಾಜ್ ಮತ್ತಿರರು ತಾರಾಗಣದಲ್ಲಿದ್ದಾರೆ.

ಚಿತ್ರದ ಪೋಸ್ಟರ್ ವಿಭಿನ್ನವಾಗಿದ್ದು, ರೂಪಾಂತರದಲ್ಲಿ ಹಲವು ಕಥೆಗಳ ಗುಚ್ಛವಿದೆಯೆ ಎಂಬ ಕುತೂಹಲ ವಿದೆ. ಪ್ರವೀಣ್ ಶ್ರೀಯಾನ್ ಛಾಯಗ್ರಹಣ, ಮಿಥುನ್ ಮುಕುಂದನ್ ಸಂಗೀತ, ಭುವನೇಶ್ ಮಣಿವಣ್ಣನ್ ಸಂಕಲನ ಈ ಚಿತ್ರಕ್ಕಿದೆ. ಲೈಟರ್ ಬುದ್ಧ ಫಿಲಮ್ಸ್ ಈ ಚಿತ್ರದ ಹಂಚಿಕೆಯ ಜವಾಬ್ದಾರಿ ಹೊತ್ತುಕೊಂಡಿದೆ.

# ದರ್ಶನ್ ಬಗ್ಗೆ ಭವಿಷ್ಯ ನುಡಿದ ಸಂಜನಾ

ನಟ ದರ್ಶನ್, ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿದ್ದಾರೆ. ಹಲವು ನಟ, ನಟಿಯರು ದರ್ಶನ್ ಪರ ನಿಂತಿದ್ದಾರೆ. ಇತ್ತ ನಟಿ ಸಂಜನಾ ಗಲ್ರಾನಿ, ದರ್ಶನ್ ಬಗ್ಗೆ ಭವಿಷ್ಯ ನುಡಿದಿದ್ದಾರೆ. ಸಮಯ ಕೆಟ್ಟಾಗ ,ಕೆಟ್ಟ ಸಂದರ್ಭದಲ್ಲಿ ಹೀಗಾಗಿದೆ. ತಪ್ಪು ಯಾರು ಮಾಡಿದರೂ ತಪ್ಪೇ. ಸಧ್ಯ ಪ್ರಕರಣ ನ್ಯಾಯಾಲಯದಲ್ಲಿದೆ. ದರ್ಶನ್ ಆದಷ್ಟು ಬೇಗ ನಿರಪರಾಧಿಯಾಗಿ ಹೊರಗೆ ಬರಲಿ. ದರ್ಶನ್ ಜೈಲಿನಿಂದ ಬಿಡುಗಡೆಯಾದ ಬಳಿಕ ಕೆಜಿಎಫ್‌ಗಿಂತಲೂ ದೊಡ್ಡ ಮಟ್ಟದ ಹಿಟ್ ಚಿತ್ರ ನೀಡಲಿದ್ದಾರೆ. ಇಂದು ಯಾರು ದರ್ಶನ್ ಅವರನ್ನು ತೆಗೆಳುತ್ತಿದ್ದಾರೋ ಅವರೇ ಮುಂದೆ ಅವರನ್ನು ಹೊಗಳಲಿದ್ದಾರೆ ಎಂದು ಸಂಜನಾ ಹೇಳಿದ್ದಾರೆ.

ಡ್ರಗ್ ಪ್ರಕರಣದಲ್ಲಿ ಸಂಜನಾ ಹಾಗೂ ರಾಗಿಣಿ ದ್ವಿವೇದಿ ಜೈಲು ಸೇರಿದ್ದರು. ಜೈಲು ವಾಸ ಯಾರಿಗೂ ಬೇಡ ಅಲ್ಲಿನ ಊಟ ಸೇವಿಸಲು ಅಸಾಧ್ಯ. ಅದೊಂದು ರೀತಿಯ ನರಕ ಎಂದು ಸಂಜನಾ ಜೈಲು ವಾಸದ ದಿನಗಳನ್ನು ನೆನೆದಿದ್ದಾರೆ.